# ಅಪರಂಜಿ

ತಿಳಿನಗೆಯ ಕಾರಂಜಿ






## ಅಪರಂಜಿ ವಿಶೇಷಾಂಕ

ಅಕ್ಟೋಬರ್–2026

ಬಿಡಿ ಪ್ರತಿ: ರೂ. 30/–

NANKI
CONVENTION HALL

# Premium
# WEDDING VENUE

Elevate your events at Nanki Convention Hall.

A stylish and comfortable venue perfect for Weddings, Receptions, Conferences.




## Accessibility

- 1 km from Bus Stand
- 5 km from Airport
- 4 km from Railway Station




Airport Road
Hubli - Karnataka




+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**

Marketing/Finance/HRM/ Business Analytics

## TWO YEAR FULL TIME MBA DEGREE AT BENGALURU

## ADMISSION OPEN

**2026-2028**

A distinguished standalone B-School in Bengaluru situated in the heart of the city.





### WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

**ADMISSION PROCESS**

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**

+91 99022 52842 / 99022 52981

www.mpbim.com

contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 128+4 APARANJI KANNADA MONTHLY.

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 30/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

## ಅಪರಂಜಿ

## 44ರ ವಿಶೇಷಾಂಕ

**ಸಂಪುಟ 44**

**ಸಂಚಿಕೆ – 01**

**ಅಕ್ಟೋಬರ್–2026**

**ಈ ಸಂಚಿಕೆಯಲ್ಲಿ...**

| | | |
|---|---|---|
| ಕಿಡಿ | ಪ್ರಕಾಶ್ | 03 |
| ಪ್ರಶ್ನೋತ್ತರ | ಲೀಲಾ ಮಿರ್ಲೆ | 04 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 05 |
| ಅವಿಸ್ಮರಣೀಯ ನಗೆಗಾರರು–17 | ಶಿವಕುಮಾರ್ | 06 |
| ಪುಟ್ಟರಾಜಕುಮಾರ್–3 | ಬಿ.ಎಸ್. ಶೈಲಜಾ | 10 |
| ನಾದೋಪಾಸಕರ........ | ಸಂಜಯ ಹಾವನೂರ | 15 |
| ಸಾಮಾನ್ಯ ಬುದ್ಧಿ ಯಾಕೆ ... | ಎಸ್.ಆರ್. ವಿಜಯಶಂಕರ | 21 |
| ದಶಕಂಠನ ರಗಳೆ | ಅಣಕು ರಾಮನಾಥ್ | 25 |
| ಪದಕುಲುಮೆ | ಎಸ್.ಎನ್. ಗಣನಾಥ | 28 |
| ಕಪ್ಪು ಮೋರೆಯ..... | ಬಿ.ಎಸ್ ಶೈಲಜಾ | 29 |
| ತುಂತುರು | ದಂನಅ | 32 |
| ಆ ಕಾಲವೊಂದಿತ್ತು..... | ಶಿವಕುಮಾರ್ | 33 |
| ಪುಸ್ತಕ ಪರಿಚಯ | | 38 |
| ಏಕಾಂಗಿತನದ ಮಹತ್ವ | ರೂಪಾ ಪೈ | 40 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್

ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ, ರಘುಪತಿ ಶೃಂಗೇರಿ

ಡಿ.ಟಿ.ಪಿ. : ರವಿಕುಮಾರ್. ವಿ, ಯರಪನಹಳ್ಳಿ

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: beluruamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*

| | | |
|---|---|---|
| ವೈದ್ಯರಲ್ಲಿ ರಸನಿಮಿಷಗಳು | ಡಾ. ಓಂಪ್ರಕಾಶ್ | .....43 |
| ಬಕೆಟಿಗರು | ನಳಿನಿ ಟಿ. ಭೀಮಪ್ಪ | .....46 |
| ಗಾದೆಗೊಂದು ಕಥೆ | ಬೇಲೂರು ರಾಮಮೂರ್ತಿ | .....49 |
| ಕ್ರಾಂತಿಯ ಅಲೆಯಲ್ಲಿ ಸಿಲುಕಿ.... | ಕುಮುದಾ ಪುರುಷೋತ್ತಮ್ | .....53 |
| ಹರೇ ಸಮುದ್ರ ಪುರಾಣ | ಎಚ್. ಗೋಪಾಲಕೃಷ್ಣ | .....57 |
| ಅಲ್ಲೇಪಾಕ್ | ಜಯಶ್ರೀ ದೇಶಪಾಂಡೆ | .....61 |
| ಕಣ್ಣ ಬಾಣಂತನ | ಶರತ್ ಕಲ್ಕೋಡ್ | .....64 |
| ಹಾರಿ ಹೋದವರು | ಪಾಲಹಳ್ಳಿ ವಿಶ್ವನಾಥ್ | .....73 |
| ಮನೆಯ ಟೀಂ ಲೀಡರ್... | ಎಂ. ಎಸ್. ನರಸಿಂಹ ಮೂರ್ತಿ | .....77 |
| ಮತ್ತೆ ವರ್ಕ್ ಶಾಪಂತೆ! | ಕವಿತಾ ಹೆಗಡೆ ಅಭಯಂ | .....79 |
| ಕೋಡಂಗಿ–ಗೋವಿಂದ.... | ಜಿ. ವಿ. ಅರುಣ | .....82 |
| ಮನಿ ! ಮನಿ ! ಮಣಿ ! | ಚಿತ್ರಾ ರಾಮಚಂದ್ರನ್ | .....85 |
| ಸ್ಪೂನರಾಯಣ | ಎಸ್.ಎನ್. ಗಣನಾಥ | .....93 |
| ನಿನ್ನ ನೋಟವೆ ಹೇಳಿತಿಂತು... | ಅಣಕು ರಾಮನಾಥ್ | .....98 |
| ಫೆಸ್ಟಿವಲ್ ಅಡ್ವಾನ್ಸ್.... | ಸಿ.ಎ. ವಿಲಾಸ ನಾ ಹುದ್ದಾರ | .....99 |
| ನೀಲಿ ಭಾಗವತ | ಡಾ. ಶ್ಯಾಮಲಾ ರವಿಶಂಕರ್ | .....102 |
| ಅಜ್ಜಿ ಮತ್ತು ಬಾಲ ರಾಮನ.... | ಇ.ಆರ್. ರಾಮಚಂದ್ರನ್ | .....105 |
| ಅಪಾಯ ಬಂದಾಗ ಉಪಾಯ | ಸುಕೇಶವ | .....107 |
| ಗಲ್ಫ್–ವಾರ್: ನನ್ನ ಹೆಂದತಿಗೆ.. | ಜಿ.ಆರ್.ವಿದ್ಯಾರಣ್ಯ | .....108 |
| ಯಮನ ಕೈಲೊಂದು.... | ಜಿ.ವಿ. ನಿರ್ಮಲ | .....110 |
| ಸಿಟ್ಟತ್ತಿ ತಿರುಗಿ ನೋಡ್ಯಾಳ ! | ಸುಮಾ ರಮೇಶ್ | .....113 |
| ರಾಮಾಯಣದ ಕಾಲದಲ್ಲೂ.... | ಉಲ್ಲಾಸ್ ರಾಯಸಂ | .....116 |
| ವ್ಯಾನು ಬಂತು | ಎಚ್. ಡುಂಡಿರಾಜ್ | .....119 |
| ಧನುಸ್ಸು ರಾಶಿಯವರೇ....! | ವೈ ಎನ್ ಗುಂಡೂರಾವ್ | .....121 |
| ಆಧಾರವೇ ರಗಳೆ! | ಲತಾ ಹೆಗಡೆ | .....124 |
| ಭಿಮಸೇನರ ಆವಾಹನೆ....! | ವಿ. ವಿಜಯೇಂದ್ರ ರಾವ್ | .....127 |



## ಅಪರಂಜಿ ಕಿಡಿ

**ಪ್ರಕಾಶ್**

ನಲವತ್ತಮೂರು ವಸಂತಗಳನ್ನು ದಾಟಿ ಮುಂದೆ ಸಾಗುತ್ತಿರುವ ಅಪರಂಜಿ ಹಿರಿಯರೆಲ್ಲರ ಆಶೀರ್ವಾದವನ್ನು ಬೇಡಿ, ಬಳಗದವರಿಗೆಲ್ಲಾ ಮುದ ಹಂಚುವ ಸಂಕಲ್ಪ ತೊಟ್ಟಿದ್ದಾಳಂತೆ

****

ಲಾಲ್ ಬಾಗ್ : ಸುರಂಗ ದೂರ ; ಜನರ ಭಾವನೆಗಳಿಗೆ ಬೆಲೆ – ಪತ್ರಿಕೆ

ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲವಂತೆ !!

****

ಬಡವರನ್ನು ಮರೆತ ಕಾಂಗ್ರೆಸ್ ಸರಕಾರ

– ಬಿ.ಜೆ.ಪಿ, ವಕ್ತಾರರು.

ಅವರು ಇನ್ನೇನು ತಾನೆ ಹೇಳೀಯಾರು. !!

****

ಸ್ಕೂಲು ಮಕ್ಕಳಿಗೆ ಎ.ಐ. ಶಿಕ್ಷಣ.

– ಪತ್ರಿಕೆ

ಇದು ಆಶ್ವಾಸನೆಯೋ, ಬೆದರಿಕೆಯೋ ??

****

ಕಾನ್‌ಸ್ಟೇಬಲ್ ಹುದ್ದೆಗೆ ದೈಹಿಕ ಪರೀಕ್ಷೆ : ಆರು ನಿಮಿಷಗಳಲ್ಲಿ 1.6 ಕಿ.ಮೀ. ಓಟವಿರಬೇಕು.

ಕಳ್ಳಕಾಕರಿಗೆ ಮಾಹಿತಿ ಕೊಟ್ಟಂತಾಯಿತು

****

ಪಾಲಿಕೆಗಳಿಗೆ ವರುಷ , ಜನಗಳಿಗಿಲ್ಲ ಹರುಷ

–ಶೀರ್ಷಿಕೆ

ಆಹಾ !!!

****

ಕರ್ನಾಟಕದ ಪಶು ವೈದ್ಯಾಧಿಕಾರಿ ಹುದ್ದೆಗೆ 50 ಲಕ್ಷ ಕೊಟ್ಟಿದ್ದರು –ಸುದ್ದಿ

ಅಬ್ಬ ಇನ್ನು ಮನುಷ್ಯರ ವೈದ್ಯಾಧಿಕಾರಿಗೆ ಎಷ್ಟು ಕೇಳುತ್ತಾರೋ ??

****

ಗಣೇಶನ ಹಬ್ಬ. : ಶಾಂತಿಯುತ ಆಚರಣೆಗೆ ಸಲಹೆ

– ದಿನಪತ್ರಿಕೆ

ವಿಘ್ನೇಶ್ವರ ನಸುನಕ್ಕನಂತೆ !!

****

# ಪ್ರಶ್ನೋತ್ತರ

ಲೀಲಾ ಮಿರ್ಲೆ

ಪೂನಾದಲ್ಲಿನ ಸಿನಿಮಾ ನಟಿಯೊಬ್ಬರಿಗೆ ಇಬ್ಬರು ಗಂಡಂದಿರಿದ್ದಾರಂತೆ. ಏನಂತೀರಾ ?

ಜಯಲಕ್ಷ್ಮಿ, ಹಿಂದೂಪುರ.

ಇನ್ನೂ ಮೂವರಿಗೆ ಜಾಗ ಇದೆಯಲ್ಲ ಈ ಪುಣೆ ಪಾಂಚಾಲೀಗೆ !

*****

ನಮ್ ಮುಂದಿನ ಬೀದಿಯಲ್ಲಿ ಗಂಡ ಹೆಂಡತಿ ಒಬ್ಬರನ್ನೊಬ್ಬರು ತುಂಬಾ ಪ್ರೀತಿಸ್ತಾರಂತೆ, ಟೀಕಿಸಿ.

ಪ್ರೇಮನಾಥ್, ವಸಂತಪುರ.

ಯಾರ ಗಂಡ ? ಯಾರ ಹೆಂಡತಿ ?

*****

ಹಣದ ಉಬ್ಬರ ಮುಂದಿನ ದಿನಗಳಲ್ಲಿ ಸುಧಾರಿಸುತ್ತೆ ಅಂತೀರಾ?

ಸುಧಾಮ, ಆವಲ ಹಳ್ಳಿ.

ಅದು ಹೇಗೆ ಸಾಧ್ಯ? ಸ್ವಾಮಿ, ಅದು ಲಕ್ಷ್ಮಮ್ಮನಿಗೆ ಬಡಿದಿರೋ ಅಂತಿಮ ವ್ಯಾಧಿಯಲ್ಲವೇ?

*****

ನಮ್ಮ ದೇಶ ಮುಂದುವರಿದಿದೆ ಎನ್ನಬಹುದೇ?

ಮಹದೇವ, ಕಲ್ಲಿನ ಕುಂಟೆ.

ಮುಂದೆಯೂ ವರಿ ಇದೆ ಎಂದು ಧಾರಾಳವಾಗಿ ಹೇಳಬಹುದು.

*****

"ವೇದ ಸುಳ್ಳಾದರೂ, ಗಾದೆ ಸುಳ್ಳಲ್ಲ" ಎಂಬ ಗಾದೆಯಲ್ಲಿ ಸತ್ಯವಿದೆಯೇ"

ರಾಧಾಮಣಿ , ಕೊಪ್ಪಸಂದ್ರ.

ಎರಡು "ಸುಳ್ಳು " ಪದಗಳಿವೆ. ಸತ್ಯ ಕಾಣಲಿಲ್ಲವಲ್ಲಾ !

*****

ದೇವರು ಒಬ್ಬನೇ ಎಂಬ ಮಾತು ನಿಜವೇ?

ತಂಗಮಣಿ, ಕೆ.ಜಿ.ಎಫ್.

ಸಂಶಯವೇನು ಬಂತು ತಂಗಿ? ಭೂಲೋಕದ ಇಂದಿನ ಪರಿಸ್ಥಿತಿ ನೋಡಿದರೆ ತಿಳಿಯುತ್ತಲ್ಲಾ ಆತ ಯಾರೂ ಫಾಲೋಯರ್ಸ್ ಇಲ್ಲದ ಒಬ್ಬೊಂಟಿಗ, ಅಂತ !

*****

" ಗೃಹಶಾಂತಿ"ಯನ್ನು ಶಾಶ್ವತವಾಗಿ ನೆಲಸುವಂತೆ ಮಾಡಲು ಉಪಾಯವೇನು?

ಕೆಂಪಣ್ಣ, ಬೆಂಗಳೂರು.

ಇದೊಳ್ಳೇ ತಮಾಷೆ ! ಗೃಹಶಾಂತಿ ಎಂಬ ಪದಪ್ರಯೋಗವೇ ಅಸಂಬದ್ಧ . ಗೃಹದಲ್ಲಿ ಶಾಂತಿ ನೆಲಸಲು ಅದೇನು ಆಶ್ರಮ ಕೆಟ್ಟೋಯ್ತೇ ?

*****

" ಕಷ್ಟ ಪಟ್ಟರೆ ಫಲವುಂಟು" ಈ ಮಾತನ್ನ ನೀವು ನಂಬುತ್ತೀರಾ?

ಗಗನ್ ಕುಮಾರ್, ತೀರ್ಥಹಳ್ಳಿ.

ನಂಬುತ್ತೇನೆ. ಒಬ್ಬರು ಕಷ್ಟಪಟ್ಟರೆ, ಮತ್ತೊಬ್ಬರಿಗೆ ಖಂಡಿತ ಫಲಸಿಗುತ್ತೆ !

## ನಮ್ಮ ನಿಮ್ಮಲ್ಲಿ

ಶಿವಕುಮಾರ್

ಇಗೋ, ಅಪರಂಜಿಯ ನಲವತ್ತನಾಲ್ಕನೆಯ ವರ್ಷದ ವಾರ್ಷಿಕ ವಿಶೇಷಾಂಕ ನಿಮ್ಮ ಕೈಯ್ಯಲ್ಲಿದೆ. ಈ ಸಂಚಿಕೆಯ ಸಂಕಲನದ ಕಾರ್ಯವೇ ಒಂದು ಮೋಜಿನ ಕಾಯಕವಾಗಿ ಪರಿಣಮಿಸಿತು. ಮೊದಲಿಗೆ ನಮ್ಮ ಸರಣಿ ಲೇಖನ "ಪುಟ್ಟ ರಾಜಕುಮಾರ" ದ ಮುಂದಿನ ಕಂತನ್ನು ಕಳುಹಿಸುವುದನ್ನು ನೆನಪಿಸುವ ಸಲುವಾಗಿ, ನಾನು ಲೇಖಕಿ ಶೈಲಜಾರವರನ್ನು ಸಂಪರ್ಕಿಸಿದೆ. ಅವರು ಸೂರ್ಯಗ್ರಹಣ ನೋಡುವ ಸಲುವಾಗಿ ಸ್ಪೇನಿನಲ್ಲಿರುವುದಾಗಿ ತಿಳಿಸಿದರು. ಅಂತಹ ಪ್ರತ್ಯಕ್ಷ ಅನುಭವ ಸಿಗುವುದು ಅಷ್ಟು ಸುಲಭವಲ್ಲ. ಹಾಗಾಗಿ ಅವರನ್ನು ಈ ಗ್ರಹಣವನ್ನು ಕುರಿತು ನಮ್ಮ ವಿಶೇಷ ಸಂಚಿಕೆಗೆ ಒಂದು ಬರಹ ಕೊಡುವಂತೆ ವಿನಂತಿಸಿದೆ. ಅವರು ಕೂಡಲೇ ಒಪ್ಪಿ ಲೇಖನ ನೀಡಿದ್ದಾರೆ. ಇದಕ್ಕೆ ಮುಂಚೆ ನಮ್ಮ ಮನೆಯಲ್ಲಿ ನಡೆದ ಟ್ರಸ್ಟ್ ಮೀಟಿಂಗ್‌ಗೆ ಬಂದಿದ್ದ ರಾಮನಾಥರ ಕಣ್ಣಿಗೆ ಎಪ್ರಿ ಡೇ ಎ ಸೆಲಬ್ರೇಷನ್ ಎಂಬ ಪುಸ್ತಕ ಕಣ್ಣಿಗೆ ಬಿತ್ತು. ಖ್ಯಾತ ಕವಿ ಮಾನ್ಯ ಕೆ.ಎಸ್. ನಿಸಾರ್ ಅಹಮದ್ ಅವರ ಕವನಗಳ ಇಂಗ್ಲೀಷ್ ಅವತರಣಿಕೆಯಿದು. ಅಪರಂಜಿ ಬಳಗದ ರೂಪಾ ಪೈ ಅವರು ಇದನ್ನು ಬಹು ಸಮರ್ಥವಾಗಿ ಭಾಷಾಂತರಿಸಿದ್ದಾರೆ. ರಾಮನಾಥ್ ಈ ಪುಸ್ತಕದ ಪರಿಚಯವನ್ನು ಈ ಸಂಚಿಕೆಗೆ ಬರೆದು ಕೊಟ್ಟರು. ಈ ವಿಷಯವನ್ನು ರೂಪಾಗೆ ತಿಳಿಸಿ, ಅವರ ಇತ್ತೀಚಿನ ಯೂರೋಪ್ ಪ್ರವಾಸದ ಬಗ್ಗೆ ಒಂದು ಲೇಖನ ಗಿಟ್ಟಿಸಿದೆ. ನಮ್ಮ ಬಳಗದವರೇ ಆದ ಆನಂದರು ಕ್ಯಾಲಿಫೋರ್ನಿಯಾದಲ್ಲಿರುವ ಸಂಜಯ ಹಾವನೂರರಿಂದ, ನಮ್ಮ ಖ್ಯಾತ ಸಂಗೀತಗಾರರ ಭೋಜನಪ್ರಿಯತೆಯನ್ನು ಕುರಿತ ಒಂದು ಲೇಖನವನ್ನು ತರಿಸಿದರು. ಒಂದೊಂದಾಗಿ ನಮ್ಮ ಬಳಗದ ಲೇಖಕ ಲೇಖಕಿಯರಿಂದ ಬರಹಗಳು ಬಂದು ಸೇರತೊಡಗಿದವು. ಶರತ್ ಕಲ್ಕೋಡರ "ಕಣ್ಣಿನ ಬಾಣಂತನ" ವಾಗಲೀ, ನಳಿನಿ ಭೀಮಪ್ಪ ಬರೆದಿರುವ "ಬಕೆಟಿಗರು" ಆಗಲಿ, ತಮ್ಮ ಸ್ವಂತ ಅನುಭವಗಳನ್ನು ಸೃಜನಶೀಲತೆಯ ಮೂಸೆಯಲ್ಲಿ ಕರಗಿಸಿ ಲಘು ಪ್ರಬಂಧವನ್ನು ಮೂಡಿಸುವ ಜಾಣ್ಮೆಯನ್ನು ತೋರುತ್ತವೆ. ಜಯಶ್ರೀ ಯವರ "ಅಲ್ಲೇಪಾಕ್, ಗೋಪಾಲಕೃಷ್ಣರ " ಹರೇ ಸಮುದ್ರ ಪುರಾಣ", ನಾನು ಬರೆದಿರುವ " ಆ ಕಾಲವೊಂದಿತ್ತು", ಈ ಎಲ್ಲ ಲೇಖನಗಳೂ ಗತಿಸಿಹೋದ, ಆದರೆ ಎಲ್ಲರಿಗೂ ತೀರ ಆಪ್ತವಾದ ಕಾಲಘಟ್ಟವೊಂದನ್ನು ನೆನಪಿಸಿಕೊಳ್ಳುವ ನಾಸ್ಟಾಲ್ಜಿಯಾ ಗುಂಪಿನ ಬರಹಗಳು. ಪಾಲಹಳ್ಳಿಯವರ "ಹಾರಿಹೋದವರು" ತನ್ನ ಅಸಂಬದ್ಧತೆಯಿಂದಲೇ ಓದುಗರನ್ನು ರಂಜಿಸಿದರೆ, ಸುಮಾ ರವರ ಲೇಖನದಲ್ಲಿ ಹಳ್ಳಿಯ ಮುಗುದೆಯೊಬ್ಬಳು ತವರನ್ನು ಬಿಟ್ಟು ತೆರಳುವಾಗ ದಾರಿಯಲ್ಲಿದ್ದ ತಿಟ್ಟನ್ನು ಹತ್ತಿ, ದೂರದ ದಿಗಂತದಲ್ಲಿದ್ದ ತನ್ನೂರಿನತ್ತ ದೃಷ್ಟಿ ಹಾಯಿಸುವ ಆರ್ದ್ರ ಕ್ಷಣವನ್ನು ಸೆರೆಹಿಡಿದಿದ್ದಾರೆ. ಕೃತಕ ಬುದ್ಧಿ, ಸಾಮಾನ್ಯ ಬುದ್ಧಿ, ಈ ಪ್ರಸ್ತುತ ವಿಷಯದ ಬಗ್ಗೆ ಖ್ಯಾತ ಲೇಖಕ ವಿಜಯಶಂಕರರ ದೃಷ್ಟಿಕೋನವನ್ನು ಓದಿಯೇ ಸವಿಯಬೇಕು. ಸುಮಾರು ನಲವತ್ತಕ್ಕೂ ಮಿಕ್ಕಿರುವ ಎಲ್ಲ ಲೇಖನಗಳ ಬಗ್ಗೆ ತಿಳಿಸುವುದು ಈ ಪರಿಚಯದ ಉದ್ದೇಶವಲ್ಲ. ಅದನ್ನು ನಿಮ್ಮ ಓದಿಗೆ ಬಿಟ್ಟದ್ದು. ಆದರೆ ಪ್ರತಿಯೊಂದು ಲೇಖನವೂ ಆಯಾಯ ಕರ್ತೃವಿನ ನಗೆಪ್ರಜ್ಞೆಯ ಮೂರ್ತಸ್ವರೂಪ. ಸಂಪಾದಕನಾಗಿ ಇದನ್ನೆಲ್ಲಾ ಸಂತಸ ಸಂಭ್ರಮಗಳಿಂದ ಓದುವಂತಾಗಿದ್ದು, ನಿಮಗೂ ಸಹಾ ಆ ಚೇತೋಹಾರಿ ಅನುಭವ ದೊರಕುವಂತಾಗಲಿ ಎಂದು ಹಾರೈಸುವೆ.

# ಸಿ.ಆರ್. ಸತ್ಯ

**ಶಿವಕುಮಾರ್**



ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ, ಬಾವಿಗಳುಂಟು
ಶಯನಕೆ ಪಾಳು ದೇಗುಲಗಳುಂಟು
ಆತ್ಮ ಸಂಗಾತಕೆ, ಚೆನ್ನ ಮಲ್ಲಿಕಾರ್ಜುನಾ,
ನೀ ಎನಗುಂಟು

ಎಂದು ಸುಶ್ರಾವ್ಯವಾಗಿ ಮಹದೇವಿಯಕ್ಕನ ವಚನವನ್ನು ಗಮಕದೊಂದಿಗೆ ಹಾಡುತ್ತಿದ್ದ ಶ್ರೀಯುತ ಸಿ.ಆರ್. ಸತ್ಯರವರು ಅಪರಂಜಿಯ ಬರಹಗಾರ ಬಳಗದ ಒಂದು ಆಧಾರ ಸ್ತಂಭವಾಗಿದ್ದರು ಎನ್ನಬಹುದು. ಸತ್ಯ ಮತ್ತು ನನ್ನ ಗೆಳೆತನ ಬಾಲ್ಯದಿಂದಲೇ ಪ್ರಾರಂಭವಾಗಿತ್ತು. ಮಲ್ಲೇಶ್ವರದ-ಲ್ಲಿರುವ ಆರ್. ಆರ್. ವಿ. ಎಮ್ ಪ್ರಾರ್ಥಮಿಕ ಶಾಲೆಯಲ್ಲಿ ಸತ್ಯ ಅವರು ನನ್ನ ತಮ್ಮ ಓಂಪ್ರಕಾಶರ, ಸಹಪಾಠಿಯಾಗಿದ್ದರು. 1983 ರಲ್ಲಿ ನಾನು ಕೊರವಂಜಿ ಪತ್ರಿಕೆಯ ಪುನರುಜ್ಜೀವಿತ ಅವತಾರವಾದ ಅಪರಂಜಿಯನ್ನು ಪ್ರಾರಂಭಿಸಿದಾಗ, ಸತ್ಯರೊಂದಿಗಿನ ಸಂಪರ್ಕ ಮತ್ತೆ ಬೆಳೆಯಿತು. ನಮ್ಮಿಬ್ಬರ ವೃತ್ತಿಗಳೂ ಬಹು ಮಟ್ಟಿಗೆ ಸಾಮ್ಯತೆಯನ್ನು ಹೊಂದಿದ್ದರಿಂದ ಸಹಜವಾಗಿಯೇ ನಮ್ಮ ಸ್ನೇಹಕ್ಕೆ, ಆಪ್ತತೆಯ ಮೆರಗು ಬಂದಿತ್ತು.

ಅಪರಂಜಿಗೆ ಲೇಖನಗಳನ್ನು ಬರೆದುಕೊಡಿರೆಂದು ನಾನು ಅವರನ್ನು ಕೇಳಿದಂದಿನಿಂದ ಅವರು ಪ್ರತಿ ತಿಂಗಳೂ ತಪ್ಪದೇ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ನಮ್ಮ ಪತ್ರಿಕೆಯನ್ನು ನಿರ್ವಹಿಸುವ ಟ್ರಸ್ಟ್‌ಗೆ ಅವರು ಒಬ್ಬ ಟ್ರಸ್ಟಿ ಆಗಿದ್ದರು. ಪ್ರತಿ ತಿಂಗಳು ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಟ್ರಸ್ಟ್ ಸಭೆಯಲ್ಲಿ ಅವರ ಬರುವಿಕೆಯನ್ನು ನಾವೆಲ್ಲರೂ ಇದಿರುನೋಡುತ್ತಿದ್ದೆವು. ಟ್ರಸ್ಟ್ ವ್ಯವಹಾರಕ್ಕೆ ಅವರ ಶ್ರೀಮಂತ ನಿರ್ವಹಣಾ ಅನುಭವ ದೊರಕುವುದು ಇದಕ್ಕೆ ಮುಖ್ಯ ಕಾರಣವಾದರೆ, ಇನ್ನೂ ಎರಡು ಉಪ-ಕಾರಣಗಳು ನಮ್ಮ ಉತ್ಸಾಹಕ್ಕೆ ಕಾರಣವಾಗಿದ್ದವು. ಮೊದಲನೆಯದು ಅವರ ಪತ್ನಿ ಶ್ರೀಮತಿ ಶ್ಯಾಮಲಾ ರವರು ನಮಗೆಲ್ಲಾ ಕಳಿಸುತ್ತಿದ್ದ ಪಾಟ್‌ಲಕ್ ತಿನಿಸುಗಳು. ಎರಡನೆಯ ಕಾರಣ ಅವರ ಹಾಡುಗಾರಿಕೆ. ಅವರು ಗಮಕವನ್ನು ಗುರುಮುಖೇನ ಕಲಿತದ್ದರಿಂದ, ಅದರ ಪ್ರಯೋಗಕ್ಕೆ ನಮ್ಮ ಸಭೆ ಒಂದು ಉತ್ತಮ ಅವಕಾಶ ನೀಡಿತ್ತು. ಸಭೆಯ ಕಲಾಪಗಳನ್ನು ಪೂರ್ಣಗೊಳಿಸಿ, ಭೋಜನವನ್ನು ಮುಗಿಸಿದ ನಂತರ ಸತ್ಯರ ಲಘು ಸಂಗಿತದ ಸವಿಯೂಟ. ಇದಕ್ಕಾಗಿಯೇ ಅವರು ತಮ್ಮ ಕೈ ಬರಹದ ಗೀತೆಗಳ ಪುಸ್ತಕವನ್ನು ನಮ್ಮ ಸಭೆಗೆ ತಪ್ಪದೆ ತರುತ್ತಿದ್ದರು. ಪುರಂದರ ದಾಸರ ಕೃತಿಗಳು, ವಚನಕಾರರ ವೈವಿಧ್ಯಮಯ ವಚನಗಳು, ಇವೆಲ್ಲಾ, ಬಹು ನಿರರ್ಗಳವಾಗಿ ಸತ್ಯರ ಕಂಠದಿಂದ ಮೂಡಿಬರುತ್ತಿದ್ದವು.

ಸತ್ಯರು ವಿಜ್ಞಾನಿ ಹಾಗೂ ಇಂಜಿನಿಯರ್. ವೈಜ್ಞಾನಿಕ ಅಂಶಗಳನ್ನು ಸಂಶೋಧಿಸಿ, ಸಂಕೀರ್ಣ ರಾಕೆಟ್‌ಗಳನ್ನು ನಿರ್ಮಿಸುವ ಕ್ಷೇತ್ರದಲ್ಲಿ ಹೆಚ್ಚು ಪರಿಣತಿಯನ್ನು ಸತ್ಯರು

ಪಡೆದಿದ್ದರು. ಅವರ ಇತ್ತೀಚಿನ ಪುಸ್ತಕ "ತ್ರಿಮುಖಿ"ಯಲ್ಲಿ ಸತ್ಯರ ಬಹುಮುಖ ಪ್ರತಿಭೆಯ ಹಲವಾರು ನಿದರ್ಶನಗಳಿವೆ.

ತಿರುವನಂತಪುರದಲ್ಲಿರುವ ಶ್ರೀ ಅನಂತಪದ್ಮನಾಭಸ್ವಾಮಿ ದೇವಸ್ಥಾನದ ಕಲ್ಲುಗಳ ಮೇಲೆ ಅವರು ಮಾಡಿದ ಸಂಶೋಧನೆಯ ಬಗ್ಗೆ ಕನ್ನಡದ ಅವತರಣಿಕೆ "ಅಳಿವಿಲ್ಲದ ಸ್ಥಾವರ" ಪುಸ್ತಕಕ್ಕೆ ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿಯಿಂದ ಮತ್ತು ಇದೇ ಪುಸ್ತಕದ ಇಂಗ್ಲೀಷ್ ಅವತರಣಿಕೆಯಾದ "ಸೆಂಟಿನೆಲ್ಸ್ ಆಫ್ ಗ್ಲೋರಿ" ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡಿಮಿ ಪುರಸ್ಕಾರಗಳು ದೊರೆತಿವೆ.

ದೇಶದ ಹಿರಿಯ ವಿಜ್ಞಾನಿಗಳಾದ ಸರ್ವಶ್ರೀ ಅಬ್ದುಲ್ ಕಲಾಮ್, ವಿಕ್ರಮ್ ಸಾರಾಭಾಯ್, ರಾಜಾ ರಾಮಣ್ಣ, ಇವರೆಲ್ಲರೊಂದಿಗೆ ಕಾರ್ಯನಿರ್ವಹಿಸಿದ ಸತ್ಯರು, ಸಾಹಿತ್ಯ ಮತ್ತು ವಿಜ್ಞಾನ ಎರಡೂ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆಂದು ಹೇಳಬಹುದು.

ಸತ್ಯ ಅವರ ಇನ್ನೊಂದು ಸ್ವಾರಸ್ಯಕರ ಪುಸ್ತಕವೆಂದರೆ, "ಸಹ್ಯಾದ್ರಿಯಿಂದಾಚೆಗೆ" ಎಂಬ ಪುಟ್ಟ ಪುಸ್ತಕ. ಕೇರಳದ "ತುಂಬಾ" ಎಂಬ ಹಳ್ಳಿಯಲ್ಲಿ ಸ್ಥಾಪಿತವಾಗಿದ್ದ ಐ.ಎಸ್.ಆರ್ ಒ. ಸಂಸ್ಥೆಯಲ್ಲಿ ಸತ್ಯ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು. ಆ ದಿನಗಳ ರೋಚಕ ಅನುಭವಗಳನ್ನು ಸತ್ಯ ಈ ಪುಸ್ತಕದಲ್ಲಿ ಹಿಡಿದಿಟ್ಟಿದ್ದಾರೆ. ಒಮ್ಮೆ, ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು, "ಸೆಂಟಾರ್" ಎಂಬ ರಾಕೆಟ್ಟನ್ನು ಉಡಾವಣೆಮಾಡುನ ಸಂದರ್ಭ ಒದಗಿಬಂದಿತ್ತು. ಈ ರಾಕೆಟ್ಟಿನ ಶೃಂಗ ಶಂಕುವನ್ನು ಸತ್ಯ ತಮ್ಮ ಸಹಾಯಕನೊಂದಿಗೆ ಸಿದ್ಧಪಡಿಸಿದ್ದರು. ಅವರಿದ್ದ ಜಾಗದಿಂದ ರಾಕೆಟ್ ಉಡಾವಣಾ ಕ್ಷೇತ್ರಕ್ಕೆ ಸುಮಾರು ಐದು ಕಿ.ಮೀ. ದೂರ. "ಜೀಪು ಕಳಿಸಿ" ಎಂದು ಸತ್ಯ ಫೋನ್ ಮಾಡಿ ಕೇಳಿದರು. ಅದಕ್ಕೆ ಪ್ರತಿಕ್ರಿಯೆಯೇ ಬರಲಿಲ್ಲ. ಅಲ್ಲಿದ್ದ ಸಹೋದ್ಯೋಗಿಗಳೆಲ್ಲಾ ಪ್ರಧಾನಿಯವರನ್ನು ಸ್ವಾಗತಿಸುವುದರಲ್ಲೇ ಮಗ್ನರಾಗಿದ್ದಂತೆ ತೋರಿತು. ವಿಧಿಯಿಲ್ಲದೆ ಸತ್ಯ ಶೃಂಗ ಶಂಖುವನ್ನು ಸಾಗಿಸಲು ಬೇರೆ ಮಾರ್ಗಕ್ಕಾಗಿ ಸುತ್ತಮುತ್ತ ನೋಡಿದರು. ಮುಂದಿನ ಘಟನಾವಳಿಗಳನ್ನು ಅವರಿಂದಲೇ ಕೇಳಿ.

"ಆಗ ಅಲ್ಲಿ ಚಕ್ರಗಳಲ್ಲಿ ಗಾಳಿ ಇಲ್ಲದ ಒಂದು ಹಳೆಯ ಸೈಕಲ್ ಬಿದ್ದಿರುವುದು ನನ್ನ ಗಮನಕ್ಕೆ ಬಂತು. ತಕ್ಷಣ ಯಾವ ಸುರಕ್ಷತ ಪರಿವೆಯೂ ಇಲ್ಲದೆ, ಆ ಪ್ಯಾಕೇಜ್‌ನ ಒಳಗೊಂಡ ಶಂಕುವನ್ನು ಸೈಕಲ್ ಕ್ಯಾರಿಯರ್ ಮೇಲೆ ಏರಿಸಿ, ತಳ್ಳಿಕೊಂಡೇ ಹೊರಟೆ. ಒಬ್ಬ ನರಪಿಳ್ಳೆಯೂ ಕಾಣದ ಆ ಕಡಲತೀರದ ರಸ್ತೆಯಲ್ಲಿ ಸ್ವಲ್ಪ ದೂರ ನಡೆದಾಗ, ದೂರದಿಂದ ನಮ್ಮೆಡೆಗೆ ಯಾರೋ ಪಾಶ್ಚಾತ್ಯ ಮನುಷ್ಯ ಸೈಕಲ್ ತುಳಿದುಕೊಂಡು ಜೋರಾಗಿ ಬರುತ್ತಿರುವುದು ಕಂಡಿತು. ಹೆಗಲ ಮೇಲೆ ಎರಡೋ ಮೂರೋ ಕ್ಯಾಮರಾಗಳು ಕಂಡವು. (ಆತ ಅಂತರರಾಷ್ಟ್ರೀಯ ಖ್ಯಾತಿಯ ಛಾಯಾಗ್ರಾಹಕ, ಫ್ರಾನ್ಸ್‌ನ ಹೆನ್ರಿ ಕಾರ್ಟಿಯರ್ ಬ್ರೆಸ್ಸೋನ್ ಎಂದು ನಂತರ ತಿಳಿಯಿತು.) ಹದ್ದಿನಂತೆ ನಮ್ಮ ಪಕ್ಕಕ್ಕೆ ಬಂದು, "ನನ್ನ ಕಡೆ ನೋಡಬೇಡಿ. ಹಾಗೇ ಹೋಗುತ್ತಿರಿ" ಅಂತ ಎಚ್ಚರಿಸಿ, ಭಾರತದ ರಾಕೆಟ್ ತಂತ್ರಜ್ಞಾನದ ಚರಿತ್ರೆಯಲ್ಲಿ ನಡೆಯುತ್ತಿದ್ದ ಈ ವಿಚಿತ್ರ ಘಟನೆಯನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದ. ಆ ಚಿತ್ರ ಬಹಳ ಪ್ರಸಿದ್ಧಿಯಾಯಿತು. ಇತ್ತೀಚೆಗೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮತ್ತೊಮ್ಮೆಈ ಚಿತ್ರವನ್ನು, ಅದರೊಂದಿಗೆ ನನ್ನೊಡನೆ ನಡೆಸಿದ ಸಂದರ್ಶನವನ್ನೂ ಪ್ರಕಟಿಸಿತು"

ಸತ್ಯರವರು, ಖ್ಯಾತ ಪಿಟೀಲು ವಾದಕ, ಕುನ್ನೈಕುಡಿ ವೈದ್ಯನಾಥನ್ ಅವರನ್ನು ಭೇಟಿಮಾಡಿದ ಘಟನೆ ನಿಜಕ್ಕೂ ಬಹು ಸ್ವಾರಸ್ಯಮಯ. ಸತ್ಯರ ಮಾತಿನಲ್ಲೇ ಕೇಳಿ.

"ತಿರುವನಂತಪುರ ಆಕಾಶವಾಣಿ ಕೇಂದ್ರದಿಂದ ಆಗೊಮ್ಮೆ ಈಗೊಮ್ಮೆ ನಾನು ಕೆಲವು



ಕಾರ್ಯಕ್ರಮಗಳನ್ನು ಬರೆದು ಬಿತ್ತರಿಸುತ್ತಿದ್ದೆ. ಆಂಧ್ರ ಪ್ರದೇಶದ ಶ್ರೀಹರಿಕೋಟಾ ರಾಕೆಟ್ ಕೇಂದ್ರದಿಂದ ಉಪಗ್ರಹಗಳನ್ನು ಹಾರಿಸುವ ಸಮಯಗಳಲ್ಲಿ, ಕೆಲವೊಮ್ಮೆ ಇಂಗ್ಲೀಷಿನಲ್ಲಿ ವೀಕ್ಷಕ ವಿವರಣೆಯನ್ನೂ ಕೊಡುತ್ತಿದ್ದೆ. ಈ ಹಿನ್ನೆಲೆಯಲ್ಲಿ ಚೆನ್ನೈ ಆಕಾಶವಾಣಿಯವರು ರಾಷ್ಟ್ರೀಯ ಕಾರ್ಯಕ್ರಮವಾಗಿ ದೆಹಲಿಯಿಂದ ಬಿತ್ತರಿಸಲು ನಮ್ಮ ದೇಶದಲ್ಲಿ, ಬಾಹ್ಯಾಕಾಶ ಕ್ಷೇತ್ರದಲ್ಲಿ ಆಗುತ್ತಿದ್ದ ಪ್ರಗತಿಯ ಬಗ್ಗೆ ಒಂದು ಶಬ್ದ ಚಿತ್ರವನ್ನು ಬರೆದು ನೀವೇ ಅದಕ್ಕೆ ನಿರೂಪಣೆ ಕೊಡಿ ಎಂದು ಕೋರಿದರು. ರಾಷ್ಟ್ರೀಯ ಕಾರ್ಯಕ್ರಮವಾದದ್ದರಿಂದ ಬಹಳ ಮುತುವರ್ಜಿ ವಹಿಸಿ ಕಾರ್ಯಕ್ರಮವನ್ನು ಸಿದ್ಧಪಡಿಸಿದೆ. ಸ್ಟುಡಿಯೋ ನಿರ್ಮಾಪಕರು "ನಾಳೆ ಮತ್ತೊಮ್ಮೆ ಬನ್ನಿ. ನಿಮ್ಮ ನಿರೂಪಣೆಗೆ ವಿಷಯಕ್ಕೆ ಅನುಗುಣವಾಗಿ ಸಂಗೀತ ಅಳವಡಿಸಬೇಕು." ಎಂದರು. ಮಾರನೆಯ ದಿನ ಸ್ಟುಡಿಯೋಗೆ ಹೋದರೆ, ಅಲ್ಲಿ ನಾನು ಕಂಡದ್ದು, ಕುನ್ನೈಕುಡಿ ವೈದ್ಯನಾಥನ್ ಮತ್ತು ಅವರ ತಂಡವನ್ನು! ಇಂತಹ ಪ್ರಸಿದ್ಧ ಪಿಟೀಲು ಹಾಗೂ ಸಂಗೀತ ವಿದ್ವಾಂಸರು ನನ್ನ ನಿರೂಪಣೆಗೆ ಬೇಕಿತ್ತೇ? ಎಂದು ಆಶ್ಚರ್ಯಪಟ್ಟೆ. ಅವರ ಪಟ್ಟೆ ವಿಭೂತಿ, ಹಣೆಯಲ್ಲಿ ರೂಪಾಯಿನಷ್ಟು ಅಗಲದ ಕುಂಕುಮ, ಜರತಾರಿ ತೊಡುಗೆ, ಬೆರಳುಗಳಲ್ಲಿ ಥಳಥಳಿಸುವ ವಜ್ರದ ಉಂಗುರಗಳು, ಇವೆಲ್ಲವನ್ನೂ ದೂರದಿಂದ ಅನೇಕಬಾರಿ ಕಂಡಿದ್ದೆ. ಈಗ ಅವರ ಈ ವ್ಯಕ್ತಿತ್ವ ಆ ರೆಕಾರ್ಡಿಂಗ್ ಸ್ಟುಡಿಯೋವನ್ನೆಲ್ಲಾ ಆವರಿಸಿದಂತಿತ್ತು. ಪರಿಚಯವಾದಮೇಲೆ ನನ್ನನ್ನು ಬಳಿಗೆ ಕರೆಯುತ್ತಾ, "ವಾಂಗು ವಾಂಗು, ಇಂದ ಪ್ರೋಗ್ರಾಂಲೆ ಎನ್ನ ಚೊಲ್ಲ ಪೋರಿಂಗು ?" ಎಂದು ಕೇಳಿದರು. ನನ್ನ ಹರುಕು ಮುರುಕು ತಮಿಳಿನಲ್ಲಿ ಬಾಹ್ಯಾಕಾಶ ಯೋಜನೆಗಳ ಬಗ್ಗೆ ತಿಳಿಸಿ, ಅದರಲ್ಲಿ ರಾಕೆಟ್ ಉಡಾವಣೆಯ ಶಬ್ದ ಸಂದರ್ಶನಗಳು, ನನ್ನ ನಿರೂಪಣೆ ಇವೆಲ್ಲಾ ಸೇರಿವೆ ಅಂತ ಹೇಳಿದೆ. "ಬಾಹ್ಯಾಕಾಶ" ಎಂಬ ಶಬ್ದ ಕೇಳಿದೊಡನೆಯೇ, "ಓಹೋ, ಬ್ರಹ್ಮಾಂಡ, ಬ್ರಹ್ಮಾಂಡ!" ಅಂತ ತಮಗೆ ತಾವೇ ಹೇಳಿಕೊಂಡು, ಕೆಲವು ಕ್ಷಣಗಳಷ್ಟೇ ಕಣ್ಣು ಮುಚ್ಚಿ, ತಮಗೆ ತಾವೇ ಹಲವು ರಾಗಗಳನ್ನು ಗೊಣಗಿಕೊಂಡರು. ನಂತರ ಕಣ್ತೆರೆದು,"ಶೆರಿ, ಪಣ್ಣಿಡಲಾ" ಅಂತ ಅವರ ಜೊತೆಗಾರರನ್ನು ಸೇರಿಸಿಕೊಂಡು, ಕೆಲವೇ ನಿಮಿಷಗಳಲ್ಲಿ ಸಂಗೀತ ಸಂಯೋಜನೆಯನ್ನು ಮಾಡೇಬಿಟ್ಟರು. ಅದರಲ್ಲಿ, ಅಲ್ಲಲ್ಲಿ ಪರಿಸ್ಥಿತಿಗನುಗುಣವಾಗಿ ವೇದ ಘೋಷಣೆಗಳನ್ನೂ ಅಳವಡಿಸಿದರು! ನಂತರ ರೆಕಾರ್ಡಿಂಗ್ ಹಾಗೂ ಸಂಕಲನ ಅಧಿಕಾರಿಗಳಿಗೆ, "ಇಂದ ಬಿಟ್ ಇಂಗೆ ವರು.....ಇಂಗೆವರು.....ಇದು ಎಂಡಿಂಗ್ ಬಿಟ್ "ಎಂದೆಲ್ಲಾ ವಿವರಿಸಿ" ರೆಕಾರ್ಡ್ ಪಣ್ಣಿಕೋಪ್ಪಾ "ಅಂತ ಹುಕುಂ ಕೊಟ್ಟರು. ಅಷ್ಟೇ ಬಿರುಸಿನಿಂದ ಮಿಂಚಿನಂತೆ ಹೊರಟೇ ಹೋದರು.

"ಎ ಲೀಪ್ ಇಂಟು ಸ್ಪೇಸ್" ಎಂಬ ಹೆಸರಿನಲ್ಲಿ ಆಗಸ್ಟ್ 1981 ರಲ್ಲಿ ಬಿತ್ತರವಾದ ಈ ಕಾರ್ಯಕ್ರಮ, ಎಲ್ಲರಿಗೂ ಮೆಚ್ಚುಗೆ ಆಯಿತು. ನನ್ನ ನಿರೂಪಣೆಗೆ ಅದೆಷ್ಟು ಸಮಂಜಸವಾಗಿ ಈ ಮಹಾನುಭಾವ ಸಂಗೀತ ಕೊಟ್ಟಿದ್ದಾರೆ ಅಂತ ನನಗೆ ಈಗಲೂ ಆಶ್ಚರ್ಯವಾಗುತ್ತೆ.

'ತುಂಬಿದ ಕೊಡ" ಎಂಬ ಪದಕ್ಕೆ ಕುನ್ಯೆಕುಡಿ ಸೂಕ್ತ ಉದಾಹರಣೆ "ಎನ್ನುತ್ತಾರೆ ಸತ್ಯ.

ಸತ್ಯರು ರಚಿಸಿರುವ ಬಹು ಪ್ರಚಲಿತ ಪದ್ಯವೆಂದರೆ "ಏಕಾದ್ಸಿ ಉಪ್ವಾಸ". ಇದನ್ನ ಅವರು ಕೊರವಂಜಿಗೆ ತುಂಬ ಹಿಂದೆ ಬರೆದದ್ದು. ಇದನ್ನ ಓದುಗರೊಂದಿಗೆ ಹಂಚಿಕೊಳ್ಳದೇ ಸತ್ಯರ ಪರಿಚಯ ಪೂರ್ಣವಾಗದು. ಹಾಗಾಗಿ ಅದನ್ನು ಇಲ್ಲಿ ನೀಡಿರುವೆ.

**ಸುಬ್ಬಮ್ಮನ ಉಪ್ವಾಸ**

ಆಚೆ ಮನೆ ಸುಬ್ಬಮ್ಮಂಗೆ
ಇವತ್ತು ಏಕಾದ್ಸಿ- ಉಪ್ವಾಸ
ಎಲ್ಲೋ ಸ್ವಲ್ಪ ತಿಂತಾರ್ ಅಷ್ಟೆ
ಉಪ್ಪಿಟ್ಟು-ಅವ್ಲಕ್ಕಿ-ಪಾಯ್ಸ
ಮೂರೋ ನಾಕೋ ಬಾಳೇಹಣ್ಣು
ಸ್ವಲ್ಪ ಚಕ್ಕಲಿ-ಕೋಡ್ಬಳೆ
ಗಂಟೆಗೆರಡು ಸೀಬೇಹಣ್ಣು
ಆಗಾಗ ಒಂದೊಂದ್ ಕಿತ್ತಳೆ

ಮಧ್ಯಾನ್ವೆಲ್ಲಾ ರವೇ ಉಂಡೆ
ಹುರ್ಳೀಕಾಳಿನ ಉಸ್ಲಿ
ಒಂದೊಂದ್ಲಲ ಬಿಸಿ ಸಂಡ್ಗೆ
ಒಂದೋ ಎರಡೋ ಇಡ್ಲಿ
ರಾತ್ರಿ ಪಾಪ ಉಪ್ಪಿಟ್ಟೇನೇ
ಒಂದ್ಲೋಟದ ತುಂಬ ಹಾಲು
ಪಕ್ಕದ ಮನೆ ರಾಮೇಗೌಡರ
ಸೀಮೆ ಹಸು ಹಾಲು

ಆಚೆ ಮನೆ ಸುಬ್ಬಮ್ಮಂಗೆ
ಇವತ್ತು ಏಕಾದ್ಸಿ- ಉಪ್ವಾಸ
ಎಲ್ಲೋ ಸ್ವಲ್ಪ ತಿಂತಾರ್ ಅಷ್ಟೆ
ಉಪ್ಪಿಟ್ಟು-ಅವ್ಲಕ್ಕಿ-ಪಾಯ್ಸ

**ಬದಲಿ ಮುಖಕ್ಕೆ...!**

ಗುಂಡ ಒಂದು ರಾತ್ರಿ ಚೆನ್ನಾಗಿ ಕುಡಿದುಕೊಂಡು ಮಧ್ಯರಾತ್ರಿ ಶಬ್ದ ಮಾಡದೆ ಮನೆಯೊಳಗೆ ಬಂದು, ತಾನು ಬಾಯಿಬಿಟ್ರೆ ಬಣ್ಣಗೇಡಾಗುತ್ತೆ ಎಂದು ಕೊಂಡು, ತನ್ನ ಬಾಯಿಗೆ ಪ್ಲಾಸ್ಟರ್ ಹಾಕಿಕೊಂಡು ಮಲಗಿಬಿಟ್ಟನು.

ಮಾರನೆಯ ದಿನ ಗುಂಡಿ-ಏನ್ರೀ, ನಿನ್ನೆ ಸಹಾ ಚೆನ್ನಾಗಿ ಕುಡ್ಕೊಂಡು ಮನೆಗೆ ಬಂದ್ರಾ? ಎಂದು ಕೇಳಿದಾಗ, ಗುಂಡ-ಇಲ್ವಲ್ಲಾ ಎಂದು ಹೇಳಿದನು. ಆಗ ಗುಂಡಿ-ಹಾಗಾದ್ರೆ, ಆ ಕನ್ನಡಿಗೆ ಬಾಯಿ ಬರೋ ಲೆವೆಲ್‌ಗೆ ಪ್ಲಾಸ್ಟರ್ ಅಂಟಿಸಿರೋದು? ಎಂದು ದಬಾಯಿಸಿದಾಗ, ಅಯ್ಯೋ, ನನ್ನ ಪೆದ್ದುತನವೇ.. ಎಂದು ಪೇಚಾಡಿಕೊಂಡನು ಗುಂಡ...!

**– ವಿ.ವಿಜಯೇಂದ್ರ ರಾವ್**

# ಪುಟ್ಟರಾಜಕುಮಾರ-3

**ಭಾವಾನುವಾದ : ಬಿ. ಎಸ್. ಶೈಲಜಾ**

**ನಾಲ್ಕು**

ಇದೀಗ ನಾನು ಎರಡನೆಯ ಮುಖ್ಯ ವಿಷಯ ತಿಳಿದುಕೊಂಡೆ-ಈ ಪುಟ್ಟ ರಾಜಕುಮಾರನ ಗ್ರಹ ಬಹುಶ: ಒಂದು ಮನೆಗಿಂತ ದೊಡ್ಡದೇನಲ್ಲ!

ಅದರಿಂದ ನನಗೆ ಬಹಳ ಆಶ್ಚರ್ಯವೇನೂ ಆಗಲಿಲ್ಲ. ಏಕೆಂದರೆ ಭೂಮಿ, ಗುರು, ಮಂಗಳ, ಶುಕ್ರ-ಹೀಗೆ ನಾವು ಹೆಸರು ಕೊಟ್ಟಿರುವ ಗ್ರಹಗಳಿಗಿಂತ ಬಹಳ ಚಿಕ್ಕದಾದ ನೂರಾರು ಗ್ರಹಗಳು ಇವೆ ಎಂದು ನನಗೆ ಗೊತ್ತಿತ್ತು. ದೂರದರ್ಶಕದ ಮೂಲಕವೂ ಕಾಣಲಾರದಷ್ಟು ಸಣ್ಣಗ್ರಹಗಳು ಅವು. ಯಾವನಾದರೂ ಖಗೋಳವೀಕ್ಷಕ ಅವುಗಳಲ್ಲೊಂದನ್ನು ಕಂಡು ಹಿಡಿದರೆ, ಅದಕ್ಕೆ ಹೆಸರೇನೂ ಇಡುವುದಿಲ್ಲ. ಬರೀ ಒಂದು ಗುರುತಿನ ಸಂಖ್ಯೆ ಇರುತ್ತದೆ ಅಷ್ಟೇ. ಉದಾಹರಣೆಗೆ ಅವನ ಕ್ಷುದ್ರಗ್ರಹಕ್ಕೆ 325 ಎಂದು ಹೆಸರಿಡಬಹುದು.



ಈ ಪುಟ್ಟರಾಜಕುಮಾರನ ಗ್ರಹ ಬಹುಶ: ಬಿ-612 ಎಂಬ ಸಂಖ್ಯೆಯದಿರಬೇಕು ಎಂದು ನನಗೆ ಅನ್ನಿಸುತ್ತದೆ. ಅದಕ್ಕೆ ಕಾರಣವೂ ಇದೆ. ಇದನ್ನು ದೂರದರ್ಶಕದಿಂದ ಮಾತ್ರ ನೋಡಲು ಸಾಧ್ಯ. 1909 ರಲ್ಲಿ ಟರ್ಕಿಶ್ ವೀಕ್ಷಕನೊಬ್ಬ ಇದನ್ನು ಕಂಡುಹಿಡಿದ. ತನ್ನ ಈ ಆವಿಷ್ಕಾರವನ್ನು ಆತ ಅಂತರಾಷ್ಟ್ರೀಯ ಖಗೋಳಗೋಷ್ಠಿಯಲ್ಲಿ ವಿವರವಾಗಿಯೇ ಮಂಡಿಸಿದ. ಆದರೆ ಅವನು ಟರ್ಕಿದೇಶದ ಉಡುಪು ಧರಿಸಿದ್ದರಿಂದ ಯಾರೂ ಅವನ ಮಂಡನೆಯನ್ನೂ, ಆವಿಷ್ಕಾರವನ್ನೂ ನಂಬಲೇ ಇಲ್ಲ.



ಈ ದೊಡ್ಡವರೆಲ್ಲಾ ಹೀಗೇ.....

ಆದರೆ ಅದೃಷ್ಟವಶಾತ್ ಬಿ–612ರ ಪ್ರತಿಷ್ಠೆಗೆ ಭಂಗಬರಲಿಲ್ಲ. ಮುಂದೆ ಬಂದ ಒಬ್ಬ ಟರ್ಕಿಷ್ ಸರ್ವಾಧಿಕಾರಿ ಎಲ್ಲಾ ಪ್ರಜೆಗಳೂ ಯುರೋಪಿಯನ್ ಉಡುಪುಗಳನ್ನೇ ತೊಡಬೇಕೆಂದು ಕಾನೂನುಮಾಡಿದ. 1920ರಲ್ಲಿ ಆ ಟರ್ಕಿಷ್ ವಿಜ್ಞಾನಿ ಉತ್ಕೃಷ್ಟವಾದ ಯುರೋಪಿಯನ್ ಉಡುಪನ್ನು ಧರಿಸಿ ಪುನ: ತನ್ನ ಆವಿಷ್ಕಾರವನ್ನು ಮಂಡಿಸಿದ. ಈ ಬಾರಿ ಎಲ್ಲರೂ ಅವನ ವಾದವನ್ನು ಒಪ್ಪಿಕೊಂಡರು.



ನಾನೀಗ ಈ ಕ್ಷುದ್ರಗ್ರಹದ ವಿವರಗಳನ್ನೆಲ್ಲಾ ಕೊಟ್ಟೆ. ಅದರ ನಮೂದಿನ ಸಂಖ್ಯೆಯನ್ನೂ ತಿಳಿಸಿದೆ. ಅದೆಲ್ಲಾ ದೊಡ್ಡವರಿಗಾಗಿ. ಅವರಿಗೆ ಅಂಕೆ ಸಂಖ್ಯೆಗಳು ಬಹಳ ಮುಖ್ಯ. ಉದಾಹರಣೆಗೆ, ನಿಮ್ಮ ಹೊಸ ಗೆಳೆಯನ ಬಗ್ಗೆ ನೀವು ದೊಡ್ಡವರಿಗೆ ಹೇಳುತ್ತೀರೆಂದುಕೊಳ್ಳಿ. 'ಅವನ ಧ್ವನಿ ಹೇಗಿದೆ? ಅವನಿಗೆ ಯಾವ ಆಟ ಇಷ್ಟ? ಅವನು ಚಿಟ್ಟೆಗಳನ್ನು ಹಿಡಿಯುತ್ತಾನೆಯೇ?' ಇಂತಹ ಅತ್ಯಮೂಲ್ಯಪ್ರಶ್ನೆಗಳನ್ನು ಅವರು ಕೇಳುವುದಿಲ್ಲ. ಬದಲಿಗೆ, "ಅವನ ವಯಸ್ಸೆಷ್ಟು? ಅವನಿಗೆ ಎಷ್ಟು ಅಣ್ಣ–ತಮ್ಮಂದಿರಿದ್ದಾರೆ? ಅವನ ತೂಕ ಎಷ್ಟು? ಅವರ ಅಪ್ಪನ ಹತ್ತಿರ ಎಷ್ಟು ದುಡ್ಡಿದೆ?" ಇಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಪ್ರಶ್ನೆಗಳ ಉತ್ತರಗಳಿಂದ ಅವರಿಗೆ ಅವನ ಬಗ್ಗೆ ಎಲ್ಲವೂ ತಿಳಿಯುತ್ತದೆ ಎಂದು ಭಾವಿಸುತ್ತಾರೆ.

ಅಥವಾ ನೀವು "ಒಂದು ಭಾರೀ ಸುಂದರವಾದ ಮನೆ ನೋಡಿದ; ಗುಲಾಬಿ ಬಣ್ಣದ ಇಟ್ಟಿಗೆಗಳು, ಕಿಟಿಕಿಗಳಲ್ಲಿ ಸುಂದರವಾದ ಹೂಗಳು, ತಾರಸಿಯ ಮೇಲೆ ಪಾರಿವಾಳಗಳು" ಎಂದು ಹೇಳಿದರೆ ದೊಡ್ಡವರಿಗೆ ಆ ಮನೆಯ ಬಗ್ಗೆ ಏನೇನೂ ಅಂದಾಜು ಸಿಗುವುದಿಲ್ಲ. ಅದರ ಬದಲಿಗೆ ನೀವು "ನಾಲ್ಕು ಲಕ್ಷ ಬೆಲೆಬಾಳುವ ಮನೆಯನ್ನೂ ನೋಡಿದೆ" ಎಂದು ಹೇಳಿದರೆ ತಕ್ಷಣವೇ ಅವರು "ಆಹಾ! ಅದ್ಭುತವಾದ ಮನೆ" ಎಂದು ಉದ್ಗರಿಸುತ್ತಾರೆ.

ಆದ್ದರಿಂದ ನೀವು "ಪುಟ್ಟರಾಜಕುಮಾರ ನಿಜವಾಗಿ ಬಂದಿದ್ದ ಎನ್ನುವುದಕ್ಕೆ ಅವನು ಸುಂದರವಾಗಿದ್ದ, ಅವನು ಗಟ್ಟಿಯಾಗಿ ನಗುತ್ತಿದ್ದ, ಕುರಿಯನ್ನು ಹುಡುಕುತ್ತಿದ್ದ. ಯಾರಾದರೂ ಕುರಿಬೇಕು ಎಂದ–ಎನ್ನುವುದೇ ಸಾಕ್ಷಿ" ಎಂದು ಹೇಳಿದರೆ ದೊಡ್ಡವರು ಭುಜ ಹಾರಿಸಿ, ಏನೋ ಮಗುವಿನ ಹಾಗೆ ಮಾತನಾಡುತ್ತಿದ್ದಾನೆ ಎಂದುಕೊಳ್ಳುತ್ತಾರೆ. ಆದರೆ ನೀವು "ಅವನು ಬಿ–612 ಎಂಬ ಕುದ್ರ ಗ್ರಹದಿಂದ ಬಂದಿದ್ದ" ಎಂದು ಹೇಳಿದರೆ ಅವರಿಗೆ ಬಹಳ ಸಮಾಧಾನವಾಗುತ್ತದೆ; ನಿಮಗೆ ಮುಂದೆ ಏನೂ ಪ್ರಶ್ನೆಗಳುಬರುವುದಿಲ್ಲ.

ಏನೂ ಮಾಡಲಾಗದು. ದೊಡ್ಡವರಿರುವುದೇ ಹಾಗೆ. ಮಕ್ಕಳು ಹೀಗೆ ದೊಡ್ಡವರೊಡನೆ ತಾಳ್ಮೆಯಿಂದ ವ್ಯವಹರಿಸಬೇಕು.

ಜೀವನವನ್ನು ಅರ್ಥಮಾಡಿಕೊಳ್ಳಲು ಹೊರಟಿರುವ ನಮಗೆ ಈ ಅಂಕೆ ಸಂಖ್ಯೆಗಳು ಮುಖ್ಯವಲ್ಲ. ಬಹುಶ: ನಾನು ಈ ಕಥೆಯನ್ನು ಬೇರೆ ರೀತಿ ಆರಂಭಿಸಬೇಕಿತ್ತು–

"ಒಂದಾನೊಂದು ಕಾಲದಲ್ಲಿ ಒಬ್ಬ ಪುಟ್ಟ ರಾಜಕುಮಾರನಿದ್ದ. ಅವನಿದ್ದ ಗ್ರಹ ಅವನಿಗಿಂತ ಸ್ವಲ್ಪವೇ ದೊಡ್ಡದಾಗಿತ್ತು. ಅವನಿಗೊಬ್ಬ ಗೆಳೆಯಬೇಕಾಗಿತ್ತು....."

ಜೀವನವನ್ನು ಅರ್ಥಮಾಡಿಕೊಳ್ಳುವವರಿಗೆ, ಈ ಕಥೆ ಹಿಡಿಸುತ್ತಿತ್ತು. ಅವರಿಗೆ ಸತ್ಯ ತಕ್ಷಣ ಹೊಳೆಯುತ್ತಿತ್ತು.

ಆದರೆ ಈ ನನ್ನ ಪುಸ್ತಕವನ್ನು ಯಾರಾದರೂ ಬೇಜವಾಬ್ದಾರಿಯಿಂದ ಓದಿ ಪಕ್ಕಕ್ಕೆ ಇಡುವುದು ನನಗೆ ಇಷ್ಟವಿಲ್ಲ. ನೆನಪುಗಳನ್ನು ಅದುಮಿ ಹಾಕುವುದರ ನೋವನ್ನು ನಾನು ಅನುಭವಿಸಿದ್ದೇನೆ. ನನ್ನ ಈ ಗೆಳೆಯನನ್ನನ್ನು ಬಿಟ್ಟು ಈ ಕುರಿಯ ಜೊತೆ ಹೋಗಿ ಆಗಲೇ ಆರುವರ್ಷಗಳಾಗಿವೆ. ಇಲ್ಲಿ ಅವನ ವಿವರಗಳನ್ನೆಲ್ಲಾ ಬರೆಯುತ್ತಿರುವುದರ ಉದ್ದೇಶ ನಾನು ಅವನನ್ನು ಮರೆಯಬಾರದು ಎಂಬುದು. ಗೆಳೆಯನನ್ನು ಮರೆಯುವುದು ಬಹಳ ದು:ಖದ ಸಂಗತಿ. ಏಕೆಂದರೆ ಎಲ್ಲರಿಗೂ ತಿಳಿದಿರುವುದಿಲ್ಲ. ಹಾಗೇನಾದರೂ ನಾನು ಅವನನ್ನು ಮರೆತರೆ, ನಾನೂ ಈ ದೊಡ್ಡವರ ಹಾಗೇ ಆಗುತ್ತೇನೆ. ಅವರಿಗೆ ಅಂಕೆಸಂಖ್ಯೆಗಳು ಬಿಟ್ಟು ಬೇರೇನೂ ರುಚಿಸುವುದಿಲ್ಲ.

ಇದೇ ಉದ್ದೇಶಕ್ಕಾಗಿಯೇ ನಾನು ಬಣ್ಣ ಮತ್ತು ಬಣ್ಣದ ಪೆನ್ಸಿಲ್ಗಳನ್ನು ತಂದಿಟ್ಟು ಕೊಂಡಿದ್ದೇನೆ. ಈ ವಯಸ್ಸಿನಲ್ಲಿ ಚಿತ್ರ ಬರೆಯುವುದು ಕಷ್ಟವೇ; ಏಕೆಂದರೆ ಆರು ವರ್ಷದವನಿದ್ದಾಗ ಆ ಹೆಬ್ಬಾವುಗಳ ಚಿತ್ರಗಳಾದ ಮೇಲೆ ನಾನು ಯಾವ ಚಿತ್ರವನ್ನೂ ರಚಿಸಲಿಲ್ಲ. ಈಗ ಖಂಡಿತವಾಗಿ ಒಳ್ಳೆಯ ಚಿತ್ರಗಳನ್ನೇ ರಚಿಸಲು ಪ್ರಯತ್ನಿಸುತ್ತೇನೆ. ಅದರಲ್ಲಿ ಯಶಸ್ವಿಯಾಗುತ್ತೇನೋ ಇಲ್ಲವೋ ಗೊತ್ತಿಲ್ಲ. ಒಂದು ಚಿತ್ರ ಚೆನ್ನಾಗಿ ಬರುತ್ತದೆ. ಇನ್ನೊಂದರಲ್ಲಿ ಆ ವ್ಯಕ್ತಿಯ ಹೋಲಿಕೆಯೂ ಇರುವುದಿಲ್ಲ. ನಾನು ಕೆಲವು ತಪ್ಪುಗಳನ್ನು ಮಾಡಿಬಿಡುತ್ತೇನೆ. ಉದಾಹರಣೆಗೆ ಒಂದು ಚಿತ್ರದಲ್ಲಿ ಅವನು ಎತ್ತರವಾಗಿರುತ್ತಾನೆ; ಇನ್ನೊಂದರಲ್ಲಿ ಕುಳ್ಳ. ಅವನು ಹಾಕಿದ್ದ ಬಟ್ಟೆಗಳಬಣ್ಣಗಳೂ ನನಗೆ ಖಾತರಿಯಾಗಿಲ್ಲ. ಒಟ್ಟಿನಲ್ಲಿ ನನ್ನ ಚಿತ್ರಗಳು ಅತಿ ಉತ್ಕೃಷ್ಟ ಎಂದಿಲ್ಲ. ಪರವಾಗಿಲ್ಲ ಎಂದೆನಿಸಬಹುದಷ್ಟೇ.

ಕೆಲವು ಸಲ ನನ್ನ ಚಿತ್ರಗಳಲ್ಲಿ ಮುಖ್ಯ ಅಂಶಗಳಲ್ಲೇ ದೋಷವಿರುತ್ತದೆ. ಅವು ನನ್ನ ತಪ್ಪಲ್ಲ. ಈ ನನ್ನ ಗೆಳೆಯ ನನಗೆ ಅರ್ಥವಾಗುವಂತೆ ಸರಿಯಾಗಿ ವಿವರಿಸಿ ಹೇಳಲಿಲ್ಲ. ಬಹುಶ: ನಾನೂ ಅವನಂತೆಯೇ ಎಂದು ಕೊಂಡಿರಬೇಕು. ಆದರೆ ಪೆಟ್ಟಿಗೆಯೊಳಗಿನ ಕುರಿಯನ್ನು ನೋಡುವುದು ಹೇಗೆ ಎಂಬುದು ನನಗೆ ಗೊತ್ತಿಲ್ಲ. ಬಹುಶ: ನಾನು ದೊಡ್ಡವರ ಹಾಗೆ ಆಗಿಬಿಟ್ಟಿದ್ದೇನೆ. ಹಾಗೂ ಹೀಗೂ ವಯಸ್ಸಂತೂ ಆಗಿದೆಯಲ್ಲ.

**ಐದು**

ದಿನಗಳೆದಂತೆ ನಿಧಾನವಾಗಿ ನಾನು ರಾಜಕುಮಾರನ ಗ್ರಹದ ಬಗ್ಗೆ, ಅಲ್ಲಿಂದ ಅವನು ಹೊರಟ ಕಾರಣ, ಅವನ ಪ್ರಯಾಣ ಎಲ್ಲವನ್ನೂ ತಿಳಿದುಕೊಂಡೆ. ಮಾತಿನ ಮಧ್ಯದಲ್ಲಿ ಆಗೊಮ್ಮೆ ಈಗೊಮ್ಮೆ ಏನಾದರೂ ಮಾಹಿತಿ ಹೊರಬೀಳುತ್ತಿದ್ದುದರಿಂದ ಅಂತಹ ಅವಕಾಶಕ್ಕಾಗಿ ಕಾಯಬೇಕಾಗಿತ್ತು.

ಮೂರನೆಯ ದಿನ ಬಾವೋಬಾಬ್ಗಳಿಂದಾದ ದುರಂತದ ಬಗ್ಗೆ ತಿಳಿದು ಕೊಂಡದ್ದು ಹೀಗೆ.

ಇದಕ್ಕೂ ನಾನು ಪುನ: ಕುರಿಗೇ ಕೃತಜ್ಞತೆ ಸಲ್ಲಿಸಬೇಕು. ಇದ್ದಕ್ಕಿದ್ದ ಹಾಗೇ ರಾಜಕುಮಾರ ಒಂದು ಪ್ರಶ್ನೆಹಾಕಿದ: ಅವನಿಗೆ ದೊಡ್ಡ ಸಂದೇಹ ಮೂಡಿದ್ದಹಾಗಿತ್ತು–"ಈ ಕುರಿಗಳು ಪುಟ್ಟ

ಪುಟ್ಟ ಗಿಡಗಳನ್ನು ತಿಂದುಬಿಡುತ್ತವಂತೆ–ಹೌದಾ? ಇದು ನಿಜವಾ?"

"ಹೌದು ನಿಜ"

"ಆಹಾ..ಒಳ್ಳೆಯದಾಯಿತು"

ಗಿಡಗಳನ್ನು ಕುರಿ ತಿಂದರೆ ಅವನಿಗೆ ಸಂತೋಷ ಏಕೆ? ಅಷ್ಟರಲ್ಲಿ ಇನ್ನೊಂದು ಪ್ರಶ್ನೆ.

"ಹಾಗಾದರೆ ಅವು ಬಾವೋಬಾಬ್ಗಳನ್ನು ತಿನ್ನುತ್ತವೆ"

ಈಗ ನಾನು ರಾಜಕುಮಾರನಿಗೆ ಬಾವೋಬಾಬ್ಗಳ ಬಗ್ಗೆ ಬಿಡಿಸಿ ಹೇಳಬೇಕಾಯಿತು. ಅವು ಪುಟ್ಟ ಗಿಡಗಳಲ್ಲ. ದೊಡ್ಡ ಮರಗಳು. ಒಂದು ಮನೆಯಷ್ಟು ದೊಡ್ಡದು ಇರಬಹುದು. ಅವನು ತನ್ನ ಜೊತೆ ಆನೆಗಳ ದೊಡ್ಡ ಹಿಂಡನ್ನೇ ಕರೆದುಕೊಂಡು ಹೋದರೂ, ಅವು ಇಡೀ ಮರವನ್ನು ತಿಂದು ಮುಗಿಸಲಾರವು.

ಆನೆಗಳ ಹಿಂಡನ್ನು ಸೂಚಿಸಿದ ಕೂಡಲೇ ಅವನು ಗಹಗಹಿಸಿ ನಕ್ಕುಬಿಟ್ಟ. "ಈ ಆನೆಗಳನ್ನೆಲ್ಲಾ ನಾವು ಒಂದರ ಮೇಲೊಂದು ಪೇರಿಸಬೇಕಾಗುತ್ತದೆ" ಎಂದ. ಅಷ್ಟರೊಳಗೆ ಅವನಿಗೆ ಇನ್ನೊಂದು ಉಪಾಯ ಹೊಳೆಯಿತು.

"ಅಷ್ಟು ಗಾತ್ರಕ್ಕೆ ಬೆಳೆಯುವ ಮೊದಲು ಅವು ಚಿಕ್ಕವಾಗಿಯೇ ಇರುತ್ತವಲ್ಲವೇ?"

"ಅದು ಖಂಡಿತವಾಗಿ ನಿಜ. ಆದರೆ ಕುರಿ ಬಾವೋಬಾಬ್‌ನ ಪುಟ್ಟ ಗಿಡಗಳನ್ನು ಏಕೆತಿನ್ನಬೇಕು?"

ಆಹಾ ಅಷ್ಟೂ ಗೊತ್ತಿಲ್ಲವೇ? ಎನ್ನುವಂತೆ ಅವನು "ಸರಿ ಸರಿ" ಎಂದ. ಅದರ ಅರ್ಥ ಏನಿರಬಹುದು ಎಂದು ನಾನು ಬಹಳ ಕಸರತ್ತುಮಾಡಿ ತಿಳಿದುಕೊಂಡೆ. ಅವನೇನೂ ಅದಕ್ಕೆ ಸಹಾಯ ಮಾಡಲಿಲ್ಲ. ಆ ಎಲ್ಲ ಗ್ರಹಗಳಲ್ಲಿಯೂ, ರಾಜಕುಮಾರನ ಗ್ರಹ ದಲ್ಲಿರುವಂತೆ ಒಳ್ಳೇ ಗಿಡಗಳೂ ಮತ್ತು ಕೆಟ್ಟಗಿಡಗಳು ಇರುತ್ತವೆ. ಹಾಗಾಗಿ ಒಳ್ಳೆಯ ಬೀಜಗಳೂ, ಕೆಟ್ಟಬೀಜಗಳೂ ಇರುತ್ತವೆ. ಆದರೆ ಈ ಬೀಜಗಳು ಕಾಣುವುದಿಲ್ಲ. ಭೂಮಿಯ ಒಳಭಾಗದಕತ್ತಲಿನಲ್ಲಿ ಅವು ಮಲಗಿರುತ್ತವೆ. ಯಾವಾಗಲೋ ಒಮ್ಮೆ ತಟಕ್ಕನೆ ಒಂದು ಬೀಜಕ್ಕೆ ಏಳಬೇಕೆಂಬ ಆಸೆ ಉತ್ಕಟವಾಗುತ್ತದೆ. ಈ ಪುಟ್ಟ ಬೀಜ ಮೈಮುರಿದು ಮೇಲೇಳುತ್ತದೆ. ಮೊದಮೊದಲು ನಿಧಾನವಾಗಿ, ಚಿಕ್ಕದಾಗಿ, ಆಮೇಲೆ ಪುಟ್ಟ ಕೊನರೊಂದನ್ನು ಮಣ್ಣಿನ ಆಚೆಗೆ ಬಿಸಿಲಿಗೆ ತಳ್ಳುತ್ತದೆ. ಅದು ಮೂಲಂಗಿಯೋ, ಅಥವಾ ಗುಲಾಬಿಯೋ ಆಗಿದ್ದರೆ ಅದರ ಬೆಳವಣಿಗೆಗೆ ಯಾರೂ ಅಡ್ಡಿ ಪಡಿಸುವುದಿಲ್ಲ. ಆದರೆ ಅದೊಂದು ಕೆಟ್ಟಗಿಡ ವಾಗಿದ್ದರೆ ಅದನ್ನು ಗುರುತಿಸಿದ ತಕ್ಷಣವೇ ಕಿತ್ತೆಸೆಯುತ್ತಾರೆ.

ಪುಟ್ಟ ರಾಜಕುಮಾರನ ಗ್ರಹದಲ್ಲಿ ಕೆಲವು ಭಯಂಕರ ಬೀಜಗಳಿದ್ದವು. ಅವೇ ಬಾವೋಬಾಬ್ ಬೀಜಗಳು. ಆ ನೆಲದ ಮಣ್ಣಿನಲ್ಲಿ ಇವು ಧಾರಾಳವಾಗಿ ಸೇರಿ ಕೊಂಡಿದ್ದವು. ಬೇಗ ಇದರ ಬೆಳವಣಿಗೆಯತ್ತ ಗಮನ ಕೊಡದಿದ್ದರೆ ಅವನ್ನು ನಾಶಗೊಳಿಸುವುದು ಸಾಧ್ಯವೇ ಇಲ್ಲ. ಅದು ಇಡೀ ಗ್ರಹವನ್ನೇ ಆಕ್ರಮಿಸಿಕೊಂಡು ಬಿಡುತ್ತದೆ. ತನ್ನ ಬೇರುಗಳನ್ನು ಆಳಕ್ಕೆ ಇಳಿಸುತ್ತದೆ. ಚಿಕ್ಕಗ್ರಹವಾಗಿದ್ದ ಬಾವೋಬಾಬ್‌ಗಳು ಅತಿಯಾಗಿ ಬೆಳೆದರೆ... ಗ್ರಹ ವೇಸೀಳಿ ಬಿಡಬಹುದು.



“ಇದು ಶಿಸ್ತಿನ ಪ್ರಶ್ನೆ” ಎಂದಿದ್ದ ಪುಟ್ಟ ರಾಜಕುಮಾರ. “ಪ್ರತಿದಿನ ಬೆಳಿಗ್ಗೆ ನಿಮ್ಮ ಶೌಚ ಮುಗಿಸಿದ ಕೂಡಲೇ, ಗ್ರಹದ ಶೌಚವನ್ನೂ ಮುಗಿಸಬೇಕು. ಬಹಳ ಜಾಗರೂಕರಾಗಿರಬೇಕು. ಬಾವೋಬಾಬ್ ಗಿಡಗಳನ್ನು ಇತರ ಗಿಡಗಳಿಂದ ಬೇರೆಯಾಗಿ ಗುರ್ತಿಸುವುದು ಸಾಧ್ಯವಾದ ತಕ್ಷಣ ಕಿತ್ತುಹಾಕಬೇಕು. ಅವು ಎಳೆಯದಾಗಿದ್ದಾಗ ಗುಲಾಬಿ ಗಿಡದ ಹಾಗೆಯೇ ಕಾಣುತ್ತವೆ. ಇದು ಶ್ರಮದ ಕೆಲಸ” ಎಂದು ಹೇಳಿದ ನಾದರೂ, “ಆದರೆ ಸುಲಭ” ಎಂದಿದ್ದ.

“ಇದರ ಚಿತ್ರ ನೀನು ಬಿಡಿಸಬೇಕು; ಆಗ ಮಕ್ಕಳಿಗೆ ಇದೆಲ್ಲಾ ಹೇಗೆ ಏನು ಎಂದು ಅರ್ಥವಾಗುತ್ತದೆ. ಅವರು ಪ್ರಯಾಣ ಹೊರಟಾಗ ಇಂಥ ವಿಷಯಗಳು ಉಪಯೋಗವಾಗುತ್ತವೆ” ಎಂದೂಹೇಳಿದ್ದ. “ಕೆಲವೊಮ್ಮೆ ನಾಳೆ ಮಾಡಿದರಾಯಿತು ಎಂದು ಕೆಲಸವನ್ನು ಮುಂದಕ್ಕೆ ಹಾಕಬಹುದು. ಆದರೆ ಬಾವೋಬಾಬ್ ವಿಷಯದಲ್ಲಿ ಹಾಗೆ ಮಾಡಿದರೆ ಅದು ಪ್ರಳಯಾಂತಕ ವಾಗುತ್ತದೆ. ಒಂದು ಗ್ರಹದ ಬಗ್ಗೆ ನಾನು ಕೇಳಿದ್ದೆ. ಅಲ್ಲೊಬ್ಬ ಸೋಮಾರಿ ಇದ್ದ. ಮೂರು ಬಾವೋಬಾಬ್‌ಗಳನ್ನು ಕಿತ್ತುಹಾಕುವುದನ್ನು ಮರೆತ..”



ಆ ಪುಟ್ಟ ರಾಜಕುಮಾರ ಹೇಳಿದ ಹಾಗೆ, ನಾನು ಚಿತ್ರ ರಚಿಸಿದ್ದೇನೆ. ನೀತಿಪಾಠ ಹೇಳುವ ಉದ್ದೇಶ ನನಗಿಲ್ಲ. ಆದರೆ ಈ ಬಾವೋಬಾಬ್ಗಳ ಬಗ್ಗೆ ನಮ್ಮ ತಿಳಿವಳಿಕೆ ಕಡಿಮೆ. ಅವುಗಳಿಂದ ಗ್ರಹಗಳಿಗೆ ಎಂಥೆಂಥಹ ಅಪಾಯಗಳು ಸಾಧ್ಯ ಎಂಬುದನ್ನು ಮನವರಿಕೆ ಮಾಡಲೇಬೇಕು. ಯಾವುದೋ ಗ್ರಹದಮೇಲೆ ಕಳೆದು ಹೋಗುವವರಿಗೆ ಈ ಬಗ್ಗೆ ತಿಳಿದಿರಲೇಬೇಕು. ಆದ್ದರಿಂದ ನಾನು ಹೇಳುವುದಿಷ್ಟೇ –“ಮಕ್ಕಳೇ, ಬಾವೋಬಾಬ್‌ಗಳ ಬಗ್ಗೆ ಜಾಗರೂಕರಾಗಿರಿ”

ನನ್ನ ಹಾಗೇ ನನ್ನ ಅನೇಕ ಗೆಳೆಯರು ಇಂತಹ ಅಪಾಯಗಳನ್ನು ಎದುರಿಸುತ್ತಲೇ ಇದ್ದಾರೆ. ಆದರೆ ಅವರಿಗೆ ಅದರ ಅರಿವೇ ಇಲ್ಲ. ಅಂತಹವರಿಗಾಗಿಯೇ ನಾನು ಈ ಚಿತ್ರ ಕಷ್ಟಪಟ್ಟುರಚಿಸಿದೆ. ಈ ಮೂಲಕ ನಾನು ಮುಟ್ಟಿಸುವ ಸಂದೇಶದ ಮಹತ್ವದ ಮುಂದೆ ನನ್ನ ಶ್ರಮ ಏನೇನೂ ಅಲ್ಲ.

ಹಾಗಾದರೆ ನಿಮಗೊಂದು ಪ್ರಶ್ನೆ ಮೂಡುತ್ತದೆ–“ಈ ಪುಸ್ತಕದಲ್ಲಿರುವ ಇತರ ಯಾವುದೇ ಚಿತ್ರ ಈ ಬಾವೋಬಾಬ್ ಗಳ ಚಿತ್ರದಷ್ಟೆ ಪ್ರಭಾವಶಾಲಿಯಾಗಿಲ್ಲವಲ್ಲ –ಏಕೆ?”

ಉತ್ತರ ಬಹಳ ಸರಳ. ನಾನೇನೋ ಶ್ರಮ ವಹಿಸಿದ್ದೇನೆ. ಆದರೆ ಉಳಿದ ಚಿತ್ರಗಳಲ್ಲಿ ಈ ಯಶಸ್ಸು ಸಿಗಲಿಲ್ಲ. ಈ ಚಿತ್ರ ರಚಿಸುವಾಗ ಅದರ ಮಹತ್ವವೊಂದೇ ಅಲ್ಲ ತುರ್ತಾಗಿ ಈ ಕೆಲಸ ಮುಗಿಸಲೇ ಬೇಕಾದ ಅನಿವಾರ್ಯತೆ ಕೂಡ ನನ್ನನ್ನು ಬೇರೆಲ್ಲಿಗೋ ಕೊಂಡೊಯ್ದಿತ್ತು.

***

# ನಾದೋಪಾಸಕರ ಉದರೋಪಾಸನೆ – 1

ಸಂಜಯ ಹಾವನೂರ, ಕ್ಯಾಲಿಫೋರ್ನಿಯಾ

ಸಂಗೀತ ಕಲಾವಿದರು, ಅಂದರೆ ಶಾಸ್ತ್ರೀಯ ಸಂಗೀತದ ಉಪಾಸಕರನ್ನು ಕಂಡರೆ ನಮಗೆಲ್ಲ ವಿಶೇಷ ಆದರ. ಅವರೆಲ್ಲ ನಾದೋಪಾಸನೆಗೆ ಜೀವನವನ್ನು ಮೀಸಲಾಗಿಟ್ಟವರು. ಐಹಿಕ ಸುಖಗಳನ್ನು ತ್ಯಜಿಸಿ ಸಂಗೀತದಲ್ಲೇ ಸಾರ್ಥಕವನ್ನು ಕಂಡುಕೊಂಡವರು ವಗೈರೆ. ಅರವತ್ತು ವರ್ಷಗಳ ಹಿಂದೆ ಇದು ನಿಜವೂ ಆಗಿತ್ತು. ಆಗ ಅವರಿಗೆ ಸೆಲೆಬ್ರಿಟಿ ದರ್ಜೆ ದಕ್ಕಿರಲಿಲ್ಲ, ಇಂದಿನಂತೆ ಹಲವಾರು ಅಡ್ಡ ಹಾದಿಗಳು ಆಕರ್ಷಣೆಗಳು ಇರಲಿಲ್ಲ. ಎಲ್ಲಕ್ಕೂ ಮುಖ್ಯವಾಗಿ ಸುಖ ಭೋಗಗಳಿಗೆ ಖರ್ಚು ಮಾಡಲಿಕ್ಕೆ ಹಣವೂ ಇರಲಿಲ್ಲ. ನಾದೋಪಾಸನೆಯ ನಿಷ್ಠೆಯೊಡನೆ ಅಭಾವ ವೈರಾಗ್ಯವೂ ಸೇರಿಕೊಂಡು ಸಂಗೀತದಲ್ಲೇ ಸರ್ವಸ್ವವನ್ನು ಕಂಡುಕೊಂಡರು.

ಮತ್ತೆ ಯಾವ ಐಷಾರಾಮಗಳನ್ನು ಕಾಣದಿದ್ದರೂ ಹೆಚ್ಚಿನ ಕಲಾವಿದರು ಒಂದು ವಿಷಯದಲ್ಲಿ ಮಾತ್ರ ಚಪಲವನ್ನು ತಡೆದುಕೊಂಡಂತಿಲ್ಲ–ಭೋಜನ ರಸಿಕತೆ. ಸಂಗೀತಗಾರರ ಜಿಹ್ವಾ ಚಾಪಲ್ಯದ ಕಥೆಗಳು ಅವರ ಶಿಷ್ಯರು ಅಭಿಮಾನಿಗಳಲ್ಲಿ ಸಾಕಷ್ಟು ಜನಜನಿತವಾಗಿದ್ದು, ನಾನು ಓದಿ ಕೇಳಿ ಆನಂದಿಸಿದ ಕೆಲವನ್ನು ಇಲ್ಲಿ ಹಂಚಿಕೊಂಡಿದ್ದೇನೆ. ಇದರಲ್ಲಿನ ಒಂದಿಷ್ಟು ಆಖ್ಯಾನಗಳು ಅಲ್ಲಲ್ಲಿ ಪ್ರಕಟವಾಗಿವೆ, ಉಳಿದವು ಅವರಿವರಿಂದ ಕೇಳಿದ್ದು. ಹೇಳಿದವರು ಮತ್ತು ನನ್ನ ನೆನಪು ಉತ್ಪ್ರೇಕ್ಷೆ ಮಾಡಿರಲು ಸಾಧ್ಯ.

ನಮ್ಮ ಭಾರತರತ್ನ ಭೀಮಸೇನ ಜೋಶಿಯವರು ಭೂರಿಭೋಜನ ಪ್ರಿಯರಾಗಿದ್ದರು. ಸಣ್ಣವರಿದ್ದಾಗ ಒಂದು ದಿನ ತಮ್ಮ ತಾಯಿ ಭಕ್ಕರಿಗೆ ಕೇಳಿದಷ್ಟು ತುಪ್ಪ ಹಾಕಲಿಲ್ಲವೆಂದು ಶೆಟಗೊಂಡು ಮನೆ ಬಿಟ್ಟು ಓಡಿ ಹೋದರೆಂದು ಪ್ರತೀತಿ ಇದೆ. ಪ್ರತೀತಿ ಮಾತ್ರ, ಆವಾಗಲೇ ಸಂಗೀತದ ಗುಂಗು ತಲೆ ಮನಸ್ಸುಗಳನ್ನು ತುಂಬಿಕೊಂಡಿತ್ತು. ಗುರುಗಳನ್ನು ಅರಸಿಕೊಂಡು ಹೋಗಲು ನೆವ ಬೇಕಾಗಿತ್ತಷ್ಟೇ. ಓಡಿ ಹೋದ ಮೇಲೆ, ಬಾಲ್ಯದಿಂದ ಹದಿಹರೆಯದ ವರೆಗೆ ಸಂಗೀತದ ಹುಚ್ಚಿನಲ್ಲಿ ಊಟ ತಿಂಡಿಗಳ ಗೊಡವೆ ಇಲ್ಲದೇ ಉತ್ತರ ಭಾರತದ ಊರೂರುಗಳಲ್ಲಿ ಅಲೆದರು. ಕೊನೆಗೊಮ್ಮೆ ಊರಿಗೆ ವಾಪಸಾಗಿ ಪಕ್ಕದ ಕುಂದಗೋಳದಲ್ಲಿ ಆರು ವರ್ಷ ಸವಾಯಿ ಗಂಧರ್ವರ ಮನೆಯಲ್ಲಿ ಗುರುಸೇವೆ ಮಾಡಿಕೊಂಡು ಸಂಗೀತಾಭ್ಯಾಸವನ್ನು ಸಾಧಿಸಿಕೊಂಡರು. ಅಲ್ಲಿಯೂ ಊಟ ಕನಿಷ್ಠ. ಮುಂದಿನ ವರ್ಷಗಳಲ್ಲಿ ಅವರ ಖ್ಯಾತಿ ಹಬ್ಬಿ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಸಮೃದ್ಧಿಯ ದಿನಗಳು ಬಂದವು. ಆಗ ಮಾತ್ರ ಭಕ್ಷ್ಯಗಳನ್ನು ಪಟ್ಟಾಗಿ ಹೊಡೆಯುತ್ತಿದ್ದರು. ಮೊದಲ ಮದುವೆಯಾದ ಹೊಸತರಲ್ಲಿ ದಿನವೂ ಕಾಲು ಕೇಜಿ ತಾಜಾ ಬೆಣ್ಣೆಯನ್ನು ಸಕ್ಕರೆಯೊಂದಿಗೆ ಸೇವಿಸುತ್ತಿದ್ದರಂತೆ. ಸಿಹಿ ತಿಂಡಿಗಳ ಬಗೆಗೂ ಅಂಥದೇ ಅಕ್ಕರೆ. ಲಾಡುಗಳು ಈಗಿನಂತೆ ನಿಂಬೆಯಲ್ಲ, ಚೆಂಡಿನ ಗಾತ್ರದವಾಗಿರಬೇಕು. ಸ್ಪರ್ಧೆಗೆ ಇಳಿದು ತಿನ್ನುವುದಲ್ಲದೇ ಎಲ್ಲರಿಗೂ ಒತ್ತಾಯ ಮಾಡಿ ತಿನಿಸುತ್ತಿದ್ದರು. “ಇಷ್ಟು ದಿನ ಸಂಗೀತ ಕಲಿಯಲೆಂದು ಈ ದೇಹವನ್ನು ಸಾಕಷ್ಟು ದಂಡಿಸಿದ್ದೇನೆ. ಇನ್ನಾದರೂ ಅದನ್ನು ಉಪಚರಿಸಬೇಕಲ್ಲವೇ?” ಎನ್ನುತ್ತಿದ್ದರಂತೆ. ಈ ತತ್ತ್ವ ಮನೆಯಲ್ಲಿ ಮಾತ್ರ. ಇಂಥದೇ ಪದಾರ್ಥಗಳು ಬೇಕೆಂದು ಬೇರೆ ಯಾರಿಗೂ ಹೇಳಿದವರಲ್ಲ. ನಿಮ್ಮಲ್ಲಿ ಏನು ಇದೆಯೋ ಅದನ್ನೇ ಬಡಿಸಿರಿ, ಖುಶಿಯಿಂದ ತಿನ್ನುತ್ತೇನೆ ಎನ್ನುತ್ತಿದ್ದರು.

ಅಂತಾರಾಷ್ಟ್ರೀಯ ಪ್ರಸಿದ್ಧಿ ದೊರೆತ ಮೇಲೆ ನಿರಂತರ ಪ್ರವಾಸ, ಪಂಚತಾರಾ ಹೊಟೇಲುಗಳಲ್ಲಿ ವಾಸ್ತವ್ಯ ಇರುತ್ತಿತ್ತು. ಇಂಥ ಮಹಾನ್ ಗಾಯಕರು ಬಂದಿದ್ದಾರೆಂದು ಅಲ್ಲಿಯ ಮ್ಯಾನೇಜರುಗಳು ಕೈ ಕಟ್ಟಿಕೊಂಡು ತಮಗೇನು ಇಷ್ಟ ಎಂದು ಕೇಳಿದಾಗ ಭಕ್ಕರಿ, ಥಾಲಿಪಿಟ್ಟು, ಹಚ್ಚಿದ ಅವಲಕ್ಕಿ ಸಾಕು ಬೇರೇನೂ ಬೇಕಿಲ್ಲ ಎಂದು ಹೇಳುತ್ತಿದ್ದರು! ದೇಶವಿದೇಶಗಳ ಹೈ ಫೈ ತಿಂಡಿಗಳನ್ನು ಮಾತ್ರ ಕಲಿತಿದ್ದ ಅಡಿಗೆಯವರಿಗೆ ತಬ್ಬಿಬ್ಬು. ಅದು ಕೇವಲ ಕುಚೋದ್ಯವಾಗಿರಲಿಲ್ಲ. ಭೀಮಸೇನರು ನಿಜವಾಗಿಯೂ ನಿತ್ಯದ ಊಟಕ್ಕೆ ಇಷ್ಟ ಪಟ್ಟು ತಿನ್ನುತ್ತಿದ್ದುದು ಭಕ್ಕರಿ, ಅವಲಕ್ಕಿ. ಎರಡಕ್ಕೂ ಧಂಡಿಯಾಗಿ ಮೊಸರು, ಹಸಿ ಮೆಣಸಿನಕಾಯಿ ಇದ್ದರಾಯಿತು. ಮೆಣಸಿನ ಖಾರ ತಿಂದು ಎಲ್ಲಿ ಹೊಟ್ಟೆ ಗಂಟಲು ಕೆಡಿಸಿಕೊಳ್ಳುತ್ತಾರೋ ಎಂದು ಹೆಂಡತಿ ಮಕ್ಕಳಿಗೆ ಆತಂಕ. ದಿನವೂ ಅವರು ಊಟ ಮಾಡುವಾಗ ಪಕ್ಕದಲ್ಲಿ ಕುಳಿತು ಮೆಲ್ಲಗೆ ಅವರ ತಟ್ಟೆಯಿಂದ ಹಸಿ ಮೆಣಸಿನಕಾಯಿಗಳನ್ನು ತೆಗೆದು ಆಚೆಗೆ ಬೀಸಾಕುತ್ತಿದ್ದರು.

ಸಂಗೀತಗಾರರಿಗೂ ಸಕ್ಕರೆ ಬೆಣ್ಣೆಗೂ ವಿಶೇಷ ನಂಟಿರಬೇಕು. 1940ರ ಸುಮಾರಿಗೆ ಪುಣೆಯಲ್ಲಿ ರಾಮಕೃಷ್ಣಬುವಾ ವಝೆ ಎಂಬ ಗ್ವಾಲಿಯರ್ ಘರಾಣೆಯ ಖ್ಯಾತ ಗಾಯಕರು ವಾಸವಾಗಿದ್ದರು. ಗಾಯಕಿ ಮತ್ತು ಸಂಗೀತ ಶಿಕ್ಷಣದಲ್ಲಿ ಅಪ್ರತಿಮರಾಗಿದ್ದುದರಿಂದ ಗಾಯನಾಚಾರ್ಯ ಎಂಬ ಬಿರುದು ಸಂದಿತ್ತು. ಸ್ವಭಾವ ಸ್ವಲ್ಪ ವಿಕ್ಷಿಪ್ತವೇ. ಬೆಳಿಗ್ಗೆ ಎದ್ದ ಕೂಡಲೇ ಒಂದು ಬೆಳ್ಳಿ ಪಾತ್ರೆಯಲ್ಲಿ ಒಂದು ರೂಪಾಯಿ ಇಟ್ಟು ಶಿಷ್ಯನನ್ನು ಪೇಟೆಗೆ ಕಳಿಸುತ್ತಿದ್ದರು. ಅವನು ಪಾತ್ರೆಯ ತುಂಬ ತಾಜಾ ಹಸಿ ಬೆಣ್ಣೆಯನ್ನು ತರಬೇಕು. ಆಮೇಲೆ ವಝೆ ಬುವಾ ಅದರಲ್ಲಿ ಕಲಸಲಿಕ್ಕೆ ಸಕ್ಕರೆಯನ್ನು ಕೊಡುತ್ತಿದ್ದರು. ಶಿಷ್ಯನು ಅವೆರಡನ್ನು ಧಾರಾಳವಾಗಿ ಕಲಸಿ ಕಲ್ಲಿನ ಒರಳಿನಲ್ಲಿ ಚೆನ್ನಾಗಿ ರುಬ್ಬಬೇಕು. ಮಿಶ್ರಣ ಹದಕ್ಕೆ ಬಂದಾಗ ವಝೆ ಬುವಾ ಅದಷ್ಟನ್ನೂ ತೆಗೆದು ತೃಪ್ತಿಯಿಂದ ಸೇವಿಸುತ್ತಿದ್ದರು. ಒರಳಿನಲ್ಲಿ ಅಂಟಿ ಉಳಿದದ್ದು ಶಿಷ್ಯರ ಪಾಲು! ಈ ಅನುಷ್ಠಾನದ ನಂತರವೇ ಬೆಳಗ್ಗಿನ ಸಂಗೀತಾಭ್ಯಾಸ ಆರಂಭ. ಸಾಯಂಕಾಲ ಐದರ ಹೊತ್ತಿಗೆ ನಾಗಪುರದಿಂದ ಬಂದಿದ್ದ ವಸಂತನೆಂಬ ಇನ್ನೊಬ್ಬ ತರುಣನ ಭೆಟ್ಟಿ. ಅವನೇನೂ ಶಿಷ್ಯನಲ್ಲ. ಅವರಂತೆ ತಿಂಡಿಪೋತ. ಒಮ್ಮೊಮ್ಮೆ ಬರುವುದು ತಡವಾಗುತ್ತಿತ್ತು.

“ವಸಂತಾ ಟಾಯಿಮ ಎಷ್ಟಾಯಿತೆಂದು ನೋಡಿದೆಯಾ? ಆಫೀಸಿನಿಂದ ಬರಲಿಕ್ಕೆ ಇಷ್ಟು ಹೊತ್ತೇಕೆ?”

“ನಿಮಗೆ ಗೊತ್ತಿರಬೇಕು ಬುವಾ. ನಾನು ಮಿಲಿಟರಿ ಆಫೀಸಿನಲ್ಲಿ ಲೆಕ್ಕ ಪತ್ರ ನೋಡುವವನು. ನಮ್ಮ ಸಾಹೇಬರು ಮನೆಗೆ ಹೋಗುವ ತನಕ ನಾನು ಕುರ್ಚಿಯಿಂದ ಏಳುವಂತಿಲ್ಲ”

ಹೆಚ್ಚು ಸಮಯ ಕಳೆಯದೇ ಇಬ್ಬರೂ ತಮ್ಮ ಫರಮಾಯಿಶಿ ಗೌಳಿಗನ ಅಂಗಡಿಗೆ ಹೋಗುತ್ತಿದ್ದರು. ಅಲ್ಲಿ ಇಬ್ಬರದೂ ಒಂದೊಂದು ಸೇರು ತಾಜಾ ಹಾಲಿನ ಸೇವನೆ. ದಾರಿಯಲ್ಲಿ ಒಂದು ಡಜನ್ ಬಾಳೆ ಹಣ್ಣು ಕೊಂಡು ದೂರವಿದ್ದ ಇನ್ನೊಂದು ಖಾಸ ಅಂಗಡಿಯ ಕಡೆಗೆ ಪ್ರಯಾಣ. ದಾರಿ ಸವೆಸಲು ಹಣ್ಣಿನ ಭಕ್ಷಣೆ, ಆದರೆ ಎಲ್ಲಾ ಅಲ್ಲ. ಪಕ್ವವಾದ ಒಂದೆರಡನ್ನು ಇಟ್ಟುಕೊಳ್ಳುತ್ತಿದ್ದರು. ಮುಂದಿನ ಅಂಗಡಿಯಲ್ಲಿ ಮೊದಲಿಗೆ ಬಿಸಿ ಬಿಸಿಯಾಗಿ ಕರಿದ ಭಜಿಗಳ ಸೇವನೆ. ಅದು ಮುಗಿದ ಮೇಲೆ ಅವನಿಗೆ ಉಳಿದ ಬಾಳೆ ಹಣ್ಣುಗಳನ್ನು ಕೊಟ್ಟು ಕರಿಯಲು ಹೇಳುತ್ತಿದ್ದರು. ಅಷ್ಟಾದ ಮೇಲೆ ಆಪೋಷಣ. ಎದುರಿಗೇ ಇದ್ದ ಇನ್ನೊಂದು ಅಂಗಡಿಯಲ್ಲಿ ಸಿಗುವ ಕೆನೆಯುಕ್ತ ಬಾಸುಂದಿ ಪುಣೆ ಪಟ್ಟಣದಲ್ಲಿಯೇ ಪ್ರಸಿದ್ಧವಾಗಿತ್ತು.

ಅದನ್ನೂ ಬಾಳೆ ಎಲೆಯಿಂದ ಕಟ್ಟಿದ ಬಟ್ಟಲಲ್ಲಿಯೇ ಕುಡಿಯಬೇಕು. ಅದಾದ ಮೇಲೆ ಇಬ್ಬರೂ ತೃಪ್ತಿಯಿಂದ ವಝೆಬುವಾ ಅವರ ಮನೆಗೆ ತೆರಳುವರು. ಅಲ್ಲಿ ರಾತ್ರಿಯ ಪಾಠ ಆರಂಭ.

ಇಲ್ಲಿ ಸ್ವಾರಸ್ಯವೆಂದರೆ ವಸಂತನೆಂಬ ಯುವಕನೂ ಅಪ್ರತಿಮ ಗಾಯಕನೇ. ಎರಡು ವರ್ಷ ವಝೆಬುವಾ ಅವರೊಡನೆ ಕಳೆದರೂ ತನಗೆ ಸಂಗೀತಾಭ್ಯಾಸವಾಗಿದೆ ಎಂದು ಹೇಳಿಕೊಂಡಿರಲಿಲ್ಲ. ಸಂಕೋಚವೋ ಸಂದರ್ಭ ಬರಲಿಲ್ಲವೋ, ತಾಸುಗಟ್ಟಲೇ ಅವರ ಎದುರಿಗೇ ಕುಳಿತು ಬೇರೆಯವರಿಗೆ ಪಾಠ ಹೇಳುವುದನ್ನು ದಿನವೂ ಕೇಳುತ್ತಿದ್ದರೂ ನನಗೂ ಕಲಿಸಿಕೊಡಿ ಎಂದು ಅವರನ್ನು ಕೇಳಿರಲಿಲ್ಲ. ಮುಂದೆ ನೌಕರಿಗೆ ಶರಣು ಹೊಡೆದು ವಸಂತರಾವ ದೇಶಪಾಂಡೆ ಎಂದು ಪ್ರಖ್ಯಾತರಾದರು.

***

ಸ್ವಾತಂತ್ರ್ಯಕ್ಕೆ ಸ್ವಲ್ಪ ಮುಂಚಿನ ವರ್ಷಗಳು. ಭಾರತ ಪಾಕಿಸ್ತಾನವೆಂಬ ಭೇದಗಳಿರಲಿಲ್ಲ. ಲಾಹೋರಿನಲ್ಲಿದ್ದ ಬಡೇ ಗುಲಾಮ ಅಲಿ ಖಾನ ಎಂಬ ಗಾಯಕರ ಖ್ಯಾತಿ ಉತ್ತರ ಭಾರತದಲ್ಲೆಲ್ಲ ಹರಡಿತ್ತು. ಒಂದು ಸಲ ದಿಲ್ಲಿಯಲ್ಲಿ ಮೂರು ದಿನದ ಸಂಗೀತ ಸಮ್ಮೇಳನ ಏರ್ಪಾಡಾಗಿತ್ತು. ಅದರಲ್ಲಿ ಬಡೇ ಗುಲಾಮ ಸಾಹೇಬರಿಗೆ ಆಮಂತ್ರಣ, ಅವರೇ ಮುಖ್ಯ ಆಕರ್ಷಣೆ. ಮೊದಲ ದಿನ ಅವರ ಆತಿಥ್ಯದ ಹೊಣೆ ಶೀಲಾ ಧಾರ್ ಎಂಬ ಯುವತಿಯ ಮೇಲಿತ್ತು. ಅವಳೂ ಸಂಗೀತದ ವಿದ್ಯಾರ್ಥಿನಿಯೇ. ಲಾಹೋರಿನಿಂದ ಸಾಯಂಕಾಲ ಬರುವ ರೈಲಿನಲ್ಲಿ ಅವರನ್ನು ಎದುರುಗೊಳ್ಳಬೇಕು, ನಿರ್ಮಲಾ ಜೋಶಿ ಎಂಬ ಇನ್ನೊಬ್ಬ ಸಂಗೀತಪ್ರೇಮಿಯ ಮನೆಗೆ ಅವರನ್ನು ಕರೆದುಕೊಂಡು ಹೋಗಿ, ರಾತ್ರಿ ಊಟವಾದ ಮೇಲೆ ಅವರನ್ನು ಸಮ್ಮೇಳನ ನಡೆಯುತ್ತಿದ್ದ ಭವನಕ್ಕೆ ಬಿಟ್ಟು ಬರಬೇಕು ಇಷ್ಟು ಅವಳ ಜವಾಬ್ದಾರಿ. ಶೀಲಾಳಿಗೆ ಆಗ ಕೇವಲ ಹದಿನಾರು ವರ್ಷ! ಹೆಚ್ಚಿನ ಸಂಗೀತಪ್ರೇಮಿಗಳಂತೆ ಅವಳೂ ಬಡೇ ಗುಲಾಮ ಅಲಿಯವರನ್ನು ಕಂಡಿರಲಿಲ್ಲ. ರೇಡಿಯೋದಲ್ಲಿ ಮತ್ತು ರಿಕಾರ್ಡುಗಳಲ್ಲಿ ಅವರ ಧ್ವನಿಯನ್ನು ಕೇಳಿಯೇ ಮರುಳಾಗಿದ್ದಳು. ತಾನೊಬ್ಬಳೇ ಇದನ್ನು ನಿಭಾಯಿಸುತ್ತೇನೆಯೇ ಎಂಬ ಅಳುಕು ಬೇರೆ. ಸಂಗೀತಗಾರರು, ಅವರ ಜಗತ್ತಿನ ಪರಿಚಯ ಮಗಳಿಗೆ ಆಗಬೇಕೆಂಬ ದೂರಾಲೋಚನೆಯಿಂದ ಅವಳ ತಂದೆ ಕಟ್ಟುನಿಟ್ಟು ಮಾಡಿದ್ದರು. ಹೀಗಾಗಿ ಬೇರೆ ಉಪಾಯವಿರಲಿಲ್ಲ.

ರೈಲಿನಿಂದ ಇಳಿದ ಉಗ್ರಮೂರ್ತಿಗೂ ಶೀಲಾ ಧಾರ್ ಕಲ್ಪಿಸಿಕೊಂಡಿದ್ದ ರೋಮ್ಯಾಂಟಿಕ್ ಪಠಾಣನಿಗೂ ಯಾವ ಹೋಲಿಕೆಯೂ ಇರಲಿಲ್ಲ. ಕೃಷ್ಣ ವರ್ಣದ ಸ್ಥೂಲ ಶರೀರ. ಕರ್ಕಶ ಧ್ವನಿಯಲ್ಲಿ ಸಂಭಾಷಣೆ. ತುಂಬು ಕಂಠದ ಗಾಯಕಿಯ ಮಾರ್ದವಕ್ಕೆ ಹೋಲಿಸಿದರೆ ಎತ್ತರದ ಕೊರಲಿನಲ್ಲಿ ಮಾತನಾಡುವ ರೀತಿ ಕರ್ಣ ಕಠೋರವಾಗಿತ್ತು. ಅಂದಿನ ಗಾಯಕರಲ್ಲಿ ಅಂಥ ವೈಪರೀತ್ಯ ಮಾಮೂಲಾಗಿತ್ತು. ಅವರ ಸ್ವಾಗತಕ್ಕಾಗಿ ತಯಾರು ಮಾಡಿಕೊಂಡಿದ್ದ ಭಾಷಣ ಗಂಟಲಲ್ಲೇ ಉಳಿಯಿತು. ಮನೆಗೆ ಬಂದು ಸ್ನಾನ ಮಾಡಿ ಯಜಮಾನರು ಪಕ್ಕವಾದ್ಯದವರೊಡನೆ ರಾತ್ರಿಯೂಟಕ್ಕೆ ಹಾಜರಾದರು. ಬೆಳ್ಳಿಯ ದೊಡ್ಡ ತಟ್ಟೆ, ಅದರಲ್ಲಿ ಏಳು ಬೆಳ್ಳಿ ವಾಟಿಗಳ ತುಂಬ ಘಮಘಮಿಸುವ ಭಕ್ಷ್ಯಗಳು. ಖಾನಸಾಹೇಬರು ಒಂದೊಂದು ಬಟ್ಟಲದಲ್ಲೂ ಬಟ್ಟು ಹಾಕಿ ನೋಡಿದರು. ಬೆರಳು ತಳ ಮುಟ್ಟಿದರೂ ಗಟ್ಟಿ ಮಾಂಸದ ಸುಳಿವೇ ಎಲ್ಲಿಯೂ ಇಲ್ಲ! ಸಂಪ್ರದಾಯಸ್ಥ ಶುದ್ಧ ಶಾಕಾಹಾರಿಗಳ ಮನೆಯಲ್ಲಿದ್ದೇನೆಂದು ಕೊನೆಗೂ ಅರಿವಾಯಿತು. ಹಸಿವು ಮುಂಗೋಪ ಎರಡೂ ಸೇರಿ "ಕೈಗೆ

ಸಿಕ್ಕ ಗಿಡಗಂಟಿಗಳನ್ನೆಲ್ಲ ಕತ್ತರಿಸಿ ಹಾಕಿ ಅಡಿಗೆ ಮಾಡಿದ್ದೀರೆಂದು ಕಾಣುತ್ತದೆ" ಎಂದು ವ್ಯಂಗ್ಯವಾಡಿದರು. ಸುದೈವಕ್ಕೆ ಅಡಿಗೆಯವರಿಗೆ ಅವರ ಉರ್ದು ಪಂಜಾಬಿ ಮಿಶ್ರ ಭಾಷೆ ಅರ್ಥವಾಗಲಿಲ್ಲ. ಮುಂದೆ ದೊಡ್ಡ ಹರಿವಾಣದಲ್ಲಿ ಬಂದ ಉಬ್ಬಿದ ಪೂರಿಗಳನ್ನು ಕಂಡಾಗಲಂತೂ ಪಿತ್ತ ನೆತ್ತಿಗೇರಿದ ಬಡೇ ಗುಲಾಮ ಖಾನರು ಎಳೇ ಆತಿಥೇಯಳ ಕಡೆ ತಿರುಗಿದರು. "ನನ್ನ ಗಾತ್ರವನ್ನು ನೋಡುತ್ತಿದ್ದೀಯಲ್ಲ, ಸಂಗೀತ ಕೇಳಿದ್ದೀಯಲ್ಲ. ಹೀಗೆ ತಿಳಿನೀರಲ್ಲಿ ತೇಲುವ ಎಲೆ ತಿಂದುಕೊಂಡು ಯಾರಾದರೂ ನನ್ನ ಹಾಗೆ ಹಾಡಲು ಸಾಧ್ಯವೇ? ಮನೆಯಲ್ಲಿ ದಿನವೂ ರಿಯಾಝ್ ಮಾಡುವಾಗಲೂ ಗಟ್ಟಿ ಮಾಂಸದ ಬೋಗುಣಿ ನನ್ನ ಎದುರಿಗೆ ಇರುತ್ತದೆ ಗೊತ್ತೆ? ನನ್ನ ಒಂದೊಂದು ಸ್ವರದಲ್ಲೂ ಒಂದೊಂದು ಕಬಾಬಿನ ಸ್ವಾದದ ಅನುಭವವಾಗುತ್ತದೆ ಎಂದು ಜನ ಹೇಳುತ್ತಾರೆ. ಅಂಥದರಲ್ಲಿ ಈ ಹುಲ್ಲು, ಇದನ್ನೆಲ್ಲ ತಿನ್ನಲೇ? ಇದೆಲ್ಲ ನನಗಾಗುವುದಿಲ್ಲ. ಬೇರೆ ವ್ಯವಸ್ಥೆಯಾಗಬೇಕು." ಎಂದು ಗರ್ಜಿಸಿ ತಾಟನ್ನು ಆಚೆ ತಳ್ಳಿದರು.

ಬೇರೆ ವ್ಯವಸ್ಥೆಯೂ ಆಯಿತು. ಮನೆಯ ಒಳಗಡೆ ಮಾಂಸಕ್ಕೆ ಪ್ರವೇಶವಿದ್ದಿಲ್ಲ, ಹೀಗಾಗಿ ಹೊರಗಡೆ ತೋಟದಲ್ಲಿ ಒಲೆ ಹೂಡಿ ಭರ್ಜರಿ ಅಡಿಗೆಯ ಸಿದ್ಧತೆ ನಡೆಯಿತು. ಬಡೇ ಗುಲಾಮ ಅಲಿ ಖಾನರು ಸ್ವತಃ ಮುಖ್ಯ ಬಾಣಸಿಗನ ಪಾತ್ರ ವಹಿಸಿಕೊಂಡರು. ಆರು ಕೋಳಿ, ಒಂದು ಕಿಲೋ ಖೋವಾ, ತುಪ್ಪ, ಬಾದಾಮಿ, ಗೋಡಂಬಿ ಎಂದು ಹತ್ತು ಹದಿನೈದು ಮಸಾಲೆಗಳ ಯಾದಿ ಕೊಟ್ಟು, ಅವರ ಆತಿಥೇಯರು ವ್ಯವಸ್ಥೆ ಮಾಡಿದ ಜೊಡು ಕುದುರೆಗಳ ಸಾರೋಟಿನಲ್ಲಿ, ತಮ್ಮ ಶಿಷ್ಯರನ್ನು ಮಾರ್ಕೆಟಿಗೆ ಅಟ್ಟಿದರು. ಎರಡು ಗಂಟೆಗಳ ಪರಿಶ್ರಮದ ನಂತರ ಅಂತೂ ಊಟ ತಯಾರಾಯಿತು. ಅಭಕ್ಷ್ಯ ಭೋಜನಕ್ಕೆ ಮನೆಯ ಬೆಳ್ಳಿ ತಟ್ಟೆಗಳನ್ನು ಉಪಯೋಗಿಸುವಂತಿರಲಿಲ್ಲ, ಎಲ್ಲಿಂದಲೋ ಪಿಂಗಾಣಿ ತಟ್ಟೆ ಬಟ್ಟಲುಗಳ ವ್ಯವಸ್ಥೆ ಮಾಡಬೇಕಾಯಿತು. ತಟ್ಟೆ ತುಂಬ ಬಡಿಸಿಕೊಂಡು ಸಾವಧಾನವಾಗಿ ತಿಂದು, ನಾಲ್ಕು ಬಾರಿ ತೃಪ್ತಿಯಿಂದ ತೇಗಿದ ಮೇಲೆ ಖಾನಸಾಹೇಬರು ಶಿಷ್ಯರೊಡನೆ ಸಮ್ಮೇಳನಕ್ಕೆ ತೆರಳಿದರು.

***

ಇನ್ನೊಬ್ಬ ಭಾರತರತ್ನ ಬಿಸ್ಮಿಲ್ಲಾ ಖಾನರು ಸಜ್ಜನಿಕೆಯ ಸರಳ ಜೀವನಕ್ಕೆ ಹೆಸರಾಗಿದ್ದವರು. ಕೊನೆಯ ವರೆಗೂ ಬನಾರಸದ ಗಲ್ಲಿಯ ಹಳೇ ಮನೆಯಲ್ಲಿ ವಾಸವಾಗಿದ್ದರು. ನಿಮ್ಮ ವೃತ್ತಿಗೆ ಖ್ಯಾತಿಗೆ ದಿಲ್ಲಿಯಂಥ ದೊಡ್ಡ ಊರು ಅನುಕೂಲವಲ್ಲವೇ ಎಂದು ಯಾರಾದರೂ ಹೇಳಿದರೆ "ಯಾರೇನು ಕೊಟ್ಟರೂ ನಾನು ಕಾಶಿ ಬಿಡುವವನಲ್ಲ. ಇಲ್ಲಿಯ ವಿಶ್ವೇಶ್ವರನ ಸನ್ನಿಧಾನ ಮತ್ತು ಜಿಲೇಬಿಗಳು ನನಗೆ ಮತ್ತೆಲ್ಲಿಯೂ ಸಿಗುವುದಿಲ್ಲ." ಎಂದು ನಿರಾಕರಿಸುತ್ತಿದ್ದರು. ಶಹನಾಯಿ ನವಾಝರನ್ನು ಕಾಶಿಯಲ್ಲಿ ಉಳಿಸಿಕೊಂಡ ಶ್ರೇಯಸ್ಸಿನಲ್ಲಿ ಜಿಲೇಬಿ ಮಾತ್ರವಲ್ಲ, ಅಲ್ಲಿಯ ಹಲ್ವಾಯಿಗಳು ತಯಾರಿಸುತ್ತಿದ್ದ ಇತರ ಮಿಠಾಯಿಗಳಿಗೂ ಪಾಲಿತ್ತು ಎಂದು ಸುಲಭವಾಗಿ ಊಹಿಸಬಹುದು. ಭೀಮಸೇನ ಜೋಶಿಯವರು ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಆಯೋಜಿಸುತ್ತಿದ್ದ ಸವಾಯಿ ಗಂಧರ್ವ ಸಮ್ಮೇಳನದಲ್ಲಿ ಬಿಸ್ಮಿಲ್ಲಾ ಖಾನರಿಗೆ ಯಾವತ್ತೂ ಆಮಂತ್ರಣವಿರುತ್ತಿತ್ತು. ಆಗ ಪುಣೆಗೆ ಬಂದವರು ಸುತ್ತಲಿನ ಇತರ ಕಡೆಗಳಲ್ಲಿ ಕಾರ್ಯಕ್ರಮ ಕೊಟ್ಟು ಹೋಗುತ್ತಿದ್ದರು. ಒಮ್ಮೆ ಸಮ್ಮೇಳನಕ್ಕೆ ವಿಜಾಪುರದಿಂದ ಬಂದಿದ್ದ ಕೆಲವು ಸಂಗೀತಪ್ರೇಮಿಗಳು ತಮ್ಮಲ್ಲಿಯೂ ಬಂದು ಕಾರ್ಯಕ್ರಮ ಕೊಡಬೇಕೆಂದು ಪ್ರಾರ್ಥಿಸಿದರು. "ನಮ್ಮದು ಸಣ್ಣ ಬಳಗ. ಹಣದ ಬೆಂಬಲವಿಲ್ಲ. ದೊಡ್ಡ ಸಭೆಗಳಲ್ಲಿ ನಿಮಗೆ ಸಿಗುವ ಸಂಭಾವನೆಯ ಅನುಕೂಲವಿಲ್ಲ. ಆದರೂ

ಸಾಧ್ಯವಿದ್ದಷ್ಟು ..."

"ನೋಡಿ, ನಾನೆಂದೂ ಹಣಕ್ಕಾಗಿ ಕಚೇರಿ ಮಾಡಿದವನಲ್ಲ. ಅಷ್ಟು ಇಷ್ಟು ಅಂತ ಕೇಳಿದವನಲ್ಲ. ರಸಿಕರು ಕೇಳಿ ಆನಂದಿಸಿದರೆ ಅದೇ ನನಗೆ ದೊಡ್ಡ ಸಂಭಾವನೆ" ಎಂದು ಬಿಸ್ಮಿಲ್ಲಾ ಖಾನರು ಭರವಸೆ ನೀಡಿದರು. ಅವರಂಥ ಮಹಾನ್ ಕಲಾವಿದರನ್ನು ಕಾಣುವುದೇ ಅಪರೂಪವೆಂದು ವಿಜಾಪುರದ ಮಂದಿ ಕಿಕ್ಕಿರಿದು ನೆರೆದರು. ಕಚೇರಿ ಭರ್ಜರಿಯಾಗಿ ಕಳೆಗಟ್ಟಿ ನೆರವೇರಿತು. ಮರುವರ್ಷವೂ ವಿಜಾಪುರದ ಸಂಗಿತ ಮಂಡಳಿ ಬಿಸ್ಮಿಲ್ಲಾ ಖಾನರನ್ನು ಪುಣೆಯಲ್ಲಿ ಭೆಟ್ಟಿಯಾಯಿತು. "ತಮಗೆ ನಿನಪಿದೆಯೋ ಇಲ್ಲವೋ, ಹೋದ ಸಲ ನಮ್ಮ ಸಣ್ಣ ಊರಿಗೆ ಬಂದು ಕಾರ್ಯಕ್ರಮ ಕೊಟ್ಟಿರಿ. ನಮ್ಮ ಜನ ಮಾತ್ರ ಇನ್ನೂ ನೆನಪಿಟ್ಟಿದ್ದಾರೆ. ತಾವು ಮನಸ್ಸು ಮಾಡಿ ಇನ್ನೊಮ್ಮೆ ..."

"ಮುರ್ಗಿ ಮಿಲೇಗಿ?" ಎಂದು ಕೇಳಿದರು ಖಾನಸಾಹೇಬರು. ಮಂಡಳಿಯವರಿಗೆ ತಲೆಬುಡ ತಿಳಿಯಲಿಲ್ಲ. ಅವರೆಲ್ಲ ಸಂಪ್ರದಾಯಸ್ಥ ಸದ್ಬ್ರಾಹ್ಮಣರು. ಮುರ್ಗಿಗಳನ್ನು ರಸ್ತೆಯಲ್ಲಿ ದೂರದಿಂದ ಕಂಡದ್ದು ಮಾತ್ರ, ಅದಕ್ಕೂ ಹತ್ತಿರದ ಪರಿಚಯ ಯಾರಿಗೂ ಇರಲಿಲ್ಲ. ಖಾನಸಾಹೇಬರೇ ವಿವರಿಸಬೇಕಾಯಿತು. ಹಿಂದಿನ ಪ್ರವಾಸದಲ್ಲಿ ಅವರ ಖಾತಿರದಾರಿಯ ಜವಾಬುದಾರಿಯನ್ನು ಸ್ಥಳೀಯ ಮುಸ್ಲಿಮ್ ಯುವಕರು ವಹಿಸಿಕೊಂಡಿದ್ದರು. ಊರಿನಲ್ಲಿ ಹಳೇ ಶೈಲಿಯ ಕೋಳಿ ಊಟವನ್ನು ಬಡಿಸುತ್ತಿದ್ದ ಸ್ಪೆಶಲ್ ಖಾನಾವಳಿಗೆ ಅವರನ್ನು ಕರೆದುಕೊಂಡು ಹೋಗಿದ್ದರಂತೆ. ಅಷ್ಟು  ರುಚಿಕಟ್ಟಾದ ಕೋಳಿ ಭಕ್ಷ್ಯ ತಿಂದದ್ದು ಈಗಲೂ ನೆನಪಿದೆ. ಅದಕ್ಕೇ ಕೇಳಿದೆ ಎಂದರು.

"ಅಷ್ಟೇ ತಾನೇ? ನಿಮ್ಮೆತ್ತರಕ್ಕೆ ಮುರ್ಗಿ ಹಾಕಿಸುತ್ತೇವೆ" ಎಂದು ವಿಜಾಪುರದ ಮಂದಿ ಭರವಸೆ ನೀಡಿದರು. ಸಂಭಾವನೆಯ ಪ್ರಸ್ತಾಪವೂ ಇಲ್ಲದೇ ಕಚೇರಿ ಫಿಕ್ಸ್ ಆಯಿತು.

***









# ಸಾಮಾನ್ಯ ಬುದ್ಧಿ ಯಾಕೆ ಕೃತಕ ಬುದ್ಧಿ ಇರುವಾಗ

ಎಸ್.ಆರ್. ವಿಜಯಶಂಕರ

ಭಾನುವಾರ ಬೆಳಬೆಳಗ್ಗೆ ಅಪ್ಪಣ್ಣ ಫೋನು ಮಾಡಿದ. ವಿದುಷಿ ಕಲಾಪಿನಿ ಕೊಂಕಾಳಿ ಅವರ ಸಂಗೀತಕ್ಕೆ ನೀನು ವರ್ಲ್ಡ್ ಕಲ್ಚರ್ ಹಾಲ್ ಬಂದೇ ಬರುತ್ತಿ ಅಂತ ಗೊತ್ತು ಮಾರಾಯ ಎಂದ. ಸೂರ್ಯ ದೇವನೆ ಇನ್ನೂ ಪೂರ್ತಿ ಎದ್ದೇಳುವ ಮೊದಲು ಗೆಳೆಯ ಅಪ್ಪಣ್ಣ ನನ್ನನ್ನು ಎಬ್ಬಿಸಿದ್ದಕ್ಕೆ ಸಿಟ್ಟು ಬಂದಿತ್ತು. ಗೊತ್ತಿದ್ದ ಮೇಲೆ ಇಷ್ಟು ಬೇಗ ಫೋನು ಯಾಕೆ? ನೀನೂ ಅಲ್ಲಿಗೆ ಬಾ. ಒಳ್ಳೆಯ ಸಂಗೀತ ಕೇಳಬಹುದು ಎಂದೆ. ನಿನ್ನ ಇಷ್ಟದ ಕುಮಾರ ಗಂಧರ್ವರ ಮಗಳ ಸಂಗೀತ ಕೇಳಲು ನೀನು ಬಾರದೆ ಇರ್ತೀಯ ಎಂದು ಪುನಃ ಅದೇ ಪ್ಲೇಟು ತಿರುಗಿಸಿದ. ಮತ್ತೆ ಯಾವ ಕರ್ಮಕ್ಕೆ ಇಷ್ಟು ಬೇಗ ಫೋನು ಎಂದು ಮನಸ್ಸಿನೊಳಗೆ ಸ್ವಗತ ಹೇಳಿಕೊಂಡೆ. ಅಷ್ಟು ದೂರ ಬರ್ತೀಯಲ್ಲ. ಸಂಗೀತ ಮುಗಿದ ಬಳಿಕ ಮತ್ತೆ ಸ್ವಲ್ಪ ದೂರ ಪಾದ ಬೆಳೆಸಿ ಅಲ್ಲಲ್ಲ ಕಾರು ಬಳಸಿ ನಮ್ಮ ಮನೆಗೂ ಬಾ ಎಂದು ಹೇಳಿ ತನ್ನ ಜೋಕಿಗೆ ತಾನೇ ನಕ್ಕ. ನಿನ್ನ ಮಗಳು ಈಗಾಗಲೇ ಎದ್ದು ನಿನ್ನ ಜೋಕ್ ಕೇಳಿದ್ದರೆ ಪಿ.ಜೆ. ಎನ್ನುತ್ತಿದ್ದಳು ಎಂದು ಕುಟುಕಿ ನನ್ನ ಅಸಮಾಧಾನವನ್ನು ನಿಯಂತ್ರಿಸಿಕೊಂಡೆ. ಪುವರ್ ಜೋಕೋ ಎಂತದೋ ಮಣ್ಣಂಗಟ್ಟಿಯೋ, ನಿನಗೇನೋ ಎದ್ದಕೂಡಲೇ ಸ್ಟಾರ್ಟಿಂಗ್ ಟ್ರಬಲ್ ಇದ್ದಹಾಗೆ ಕಾಣುತ್ತದೆ. ಮತ್ತೆ ಮನೆಗೆ ಬಾ ಎಲ್ಲಾ ಮಾತಾಡೋಣ ಎಂದು ಫೋನು ಮುಗಿಸಿದ.

ಸಂಗೀತ ಮುಗಿದು ಅಪ್ಪಣ್ಣನ ಮನೆಗೆ ಹೋದರೆ ಬಾಗಿಲು ತೆರೆದು ಅವನ ಪತ್ನಿ ಅಪ್ಪಣ್ಣಿ ಸ್ವಾಗತಿಸಿದರು. ಟೆರೇಸ್ ಗಾರ್ಡನ್ ಗಿಡಗಳಿಗೆ ನೀರುಣಿಸಲು ಹೋಗಿದ್ದ ಅಪ್ಪಣ್ಣನೂ ಬಂದ. ಬಂದವನೇ, ಏನು ತೆಗೊಳ್ತೀಯಾ? ಆರೆಂಜ್ ಜ್ಯೂಸ್ ಅಥವಾ ಮ್ಯಾಂಗೋ? ಎರಡೂ ನಾಮಧಾರಿಗಳಿಂದ ಬೈ ಒನ್ ಗೆಟ್ ಒನ್ ಫ್ರೀ ಆಫರ್‌ನಲ್ಲಿ ತಂದದ್ದು ಎಂದು ದೊಡ್ಡದಾಗಿ ನಕ್ಕ. ಇವನಿಗೇನೋ ಇವತ್ತು ಜೋಕ್ ಮಾಡುವ ಗರ ಬಡಿದಿದೆ. ಒಳ್ಳೆ ಉಲ್ಲಾಸದಿಂದಿದ್ದಾನೆ ಎಂದು ಊಹಿಸಿಕೊಂಡೆ. ನೀನು ಕುಡಿಯುವುದನ್ನೇ ನನಗೂ ಕೊಡು, ಶರೀರದ ಸಿಹಿ ಅಂಶವನ್ನು ಹೆಚ್ಚು ಮಾಡಲು ಎರಡೂ ಕಂಕಣ ಬದ್ಧವಾಗಿ ನಿಂತಿದ್ದಾವೆ ಎಂದೆ. ಒಳಹೋದ ಅಪ್ಪಣ್ಣ ಎರಡು ಗಾಜಿನ ಗ್ಲಾಸುಗಳಲ್ಲಿ ಜ್ಯೂಸ್ ಹಾಕಿಕೊಂಡು ಬಂದ. ಇದೇನೋ ಬೆಲೆಬಾಳುವ ವಿಸ್ಕಿ ಗ್ಲಾಸುಗಳಲ್ಲಿ ಜ್ಯೂಸ್ ಹಾಕಿ ತರುತ್ತಿದ್ದೀಯಲ್ಲೋ. ನೀನು ಹೇಳುವ ದಕ್ಷಿಣ ಭಾರತದ ಅಸ್ಮಿತೆಯಾದ ಸ್ಟೆನ್‌ಲೆಸ್ ಸ್ಟೀಲಿನ ಕಾಫಿ ಲೋಟಗಳೇನಾದವೊ ಎಂದು ಸಖೇದಾಶ್ಚರ್ಯವನ್ನು ಪ್ರಕಟಿಸಿದೆ.

ಅದೇ ನೋಡು ನಿನಗೆ ಹೊಸ ವಸ್ತುವೊಂದನ್ನು ತೋರಿಸಲು ಆಹ್ವಾನಿಸಿದ್ದು ಎಂದು ಕೈಯಲ್ಲಿದ್ದ ಪ್ಲಾಸ್ಟಿಕ್ ಪೆಟ್ಟಿಗೆಯನ್ನು ತೆರೆದ. 'ನೋಡು, ಇದು ಮೆಟ್ಯಾಲಿಕ್ ಐಸ್‌ಕ್ಯೂಬ್‌ಗಳು. ಇದನ್ನು ಜ್ಯೂಸಿನೊಳಗೆ ಹಾಕಿದರೆ ತಂಪಾಗಿರುತ್ತದೆ. ಐಸ್‌ನ ನೀರು ಸೇರಿ ಜ್ಯೂಸ್‌ನ ರುಚಿ ಕೆಡುವುದಿಲ್ಲ' ಎಂದು ಹೇಳಿ ನಮ್ಮ ಗ್ಲಾಸುಗಳಿಗೆ ಎರಡೆರಡು ಸ್ಟೆನ್‌ಲೆಸ್ ಸ್ಟೀಲ್‌ನ ಐಸ್ ಕ್ಯೂಬ್‌ಗಳಂತೆ ಕಾಣುವ ಲೋಹದ ತುಂಡುಗಳನ್ನು ಹಾಕಿದ.

ಇಷ್ಟೆಲ್ಲಾ ನಡೆಯುವಾಗ ಅಡಿಗೆ ಮನೆಯಿಂದ ಅಪ್ಪಣ್ಣಿ ಎರಡು ತಟ್ಟೆಗಳಲ್ಲಿ ಬಿಸಿ ಬಿಸಿ ಉಪ್ಪಿಟ್ಟು, ಸೈಡ್‌ನಲ್ಲಿ ಒಂದೊಂದು ಕೋಡುಬಳೆ ಮತ್ತೊಂದು ತುಂಡು ಎಂ.ಟಿ.ಆರ್.ನ ಬೊಂಬಾಯಿ ಹಲುವದ ತುಂಡುಗಳನ್ನಿಟ್ಟುಕೊಂಡು ಕೈಗೆ ಕೊಟ್ಟರು. ನಾನು ಬಿಸಿ ಉಪ್ಪಿಟ್ಟು ನೋಡುತ್ತಾ, ಕೈಯಲ್ಲಿರುವ ಜ್ಯೂಸ್ ಯಾಕೋ ಇನ್ನೂ ತಣ್ಣಗಾಗಿಲ್ಲವಲ್ಲ ಅಪ್ಪಣ್ಣ ಎಂದೆ.

ಆಗ ನೋಡಿ ಒಂದು ಸ್ಫೋಟವಾಯಿತು. ಯಾವುದೋ ಕಾರಣಕ್ಕೆ, ಇನ್ಯಾವುದೋ ಕಾಲದಲ್ಲಿ ಆಗಿರಬಹುದಾದ ವಿಚಾರಕ್ಕೆ ಇರಾನ್ ಮೇಲೆ ಈಗ ಟ್ರಂಪ್ ಮಹಾಶಯ ಬಾಂಬ್ ಹಾಕುವ ಹಾಗಿನ ಸ್ಫೋಟ. 'ನಿಮಗೆ ಸ್ವಲ್ಪ ಕಾಮನ್‌ಸೆನ್ಸ್ ಕಮ್ಮಿ' ಎಂದು ಅಪ್ಪಣ್ಣಿ ತನ್ನ ಗಂಡನನ್ನುದ್ದೇಶಿಸಿ ಹೇಳಿದರು. ಏನೋ ಒಂದು ಖಿಟಿಪಿಟಿಯಾಗಿರಬೇಕು ಎಂದು ನಾನು ಯೋಚಿಸುವಷ್ಟರಲ್ಲಿ ಆಕೆಯೇ ಹೇಳಿದರು : ಇವರ ನೆವ್ಯೂ ನಿನ್ನೆ ಈ ಕ್ಯೂಬ್‌ಗಳ ಪೆಟ್ಟಿಗೆ ಗಿಫ್ಟ್ ಕೊಟ್ಟು ಹೋಗಿದ್ದಾನೆ. ಇವತ್ತು ಬೆಳಿಗ್ಗೆ ಇವರು ಸೂಪರ್ ಮಾರ್ಕೆಟ್‌ಗೆ ಹೋಗಿ ಅರ್ಧ ಡಜನ್ ಗಾಜಿನ ಗ್ಲಾಸುಗಳನ್ನು ತಂದಿದ್ದಾರೆ. ಯಾರಿಗಾದರೂ ಈ ಮೆಟಾಲಿಕ್ ಕ್ಯೂಬ್‌ಗಳನ್ನು ತೋರಿಸಬೇಕೆಂದು ನಿನ್ನೆಯಿಂದ ಜಪ ಮಾಡುತ್ತಿದ್ದಾರೆ. ನೀವೇ ಮೊದಲ ಬಲಿಪಶು. ಆ ಕ್ಯೂಬ್‌ಗಳನ್ನು ಫ್ರಿಜ್‌ನೊಳಗೆ ಫ್ರೀಸರ್‌ನಲ್ಲಿಡದಿದ್ದರೆ ತಣ್ಣಗಾಗುವುದು ಹೇಗೆ? ಎಂದು ತಮ್ಮ ಅಭಿಪ್ರಾಯ ಹೇಳಿದರು.

ನನಗೆ ಅಪ್ಪಣ್ಣನ ಬೆಳಗಿನ ಫೋನಿನ ಅವಸರ ಅರ್ಥವಾಯಿತು. ಓಹೋ ಹೀಗೋ ಕಥೆ ಎಂದು ಯೋಚಿಸುತ್ತಿದ್ದೆ. ತನ್ನ ಪಾರ್ಟಿಗೆ ಇನ್ನೊಬ್ಬ ಇರಲಿ ಎಂಬುದರಿಂದಲೋ ಏನೋ ಅಪ್ಪಣ್ಣ; ಎಲ್ಲಾ ಗಂಡಸರೂ ಹಾಗಲ್ಲ ಎಂದ. ಅಪ್ಪಣ್ಣಿ ಯಾಕೋ ಬಿಡುವ ಲಕ್ಷಣ ತೋರಿಸಲಿಲ್ಲ. ಬೇಕಾದರೆ ಮದುವೆಯಾದ ಯಾವ ಹೆಂಗಸಿನ ಹತ್ತಿರವಾದರೂ ಕೇಳಿ, ಗಂಡಸರಿಗೆ ಕಾಮನ್ ಸೆನ್ಸೇ ಇಲ್ಲ ಎಂದೇ ಹೇಳುತ್ತಾರೆ. ಅಲ್ವೇನ್ರಿ. ನಿಮ್ಮ ಮನೆಯವರೂ ಒಪ್ಪುತ್ತಾರಲ್ವಾ ಎಂದು ನನ್ನ ಕಡೆ ತಿರುಗಿದರು.

ನನಗೆ ಹೊರ್ಮುಜ್ ಜಲಸಂಧಿಯಲ್ಲಿ ಸರಾಗ ಹಡಗು ಸಂಚಾರ ಬೇಕಾಗಿತ್ತು. ಈ ಇರಾನ್-ಟ್ರಂಪ್ ಯುದ್ಧದ ಬದಲು ಶಾಂತಿ ನೆಲೆಸಲಿ ಎಂದು ತುಸು ಲಘು ಧಾಟಿಯಲ್ಲಿ ಇದಕ್ಕೆಲ್ಲಾ ಆ ಬ್ರಹ್ಮನೇ ಕಾರಣ ಎಂದು ಗಂಡಸರಿಗಿಲ್ಲದಿರುವ ಕಾಮನ್‌ಸೆನ್ಸ್‌ನ ಜವಾಬ್ದಾರಿಯನ್ನು ಸೃಷ್ಟಿಕರ್ತನ ತಲೆ ಮೇಲೆ ಹಾಕಿದೆ. ಏನ್ರೀ ಬ್ರಹ್ಮನಿಗೆ ನಾಲ್ಕು ತಲೆ ಇದೆ. ಏನು ಹಾಕಿದರೂ ತಲೆ ಮೇಲೆ ಹೊತ್ತುಕೊಳ್ತಾನೆ ಅಂತಲೇ ನೀವು ಹೇಳುವುದು ಎಂದು ಆಕ್ಷೇಪಿಸಿದಳು. ನಾನು ಅಣಕು ರಾಮನಾಥ್ ರೀತಿಯಲ್ಲಿ ನನ್ನದೇ ಒಂದು ಕತೆ ಕಟ್ಟತೊಡಗಿದೆ.

ನೋಡಿ ವಿಷಯ ಹಾಗಲ್ಲ. ಬ್ರಹ್ಮ ಮೊದಲಿಗೆ ಸ್ತ್ರೀಯರನ್ನು ಸೃಷ್ಟಿಸಿದ. ಅವರಲ್ಲಿ ಅತ್ಯಂತ ಸುಂದರಿಯೂ ಬುದ್ಧಿವಂತೆಯೂ ಆದ ಮೊದಲನೆಯವಳನ್ನು ತಾನೇ ಮದುವೆಯಾದ. ಆಮೇಲೆ ಹನಿಮೂನ್ ಅದು ಇದು ಎಂದು ಇದ್ದಲ್ಲೆಲ್ಲಾ ತಿರುಗಾಡುವಾಗ ಅವನಿಗೆ ಹೊಸ ಮದುವೆಯಾದ ಅಮಲಿನಲ್ಲಿ ಸೃಷ್ಟಿಕಾರ್ಯವೇ ಮರೆತುಹೋಯಿತು. ಪ್ರಪಂಚದಲ್ಲಿ ಸೃಷ್ಟಿಗೊಂಡ ಸ್ತ್ರೀಯರೆಲ್ಲಾ ಸ್ತ್ರೀಯರು ಮಾತ್ರವಾಗಿ ಕಳವಳಗೊಂಡು ಏನು ಮಾಡುವುದೆಂದು ತಿಳಿಯದೆ ಕಂಗಾಲಾದರು. ಸ್ತ್ರೀಯರು ಮಾತ್ರ ಇದ್ದರೆ ಲೋಕಸೃಷ್ಟಿ ಹೇಗೆ ಮುಂದುವರಿಯಬೇಕು? ಎಂದು ಸೃಷ್ಟಿಪಾಲಕನಾದ ಮಹಾವಿಷ್ಣುವಿಗೆ ದೂರು ಕೊಟ್ಟರು ಎಂದೆ. ನನ್ನ ಕತೆಯಲ್ಲಿ ಆಸಕ್ತಿ ಹುಟ್ಟಿ ಅಪ್ಪಣ್ಣಿ ಆಮೇಲೆ ಎಂದರು.

ಶಾಂತಿ ಒಪ್ಪಂದಕ್ಕೆ ಇದೇ ಸರಿಯಾದ ಸಮಯ ಎಂದು ನಾನು ಮುಂದುವರಿಸಿದೆ : ಮಹಾವಿಷ್ಣುವಿಗೆ ಲೋಕಪಾಲನೆಗೆ ಲೋಕ ಇರಬೇಕಲ್ಲ. ಹಾಗಾಗಿ ದೂರು ತಂದ ಅಬಲೆಯರಿಗೆಲ್ಲಾ ಅಭಯ ಹಸ್ತ ತೋರಿಸಿದ. ನಮ್ಮ ವಿಧಾನಸಭೆಯಲ್ಲಿ ಮಂತ್ರಿಗಳು ಹೇಳುವ ಹಾಗೆ ಎಲ್ಲಾ ಸರಿ ಮಾಡುತ್ತೇನೆ ಎಂದು ಭರವಸೆಯನ್ನಿತ್ತ. ಆದರೆ ನಮ್ಮ ಮಂತ್ರಿಗಳ ಹಾಗೆ ಫೈಲುಗಳನ್ನೂ, ಕೊಟ್ಟ ಆಶ್ವಾಸನೆಗಳನ್ನೂ ಮರೆತು ಸುಮ್ಮನೆ ಕೂರಲಿಲ್ಲ. ತಕ್ಷಣ ತನ್ನ

ಗರುಡುವಾಹನವನ್ನೇರಿ ಸೀದಾ ಬ್ರಹ್ಮನಲ್ಲಿಗೆ ಹೋಗಿ, 'ಏನಯ್ಯಾ ಮದುವೆಯಾದವರಿಗೆ ಜವಾಬ್ದಾರಿ ಇರಬಾರದ. ಬರೇ ಸ್ತ್ರೀಯರನ್ನು ಸೃಷ್ಟಿಸಿದರೆ ಲೋಕ ನಡೆಯುವುದು ಹೇಗೆ? ಪ್ರಜಾ ಸಂಪತ್ತು ಸಿದ್ಧಿಯಾಗದಿದ್ದರೆ ನಾನು ಯಾವ ಲೋಕವನ್ನು ಪಾಲನೆ ಮಾಡಬೇಕಯ್ಯ! ತಕ್ಷಣವೇ ಪ್ರತಿಯೊಬ್ಬ ಹೆಂಗಸಿಗೂ ಒಬ್ಬ ಗಂಡ ಸಿಗುವ ಹಾಗೆ ಲೋಕದಲ್ಲಿ ಪುರುಷರ ಸೃಷ್ಟಿಯನ್ನು ಮಾಡು' ಎಂದು ಆಜ್ಞಾಪಿಸಿದ.

ವಿಷ್ಣುವಿನ ಆಜ್ಞೆಯಾದ ಮೇಲೆ ಅವನ ನಾಭಿಯಲ್ಲಿರುವ ಪದ್ಮವಾಸಿಯಾದ ಬ್ರಹ್ಮನಿಗೆ ಬೇರೆ ದಾರಿ ಇದೆಯೆ? ತಕ್ಷಣ ಪುರುಷರ ಸೃಷ್ಟಿಯ ಕಾರ್ಯಕ್ಕೆ ವಿದ್ಯುಕ್ತನಾದ. ಅಷ್ಟರಲ್ಲಿ ಅವನಿಗೆ ಮದುವೆಯಾಗಿ ಸ್ವಲ್ಪ ಸಮಯವಾಗಿತ್ತು. ಎಲ್ಲಾ ಕಡೆ ಆಗುವ ಹಾಗೆ ಗಂಡ–ಹೆಂಡಿರ ನಡುವೆ ಆಗಾಗ ಏನಾದರೂ ಮನಸ್ತಾಪ ಬರುವುದು ಸಹಜವಾಗಿತ್ತು. ಗಂಡಸರ ದುರಾದೃಷ್ಟಕ್ಕೆ ಬ್ರಹ್ಮ ಸೃಷ್ಟಿ ಕಾರ್ಯಕ್ಕೆ ಇಳಿಯುವ ದಿನ ಬೆಳಿಗ್ಗೆ ಬ್ರಹ್ಮನಿಗೂ–ಸರಸ್ವತಿಗೂ ಏನೋ ಸಣ್ಣ ಜಗಳವಾಯಿತು. ಅಷ್ಟರಲ್ಲಿ ಅಪ್ಪಣ್ಣಿ ಕುತೂಹಲದಿಂದ ಏನು ಜಗಳ? ಎಂದರು. ಏನೋ ಸಣ್ಣ ವಿಷಯ. ಬೆಳಗಿನ ಸ್ನಾನದ ನೀರು ಸರಿ ಬಿಸಿಯಾಗಿರಲಿಲ್ಲವಂತೆ. ಅದಕ್ಕೆ ಜಗಳ ಯಾಕೆ. ಸರಸ್ವತಿ ಬಳಿ ಗೊಣಗುವ ಬದಲು ಸೂರ್ಯದೇವನಿಗೇ ಒಂದು ಆರ್ಡರ್ ಕೊಟ್ಟಿದ್ದರೆ ಅವ ನಾಲ್ಕು ಕಿರಣ ಹೆಚ್ಚು ಕಳಿಸಿ ಅವನ ಮನೆಯಲ್ಲಿದ್ದ ಸೋಲಾರ್ ಪ್ಯಾನಲ್ ಹೀಟರ್‌ನಿಂದ ನೀರು ಬೇಗ ಬಿಸಿ ಮಾಡಿಸಿಬಿಡುತ್ತಿದ್ದ. ತಾಯಿ ಸರಸ್ವತಿ, ನೀವು ಯಾವತ್ತೂ ಹೋಗುವ ಹೊತ್ತಿಗಿಂತ ಮುಂಚಿತವಾಗಿ ಸ್ನಾನಕ್ಕೆ ಹೋಗುತ್ತೀರೆಂದು ನನಗೆ ಕನಸು ಬೀಳುತ್ತದೆಯೇ ಎಂದು ಗಂಡನಾದ ಬ್ರಹ್ಮ ದೇವರ ಎದುರಿಗೇ ಸಿಡುಕಿದಳಂತೆ. ನಿನ್ನೆ ನಿನ್ನ ಅಣ್ಣ ಮಹಾವಿಷ್ಣು ಬಂದು ನಾಳೆಯಿಂದಲೇ ಹೊಸಸೃಷ್ಟಿಯ ಕೆಲಸ ಮಾಡು ಎಂದಿದ್ದು ನಿನ್ನ ಎದುರಿಗಲ್ಲವೇ? ಎಂದ ಬ್ರಹ್ಮ. ನಮ್ಮ ಕೆಲಸದ ಕಷ್ಟ ಹೆಂಗಸರಿಗೇನು ತಿಳಿಯುತ್ತದೆ ಎಂದು ಬೇರೆ ಗೊಣಗಿ ಬಿಟ್ಟಿದ್ದ. ಗಂಡ ಹೆಂಡಿರ ನಡುವೆ ಮುನಿಸು ಬರುವುದಕ್ಕೆ ಮತ್ತೇನು ಬೇಕು ಎಂದೆ ನಾನು. ಇದಕ್ಕೂ ಗಂಡಸರಿಗೆ ಇಲ್ಲದಿರುವ ಕಾಮನ್‌ಸೆನ್ಸ್‌ಗೂ ಏನು ಸಂಬಂಧ ಎಂದ ಅಪ್ಪಣ್ಣಿ ಬಿಟ್ಟುಕೊಡಲಿಲ್ಲ. ನಾನು ಸತ್ಯ ಹೇಳಬೇಕಾಯಿತು.

ಬೆಳಗ್ಗೆ ಪೂಜೆ ಮುಗಿಸಿ, ತಿಂಡಿ ತಿಂದು ಬ್ರಹ್ಮ ಗಂಡಸರನ್ನು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದ. ಬುದ್ಧಿ, ಬಲ, ವಿದ್ಯೆ, ಯೋಗ್ಯತೆ, ಯುಕ್ತಿ, ಸಂಪನ್ನತೆ ಎಲ್ಲಾ ತುಂಬಿ ಸೃಷ್ಟಿ ಕ್ರಿಯೆಗೆ ಹದ ಬರಲು ಒಂದೊಂದೇ ಅಂಶಗಳನ್ನು ಸೇರಿಸುತ್ತಾ ಪಾಕ ತಿರುಗಿಸಲು ಸುರು ಮಾಡಿದ. ಆದರೆ ಆ ಮೊದಲು ಮನೆಯಲ್ಲಿ ಹೆಂಡತಿಯ ಹತ್ತಿರ ಜಗಳಾಡಿದ್ದ ನೋಡಿ. ನೂರಕ್ಕೆ ನೂರು ಏಕಾಗ್ರತೆ ಇರಲಿಲ್ಲ. ಎಲ್ಲಾ ಘಟಕಾಂಶಗಳನ್ನೂ ಹಾಕಿ ಆಯಿತು ಎಂದು ತಿಳಿದು ಸೃಷ್ಟಿಯ ಬಟನ್ ಒತ್ತಿಬಿಟ್ಟ. ಗಂಡಸು ಸೃಷ್ಟಿಯಾದ ಮೇಲೆ ತಿಳಿಯಿತು ನೋಡಿ, ಆ ಬ್ರಹ್ಮ ಕಾಮನ್‌ಸೆನ್ಸ್ ಎಂಬ ಒಂದಂಶವನ್ನು ಗಂಡಸರಲ್ಲಿ ಸೇರಿಸಲು ಮರೆತೇ ಬಿಟ್ಟಿದ್ದ. ಅದಕ್ಕೇ ನಾನು ಹೇಳಿದ್ದು ಕಾಮನ್‌ಸೆನ್ಸ್ ಇಲ್ಲದಿರುವುದಕ್ಕೆ ಗಂಡಸರು ಕಾರಣವಲ್ಲ; ಬ್ರಹ್ಮನೇ ಕಾರಣ ಅಂತ.

ನಿಮ್ಮ ಸ್ನೇಹಿತರು ಬಂದರೆ ನಕ್ಕು ಸಾಕಾಗುತ್ತದಪ್ಪ. ಇರಿ ಇನ್ನೊಂದಷ್ಟು ಉಪ್ಪಿಟ್ಟು ತರುತ್ತೇನೆ. ಆಮೇಲೆ ಈ ಮೆಟಾಲಿಕ್ ಐಸ್‌ಕ್ಯೂಬ್ ಕತೆ ಬಿಡಿ. ನಾನೊಂದು ಲೋಟ ಬಿಸಿಕಾಫಿ ಇನ್ನೊಂದಷ್ಟು ಕೋಡುಬಳೆ ತರುತ್ತೇನೆ ಎಂದು ಅಪ್ಪಣ್ಣಿ ಒಳಗೆ ಹೋದರು.

ಕವುಚಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ಹಾಗೆ ಅತ್ತ ಅವರು ಒಳಗೆ ಹೋದ ಕೂಡಲೇ ಇತ್ತ ಅಪ್ಪಣ್ಣ ನಮಗೆ ಕಾಮನ್‌ಸೆನ್ಸ್ ಯಾಕೆ ಬೇಕೋ? ಈಗ ನೋಡು ಎಐ ಅಂದರೆ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಎಲ್ಲಾ ಕಡೆ ಬಂದಿದೆ ಎಂದು ಹೊಸದಾಗಿ

ಹೇಳುವವನ ಗತ್ತಿನಲ್ಲಿ ಸಾರಿದ. ಅದಕ್ಕೂ ಕಾಮನ್‌ಸೆನ್ಸ್‌ಗೂ ಏನೋ ಸಂಬಂಧ ಎಂದೆ. ಎಐ ಇದ್ದಾಗ ಎಲ್ಲಾ ಅದೇ ಮಾಡುತ್ತದೆ. ಅದಕ್ಕೊಂದು ಕಮಾಂಡ್ ಕೊಟ್ಟರೆ ಆಯಿತು. ಈ ಮೆಟಾಲಿಕ್  ಕ್ಯೂಬ್‌ಗಳನ್ನು ಫ್ರೀಜರ್‌ನೊಳಗೆ ಇಡುವುದನ್ನು ಅದುವೇ ನೆನಪು ಮಾಡುತ್ತದೆ ಎಂದ. ಅಂದರೆ ನಿನ್ನ ಪ್ರಕಾರ ಕೃತಕ ಬುದ್ಧಿ ಬಂದ ಮೇಲೆ ಸಾಮಾನ್ಯ ಬುದ್ಧಿಯೇ ಬೇಡ ಎಂದಂತಾಯಿತು ಎಂದು ನಾನು ನಕ್ಕೆ.

ಅದಕ್ಕೇ ನಾನು ಹೇಳಿದ್ದು ಕಾಮನ್‌ಸೆನ್ಸ್ ಯಾಕೆ ಎಐ ಇರುವಾಗ ಎಂದು ಅಪ್ಪಣ್ಣ ಹೇಳುವುದಕ್ಕೂ ಅಪ್ಪಣ್ಣಿ ಹೊರಬರುವುದಕ್ಕೂ ಸರಿಯಾಯಿತು. ಏನ್ರೀ ನೀವು ಹೇಳುವುದು? ಎಲ್ಲಾದರೂ ಉಂಟೆ! ಗಂಡಸರು ಮಾಡಿದ ಎಐಯಲ್ಲಿ ಕಾಮನ್‌ಸೆನ್ಸ್ ಎಲ್ಲಿರುತ್ತದೆ ರೀ ಎಂದರು. ಏನಾದರೂ ಎಐಯಲ್ಲಿ ಕಾಮನ್‌ಸೆನ್ಸ್ ಅಂಶ ಸೇರಬೇಕೆಂದರೆ ಅದಕ್ಕಾಗಿ ಕೇವಲ ಹುಡುಗಿಯರು ಅಥವಾ ಹೆಂಗಸರಾದ ಇಂಜಿನಿಯರ್‌ಗಳು ಮಾತ್ರ ಕೆಲಸ ಮಾಡುವ ಸಾಫ್ಟ್‌ವೇರ್ ವಿಭಾಗಗಳನ್ನೂ ಕಂಪನಿಗಳು ಪ್ರಾರಂಭಿಸಬೇಕಾಗುತ್ತದೆ. ಎಐ ಪ್ರಾಡಕ್ಟ್ ಮಾಡುವ ಎಂತ್ರೋಪಿಕ್ ಕಂಪೆನಿ ಭಾರತದಲ್ಲಿ ಆರ್&ಡಿ ಪ್ರಾರಂಭಿಸುತ್ತದಲ್ಲ. ಅಲ್ಲಿರುವ ಈ ಮೆಟಾಲಿಕ್ ಐಸ್‌ಕ್ಯೂಬ್‌ಗಳನ್ನು ಕೊಟ್ಟ ನಿಮ್ಮ ನೆವ್ಯೂಗೂ  ಹೇಳಿ ಎಂದೂ ಸೇರಿಸಿದರು. ನೀವೇ  ಅವರಿಗೆ ತಿಳಿಸಿ ಹೇಳಿ ಎಂದು ನನ್ನನ್ನೂ ಇನ್‌ವಾಲ್ವ್ ಮಾಡಿ ಬಿಸಿ ಕಾಫಿ, ಫ್ರೆಶ್ ಕೋಡುಬಳೆ ಮುಂದಿಟ್ಟರು.

ಇದು ಯಾಕೋ ಪಾಕಿಸ್ತಾನದ ಮಧ್ಯಸ್ತಿಕೆಯಲ್ಲಿ ಇರಾನ್–ಟ್ರಂಪ್ ನಡುವೆ ಶಾಂತಿ ಸಂಧಾನ ಮುರಿದು ಬಿದ್ದ ಹಾಗಾಯಿತು ಅಂದುಕೊಂಡೆ. ಈ ಮೆಟಲಿಕ್ ಕ್ಯೂಬ್‌ಗಳನ್ನು ಫ್ರೀಜರ್‌ನಲ್ಲಿಡಮ್ಮಾ, ಮುಂದಿನ ಸಲ ಮಾಲತಿಯೊಡನೆ ಬಂದಾಗ ಜ್ಯೂಸಿಗೆ ಹಾಕಿ ಕುಡಿಯೋಣ ಎಂದು ಹೇಳಿ ಬಿಸಿ ಕಾಫಿ ಕುಡಿಯುತ್ತಾ ಕೋಡುಬಳೆ ತಟ್ಟೆಗೆ ಕೈ ಹಾಕಿದೆ.



# ದಶಕಂಠನ ರಗಳೆ

✍ ಅಣಕು ರಾಮನಾಥ್

ಅಂದೊಮ್ಮೆ ಬೆಂಗಳೂರಿನಿಂದ ಶಿವಮೊಗ್ಗೆಗೆ ನನ್ನೊಡನೆ ಸಹಪ್ರಯಾಣಿಕರಾಗಿ ಶೃಂಗೇರಿಯ ದ್ವಿಭಾಷಾ ಕೋವಿದರಾದ ಗಿರಿಧರಶಾಸ್ತ್ರಿಗಳು ಪಯಣಿಸುತ್ತಿದ್ದರು. ಅವರೊಡನೆ ಪಯಣವೆಂದರೆ ಮೌಲ್ಯಯುತ ಮಾತುಗಳ ಜಲಪಾತದಡಿಯಲ್ಲಿ ಮೀಯುವುದಷ್ಟೆ. ಆ ಭೋರ್ಗರೆವ ದಭೆದಭೆಯ ಹರಿವಿನಲ್ಲಿ ನನಗೆ ದೊರೆತ ದಿವ್ಯ ತೀರ್ಥವೇ 'ಸೀತಾರಾವಣ ಸಂವಾದ ಝರೀ' ಎಂಬ ವಿಶಿಷ್ಟ ಗ್ರಂಥದ ಬಗ್ಗೆ ಮಾಹಿತಿ. ಬನಾರಸ್ ನಗರದಲ್ಲಿರುವ ಚೌಕಂಭ ಪಬ್ಲಿಕೇಷನ್ಸ್‌ಗೆ ಬರೆದು ಆ ಪುಸ್ತಕವನ್ನು ತರಿಸಿಕೊಂಡೆ. ಮೊದಲ ಮೂರು ಸಾಲುಗಳಲ್ಲಿ ರಾವಣನ ಆತ್ಮಪ್ರಶಂಸೆ, ನಾಲ್ಕನೆಯ ಸಾಲಿನಲ್ಲಿ ಸೀತೆಯ ಬಿರುನುಡಿಗಳು ಇರುವ ಈ ಕಾವ್ಯಸಂಕಲನದ ವೈಶಿಷ್ಟ್ಯವೆಂದರೆ ಸೀತೆಯ ನುಡಿಗಳಲ್ಲಿ ಒಂದು ನೇರ ಅರ್ಥವೂ, ಒಂದು ಗೂಢಾರ್ಥವೂ ತುಂಬಿರುವುದು. ಸೀತೆಯು ನುಡಿದ ಸಾಲಿನಲ್ಲೇ ಅಡಕವಾಗಿರುವ ಆ 'ಕೋಡ್ ವರ್ಡ್' ಅನ್ನು ರಾವಣನ ಸಾಲುಗಳಿಗೆ ಅನ್ವಯಿಸಿದರೆ ಅದು ರಾವಣನ ಹೀಗಳಿಕೆಯಾಗಿ ಬದಲಾಗುತ್ತದೆ. ಅಂತಹುದೇ ಪ್ರಯತ್ನವನ್ನು ಕನ್ನಡದಲ್ಲೇಕೆ ಮಾಡಬಾರದು ಎನಿಸಿದುದರ ಫಲಿತವೇ ಈ 'ರಾವಣನ ರಗಳೆ' ಎಂಬ ವಿಶೇಷ ಪ್ರಯತ್ನ. 170 ವರ್ಷಗಳ ಹಿಂದೆ ಸೀತಾರಾಮಶಾಸ್ತ್ರೀ ಎಂಬ ಪಂಡಿತರು ಆರಂಭಿಸಿ, "ನೂರು ಪದ್ಯಗಳನ್ನು ರಚಿಸಬೇಕೆಂದಿದ್ದೆ. ಐವತ್ತಕ್ಕೇ ಸುಸ್ತಾಗಿದ್ದೇನೆ. ವಯೋಭಾರಕ್ಕೆ ಸಾಹಿತ್ಯದ ತೂಕವನ್ನು ಹೊರುವ ಶಕ್ತಿಯಿಲ್ಲ. ಯಾರಾದರೂ ಮತ್ತೈವತ್ತನ್ನು ಕೂಡಿಸಿ ಪ್ರಕಟಿಸಿದರೆ ಅವರಿಗೆ ನನ್ನ ಶತ ಸಾಷ್ಟಾಂಗ" ಎನ್ನುತ್ತಾ ಕೈಚೆಲ್ಲಿದರು. ಅವರ ಶಿಷ್ಯರಾದ ರಾಮಶಾಸ್ತ್ರಿಗಳು 'ಗುರುವಂದನೆ'ಯ ರೀತಿಯಲ್ಲಿ ಈ ಸವಾಲನ್ನು ಕೈಗೆತ್ತಿಕೊಂಡು ಪೂರೈಸಿ, 'ನನಗೆ ಗುರುಗಳ ಶತ ಆಶೀರ್ವಾದಗಳಿರಲಿ' ಎಂಬ ಪ್ರಾರ್ಥನೆಯೊಂದಿಗೆ ಪುಸ್ತಕವನ್ನು ಹೊರತಂದರು. ಶ್ಲೇಷೆಗೆ ಹೆಸರಾದ ಆ ಗ್ರಂಥದ ನೆರಳಲ್ಲಿ ಕನ್ನಡದ ಈ ಸಾಲುಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಅಡವಿಯಲಿ ಕಾಡಿನಲಿದಾಡುವರ ಮಧ್ಯದಲಿ ವಾಸಿಸುತ್ತಿರುವನ್ನೆ ದಾಶರಥಿ
ಅಡಿಗಡಿಗೆ ಕೆಸರನ್ನು ರಘುವಂಶದಾಸ್ಯದೊಳ್ ಲೇಪಿಸುತ್ತಿರುವನ್ನೆ ನಿನ್ನ ಪತಿ
ಅಡಚಣೆಗಳಾಗುತಿರೆ ಮೌನಿಗಳ ಜಪಗಳಿಗೆ ಕೋರುವನು ದಾನವರ ನೆರವಿಯಂ
ತೊಡೆಯೈ ಕಾಕರವ; ದಶಕಂಠದೊಳ್ ಮೂಡೆ ಹಾಹಾಕಾರವದೆ ನಗೆ ಶ್ರಾವ್ಯಂ.

ಇಲ್ಲಿಯು ಸೀತೆಯು "ಕಾಗೆಯಂತೆ ಕರ್ಕಶವಾಗಿ ನುಡಿಯುವುದನ್ನು ನಿಲ್ಲಿಸು. ನೀನು ಹಾಹಾಕಾರದಿಂದ ನರಳುವುದೇ ನನಗೆ ಕೇಳಲು ಹಿತ" ಎನ್ನುವುದು ನೇರ ಅರ್ಥವಾದರೆ, "ಈ ಸಾಲುಗಳಲ್ಲಿ ಎಲ್ಲೆಲ್ಲಿ ಕಕಾರ ಬರುವುದೋ ಅಲ್ಲೆಲ್ಲಾ ಹಕಾರ ಹಾಕಿದರೆ ಸೂಕ್ತ" ಎನ್ನುವುದು ಗೂಢಾರ್ಥ. ಹಾಗೆ ಬದಲಿಸಿದಾಗ ರಾವಣನ ಮಾತುಗಳು

ಅಡವಿಯಲಿ ಹಾಡಿ ನಲಿದಾಡುವರ ಮಧ್ಯದಲಿ ವಾಸಿಸುತ್ತಿರುವನ್ನೆ ದಾಶರಥಿ
ಅಡಿಗಡಿಗೆ ಹೆಸರನ್ನು ರಘುವಂಶದಾಸ್ಯದೊಳ್ ಲೇಪಿಸುತ್ತಿರುವನ್ನೆ ನಿನ್ನ ಪತಿ
ಅಡಚಣೆಗಳಾಗುತಿರೆ ಮೌನಿಗಳ ಜಪಗಳಿಗೆ ಹೋರುವನು ದಾನವರ ನೆರವಿಯಂ

ಎಂದು ಬದಲಾಗುತ್ತವೆ. ಇದೋ ಮತ್ತೊಂದು ಪ್ರಯತ್ನ:

ರೂಪದಲಿ ಯಶದಲ್ಲಿ ಸಮರಿಲ್ಲವೀ ಜಗದಿ ಹೋಲಿಕೆಯ ಕಾಂಬೆಯಾ ತ್ರೇತದೊಳು

ಛಾಪವಿದ್ಯಾವಿದನು ಕೂರ್ಮೆ ಸಮರದೊಳೆನ್ನ ತ್ರಾಣ ಬಯಸುವ ಜನರೆ ಲೋಕದೊಳು

ಸಾಪುಕುಲದಲ್ಲಣನು ನಾನೆಂಬುದರಿಸೀತೆ ರಾವಣನ ನಾಮವೇ ತ್ರಾಸ ವಿಧಿಗೆ

ಪಾಪಿ! ತರಯುಕ್ತದಕ್ಕರಕ್ಕನರ್ಹ ನೀನು; ನುಡಿಯೊಳ್ ಪ್ರಕಾರವರಿದೊಡೆ ಒಸಗೆ

ಇಲ್ಲಿ ತರಯುಕ್ತ ಎಂದರೆ ವಿಧಿವತ್ತಾದ, ಕ್ರಮಕ್ಕೆ ಅನುಗುಣವಾದ ಎಂದೂ, ತರಯುಕ್ತದಕ್ಕರ ಎಂದರೆ ಕ್ರಮವಾದ ಭಾಷೆಗೆ ಅನರ್ಹನೆಂದೂ (ರಾವಣನದು ರಕ್ಕಸ ಭಾಷೆ; ಸುಸಂಸ್ಕೃತವಲ್ಲ ಎಂಬ ಭಾವ) ಅರ್ಥವು ಮೂಡಿ, ಭಾಷೆಗೊಂದು ಲಯವಿದ್ದು, ಅಂತೆಯೇ ಮಾತನಾಡುವುದು ಸೂಕ್ತವೆಂಬುದು ನೇರ ಅರ್ಥ. 'ಯುಕ್ತ' ಎಂದರೆ ಸೇರಿಸಿದ ಎಂದರ್ಥ. ತರಯುಕ್ತ ಎಂದರೆ ತ್ರ; ತ್ರತ್ರಾತ್ರಿತ್ರೀ ಶಬ್ದಗಳು ನಿನಗೆ ಸೂಕ್ತವಲ್ಲ, ಅದರ ಬದಲಿಗೆ ಪ್ರಪ್ರಾಪ್ರಿಪ್ರೀ ಬಳಸು ಎನ್ನುವುದು ಗೂಢಾರ್ಥ. ಹಾಗೆ ಬದಲಿಸಿದಾಗ

ರೂಪದಲಿ ಯಶದಲ್ಲಿ ಸಮರಿಲ್ಲವೀ ಜಗದಿ ಹೋಲಿಕೆಯ ಕಾಂಬೆಯಾ ಪ್ರೇತದೊಳು

ಛಾಪವಿದ್ಯಾವಿದನು ಕೂರ್ಮೆ ಸಮರದೊಳೆನ್ನ ಪ್ರಾಣ ಬಯಸುವ ಜನರೆ ಲೋಕದೊಳು

ಸಾಪುಕುಲದಲ್ಲಣನು ನಾನೆಂಬುದರಿಸೀತೆ ರಾವಣನ ನಾಮವೇ ಪ್ರಾಸ ವಿಧಿಗೆ

ಎಂದು ಬದಲಾಗುತ್ತದೆ. ವಿಧಿ ಎಂದರೆ ಮರಣವೆಂಬ ಅರ್ಥವನ್ನು ಇಲ್ಲಿ ತೆಗೆದುಕೊಳ್ಳಬೇಕು. 'ಮರಣ'ಕ್ಕೆ 'ರಾವಣ' ಪ್ರಾಸವಲ್ಲವೆ!

ರಾವಣನ ಸಂಗವನು ಕಾಮಿಪರು ರಮಣಿಯರು ಹಿತವೆನ್ನಸಂಗವೆಂದುಲಿದಿಹುದು

ದೇವಗಣ । ನರವ್ಯೂಢ ಬಳಿಸಾರಿ ಸೀಕರದ ತಣ್ಪನ್ನು ಅನುಗಾಲ ಪೊಂದುವುದು

ಕೋವಿದನು ನಾನೆಂದು ವೇದವಿದ್ಯೆಗಳಲ್ಲಿ ದಶದಿಕ್ಕಿಗರಿಪುದು ಸೂತಪಡೆಯುಂ

ಕಾವಿ ಧರಿಸಿದ ನೀಚ ತಸ್ಕರನ ಜೆಷ್ವೆಯೊಳಸಂಭವ ಸೂಚಕ ನುಡಿಯೆ ಸೂಕ್ತಂ

ಈ ಪದ್ಯದಲ್ಲಿ 'ಅ-ಸಂ; ಭ ವ' ಎಂಬುದಕ್ಕೆ ಒತ್ತು ನೀಡಲಾಗಿದೆ. ರಾವಣನು ನುಡಿದಿದೆಲ್ಲವೂ ಅಸಂಭವವೇ ಎನ್ನುವುದು ನೇರ ಅರ್ಥವಾದರೆ ಸ ಅಕ್ಷರದ ಬದಲಿಗೆ ಭ ಅಕ್ಷರವನ್ನು ಬಳಸು ಎನ್ನುವುದು ಗೂಢಾರ್ಥವಾಗಿದೆ. ಈ ಬದಲಾವಣೆಯನ್ನು ಅನ್ವಯಿಸಿದಾಗ

ರಾವಣನ ಭಂಗವನು ಕಾಮಿಪರು ರಮಣಿಯರು ಹಿತವೆನ್ನ ಭಂಗವೆಂದುಲಿದಿಹುದು

ದೇವಗಣ । ನರವ್ಯೂಢ ಬಳಿ ಭಾರಿ ಭೀಕರದ ಸೀಕರದ ತಣ್ಪನ್ನು ಅನುಗಾಲ ಪೊಂದುವುದು

ಕೋವಿದನು ನಾನೆಂದು ವೇದವಿದ್ಯೆಗಳಲ್ಲಿ ದಶದಿಕ್ಕಿಗರಿಪುದು ಭೂತಪಡೆಯುಂ

ಎಂದು ಬದಲಾಗುವುದು. ಭೀಕರದ ಸೀಕರ ಎಂದರೆ ಮಂಜುಗಟ್ಟುವ ಶೈತ್ಯ. ರಾವಣನ ಸಂಗ ಮಾಡಿದವರು ನರಗಳು ಸೆಟೆದುಕೊಳ್ಳುವಷ್ಟು ಶೀತಲತೆಯನ್ನು ಭೀತಿಯಿಂದ ಹೊಂದುವಂತಾಗುವರೆಂಬುದು ಒಳ ಅರ್ಥ.

ಕೆಳಕಂಡ ಪದ್ಯದಲ್ಲಿ ಯಾವುದೇ ಅಕ್ಷರ ವ್ಯತ್ಯಯವಿಲ್ಲ. ಆದರೆ ಪದಗಳನ್ನು ಒಡೆಯುವುದರ ಮೂಲಕ ಅರ್ಥವು ಬದಲಾಗುತ್ತದೆ.

ರಾವಣನನರಿಯೆಂದು ಶಿವೆ ಕೂಡ ಸಾರಿಹಳು ಮೂಜಗವುಮರಿತಿರ್ಪುದೆನ್ನ ರಾಗ
ಕಾವರಾರಿಲ್ಲದೆಯೆ ಧೈರ್ಯಗುಂದಿದ ಜನರ ಆವರಿಸಿಕೊಂಬೆನ್ನೈ ನಾನಾಗ
ಪೃಥ್ವಿಯೊಳು ರಣಮಾಗೆ ನೀನೀಗ ಬೇಕೆಂದು ಸಂದೇಶ ಕಳುಹಿಸುವರೆನಗೆ ಸೀತೆ
ದುರ್ವಿಚಾರದ ದೈತ್ಯ! ದೂರಿರಿಸೆ ಮಾರ್ದನಿಪ ನಿನ್ನಕ್ಕರಂಗಳಂ ಕಿವಿಗೆ ಹಿತ

ರಾವಣನ ಮಾತುಗಳು ಅಬ್ಬರದವಾದ್ದರಿಂದ ಕಿವಿಗೆ ಪ್ರತಿಧ್ವನಿಸಿ ತೊಂದರೆ ಕೊಡುತ್ತವೆ ಎಂಬುದು ಸೀತೆಯ ಮಾತುಗಳ ನೇರ ಅರ್ಥ. 'ಮಾರ್ದನಿಪ ಅಕ್ಕರ' ಎಂದರೆ ಮತ್ತೆ ಮತ್ತೆ ಬಂದಿರುವ ಅಕ್ಷರಗಳಾದ ನನ, ನಾನಾ, ನೀನೀ. ಈ ಅಕ್ಷರಗಳ ಮಧ್ಯೆ ತೆರವು (ಗ್ಯಾಪ್) ನೀಡು (ದೂರಿರಿಸು ಮಾರ್ದನಿಪ ಅಕ್ಕರಗಳ) ಎನ್ನುವುದು ಗೂಢಾರ್ಥ. ಹೀಗೆ ಅನ್ವಯಿಸಿದಾಗ ಈ ಪದ್ಯವು

ರಾವಣನ ನರಿಯೆಂದು ಶಿವೆ ಕೂಡ ಸಾರಿಹಳು ಮೂಜಗವು ಮರಿತಿರ್ಪುದೆನ್ನ ರಾಗ
ಕಾವರಾರಿಲ್ಲದೆಯೆ ಧೈರ್ಯಗುಂದಿದ ಜನರ ಆವರಿಸಿಕೊಂಬೆನ್ನೈ ನಾ ನಾಗ
ಪೃಥ್ವಿಯೊಳು ರಣಮಾಗೆ ನೀ ನೀಗಬೇಕೆಂದು ಸಂದೇಶ ಕಳುಹಿಸುವರೆನಗೆ ಸೀತೆ

ಎಂದು ಬದಲಾಗಿ, "ಪಾರ್ವತಿಗೂ ನನ್ನ ನರಿಬುದ್ಧಿ ಗೊತ್ತು; (ಅವಳನ್ನೇ ಕಾಮಿಸಿದ್ದನಲ್ಲ!) ಅನಾಥರನ್ನು ಹಾವಿನಂತೆ ಸುತ್ತಿಕೊಳ್ಳುವೆ (ನಾ ನಾಗ) ಮತ್ತು ನನ್ನ ಸಾವನ್ನು ಕೋರುವ ಜನರು ಸಂದೇಶ ಕಳುಹಿಸುವರು (ನೀ ನೀಗಬೇಕು) ಎಂದು ರಾವಣನು ಹೇಳಿಕೊಂಡಂತಾಗುತ್ತದೆ.

ಕನ್ನಡದಲ್ಲಿ ಇಂತಹ ಶ್ಲೇಷೆಪ್ರಧಾನ ಕೃತಿಗಳು ವಿರಳ. ನಾನು ಇಂತಹ ಐವತ್ತು ಪದ್ಯಗಳನ್ನಾದರೂ ಬರೆಯಬೇಕೆಂದಿದ್ದೇನೆ. ಈವರೆಗೆ ಹದಿನಾರು ಆಗಿವೆ. ಎಷ್ಟಾಗುತ್ತದೋ ತಿಳಿಯದು. ಪೂರೈಸಲು ಸಾಧ್ಯವಾದರೆ ಸರಿ; ಇಲ್ಲದಿದ್ದರೆ ಈ ರಾಮನ ಅಭೀಪ್ಸೆಯನ್ನೂ ಪೂರೈಸಲು ಇನ್ನಾವ ರಾಮನಾದರೂ ಬಂದಾನೆಂಬ ವಿಶ್ವಾಸದೊಂದಿಗೆ ಈ ಪ್ರಯತ್ನವನ್ನು ನಿಮ್ಮ ಮುಂದಿರಿಸಿದ್ದೇನೆ. ಪ್ರತಿಕ್ರಿಯೆ ನೀಡುವಿರಲ್ಲವೆ?

ಗಾದೆಗಳನ್ನು ಊಹಿಸಿ. ಉತ್ತರಗಳು : ಕೊನೆಯ ಪುಟ



# ಪದಕುಲುಮೆ

ಎಸ್.ಎನ್. ಗಣನಾಥ, ಬೆಂಗಳೂರು

**ಅನೆಕ್ಸರಸ್ತ :** Annexure ಗಳನ್ನು ಚೆನ್ನಾಗಿ ಓದಿಕೊಂಡಿರುವ ಆಸಾಮಿ

**e–ಗರ್ಭ ಶ್ರೀಮಂತ :** ಸಾಫ್ಟ್‌ವೇರ್ ಉದ್ಯಮದ ಕುಬೇರ

**ಕೌರವ ಡಾಕ್ಟರೇಟ್ :** ದುರ್ಯೋಧನನ 'ಸಾಧನೆ'ಗೆ ದೊರಕಿದ ಪದವಿ

**ಡಿಜಿಟಲ್ ಗುಟ್ಟು :** ಯಾರಿಗೂ ಹೇಳಬೇಡಿ; ಈ ವಿಷಯ SIM ಅಲ್ಲೇ ಇರಲಿ

**ಛತ್ರಪತಿ :** choultry owner

**ಜಾಲಸಮಾಧಿ :** ಇಂಟರ್ನೆಟ್ ವ್ಯಸನನಲ್ಲಿ ಮುಳುಗಿ ಅಲ್ಲಿಯೇ ಅಂತ್ಯ ಕಾಣುವವರು

**ದುಷ್ಟ ಶಿಕ್ಷಕ :** ಮಾಫಿಯಾ ಗ್ಯಾಂಗಿನವರಿಗೆ ತರಬೇತಿ ಕೊಡುವವನು

**ಧಾವಂತರ :** ಧಾವಂತ ಮತ್ತು ಅವಾಂತರ ಎರಡು ಒಟ್ಟಿಗೆ ಸೇರಿದಾಗ ಉದಾಹರಣೆ ಸೋಮವಾರ ಬೆಳಗ್ಗೆ

**ನಾ ನಿನ್ನ Bidಲಾರೆ:** ಹರಾಜಿನಲ್ಲಿ ಸೋತ ಐಪಿಎಲ್ ತಂಡದ ಮಾಲಿಕ ವಿರಾಟ್ ಕೊಹ್ಲಿಗೆ ಹೇಳಿದ್ದು

**ನೌಕರಿ :** ನೌಕರ ಪದದ ಸ್ತ್ರೀ ಲಿಂಗ

**ಬಂದೋಪಾಧ್ಯಾಯ :** ಯಾವಾಗಲೂ ಮುಷ್ಕರ ನಿರತ ಶಿಕ್ಷಕ

**ಬ್ಯಾಟ್ ರೇಸ್ :** ಕ್ರಿಕೆಟ್ ದಾಂಡಿಗರ ಪೈಪೋಟಿ

**ಭ್ರಷ್ಟ ಹೇಳಿದ್ದು :** ಹೇಸಿಗೆ ಇದ್ದಷ್ಟು ಕಾಲು ಚಾಚು.

**ಮೇಲ್ಸಂಪಾದನೆ :** ಗಂಡಸಿನ ಆದಾಯ




**ಯೋಗಾಯೋಗ :** Yoga Commission

**ಲಾಂಗ್ ಡ್ರೈವ್ :** ಮಚ್ಚು ಹಿಡಿದ ರೌಡಿಗಳ ಟೈಮ್ ಪಾಸ್

**ಲಾಂಗ್ ಲೀವ್ :** ರೌಡಿಗಳು ತುಂಬಾ ದಿನ ಹೊಡೆದಾಟದಿಂದ ದೂರವಿರುವುದು

**ಲೈಟ್ ಬಾಯ್ :** 40 ಕೆಜಿ ಗೂ ಕಡಿಮೆ ತೂಕ ಇರುವ ಗಾಳಿಗೆ ಹಾರಿ ಹೋಗುವ ಹುಡುಗ

**ವೇಲಾಯುಧನ್ :** Veil ಅನ್ನೇ ರಕ್ಷಣೆಗಾಗಿ ಆಯುಧದಂತೆ ಬಳಸುವವ

**ಸಾಲ ಸೋಲ :** ಹದಿನಾರು ಲಕ್ಷ ಲೋನ್

**ಸಿಂಶೋಧಕ :** ಕೊಳ್ಳುವ ಮೊದಲು ಎಲ್ಲ ಕಂಪನಿಗಳ SIM ಬಗ್ಗೆ ಹುಡುಕಾಟ ನಡೆಸುವವ

**ಸೇರ್ ಹೋಲ್ಡರ್ :** ಹಿಂದಿನ ಕಾಲದ ದಿನಸಿ ಅಂಗಡಿ ವ್ಯಾಪಾರಿ

**ಹಸುರಾಂತಕ :** ಕಾಡನ್ನು ಕಡಿದು ನಾಶ ಮಾಡುವವನು

**ಹಿಂಸಧ್ವನಿ ರಾಗ :** ಸಂಗೀತಗಾರ "ವಾತಾಪಿ ಗಣಪತಿಂ.." ಕೀರ್ತನೆಯನ್ನು ಕೆಟ್ಟದಾಗಿ ಹಾಡಿದಾಗ

**ಹೆಮ್ಮಾರಿ :** ಮಾರಿ ಬಿಸ್ಕತ್ತಿನ ಫ್ಯಾಮಿಲಿ ಪ್ಯಾಕು

# ಕಪ್ಪು ಮೋರೆಯ ರವಿಯೊಡನೆ ಮುಖಾಮುಖಿ

ಬಿ.ಎಸ್ ಶೈಲಜಾ

ಪ್ರತಿವರ್ಷ ನನಗೊಂದು ವಿಚಿತ್ರ ಅನುಭವವಾಗುತ್ತದೆ. ಎಲ್ಲೋ ಎಂದೋ ಭೇಟಿಮಾಡಿದ್ದ ಬಂಧು ಮಿತ್ರರು, ಅವರಿವರನ್ನು ಕೇಳಿ ನನ್ನನ್ನು ಸಂಪರ್ಕಿಸಿ, ಬಹಳ ಆತಂಕದಿಂದ ಕೇಳುತ್ತಿದ್ದ ಪ್ರಶ್ನೆಗಳು – "ನಾಳೆ ಗ್ರಹಣ ಇದೆಯಾ?– ನಮಗೆ ಕಾಣಲ್ಲವಾ?– ಸಿಂಗಪುರಕ್ಕೆ/ಅಮೆರಿಕಕ್ಕೆ ಕಾಣುತ್ತಾ? ಯಾಕೆಂದರೆ ನನ್ನ ಸೊಸೆ... ನಾಲ್ಕು ತಿಂಗಳು– ಏನಾದರೂ ಆಚರಣೆ ಮಾಡಬೇಕೇ ಅಂತ". ಕಳೆದ ಸುಮಾರು 30 ವರ್ಷಗಳಲ್ಲಿ ಒಂದು ವರ್ಷವೂ ತಪ್ಪಿಲ್ಲ. ಆದರೆ ಈ ವರ್ಷ ದಾಖಲೆ. ಒಂದು ಫೋನ್ ಇಲ್ಲ. ಏಕೆ ಗೊತ್ತಾ? ನಮ್ಮ ಜನಕ್ಕೆ ಧೈರ್ಯ ಬಂದಿದೆ. ಅಥವಾ ಇದನ್ನು ಉತ್ತರಿಸಲು ಬೇಕಾದಷ್ಟು ಜನ ತಯಾರಾಗಿದ್ದಾರೆ ಎಂದು ಊಹಿಸಬೇಡಿ. ನಾನೇ ಯಾರಿಗೂ ಹೇಳದೆ ಓಡಿಹೋಗಿದ್ದೆ ಫೋನ್ ನಿಲುಕದ ಜಾಗಕ್ಕೆ.

ಮೈಸೂರು ನಗರದಲ್ಲಿ ಪ್ರೊಫೆಸರ್ ಎಸ್.ಎನ್. ಪ್ರಸಾದ್ ಎಂಬ ಗ್ರಹಣ ಮಿತ್ರರೊಬ್ಬರಿದ್ದಾರೆ. ಚಂದ್ರನ ನೆರಳು ಹುಡುಕಿಕೊಂಡು ಪ್ರಪಂಚದ ಮೂಲೆ ಮೂಲೆಗಳನ್ನು ಸಂದರ್ಶಿಸಿದ್ದಾರೆ. ಕೇಳರಿಯದ ಕುಗ್ರಾಮಗಳಲ್ಲಿ ತಂಗಿ ಗ್ರಹಣದ ಫೋಟೋ ಹಿಡಿದಿದ್ದಾರೆ. ಅವರು ಎರಡು ವರ್ಷಗಳ ಕೆಳಗೆ ಒಂದು ವಾಟ್ಸಪ್ ಗುಂಪು ಸೃಷ್ಟಿಸಿ "ಗ್ರಹಣ ನೋಡಲು ಸಿದ್ಧ ಮಾಡಿಕೊಳ್ಳಿ" ಎಂದು ಹುರಿದುಂಬಿಸಿದರು. ಜೊತೆಗೆ ಯಾವ ಯಾವ ಸ್ಥಳ ಸೂಕ್ತ, ಸುತ್ತಮುತ್ತ ಇರುವ ಸ್ಥಳಗಳ ಪರಿಚಯವನ್ನೂ ಮಾಡಿಕೊಟ್ಟರು. ಈ ಬಾರಿ ಐಸ್ಲೆಂಡ್ ಮತ್ತು ಸ್ಪೇಯ್ನ್ ಮಾತ್ರ ನೆರಳು ಬೀಳುವ ಭೂಭಾಗ. ಪ್ರಯಾಣ ಮಾಡಲು ಈಗಲೇ ಸಿದ್ಧಮಾಡಿಕೊಳ್ಳಿ ಎಂದೂ ಎಚ್ಚರಿಸಿದ್ದರು. ಅಷ್ಟು ಹೊತ್ತಿಗಾಗಲೇ ಐಸ್ಲೆಂಡಿನಲ್ಲಿ ಹೋಟೆಲ್‌ಗಳು ಬುಕ್ ಆಗಿಬಿಟ್ಟಿದ್ದವು. ಬೆಲೆಯೂ ದುಬಾರಿ ಆಗಿತ್ತು. ಅಲ್ಲಿನ ಹವಾಮಾನ ಶುಭ್ರವಾಗಿರುವುದರ ಬಗ್ಗೆಯೂ ಅನುಮಾನವಿತ್ತು. ಐಸ್ಲೆಂಡಿನಲ್ಲಿ ಮಧ್ಯಾಹ್ನದ ಗ್ರಹಣ. ಸ್ಪೇನ್ ನಲ್ಲಿ ಸಂಜೆ. –ಎಂಟೂ ಇಪ್ಪತ್ತಕ್ಕೆ.– ಇದೆಂಥ ಸಂಜೆ ಅಂತ ಮೂಗೆಳೆಯ ಬೇಡಿ. ಅಲ್ಲಿ ಸೂರ್ಯಾಸ್ತ ಒಂಭತ್ತೂವರೆಗೆ. ಆದ್ದರಿಂದ ಇದು ಸಂಜೆಯೇ.

ನಾವು ಸ್ಪೇನ್ ಆರಿಸಿದ್ದೆವು. ಜುಲೈ ತಿಂಗಳಲ್ಲಿ ಅಲ್ಲಿ ಕಾಳ್ಗಿಚ್ಚು ತುಂಬಾ ಹೆಚ್ಚಾಗಿರುವುದು ಸುದ್ದಿಯಲ್ಲಿತ್ತು. ನಾವು ಬೆಟ್ಟದ ಮೇಲೆ ಒಂದು ಹಳ್ಳಿಯಲ್ಲಿ ತಂಗಿದ್ದೆವು. ಸುಂದರ, ಶಾಂತವಾದ ತಾಣ. ಆದರೆ ಸೂರ್ಯ ಮಾತ್ರ ಆರೂವರೆಗೇ ಬೆಟ್ಟಗಳ ಹಿಂದೆ ಅಡಗುತ್ತಿದ್ದ. ಅಲ್ಲದೆ ಹವಾಮಾನದ ವರದಿಯೂ ಮೋಡ ಕವಿಯುವ ಸೂಚನೆ ನೀಡಿತ್ತು.

ನಾವು ಬೆಟ್ಟದ ಮೇಲಿಂದ ಇಳಿದು ಲಿಯೋನ್ ಎಂಬ ಪಟ್ಟಣಕ್ಕೆ ಹೋದೆವು. 39 ಡಿಗ್ರಿಯ ಸುಡು ಬಿಸಿಲು. ಸಂಜೆ ಏಳೂವರೆಗೆ ದೊಡ್ಡ ಸ್ಟೇಡಿಯಂ ಗೆ ಹೋದೆವು. ಬೆಳಗಿನಿಂದಲೇ ಅಲ್ಲಿ ಸಾಕಷ್ಟು ಚಟುವಟಿಕೆಗಳು ನಡೆಯುತ್ತಿದ್ದವು. ಅಲ್ಲಿ ದೊಡ್ಡ ತೆರೆಯೊಂದರ ವ್ಯವಸ್ಥೆ ಮಾಡಿದ್ದರು. ದ್ವಾರಪಾಲಕರಿಬ್ಬರು ಕೈಯ್ಯಲ್ಲಿ ಒಂದು ಪುಟ್ಟ ಗುಂಡಿ ಹಿಡಿದು ಜಪಮಾಲೆ ಎಣಿಸಿದಂತೆ ಪ್ರವೇಶಿಸಿದವರ ಎಣಿಕೆ ಮಾಡುತ್ತಿದ್ದರು. ಸುಮಾರು ನಲವತ್ತು ಸಾವಿರ ಜನ ಬಂದಿದ್ದರು ಅಂತ ಮರುದಿನದ ಪತ್ರಿಕೆ ತಿಳಿಸಿತ್ತು. ಯೂರೋಪಿಯನ್ ಸದರ್ನ್ ಅಬ್ಸರ್ವೇಟರಿಯ ಗುಡಾರಗಳನ್ನು ಅಲ್ಲಿ ಕಾಣಬಹುದಾಗಿತ್ತು. ಸ್ವಯಂ ಸೇವಕರು ಎಲ್ಲರಿಗೂ ಗ್ರಹಣದ ಕನ್ನಡಕಗಳನ್ನು ಹಂಚುತ್ತಿದ್ದರು. ಜನರೆಲ್ಲಾ ಕಪ್ಪು

ಕನ್ನಡಕಗಳನ್ನು ಧರಿಸಿ, (ಮತ್ತು ಸಾಧ್ಯವಾದಷ್ಟು ತಿನಿಸು, ತೀರ್ಥಗಳನ್ನು ಹೊತ್ತು) ಬಂದಿದ್ದರು. ಕುಟುಂಬಗಳೇ ಹೆಚ್ಚು. ನಾಯಿಗಳೂ ಬಂದಿದ್ದವು.

ಎಲ್ಲರಿಗೂ ಕುರ್ಚಿ ಇತ್ತಾದರೂ, ಕೆಲವರು ತಮ್ಮ ಚಾಪೆ ಹಾಸಿಕೊಂಡು ಆರಾಮವಾಗಿ ಅಲ್ಲಿ ನೆಲೆಸಿದ್ದರು. ಮಕ್ಕಳು ಪ್ರಾಮಿನಿಂದ ಇಳಿದು ಅಲ್ಲೇ ಅಡ್ಡಾಡತೊಡಗಿದ್ದವು. ಅವರಿಗೆ ಅದು ಪಿಕ್ನಿಕ್. ದೊಡ್ಡವರು ಒಂದೊಂದಾಗಿ ತಮ್ಮಖಾದ್ಯ ದಾಸ್ತಾನುಗಳನ್ನು ಹೊರಕ್ಕೆ ತೆಗೆದರು. ಅಲ್ಲಿ ಕಾಫಿ ಚಹಾ ವ್ಯವಸ್ಥೆ ಇರಲಿಲ್ಲ. ಕೆಲವರು ತಮ್ಮ ಫ್ಲಾಸ್ಕ್ ಗಳಲ್ಲಿ ಪಾನೀಯಗಳನ್ನು ತುಂಬಿಸಿ ತಂದಿದ್ದರು. ಇಂತಹ ಜನಸಮೂಹದಲ್ಲಿ ದಿಢೀರನೆ ನಮ್ಮಲ್ಲಿ ಪ್ರತ್ಯಕ್ಷವಾಗುವ ಕಡ್ಲೇಕಾಯಿ ಮಾರಾಟಗಾರರು ಇಲ್ಲಿ ಇರಲೇ ಇಲ್ಲ.

ದೊಡ್ಡ ಪರದೆಯೊಂದರ ಮೇಲೆ, ಸೂರ್ಯನ ಕುರಿತು ಅನೇಕ ವಿಷಯಗಳು, ಜೊತೆಗೆ ಗ್ರಹಣದ ಕುರಿತ ಮಾಹಿತಿ ಎಲ್ಲವೂ ಸ್ಪಾನಿಷ್ ಭಾಷೆಯಲ್ಲಿ ಪ್ರಸಾರವಾಗುತ್ತಿತ್ತು. ನೆರಳಿನಲ್ಲಿ ಕುಳಿತಿದ್ದ ಎಲ್ಲರೂ ಕನ್ನಡಕಧಾರಿಗಳಾಗಿ ಎದ್ದು ಬಂದು ಸೂರ್ಯನನ್ನು ನೋಡಿ, ತೆರೆಯ ಮೇಲೆ ಕಾಣುತ್ತಿದುದು ನಿಜ ಎಂದು ಖಾತರಿ ಮಾಡಿಕೊಳ್ಳುತ್ತಿದ್ದಂತೆ ಕಂಡಿತು.

ಏಳೂವರೆಗಂಟೆಗೆ ಗ್ರಹಣ ಆರಂಭವಾಯಿತು. ಪ್ರವಾಹದಂತೆ ಜನ ಬರತೊಡಗಿದರು. ನಾವು ಕಾರ್ ಪಾರ್ಕಿಂಗ್ ಜಾಗದಲ್ಲಿ ನಮ್ಮ ಕ್ಯಾಮೆರಾ ಸ್ಟಾಂಡ್‌ಗಳನ್ನು ಸಿದ್ಧಮಾಡಿಕೊಂಡಿದ್ದೆವು. ಯೋಗ ಮ್ಯಾಟ್‌ಗಳನ್ನು ಹಾಸಿಕೊಂಡು ಆಗಲೇ ಕೆಲವರು ಕರಂ ಕುರಂ ಎಂದು ಕುರುಕಲು ಪ್ರಾರಂಭಿಸಿದ್ದರು. ಸ್ಟೇಡಿಯಂ ತುಂಬಿ ತುಳುಕಿತು. ಸೂರ್ಯ ಕಿರಿದಾಗ ತೊಡಗಿದ ಹಾಗೆ ಭಾಷಣದ ಓಟ ನಿಧಾನವಾಯಿತು.

ಎಂಟೂ ಇಪ್ಪತ್ತು. ಎಲ್ಲೆಲ್ಲೂ ನೀರವತೆ. ತೆರೆಯನ್ನು ನೋಡುವುದನ್ನು ಬಿಟ್ಟು ಎಲ್ಲರೂ ಸೂರ್ಯನತ್ತ ತಿರುಗಿದರು.

ತೆಳ್ಳನೆಯ ಕಮಾನು ಗೆರೆ, ತಕ್ಷಣವೇ ವಜ್ರದ ಉಂಗುರವಾಯಿತು. ಓ ಓ ಓ ಓಹ್ ಎಲ್ಲರ ಉದ್ಗಾರ. ಕೆಲವರು ಚಪ್ಪಾಳೆ ಹೊಡೆದರು ಕೂಡ. ಎರಡೇ ಸೆಕೆಂಡ್ ಉಂಗುರ ಮಾಯವಾಗಿ ಕರಿಯ ಸೂರ್ಯ ಕಂಗೊಳಿಸಿದ. ಎಲ್ಲರ ಮುಖದಲ್ಲಿಯೂ ಆಶ್ಚರ್ಯ. ಸಂತೋಷ.

ಕೆಲವರಂತೂ ಕುಣಿಯುತ್ತಿದ್ದರು.




ಒಂದು ನಿಮಿಷ ನಲವತ್ತೈದು ಸೆಕೆಂಡುಗಳು ಹೇಗೆ ಕಳೆಯಿತೋ ತಿಳಿಯದು. ಒಂದು ಸೆಕೆಂಡೂ ಕೂಡ ತಪ್ಪದಂತೆ ಸೂರ್ಯನನ್ನು ದಿಟ್ಟಿಸಿದೆವು. ಅದರ ಪ್ರಭಾವಳಿ ಅಂಚುಗಳಲ್ಲಿ ಕೆಂಪು ವಿನ್ಯಾಸ ಬೆಂಕಿಯ ಜ್ವಾಲೆಯಂತೆ ಹೊರ ಚಿಮ್ಮುತ್ತಿದ್ದ ಪ್ರವಾಹ. ಕ್ಯಾಮೆರಾ ತನ್ನ ಪಾಡಿಗೆ ತಾನು ವಿಡಿಯೋ ತೆಗೆಯಿತು. ನಮ್ಮ ಕೈಲಿದ್ದ ಇನ್ನೊಂದು ಕ್ಯಾಮೆರಾ ಎಲ್ಲರ ಕೈಗಳಿಗೆ ಓಡಾಡಿತು. ನಾನು ತಾನು ಎಂದು ಎಲ್ಲರೂ ಕ್ಲಿಕ್ಕಿಸಿದ್ದೇ. ಏನೇ

ಆದರೂ ಬರಿಯ ಕಣ್ಣಿಗೆ ಕಂಡ ವೈವಿಧ್ಯಮಯ ದೃಶ್ಯವನ್ನು ಕ್ಯಾಮೆರಾ ಸೆರೆ ಹಿಡಿಯಲಿಲ್ಲ. ಕಪ್ಪು ಸೂರ್ಯನ ಒಂದು ಅಂಚಿನಲ್ಲಿ ಕೆಂಪು ಜ್ವಾಲೆ ಬರಿಯ ಕಣ್ಣಿಗೆ ಸ್ಫುಟವಾಗಿ ಕಂಡಿತು. ಇನ್ನೊಂದು ಅಂಚಿನಲ್ಲಿ ಕೆಂಪು ಚುಕ್ಕೆಗಳಂತೆ ಕಂಡವು. ಅವು ಕೆಂಪೂ ಅಲ್ಲ, ಗುಲಾಬಿಯಷ್ಟು ತಿಳಿಯೂ ಅಲ್ಲ.

ಅದೋ ಇನ್ನೊಂದು ಉಂಗುರ. ಈ ಬಾರಿ ವಜ್ರ ಇನ್ನೊಂದು ಭಾಗದಲ್ಲಿ. ಈಗ ಉದ್ಗಾರ ಇಡೀ ಸ್ಟೇಡಿಯಮ್ಮನ್ನು ಆವರಿಸಿತು. ಯಾವ ಗೋಲ್ ಹೊಡೆದರೂ, ಯಾವ ಸಂಚುರಿ ಬಾರಿಸಿದರೂ ಇಂತಹ ಉದ್ಗಾರ ಸಿಗಲಾರದು. ಏಕೆಂದರೆ ಇಲ್ಲಿ ಇದ್ದವರೆಲ್ಲರೂ ಒಂದೇ ಪಕ್ಷದವರು – ಸೂರ್ಯನ ಪಕ್ಷ !

ಎರಡೇ ಸೆಕೆಂಡ್. ಪುನಃ ಪ್ರಜ್ವಲಿಸುವ ಸೂರ್ಯ. ಕನ್ನಡಕ ಧರಿಸುವಂತೆ ಘೋಷಣೆ ತಿಳಿಸಿತು. ಹಿಂದಿನ ಪೂರ್ಣ ಗ್ರಹಣಗಳಲ್ಲಿ ಹಕ್ಕಿಗಳು ಹಿಂಡು ಹಿಂಡಾಗಿ ಹಾರಿಬಂದು ಗೂಡು ಸೇರಿದ್ದವು. ಇಲ್ಲಿ ಒಂದೆರಡು ಹಕ್ಕಿಗಳು ಮಾತ್ರ ಕಂಡವು. ಒಮ್ಮೆಯಂತೂ ಕಾಡಿನ ನರಿಗಳು ಊಳಿಟ್ಟಿದ್ದವು. ಇಲ್ಲಿದ್ದ ನಾಯಿಗಳಿಗೆ ಬೊಗಳುವುದಕ್ಕೂ ಸ್ವಾತಂತ್ರ್ಯವಿಲ್ಲದಂತೆ ಕಂಡಿತು. ಅವು ವಿಧೇಯತೆಯಿಂದ ಗಂಭೀರವಾಗಿ ಕುಳಿತಿದ್ದವು. ಬಹುಶಃ ಅವು ಬೊಗಳಬೇಕು ಎಂಬ ಸಹಜಗುಣವನ್ನೇ ಮರೆತಿದ್ದವೇನೋ. ಚಿಕ್ಕ ಮಕ್ಕಳು ತಮ್ಮ ಆಟಗಳಲ್ಲಿ ಮಗ್ನರಾಗಿದ್ದವರು, ಕಪ್ಪು ಸೂರ್ಯನನ್ನು ನೋಡುತ್ತಾ, ನಿಂತು, ತಮ್ಮ ಕೈಲಿದ್ದ ಐಸ್‌ಕ್ರೀಮನ್ನೂ ಮರೆತಿದ್ದರು.

ಎಂಟೂ ಮುಕ್ಕಾಲರ ಹೊತ್ತಿಗೆ ಜನಸಂದಣಿ ಕರಗಿಹೋಯಿತು. ಗ್ರಹಣ ಇನ್ನೂ ಮುಗಿದಿರಲಿಲ್ಲ. ಈ ಜನಪ್ರವಾಹ ರಸ್ತೆಯನ್ನೆಲ್ಲಾ ಆಕ್ರಮಿಸುವುದನ್ನು ಊಹಿಸಿ ಅಲ್ಲಿನ ಟ್ರಾಫಿಕ್ ಪೋಲೀಸ್ ಸಿಬ್ಬಂದಿ ಕಾರುಗಳನ್ನು ಬೇರೆ ರಸ್ತೆಗೆ ತಿರುಗಿಸಿದ್ದರು. ಅಲ್ಲಿದ್ದ ರೆಸ್ಟುರಾಂಟ್ ಗಳು ತುಂಬಿದ್ದವು. ಅಲ್ಲಿನ ಎಲ್ಲಾ ಟಿ.ವಿ. ತೆರೆಗಳ ಮೇಲೂ ಗ್ರಹಣದ್ದೇ ನೋಟ. ಇಂಗ್ಲೆಂಡ್ ಬೆಲ್ಜಿಯಂ ಮುಂತಾದ ದೂರ ದೇಶಗಳಿಂದ ಕಾರುಗಳಲ್ಲಿ ಬಂದಿದ್ದ ಕೆಲವರಿಗೆ ತುಂಬಾ ಸಂತೋಷವಾಗಿತ್ತು. ಗ್ರಹಣ ಒಂಭತ್ತೂವರೆಗೆ ಮುಗಿದಾಗ ತಾಪ ಸ್ವಲ್ಪ ತಗ್ಗಿತ್ತು. ಮಧ್ಯಾಹ್ನದ 39 ಡಿಗ್ರಿ, 31ಕ್ಕೆ ಇಳಿದಿತ್ತು. ಉಚಿತವಾಗಿ ಹಂಚಿದ್ದ ಕನ್ನಡಕಗಳನ್ನು ಭದ್ರವಾಗಿ ಜೋಪಾನ ಮಾಡಿಕೊಂಡವರೇ ಹೆಚ್ಚು. ಆಗಲೇ ಮುಂದಿನ ಗ್ರಹಣದ ಬಗ್ಗೆ ಚರ್ಚೆಆರಂಭವಾಗಿತ್ತು. ಗ್ರಹಣ ಮುಗಿದೇ ಹೋಯ್ತಾ? ಇಲ್ಲ ಪುನಃ ಬಂದೇ ಬರುತ್ತೆ. ಮುಂದಿನ ವರ್ಷವೂ ಸ್ಪೇನ್‌ಗೇ ಅವಕಾಶ.




ಗ್ರಹಣವನ್ನೇ ಕಾರಣವಾಗಿಟ್ಟುಕೊಂಡು ಪ್ರವಾಸಮಾಡುವವರ ಗುಂಪಿನಲ್ಲಿ ಹಿಂದೊಂದು ಜೋಡಿ ಭೇಟಿಯಾಗಿತ್ತು. ಈಗಲೂ ಕಾಣಸಿಗಬಹುದು ಎಂದು ಕೊಂಡಿದ್ದೆ. ಅದೊಂದು ವಿಶಿಷ್ಟ ಜೋಡಿ. ಮೊದಲ ಪೂರ್ಣಗ್ರಹಣದಲ್ಲಿ ಭೇಟಿ. ಎರಡನೆಯದರಲ್ಲಿ ಪ್ರೇಮಭಿಕ್ಷೆ. ಮೂರನೆಯ ಗ್ರಹಣದಲ್ಲಿ ಮದುವೆ.

ದಂನಆ

- ✓ ಅನೇಕ ಐಡಿಯಾಗಳನ್ನು ಹೊಂದಿದ್ದಾಗ ಮಾತ್ರ ಅತ್ಯುತ್ತಮ ಐಡಿಯಾ ಆಯ್ಕೆ ಮಾಡಿಕೊಳ್ಳಲು ಸಾಧ್ಯ.
- ✓ ಲಿಸನ್ ಟು ಯುವರ್ ಬಾಡಿ, ನಾಟ್ ಎವೆರಿಬಡಿ.
- ✓ ಬಿಲದಲ್ಲಿ ಸಿಕ್ಕಿಕೊಂಡಿದ್ದಾಗ ಮಾಡಬೇಕಾದ ಮೊದಲ ಕೆಲಸ ಎಂದರೆ ಅಗೆಯುವುದನ್ನು ನಿಲ್ಲಿಸುವುದು.
- ✓ ಯು ಕೆನಾಟ್ ಕಂಟ್ರೋಲ್ ವೆದರ್ ಬಟ್ ಯು ಕೆನ್ ಡ್ರೆಸ್ ಫಾರ್ ಇಟ್.
- ✓ ಯಾರಿಗೆ ಯಾರೂ ಇಲ್ಲ. ಅವರು ಇದ್ದಾರೆ ಇವರು ಇದ್ದಾರೆ ಎನ್ನುವುದು ಬರಿ ಮಾತಿಗಷ್ಟೆ. ಎಣ್ಣೆ ಇದ್ದರಷ್ಟೆ ದೀಪ. ಹಾಗೆಯೇ ನಾವು ಚೆನ್ನಾಗಿದ್ದರೇನೆ ನಮ್ಮವರು ಚೆನ್ನಾಗಿರುತ್ತಾರೆ. ನಾವು ಚೆನ್ನಾಗಿಲ್ಲ ಎಂದರೆ ನಮ್ಮವರೇ ನಮಗೆ ಶತ್ರುಗಳು.
- ✓ ಮಿಸ್ಟೇಕ್ಸ್ ಆರ್ ಪ್ರೂಫ್ ದಟ್ ಯುವರ್ ಟ್ರೈಯಿಂಗ್.
- ✓ ಪಕ್ಷಿಪ್ರಾಣಿಗಳು ಅಸುಖಿಗಳಲ್ಲ. ಯಾಕೆ ಗೊತ್ತೆ? ಯಾಕೆಂದರೆ ಅವು ಇತರ ಪಕ್ಷಿಪ್ರಾಣಿಗಳ ಮುಂದೆ ಪ್ರಭಾವ ಬೀರಲು ಪ್ರಯತ್ನಿಸುವುದಿಲ್ಲ.
- ✓ ಅನ್ ಇಂಟಲೆಕ್ಷುಯಲ್ ನೀಡ್ ನಾಟ್ ಬಿ ಇಂಟೆಲಿಜೆಂಟ್.
- ✓ ಘಾಸಿಗೊಂಡವರು ಬಲಶಾಲಿಗಳು ಏಕೆಂದರೆ ಬಚಾವಾಗುವುದು ಹೇಗೆಂದು ಅವರು ಕಲಿತಿರುತ್ತಾರೆ.
- ✓ ಕರೇಜ್ ಈಸ್ ನೋಯಿಂಗ್ ವಾಟ್ ನಾಟ್ ಟು ಫಿಯರ್.
- ✓ ನಾವು ಉಳಿಯುವುದಿಲ್ಲ ಆದರೆ ನಾವು ಏನು ಬಿಟ್ಟು ಹೋದೆವು ಎಂಬುದು ಉಳಿಯುತ್ತದೆ.
- ✓ ವೆನ್ ಯು ನೊ ಹೌ ಮಚ್ ಯು ಆರ್ ವರ್ತ್ ಯು ವಿಲ್ ಸ್ಟಾಪ್ ಗಿವಿಂಗ್ ಡಿಸ್‌ಕೌಂಟ್ಸ್.
- ✓ ಏನು ಹೇಳಬೇಕೋ ಅದನ್ನು ಹೇಳಲು ಅನೇಕರು ಹಿಂಜರಿಯುತ್ತಾರೆ. ಆದುದರಿಂದಲೇ ಅವರಿಗೆ ಏನು ಬೇಕೋ ಅದು ದಕ್ಕುವುದಿಲ್ಲ.
- ✓ ಇತರರು ಯಶಸ್ಸು ಗಳಿಸುವದನ್ನೇ ನೋಡುತ್ತಾ ಕುಳಿತರೆ ನೀವು ಯಶಸ್ಸು ಗಳಿಸಲು ಸಾಧ್ಯವೇ ಇಲ್ಲ.
- ✓ ಬಿ ಗುಡ್ ಎನಫ್ ಟು ಫರ್‌ಗಿವ್ ಪೀಪಲ್ ಬಟ್ ಡೋಂಟ್ ಬಿ ಸ್ಟುಪಿಡ್ ಎನಫ್ ಟು ಟ್ರಸ್ಟ್ ದೆಮ್ ಎಗೈನ್.
- ✓ ಪವಿತ್ರ ಕ್ಷೇತ್ರಗಳು ಕುತೂಹಲಕರ ಜಾಗಗಳು. ಆಲ್ಲಿ ಬಡವರು ಹೊರಗೆ ಬೇಡುತ್ತಾರೆ, ಧನಿಕರು ಒಳಗೆ ಬೇಡುತ್ತಾರೆ.
- ✓ ವಿಶ್ವವೊಂದು ನಾಟಕ ರಂಗ. ಆದರೆ ನಮ್ಮಲ್ಲಿ ಬಹುಮಂದಿಗೆ ಸಾಕಷ್ಟು ರಿಹರ್ಸಲ್ಲೇ ಆಗಿರುವುದಿಲ್ಲ.
- ✓ ವಾಲ್ಯೂ ದೋಸ್ ಹು ಆಡ್ ವಾಲ್ಯು ಟು ಯುವರ್ ಲೈಫ್.

# ಆ ಕಾಲವೊಂದಿತ್ತು.....

ಶಿವಕುಮಾರ್

{" ನೆನಹು ಬಾಳಿನ ಬುತ್ತಿ, ಅನುಭವಗಳ ಅಕ್ಷಯ ನಿಧಿ." ಎಂದು ಹೇಳಿದ್ದರು ಕುವೆಂಪು. ಮುಕ್ಕಾಲು ಶತಮಾನದ ಹಿಂದಿನ ನಮ್ಮ ತಲೆಮಾರಿನವರ ಬಾಲ್ಯದ ಅನುಭವಗಳನ್ನು ಇಂದಿನ ಮಕ್ಕಳ ಸದಾ ಮೊಬೈಲ್‌ಗೆ ಅಂಟಿರುವ ಸ್ಕ್ರೀನ್ ಟೈಮ್ ಜೀವನಶೈಲಿಗೆ ಹೋಲಿಸಿದರೆ ನಾವೆಷ್ಟು ಅದೃಷ್ಟಶಾಲಿಗಳಾಗಿದ್ದೆವು ಎನ್ನಿಸದಿರದು. ಈ ಲೇಖನ ಸರಣಿಯಲ್ಲಿ ಅಂದಿನ ಹಲವು ಅನುಭವಗಳನ್ನು ದಾಖಲಿಸಿದೆ.}

ನನ್ನ ಚಿಕ್ಕಂದಿನಲ್ಲಿ ನಮ್ಮದು ಒಂದು ದೊಡ್ಡ ಕುಟುಂಬ. ನಮ್ಮಪ್ಪ ಅಮ್ಮ, ನಾವು ಆರು ಮಕ್ಕಳು (ಮೂವರು ಅಕ್ಕಂದಿರು, ಮೂವರು ತಮ್ಮಂದಿರು) ಇವರುಗಳ ಜೊತೆಗೆ ನಮ್ಮ ಇಬ್ಬರು ಚಿಕ್ಕಪ್ಪಂದಿರಾದ, ಚಂದು ಮತ್ತು ಕಿಟ್ಟು, ಮತ್ತು ನಮ್ಮ ಚಿಕ್ಕಮ್ಮ ಗೌರ, ಇವರೆಲ್ಲಾ ನಮ್ಮೊಂದಿಗಿದ್ದರು. ಇಷ್ಟೇ ಅಲ್ಲದೆ, ಮನೆಯ ಔಟ್‌ಹೌಸಿನಲ್ಲಿ  ಆಳು ಮುನಿಸ್ವಾಮಿ ಮತ್ತು ಅವನ ಕುಟುಂಬ, ಮನೆಯೊಳಗೇ ವಾಸವಾಗಿದ್ದ ಅಡುಗೆಯ ಭಂಟ ಸೂರ್ಯನಾರಾಯಣ, (ಆತನ ಮಕ್ಕಳು ಈಗ ಅಂತರರಾಷ್ಟ್ರೀಯ ಖ್ಯಾತಿಯ, ಮಲ್ಲೇಶ್ವರದಲ್ಲಿನ ವೀಣಾ ಸ್ಟೋರ್ಸ್ ನಡೆಸುತ್ತಿದ್ದಾರೆ) ಇವರುಗಳೂ ನಮ್ಮ ಕುಟುಂಬಸ್ಥರೆಂದೇ ಹೇಳಬಹುದಾಗಿತ್ತು. ಅಯ್ಯೋ ಮರೆತೆ. "ಫಿಫಿ" ಎಂಬ ಗ್ರೇಟ್ ಡೇನ್ ನಾಯಿಯೊಂದು ಸಹಾ ಮನೆಯಲ್ಲಿದ್ದು ಮನೆಗಾವಲಾಗಿತ್ತು.

ಇಂತಹ ದೊಡ್ಡ ಹಡಗನ್ನು ನಡೆಸಬೇಕಾದ ನಮ್ಮ ತಂದೆ ಸಹಜವಾಗಿಯೇ ಬೆಳಗಿನಿಂದ ಸಂಜೆಯವರೆಗೂ ದುಡಿಯುವುದು ಅಗತ್ಯವಾಗಿತ್ತು. ಅವರು ಬೆಳಗ್ಗೆ ಎದ್ದು ಪ್ರಾತಃರ್ವಿಧಿಗಳನ್ನು ಮುಗಿಸಿ ಬರುವ ಹೊತ್ತಿಗಾಗಲೇ ಹೊರರೋಗಿಗಳ ಗುಂಪೊಂದು ವೆರಾಂಡಾದಲ್ಲಿ ಕಾದು ಕುಳಿತಿರುತ್ತಿದ್ದರು. ಇವರುಗಳಿಗಾಗಿಯೇ ವೆರಾಂಡಾದಲ್ಲಿ ಮಡಿಚಬಲ್ಲ "ಸುಂದರ್" ಕುರ್ಚಿಗಳನ್ನು ನಮ್ಮಪ್ಪ ತರಿಸಿ ಹಾಕಿಸಿದ್ದರು. ಎಲ್ಲ ರೋಗಿಗಳನ್ನೂ ಸಾವಧಾನವಾಗಿ ಮಾತನಾಡಿಸಿ, ತಮಾಷೆ ಮಾತುಗಳಿಂದಲೇ ಅವರನ್ನು ಅರ್ಧ ಗುಣಪಡಿಸಿ, ಒಳಕ್ಕೆ ಬರುವ ಹೊತ್ತಿಗಾಗಲೇ ಡ್ರಾಯಿಂಗ್ ರೂಮಿನಲ್ಲಿ ಅವರ ಗೆಳೆಯರ ಬಳಗ "ಬೆಳಗಿನ ಹರಟೆ "ಗಾಗಿ ಕಾದಿರುತ್ತಿತ್ತು.

ಈ ಗೆಳೆಯರ ಗುಂಪಿನಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದವರು, ಜಿ.ಪಿ.ರಾಜರತ್ನಮ್, ಶ್ರೀರಂಗ (ಆದ್ಯ ರಂಗಾಚಾರ್ಯ), ಎಂ.ಪಿ.ಎಲ್ ಶಾಸ್ತ್ರೀ ಮತ್ತಿತರರು. ಅವರುಗಳ ಮಾತುಕತೆಗಳು ಎಷ್ಟು ಆಸಕ್ತಿ ಮೂಡಿಸುವಂತೆ ಇರುತ್ತಿತ್ತೆಂದರೆ, ಮನೆಯ ಮಕ್ಕಳಾದ ನಾವೆಲ್ಲಾ ಡ್ರಾಯಿಂಗ್ ರೂಮಿಗೆ ಅಳವಡಿಸಿದ್ದ ಮರದ ಪಾರ್ಟಿಷನ್‌ನ ಈಚೆ ಬದಿ ನಿಂತು, ಮರದ ಹಲಗೆಗೆ ಕಿವಿ ಹಚ್ಚಿ ಮಾತುಕತೆಗಳನ್ನು ಕದ್ದು ಕೇಳುವುದು ಅಂದಿನ ಒಂದು ಪರಿಪಾಠವಾಗಿತ್ತು. ಈ ಸಮಯದಲ್ಲಿ ನಮ್ಮಮ್ಮ ಬಂದ ಅತಿಥಿಗಳಿಗೆಲ್ಲಾ ಬಿಸಿ ಬಿಸಿ ದೋಸೆ, ಚಟ್ನಿ, ಕಾಫಿಗಳನ್ನು ಸರಬರಾಜು ಮಾಡಿದ್ದೇ ಮಾಡಿದ್ದು.

ತಿಂಡಿಯೆಲ್ಲಾ ಮುಗಿದ ಮೇಲೆ, ಗೆಳೆಯರಿಗೆ ವಿದಾಯ ಹೇಳಿ, ಠಾಕೋಠಾಕ್ ಒಂಭತ್ತು ಘಂಟೆಗೆ ನಮ್ಮ ತಂದೆ ತಮ್ಮ ಕ್ಲಿನಿಕ್ಕಿಗೆ ಹೊರಡುತ್ತಿದ್ದರು. ಅವರ ಈ ಸಮಯಪ್ರಜ್ಞೆ ಎಷ್ಟು ಆಳವಾಗಿತ್ತೆಂದರೆ, ಈ ಬಗ್ಗೆ ಅನೇಕ ದಂತಕತೆಗಳು ಹುಟ್ಟಿಕೊಂಡಿದ್ದವು. ಅವರ ಕಾರು ಮಲ್ಲೇಶ್ವರದ ದಾರಿಯಲ್ಲಿ ಹಾದು ಹೋದಾಗ, ಅವರ ಕಾರನ್ನು ನೋಡಿಯೇ ದಾರಿಹೋಕರು ತಮ್ಮ ಗಡಿಯಾರಗಳ ಸಮಯವನ್ನು ನಿಗದಿಸುತ್ತಿದ್ದರಂತೆ. ಅವರ ಬಳಿ ಆಗ ಹಿಲ್‌ಮನ್

ಮಿಂಕ್ಸ್ ಕಂಪನಿಯ ಕಾರು ಇತ್ತು. ಅವರು ಹೊರಟರೆಂದರೆ, ನಾನು ಮತ್ತು ನನ್ನ ತಮ್ಮ ಪ್ರಕಾಶ್ ಬೇಗ ಓಡಿಹೋಗಿ ಗೇಟನ್ನು ಅಗಲವಾಗಿ ತೆಗೆದು, ಇಕ್ಕೆಲಗಳಲ್ಲಿದ್ದ ಒಂದೊಂದು ಗೇಟನ್ನೂ ನಾವಿಬ್ಬರೂ ಏರಿ ನಿಂತು, ಕಾರು ನಮ್ಮ ಮುಂದೆ ಹಾದು ಹೋಗುವಾಗ ಅವರಿಗೆ ಸಲ್ಯೂಟ್ ಮಾಡುವುದು ನಮ್ಮ ದಿನನಿತ್ಯದ ಕಾರ್ಯವಾಗಿತ್ತು. ಈ ಬಗೆಯಲ್ಲಿ ಕಾರು ಮನೆಬಿಟ್ಟು ಹೊರಟನಂತರ ನಾವಿಬ್ಬರೂ ಬೇಗ ಗೇಟನ್ನು ಮುಚ್ಚಿ, ಮನೆಯೊಳಗೆ ಓಡಿ ಹೋಗಿ "ಕತ್ತೆ ದಿಬ್ಬ" ಸೇರುತ್ತಿದ್ದೆವು.

**ಕತ್ತೆದಿಬ್ಬ**

"ಕರ್ಫ್ಯೂ" ಎಂಬ ಪದದ ಅರ್ಥ ತಿಳಿಯದಿದ್ದರೂ, ನಮ್ಮ ತಂದೆ ಮನೆಯಲ್ಲಿದ್ದ ಸಮಯದಲ್ಲಿ ಬಹು ನಿಷ್ಠೆಯಿಂದ ನಾವೆಲ್ಲಾ ಅದನ್ನು ಪಾಲಿಸುತ್ತಿದ್ದದ್ದು, ನಮ್ಮ ಮನೆಯ ಒಂದು ವೈಶಿಷ್ಟ್ಯ. ಅವರಿರುವಾಗ ಯಾರೊಬ್ಬರೂ ಎತ್ತರದ ದನಿಯಲ್ಲಿ ಮಾತನಾಡುತ್ತಿರಲಿಲ್ಲ. ಮಾತೇ ಪಿಸುಮಾತಾದಾಗ, ಇನ್ನು ನಗುವಿನ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ನಾವೆಲ್ಲರೂ ಹೆಚ್ಚು ಸಪ್ಪಳವಾಗದಂತೆ ತುದಿಗಾಲಿನಲ್ಲಿ ನಡೆಯುತ್ತಿದ್ದೆವು. ನಮ್ಮಪ್ಪ ಮನೆಯಿಂದ ಹೊರಟ ತಕ್ಷಣ ಈ ವಾಡಿಕೆಯ ಕರ್ಫ್ಯೂ ತೆರಪಾಗುತ್ತಿತ್ತು. ನಮ್ಮಕ್ಕ ಕಮಲಾ, ಡ್ರಾಯಿಂಗ್ ರೂಮಿನ ಮೂಲೆಯ ಸ್ಟೂಲಿನ ಮೇಲಿದ್ದ "ಮರ್ಫಿ" ರೇಡಿಯೋವನ್ನು ಫುಲ್ ವಾಲ್ಯೂಮ್ ನಲ್ಲಿ ತಿರುಗಿಸಿ ಬಿಡುತ್ತಿದ್ದಂತೆ, "ಏ ಜಿಂದಗೀ ಉಸೀಕಿ ಹೈ" ಹಾಡುತ್ತಾ ಲತಾ ಮಂಗೇಶ್ಕರ್ ಮನೆಯೊಳಗೆ ಆಗಮಿಸುತ್ತಿದ್ದಳು. ಅಥವಾ ಅಮೀನ್ ಸಯಾನಿ ತನ್ನ ಬಿನಾಕಾ ಗೀತ್ ಮಾಲಾ ಕುರಿತು ನಿರರ್ಗಳ ವಾಗ್ಝರಿಯನ್ನು ಹರಿಯ ಬಿಡುತ್ತಿದ್ದ. ಲೀಲಾ ಮತ್ತು ವಿಮಲಾ, ಸೋಫಾ ಮೇಲೆ ಕಾಲು ಚಾಚಿ ಸುಖಾಸೀನರಾಗಿ, ಸರಸ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. ನಮ್ಮಮ್ಮ ಮತ್ತು ಗೌರ ಡೈನಿಂಗ್ ಟೇಬಲ್ ಬಳಿ ಕುಳಿತು ಹರಟೆ ಹೊಡೆಯುತ್ತ ಬೆಳಗಿನ ಉಪಹಾರ ಸೇವಿಸುತ್ತಿದ್ದರು. (ತಂದೆಯವರು ಮನೆಯಲ್ಲಿದ್ದಾಗ ಇದು ಕನಸಿನ ಮಾತು!) ನಾನು ಮತ್ತು ಪ್ರಕಾಶ್, ಮೊದಲ ಪ್ರಯೋಗಾರ್ಥ ಪರೀಕ್ಷೆಯನ್ನು ನಡೆಸಲು ಹಿಂದಿನ ದಿನ ನಾನು ನಿರ್ಮಿಸಿದ್ದ ಟೆಲಿಫೋನನ್ನು  ಹೊರತರುತ್ತಿದ್ದೆವು. ಈ ಫೋನಿನ ನಿರ್ಮಾಣ ಬಹು ಸರಳ. ನಮ್ಮಪ್ಪ ಬಳಸಿ ಬಿಸಾಕಿದ ಎರಡು ಖಾಲಿ ಸಿಗರೇಟ್ ಡಬ್ಬಗಳನ್ನು ತೆಗೆದುಕೊಂಡು, ತಳದಲ್ಲಿ ಒಂದು ರಂಧ್ರವನ್ನು ಮಾಡಿ, ಒಂದು ಹುರಿ ದಾರವನ್ನು ಅದರಲ್ಲಿ ತೂರಿಸಿ,ನಿರ್ಮಿಸಿದ ಯಂತ್ರ ವಿಶೇಷವದು. ಅವನು ಸ್ಟೇರ್‌ಕೇಸ್ ರೂಮಿನಲ್ಲಿ ಒಂದು ಡಬ್ಬ ಕಿವಿಗೆ ಆನಿಸಿ ನಿಲ್ಲುವ. ನಾನು ಅಮ್ಮನ ರೂಮಿಗೆ ಹೋಗಿ ಇನ್ನೊಂದು ಡಬ್ಬವನ್ನು ಬಾಯಿಗೆ ಹಿಡಿದು, ದಾರ ಬಿಗಿಯಾಗುವಂತೆ ನಿಂತು. "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ" ಎಂದು ಹಾಡುವೆ. ಸ್ಟೇರ್‌ಕೇಸ್ ರೂಮಿನಿಂದ, "ಕೇಳಿಸ್ತೂ" ಎಂಬ ಕೂಗು ಬಂದಾಗ, ನಮ್ಮ ಪ್ರಯೋಗದ ಯಶಸ್ಸಿಗೆ ಸಂತೋಷಪಡುವುದಕ್ಕೂ ಮೊದಲೇ, ನಮ್ಮಮ್ಮ, "ಈ ಬಟ್ಟೆ ಒಣಗಿಸೋ ದಾರಾನಾ ಮೊದಲು ಕಿತ್ತು ಬಿಸಾಕಿ, ಬೀದೀಗೆ ಹೋಗಿ ಆಡ್ಕೊಳ್ಳೋಕೆ ಏನ್ರೋ ಕೇಡು. ಸುಮ್ನೆ ನಮ್ ಪ್ರಾಣಾ ಹಿಂಡ್ತೀರಾ" ಕೂಗು ಹಾಕೋರು. ಒಟ್ಟಿನಲ್ಲಿ ಮನೆ ತುಂಬಾ ಹಾಸ್ಯ, ನಗು, ಕಿಲಕಿಲ.  ಆಶ್ರಮ ಮೌನದಿಂದ, ಸಂತೆ ಸಂಭ್ರಮಕ್ಕೆ ಹಠಾತ್ತನೆ ಬದಲಾಗುವ ಈ ಇಂದ್ರಜಾಲವನ್ನು ನೋಡಿ ವಿಮಲಾ ನಮ್ಮ ಡ್ರಾಯಿಂಗ್ ರೂಮಿಗೆ "ಕತ್ತೆದಿಬ್ಬ" ಅಂತ ನಾಮಕರಣ ಮಾಡಿದ್ದಳು. {ಈ ಹೆಸರು ನಾ. ಕಸ್ತೂರಿಯವರ ನಗೆ ಕಾದಂಬರಿಯೊಂದರಲ್ಲಿ ಬರುತ್ತೆ. ಆ ಕತೆಯ ಸಂದರ್ಭದಲ್ಲಿ, ನಾಯಕ, ಹೆಂಡತಿಯಿಂದ ಕುಕ್ಕಿಸಿಕೊಂಡು ಸಾಕಾಗಿ, ಊರಾಚೆ ಇರುವ ದಿಬ್ಬವೊಂದಕ್ಕೆ  ಪ್ರತಿ ಸಂಜೆ ತೆರಳಿ, ಅಲ್ಲಿ ದಿಬ್ಬದ

ಮೇಲೆ ನಿಂತು ತಾರಕಸ್ವರದಲ್ಲಿ ಹೆಂಡತಿಯನ್ನು ದಬಾಯಿಸಿ ಬಯ್ಯಲು ಶುರುಮಾಡಿ ಮನಶ್ಶಾಂತಿ ಪಡೆದು ಪುನಃ ಮನೆಗೆ ಹಿಂತಿರುಗುತ್ತಿದ್ದನಂತೆ. ಆ ದಿಬ್ಬ ನಿರ್ಜನವಾಗಿದ್ದು, ಅಲ್ಲಿ, ಇಲ್ಲಿ ಹಲವು ಕತ್ತೆಗಳು ಮಾತ್ರ ಮೇಯುತ್ತಿದ್ದ ಕಾರಣ ಅದಕ್ಕೆ ಕತ್ತೆದಿಬ್ಬ ಅಂತ ಹೆಸರಾಯಿತಂತೆ.}

ನನ್ನ ತಮ್ಮ ಮತ್ತು ನನಗೆ ಆ ದಿನಗಳಲ್ಲಿ ಇದ್ದ ಒಂದು ಮನರಂಜನೆಯೊಂದರೆ, ನಮ್ಮ ಅತ್ತೆ ಗೌರ ನಮಗೆ ಹೇಳುತ್ತಿದ್ದ ಕತೆಗಳು. "ಗುಜ್ಜಾರಿ ಗಂಗು", " ಗುಂಡು ಜಿಲೇಬಿ", ಇವೆಲ್ಲಾ ಕತೆಗಳು ಇನ್ನೂ ನೆನಪಿನಲ್ಲಿ ಹಸಿರಾಗಿದೆ. "ಡಿಕ್‌ಗೆ ತುಂಬಾ ದುಃಖ ಆಗಿತ್ತು. ಅವನ ಯಜಮಾನ ಊರಿನಲ್ಲಿ ಇರಲಿಲ್ಲ. ಮನೆಯ ಸೇವಕರು ಅವನಿಗೆ ಚಿತ್ರ ಹಿಂಸೆ ಕೊಡುಕ್ಕೆ ಪ್ರಾರಂಭಿಸಿದರು...." ಎಂದು ಗೌರ ಹೇಳುತ್ತಿದ್ದಂತೆ, ನಾವಿಬ್ಬರೂ, ಮುಸಿ ಮುಸಿ ಅಳುಕ್ಕೆ ಶುರು ಹಚ್ಚುತ್ತಿದ್ದೆವು. ನಮ್ಮ ತಾಯಿ, ಅಡುಗೆಮನೆಯಿಂದ, "ಮಕ್ಕಳನ್ನು ಅಳಿಸಬೇಡವೇ" ಅಂತ ಕೂಗುಹಾಕುತ್ತಿದ್ದರು. ನಮಗೆ ಇಷ್ಟವಾದ ಇನ್ನೊಂದು ಹವ್ಯಾಸವೆಂದರೆ ಪುಸ್ತಕ ಓದುವುದು. ನಮ್ಮಪ್ಪನ ಗ್ರಂಥಾಲಯದಲ್ಲಿ ಅನೇಕ ಮಕ್ಕಳ ಪುಸ್ತಕಗಳು ಸಂಗ್ರಹವಾಗಿದ್ದವು. ರಾಜರತ್ನಮ್ ಬರೆದಿದ್ದ, ರಾಬಿನ ಹುಡ್, ನಾಳೀರ್ಝಂಪ, ಶ್ರೀರಾಮಚಂದ್ರ, ಗೌತಮ ಬುದ್ಧ ಮತ್ತಿತರ ಪುಸ್ತಕಗಳನ್ನು ಓದುವುದು ನಮ್ಮ ಪ್ರೀತಿಯ ಪರಿಪಾಠವಾಗಿತ್ತು.

**ಕಾಲಿಂಗ್ ಬೆಲ್ ಪ್ರಕರಣ**

ನಮ್ಮ ತಂದೆ ಯಾವಾಗಲೂ ಕಾರ್ಯನಿರತರಾಗಿರುತ್ತಿದ್ದರು ಅಂತ ಈ ಹಿಂದೆಯೇ ಹೇಳಿದ್ದೆ. ಬೆಳಗಿನ ಹೊತ್ತು ನಮಗೆ ಸ್ಕೂಲಿಗೆ ಹೋಗುವ ಗಲಾಟೆ, ಮಧ್ಯಾಹ್ನ ಅವರು ಮನೆಗೆ ಊಟಕ್ಕೆ ಬರುವ ವೇಳೆಗೆ ನಾವು ಸ್ಕೂಲಿನಲ್ಲಿ, ಸಂಜೆ ನಾವು ಮನೆ ಸೇರುವ ಹೊತ್ತಿಗೆ ಅವರು ಸಂಚುರಿ ಕ್ಲಬ್ಬಿನಲ್ಲಿ ಟೆನ್ನಿಸ್, ಅನಂತರ ಕ್ಲಿನಿಕ್ಕಿಗೆ ಹೋಗಿ ಅಲ್ಲಿಂದ ಮನೆಗೆ ಹಿಂತಿರುಗುವ ಹೊತ್ತಿಗೆ ನಾವೆಲ್ಲಾ ಮಲಗುವ ಹೊತ್ತು ಆಗಿರುತ್ತಿತ್ತು. " ನನ್ನ ಮಕ್ಕಳಿಗೆ ಅಪ್ಪ ಮತ್ತು ಧೋಬಿ ಇಬ್ಬರನ್ನೂ ಭಾನುವಾರ ಮಾತ್ರ ನೋಡಿ ರೂಢಿ. ಧೋಬಿ ಯಾರು ಅಂತ ತಿಳಿದಿದ್ದರೆ, ಅವರು ಅಪ್ಪನನ್ನು ಸುಲಭವಾಗಿ ಗುರುತು ಹಿಡೀತಾರೆ" ಅಂತ ನಮ್ಮ ತಂದೆಯವರೇ ಜೋಕ್ ಮಾಡಿದ್ದುಂಟು. ವಾಸ್ತವವಾಗಿ ಅಂದಿನ ದಿನಗಳಲ್ಲಿ ರೋಗಿಗಳ ಮೇಲಿನ ಕಾಳಜಿಯ ದೆಸೆಯಿಂದ ನಮ್ಮ ತಂದೆಯವರಿಗೆ ವಿರಾಮ ಸಿಗುವುದು ದುರ್ಲಭವಾಗಿತ್ತು. ದೊರಕಿದ ವಿರಾಮಕಾಲ ತಮ್ಮ ಸಾಹಿತ್ಯ ಸಂಬಂಧಿತ ಹವ್ಯಾಸಗಳಲ್ಲಿ ಕರಗಿಹೋಗುತ್ತಿದ್ದರಿಂದ, ಅವರಿಗೆ ಮಕ್ಕಳೊಂದಿಗೆ ಕಾಲ ಕಳೆಯುವುದು ಸಾಧ್ಯವಾಗುತ್ತಿರಲಿಲ್ಲ.

ಈ ಘಟನೆ ನಡೆದಾಗ ನನ್ನ ತಮ್ಮ ಪ್ರಸಾದ್ (ಆಮೇಲೆ ಅವನು ಓಂಪ್ರಕಾಶ್ ಆಗಿದ್ದು) ಮೂರು ವರ್ಷದ ಹಸುಳೆ. ಒಂದು ಮಧ್ಯಾಹ್ನ ಅವನು ತನ್ನ ಪಾಡಿಗೆ ತಾನು ವೆರಾಂಡಾದಲ್ಲಿ ಆಟವಾಡುತ್ತಿದ್ದ. ಒಮ್ಮೆಲೇ ಅವನಿಗೆ ಹೊರಬಾಗಿನ ಬಾಗಿಲುವಾಡಕ್ಕೆ ಅಳವಡಿಸಿದ್ದ ಕಾಲಿಂಗ್ ಬೆಲ್ ನ ಒತ್ತುಗುಂಡಿಯನ್ನು ಪರೀಕ್ಷಿಸುವ ಉತ್ಕಟ ಇಚ್ಛೆಯುಂಟಾಯಿತು. ವೈಜ್ಞಾನಿಕ ಅನ್ವೇಷಣೆಯನ್ನು ಮಾಡುವ ಹುರುಪಿನಿಂದ, ಅವನು ಸರಸರನೆ ಬಾಗಿಲಿನ ಕಂಬಿಗಳನ್ನು ಏರಿ, ಒತ್ತು ಗುಂಡಿ ಕೈಗೆ ಎಟಕುವ ಹಂತಕ್ಕೆ ಬಂದಾಗ, ಅದನ್ನು ಒತ್ತಿದ. ಒಳಗಿನ ಹಾಲ್ ನಿಂದ ಬಹು ಜೋರಾಗಿ "ಟ್ರೀಣ್" ಎಂಬ ಶಬ್ದ ಹೊರಹೊಮ್ಮಿತು. ಅವನಿಗೆ ಇದೊಂದು ಹೊಸ ಅನುಭವ. ಮತ್ತೊಮ್ಮೆ ಒತ್ತುಗುಂಡಿಯನ್ನು ಒತ್ತಿದ. ಮತ್ತೊಮ್ಮೆ ಅದೇ ಮಧುರ ನಾದ "ಟ್ರೀಣ್".

ಏತನ್ಮಧ್ಯೆ, ಮನೆಯ ಇನ್ನೊಂದು ಭಾಗದಲ್ಲಿ, ಒಬ್ಬ ಮುಂಗೋಪಿ ಮಧ್ಯವಯಸ್ಕರು,

ಮಧ್ಯಾಹ್ನದ ನಿದ್ರೆ ಮಾಡಲು ಪ್ರಯತ್ನಿಸುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಬಾಗಿಲ ಹೊರಘಂಟೆ ಎರಡು ಬಾರಿ ಟ್ರೇಣ್ ಗುಟ್ಟಿತು. ನಿದ್ದೆ ಮಾಡುಕ್ಕಾಗದ ಅಸಮಾಧಾನ ಈಗ ಅಸಾಧ್ಯ ಕೋಪಕ್ಕೆ ತಿರುಗಿತು. ಅವರು ಧಡಕ್ಕನೆ ಎದ್ದು ಈ ಅಪರಾಧಿಗೆ ತಕ್ಕ ಶಿಕ್ಷೆಯನ್ನು ಕೊಡುವ ಉದ್ದೇಶದಿಂದ ಹೊರಬಾಗಿಲಿನ ಕಡೆಗೆ ಧಾವಿಸಿದರು. ತಂದೆಯವರು ವೆರಾಂಡಾಕ್ಕೆ ಬಂದು ನೋಡುತ್ತಾರೆ. ತಮ್ಮ ದ್ವಿತೀಯ ಪುತ್ರ ಬಾಗಿಲನ್ನು ಹತ್ತಿ ಒತ್ತುಗುಂಡಿಯೊಡನೆ ಆಟವಾಡುತ್ತಿದ್ದಾನೆ!

"ಪ್ರಸಾದ್, ಯಾಕೋ ಬೆಲ್ ಮಾಡಿದೆ? ನಾನು ಮಲಕ್ಕೊಂಡಿರೋದು ಗೊತ್ತಿಲ್ವಾ?" ಅಂತ ಕೇಳಿದರು.

"ನೀನ್ಯಾರು ಕೇಳುಕ್ಕೆ? ಅಮ್ಮನ್ನ ಕರೀತೀನಿ ನೋಡು, ಹುಷಾರ್ " ಎಂದು ಉತ್ತರಿಸಿದ ಮಗ ಮಹಾರಾಯ !

ಏನು ಉತ್ತರಿಸಲೂ ತಿಳಿಯದೇ ಅವರು ಪುನಃ ತಮ್ಮ ನಿದ್ರೆ ಯತ್ನವನ್ನು ಮುಂದುವರಿಸಲು ಒಳಕ್ಕೆ ನಡೆದರು.

**ಸ್ಯಾಮ್ಸನ್ ಅಂಡ್ ಡಿಲೈಲಾ.**

ಒಂದು ಬೆಳಗ್ಗೆ ನಾವೆಲ್ಲಾ ಕತ್ತೆದಿಬ್ಬದಲ್ಲಿ ಕುಳಿತು ಹರಟುತ್ತಿದ್ದಾಗ, ಕಮಲಕ್ಕ, "ರೆಕ್ಸ್ ಥಿಯೇಟರಿನಲ್ಲಿ 'ಸ್ಯಾಮ್ಸನ್ ಅಂಡ್ ಡಿಲೈಲಾ ಬಂದಿದೆ"

ಅಂತ ಒಂದು ಹೇಳಿಕೆ ನೀಡಿದಳು. "ಥಿಯೇಟರಿನಲ್ಲಿ ಸಿನಿಮಾ ಬರದೇ ಮತ್ತೆಲ್ಲಿ ಬರುತ್ತೆ?" ಅಂತ ವಿಮಲಕ್ಕ ನಗಾಡಿದಳು. "ನಾವೆಲ್ಲಾ ಇವತ್ತು ಆ ಸಿನಿಮಾ ನೋಡೋಣ ಅಂತ ಆಸೆ" ಕಮಲಳ ಉತ್ತರ.

ಈಗ ನಗುವುದು ಲೀಲಕ್ಕನ ಸರದಿ. "ಸಿನಿಮಾಗೆ ಹೋಗೋದೇ? ಹೇಗೆ ಹೋಗೋದು? ಪುಷ್ಪಕ ವಿಮಾನ ರೆಡಿ ಮಾಡಿದ್ದೀಯೇನು?" ಲೀಲಕ್ಕನ ಪ್ರಶ್ನೆ.

"ಇಲ್ಲ. ಅಪ್ಪ ಕರಕೊಂಡು ಹೋಗ್ತಾರೆ"

"ಸಿನಿಮಾ ಆರೂವರೆಗೆ. ಅಪ್ಪ ಎಂಟು ಘಂಟೆವರೆಗೂ ಕ್ಲಿನಿಕ್ಕಲ್ಲಿ ಇರ್ತಾರೆ"

"ಒಂಭತ್ತೂವರೆ ಷೋಗೆ ಹೋಗಬಹುದಲ್ಲಾ?"

"ಅಪ್ಪನ್ನ ಕರ್ಕೊಂಡು ಹೋಗಿ ಅಂತ ಕೇಳೋರು ಯಾರು?" ವಿಮಲಕ್ಕನ ಪ್ರಶ್ನೆ ಮೂಲಭೂತ ಸಮಸ್ಯೆಯನ್ನು ಮುಂದಕ್ಕಿಟ್ಟಿತ್ತು.

ಈ ಪ್ರಶ್ನೆಗೆ ಕಮಲಕ್ಕನ ಬಳಿ ಉತ್ತರ ಇರಲಿಲ್ಲ. ಕಮಲಕ್ಕ ಸುತ್ತ ಮುತ್ತ ನೋಡಿದಳು. ಮೂಲೆ ಸೋಫಾದ ಮೇಲೆ ಕುಳಿತಿದ್ದ ನಾನು ಅವಳ ಕಣ್ಣಿಗೆಬಿದ್ದೆ.

"ಕುಮಾರ್ ಕೇಳ್ತಾನೆ. ಅಲ್ವೇನೋ ಕುಮಾರೂ?"

"ಖಂಡಿತ ಇಲ್ಲ. ನಾನಂತೂ ಕೇಳೋದೇ ಇಲ್ಲ" ಅಂತ ಉತ್ತರಿಸಿದೆ. ಅದೊಂದು ಹತಾಶೆಯ ಉತ್ತರ. ನಾನು ಎಂದೂ ಕಮಲಕ್ಕನ ಮಾತು ಮೀರಿರಲಿಲ್ಲ. ಈಗ ಮೀರುತ್ತೇನೆಂಬ ನಂಬಿಕೆಯೂ ಇರಲಿಲ್ಲ. ಕೊನೆಗೆ ಸಂಜೆ ಅಪ್ಪ ಊಟ ಮುಗಿಸಿ ರೂಮಿನಲ್ಲಿ ಬರೆಯುವುದಕ್ಕೆ ಕುಳಿತಾಗ ನಾನು ಹೋಗಿ ಅವರನ್ನು ಸಿನಿಮಾ ಬಗ್ಗೆ ಕೇಳುವುದೆಂದು ನಿರ್ಧಾರವಾಯಿತು.

ಸಂಜೆ ಎಂಟೂವರೆ. "ಈಗ ಹೋಗಿ ಕೇಳು. ನಾನು ಹೇಳಿದೆ ಅಂತ ಹೇಳಬೇಡ. ಏನು

ಕೇಳಬೇಕು ಅಂತ ಗೊತ್ತು ತಾನೆ." ಅಂತ ತಾರೀಫು ಮಾಡಿ ನನ್ನನ್ನ ವಧಾಸ್ಥಾನಕ್ಕೆ ಕಳಿಸಲಾಯಿತು.

ನಾನು ಅವರ ರೂಮಿನೊಳಗೆ ಹೋದೆ. ಅವರು ಟೇಬಲ್ಲಿನ ಮುಂದೆ ಕುಳಿತು ಏನನ್ನೋ ಬರೆಯುತ್ತಿದ್ದರು. ಟೇಬಲ್ಲಿನ ತುದಿಯಲ್ಲಿದ್ದ ಲ್ಯಾಂಪಿನಿಂದ ಮಂದಪ್ರಕಾಶ ರೂಮನ್ನು ತುಂಬಿತ್ತು. ಮೇಲೆ ತಿರುಗುತ್ತಿದ್ದ ಫ್ಯಾನ್‌ನಿಂದ ಹೊರಹೊಮ್ಮುತ್ತಿದ್ದ ತಂಗಾಳಿಯಿಂದಾಗಿ ಅವರ ತಲೆಯ ಮೇಲಿನ ಹಾರಾಡುತ್ತಿದ್ದ ಬಿಳಿಕೂದಲು ಸಿಂಹದ ಕೇಸರಿಯನ್ನು ನೆನಪಿಸಿತು.

ನಾನು ನನ್ನ ಎಲ್ಲಾ ಧೈರ್ಯವನ್ನೂ ಒಟ್ಟುಗೂಡಿಸಿ, "ಸ್ಯಾಮ್ಸನ್ ಎಂಡ್ ಡಿಲೈಲಾ ನೋಡಬೇಕು" ಅಂತ ಕೇಳಿದೆ. ನಾನೇನೋ ಜೋರಾಗಿ ಕೇಳಿದೆ ಅಂತ ಭಾವಿಸಿದ್ದೆ. ಆದರೆ ಹೊರಹೊಮ್ಮಿದ್ದು ಪಿಸುಮಾತು. ಅವರ ಬರಹದ ಕಾರ್ಯ ನಡೆದೇ ಇತ್ತು." ಜೋರಾಗಿ ಮಾತಾಡಬೇಕು, ಜೋರಾಗಿ ಮಾತಾಡಬೇಕು" ಅಂತ ನನಗೆ ನಾನೇ ಹೇಳಿಕೊಳ್ಳುತ್ತಾ, ಮತ್ತೊಮ್ಮೆ, "ರೆಕ್ಸ್ ಥಿಯೇಟರಿನಲ್ಲಿ ಸ್ಯಾಮ್ಸನ್ ಅಂಡ್ ಡಿಲೈಲಾ ಸಿನಿಮಾ ನೋಡಬೇಕು" ಅಂತ ಕೂಗಿದೆ. ಹೇಗಾದರೂ ಈ ಅಗ್ನಿಪರೀಕ್ಷೆ ಮುಗಿದರೆ ಸಾಕು ಎನ್ನಿಸಿತ್ತು ನನಗೆ.

ತಮ್ಮ ಹಿಂದಿನಿಂದ ಬಂದ ಈ ಅಶರೀರವಾಣಿಯಿಂದ ಅವರಿಗೆ ಗಾಬರಿಯಾಗಿದ್ದು ಸಹಜ. "ಗಾಬರಿ" ಪದ ಅಷ್ಟು ಸೂಕ್ತ ಅಲ್ಲವೇನೋ. ಕೂತಲ್ಲೇ ಮೇಲಕ್ಕೆಗರಿದರು ಎನ್ನಬಹುದು. ಆಮೇಲೆ ನನ್ನ ಕಡೆ ತಿರುಗಿ, "ಓ ಕುಮಾರ್, ಏನಾಯ್ತಪ್ಪ, ಹುಷಾರಾಗಿದ್ದೀಯಾ ತಾನೇ ?" ಅಂತ ಕನಿಕರದಿಂದ ಕೇಳಿದರು. ಅವರ ದನಿಯಲ್ಲಿ ಪಿತೃವಾತ್ಸಲ್ಯ ಹೊರಹೊಮ್ಮುತ್ತಿತ್ತು.

ಈಗ ಮೂರನೆಯ ಬಾರಿ ನನ್ನ ಅಹವಾಲನ್ನು ಒಪ್ಪಿಸಬೇಕಾದ ಅಗತ್ಯ ಒದಗಿಬಂದಿತ್ತು. ಎಲ್ಲ ಹೆದರಿಕೆ, ಲಜ್ಜೆಗಳನ್ನು ಗಾಳಿಗೆ ತೂರಿ, ದೃಢ ದನಿಯಿಂದ, "ನಾನು ಸ್ಯಾಮ್ಸನ್ ಅಂಡ್ ಡಿಲೈಲಾ ನೋಡಬೇಕು. ಅದು ರೆಕ್ಸ್ ಥಿಯೇಟರಿನಲ್ಲಿದೆ. ಒಂಬತ್ತೂವರೆಗೆ ಶುರು." ಹೇಳಿದೆ.

ಅವರಿಗೆ ನಾನು ಹೇಳಿದ್ದೆಲ್ಲಾ ಬಹು ಸ್ಪಷ್ಟವಾಗಿ ಕೇಳಿಸಿತು. ಆದರೆ ಅದನ್ನ ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಾಗಿದ್ದಂತೆ ಕಾಣಲಿಲ್ಲ. ಎಂದೂ ಮಾತನಾಡದ ಈ ಚುಲ್ಟಾರಿ ಈ ರೀತಿಯ ಹಠಾತ್ ಅಹವಾಲನ್ನು ಮಂಡಿಸುವುದೇ? ಇದಕ್ಕೆ ಕಾರಣ ಹುಡುಕುವ ಬದಲು, ಅವರು ಸುಲಭದ ದಾರಿಯನ್ನ ಆರಿಸಿಕೊಂಡರು.

"ಸರಿ, ನೀನೂ ರೆಡಿ ಆಗು. ಎಲ್ಲರಿಗೂ ರೆಡಿಯಾಗುವಂತೆ ಹೇಳು"

ನಾನು ವಿಜಯೋತ್ಸಾಹದಿಂದ ಹೊರಬಂದೆ.

ಅಕ್ಕಂದಿರೆಲ್ಲಾ ಆಗಲೇ ಸಿದ್ಧರಾಗುತ್ತಿದ್ದರು. ಥಿಯೇಟರ್ ಸೇರಿದಾಗ, ಅದರ ಮಾಲಿಕರೇ ಸ್ವತಃ ಬಂದು ನಮ್ಮನ್ನು ಮೇಲಿನ ಬಾಲ್ಕನಿ ಸೀಟುಗಳಿಗೆ ಕರೆದೊಯ್ದರು. ಅವರು ನಮ್ಮ ತಂದೆಯವರ ಪೇಷಂಟ್ ಆಗಿದ್ದರೆಂದು ನಂತರ ತಿಳಿದುಬಂತು. ಸಿನಿಮಾ ಶುರುವಾಗುತ್ತಲೇ ನಾನು ಆಕಳಿಸಲು ಪ್ರಾರಂಭಿಸಿ, ಬಹುಬೇಗ ನಿದ್ದೆಗೆ ಶರಣಾದೆ.

ಮಾರನೆಯ ಬೆಳಗ್ಗೆ ವಿಮಲಕ್ಕ "ಸಿನಿಮಾ ತುಂಬಾ ಚೆನ್ನಾಗಿತ್ತು. ನೀನು ನಿದ್ದೆ ಮಾಡಿಬಿಟ್ಟೆ. ಮನೆಗೆ ಹಿಂತಿರುಗಿದಾಗ ನಾನೇ ನಿನ್ನನ್ನ ಮನೆಯೊಳಕ್ಕೆ ಎತ್ತಿಕೊಂಡುಬಂದು ಮಲಗಿಸಬೇಕಾಯಿತು" ಎಂದಳು.

(ಸಶೇಷ)

## ಪುಸ್ತಕ ಪರಿಚಯ

# ಎವ್ರಿ ಡೇ ಆ ಸೆಲೆಬ್ರೇಶನ್

## ಸೆಲೆಕ್ಟೆಡ್ ಪೊಯೆಮ್ಸ್ ಆಫ್ ಕೆ.ಸ್.ನಿಸ್ಸಾರ್ ಅಹ್ಮದ್

**ಭಾಷಾಂತರಕಾರರು: ರೂಪ ಪೈ** **ಪರಿಚಯಿಸಿದವರು : ಅಣಕು ರಾಮನಾಥ್**




'ನಿತ್ಯೋತ್ಸವ'ದ ಮೂಲಕ ಮನೆಮಾತಾಗಿ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಹಲುಬಿದ ಕರುನಾಡು ಕಂಡ ಶ್ರೇಷ್ಠ ಕವಿಗಳಾದ ನಿಸಾರ್ ಅಹ್ಮದ್ರ ಕವಿತೆಗಳು ಕನ್ನಡಸಲಿಲದಲ್ಲಿ ಸಲೀಸಾಗಿ ಸಾಗುತ್ತಾ ಕಾವ್ಯರಸಿಕರನ್ನು ತನ್ನಲ್ಲಿ ಕೂರಿಸಿಕೊಂಡು ರಸಕಾವ್ಯವಾರಿಧಿಯ ದರ್ಶನ ನೀಡಿದ ಸಿರಿದೋಣಿ. ಪ್ರಸ್ತುತದ ವಿಷಯಗಳನ್ನು ಸಾರ್ವಕಾಲಿಕವಾಗಿಸುವ ಇವರ ಕವನಗಳ ಅಧ್ಯಯನವು ಇತರ ಭಾಷೆಗಳಲ್ಲಿಯೂ ಆಗಬೇಕಾದುದು ಅತ್ಯವಶ್ಯವೆಂದು ಮನಗಂಡ ಕವಯಿತ್ರಿ ರೂಪಾ ಪೈ ಅವರು ನಿಸಾರರ ಆಯ್ದ ಕವನಗಳನ್ನು ಆಂಗ್ಲಕ್ಕೆ ಅನುವಾದ ಮಾಡಿರುವುದು ಸ್ತುತ್ಯ ಕಾರ್ಯ.

ನಿಸಾರರದು ಆದಿಪ್ರಾಸಕ್ಕಿಂತ ಅಂತ್ಯಪ್ರಾಸಕ್ಕೆ ಹಾಗೂ ಕಟ್ಟುನಿಟ್ಟಿನ ಛಂದೋಬದ್ಧತೆಗಿಂತ ಗೇಯತೆಗೆ ಅನುಕೂಲಕರವಾದ ಪದಪುಂಜಗಳು, ಮಾತ್ರಾಪುಂಜಗಳಿಗೆ ಆದ್ಯತೆ ನೀಡಿರುವಂತಹ ಕವನಗಳು. ಇಂಗ್ಲಿಷ್ ಕವನಗಳಲ್ಲಿಯೂ ಅಂತ್ಯಪ್ರಾಸಕ್ಕೆ ಆದ್ಯತೆ ಇರುವುದರಿಂದ ನಿಸಾರರ ಕವನಗಳನ್ನು ಅರ್ಥವ್ಯತ್ಯಾಸವಾಗದಂತೆ ಇಂಗ್ಲಿಷ್ಗೆ ಅನುವಾದಿಸುವಲ್ಲಿ ಲೇಖಕಿಯು ಯಶವನ್ನು ಸಾಧಿಸಿದ್ದಾರೆ.

ನಿಸಾರರ 'ನಿತ್ಯೋತ್ಸವ' ಕವನದ 'ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ' ಎನ್ನುವುದನ್ನು ಕವಯಿತ್ರಿಯು 'ಇನ್ ದ ಓರ್-ಟ್ರೋವ್ ದಟ್ ಶೈನ್ಸ್ ಬಿನೀತ್ ಸಹ್ಯಾದ್ರೀಸ್ ಪ್ರೌಡ್ ಅರೇ' ಎಂದು ಸಮರ್ಪಕವಾಗಿ ತರ್ಜುಮೆ ಮಾಡಿದ್ದಾರೆ. 'ಅಮ್ಮ ಆಚಾರ ನಾನು' ಕವಿತೆಯ ಕೊನೆಯ ಚರಣದಲ್ಲಿನ

ತೋಳಿಲ್ಲದ ರವಿಕೆಯುಟ್ಟು ಭಾರೀ ಸೀರೆಯನ್ನು ಸೊಂಟದ
ಕೆಳಗೆ ನಾಜೂಕಾಗಿ ಕಟ್ಟಿ ಕೊರಳಿಗೆ ಚಿನ್ನದ ಸರ

ಕಾಲಿಗೆ ಹೈ ಹೀಲ್ಡು ಕೆರ, ಕಿವಿಗೆ ಬೆರಳಿಗೆ ಉಂಗುರ

ಮುಂತಾದ ಸಾಲುಗಳನ್ನು

.... ಅಂಡ್ ಸ್ಲೀವ್ಲೆಸ್ ಬ್ಲೌಸ್

ಡೆಕ್ಡ್ ಔಟ್ ಇನ್ ಹೈ ಹೀಲ್ಡ್ ಶೂಸ್, ರಿಂಗ್ಸ್

ಎಟ್ ಹರ್ ಇಯರ್ಸ್ & ಫಿಂಗರ್ಸ್

ಎನ್ನುತ್ತಾ ವರ್ಣಿಸಿರುವುದು ಮೂಲ ಕಾವ್ಯದ ಮೌಲ್ಯವನ್ನು ಸಮಂಜಸವಾಗಿ ಬಿಂಬಿಸಿವೆ. ನಿಸಾರರ ಮತ್ತೊಂದು ಜನಪ್ರಿಯ ಕವಿತೆಯಾದ 'ಕುರಿಗಳು ಸಾರ್ ಕುರಿಗಳು'ವನ್ನು ಅನ್ಯಭಾಷೆಗೆ ಅನುವಾದಿಸುವುದು ದೊಡ್ಡ ಸವಾಲು. ರೂಪಾರು ಈ ಮುಕ್ತ ಛಂದಸ್ಸಿನ ಸಾಲುಗಳಿಗೆ 'ಕ್ರೌಡ್, ಕೌಡ್, ಬಿಹೈಂಡ್, ಬೋವ್ಡ್ ಎಂಬ ಅಂತ್ಯಪ್ರಾಸವನ್ನು ಸಹಜವೆಂಬಂತೆ ನೀಡಿದ್ದಾರೆ. ರೂಪಾರ ಆಂಗ್ಲಭಾಷೆಯ ಮೇಲಿನ ಹಿಡಿತವು ಕೆಲವೆಡೆಗಳಲ್ಲಿ ನನ್ನನ್ನು ನಿಬ್ಬೆರಗಾಗಿಸಿದೆ.

ಅನುವಾದವು ಸವಾಲೆಂದೆ. 'ನಿತ್ಯೋತ್ಸವ'ವನ್ನು 'ಎಟರ್ನಲ್ ಸೆಲಿಬ್ರೇಷನ್' ಎನ್ನಬಹುದಿತ್ತು. 'ಅಮ್ಮ ಆಚಾರ ನಾನು' ಕವನದಲ್ಲಿ 'ಮಾರ್ಟರ್' ಪದವಿರುವ ಸಾಲನ್ನು ಮತ್ತೆ ಪರಿಶೀಲಿಸುವುದು ಸೂಕ್ತವೇನೋ. ಇಂತಹ ಮರುಪರಿಶೀಲನೆಗೆ ಪಕ್ಕಾಗಬಹುದಾದ ಸಾಲುಗಳು ಅಲ್ಲಲ್ಲಿ ಕಂಡುಬರುತ್ತವೆ. ಹೀಗೆ ಮರುಪರಿಶೀಲಿಸಬೇಕೆಂಬುದು ನನ್ನ ಅನಿಸಿಕೆಯಷ್ಟೇ ಇದ್ದೀತು. ವಿಪುಲವಾದ ಪರ್ಯಾಯ ಪದಗಳನ್ನುಳ್ಳ ಆಂಗ್ಲಭಾಷೆಯಲ್ಲಿ ಒಂದು ಪದ, ಒಂದು ವಾಕ್ಯ, ಒಂದು ನಾಣ್ಣುಡಿಗೆ ಹಲವು ಪರ್ಯಾಯ ಅನುವಾದಗಳನ್ನು ಮಾಡಬಹುದಾದ್ದರಿಂದ ಈ ಅಭಿಪ್ರಾಯವು ಸರ್ವಮಾನ್ಯವಾಗಬೇಕೆಂದೇನಿಲ್ಲ.

ಕನ್ನಡ ಕವಿತೆಗಳನ್ನು ಆಂಗ್ಲಕ್ಕೆ ಅನುವಾದಿಸುವಾಗ ಮೂಲ ಕವನವು ಮುಕ್ತ ಛಂದಸ್ಸಿನಲ್ಲಿದ್ದರೂ ಅನುವಾದದಲ್ಲಿ ಅದು ಆಂಗ್ಲಕವನ ರಚನಾಕ್ರಮಗಳ ಪೈಕಿ ಯಾವುದಾದರೂ ಚೌಕಟ್ಟನ್ನು ಹೊಂದಬಹುದಾಗಿತ್ತು. ಕವಯಿತ್ರಿಯು ಒಮ್ಮೊಮ್ಮೆ ಎಬಿಎಬಿ ಪ್ರಾಸವನ್ನು ಹಿಡಿದಂತೆ ಎನ್ನಿಸುತ್ತದೆ; ಕೆಲವೊಮ್ಮೆ ಎಎಎಬಿ ಪ್ರಾಸವನ್ನು, ಮತ್ತೂ ಕೆಲವೊಮ್ಮೆ ಎಎಬಿಬಿ ಪ್ರಾಸವನ್ನು ಹಿಡಿದರು ಎಂದುಕೊಳ್ಳುವಷ್ಟರಲ್ಲಿ ಪ್ರಾಸದ ಎಣಿಕೆಯು ಮಾಯವಾಗಿಬಿಡುತ್ತದೆ. ಅಂತೆಯೇ ಆಂಗ್ಲದಲ್ಲಿ ಕವಿತೆಗಳ ರಚನೆಗೆ ಸಿಲಬಲ್ಗಳ ಎಣಿಕೆಯೇ ಪ್ರಧಾನ. ಕವಯಿತ್ರಿಯು ಭಾಷಾಸಂಪತ್ತು ಮತ್ತೊಬ್ಬರಿಗೆ ಅಸೂಯೆ ಹುಟ್ಟುವ ಮಟ್ಟಕ್ಕೆ ಇರುವುದರಿಂದ ಆಂಗ್ಲ ಕವಿತೆಯ ಯಾವುದಾದರೂ ಪದ್ಯಕ್ರಮವನ್ನು ಅನುಸರಿಸಿ ಅನುವಾದಿಸಿದ್ದಿದ್ದರೆ ಪದ್ಯಗಳ ಸೊಬಗು ಮತ್ತಷ್ಟು ಹೆಚ್ಚುತ್ತಿತ್ತೆಂಬುದು ನಿರ್ವಿವಾದ.

ಒಟ್ಟಾರೆ, ಈ ಅನುವಾದ ಕಾರ್ಯವು ನಿಸಾರರ ಪದಗಳಲ್ಲಿನ ಲಯವನ್ನು ಆಂಗ್ಲರಿಗೆ ಮುಟ್ಟಿಸುವಲ್ಲಿ ಸಂಪೂರ್ಣ ಯಶವನ್ನು ಸಾಧಿಸದಿದ್ದರೂ, ಕವನಗಳ ಆಶಯವನ್ನು, ಅವುಗಳಲ್ಲಿ ಅಡಗಿರುವ ಕಾವ್ಯಸುಧೆಯ ರುಚಿಯನ್ನು ಓದುಗರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ. ನಿಸಾರರ ಕವನಗಳಂತಹ ಬಿಡುಬೀಸು ಕಾವ್ಯವನ್ನು ಅನುವಾದಿಸುವಂತಹ ಸಾಹಸಕ್ಕೆ ಕೈಹಾಕಿದ ರೂಪಾ ಪೈ ಮುಂದೆಯೂ ಇಂತಹ ಸವಾಲುಗಳನ್ನೆದುರಿಸಿ ಯಶದ ಪಾವಟಿಗೆಗಳನ್ನೇರಲೆಂದು ಹಾರೈಸುತ್ತೇನೆ.

# ಏಕಾಂಗಿತನದ ಮಹತ್ವ

ರೂಪಾ ಪೈ

ನಾನು ಮೊನ್ನೆ ತಾನೆ ಒಂದು ಅತ್ಯಂತ ಚೇತೋಹಾರಿಯಾದ ಯೂರೋಪ್ ಮತ್ತು ಇಂಗ್ಲೆಂಡ್ ದೇಶಗಳ ಪ್ರವಾಸವನ್ನು ಮುಗಿಸಿ ಹಿಂತಿರುಗಿದ್ದಾಯಿತು. ಅಬ್ಬ, ಏನು ಸೆಖೆ ಅಂತೀರಿ ಅಲ್ಲಿ. ಎಲ್ ನೀನೋ ಪ್ರಭಾವದಿಂದ ಎಂದೂ ಕಾಣದ ಹೀಟ್ ವೇವನ್ನು ಅನುಭವಿಸ ಬೇಕಾದಾಗ ಹಲವೊಮ್ಮೆ ನನಗೆ ಬೆಂಗಳೂರಿನ ನೆನಪು ಬಂದಿದ್ದು ನಿಜ. ಯೂರೋಪ್‌ನಲ್ಲಿ ಓಡಾಡುವುದು ಭಾರತೀಯರಾದ ನಮಗೆ ಬಹು ದುಬಾರಿ. ವಿಮಾನ ಹಾರಾಟದ ದರ ವಿಮಾನದಂತೆಯೇ ಗಗನಕ್ಕೇರಿದೆ.  ಮೊದಲೇ ಮಳೆ ಅದರ ಮೇಲೆ ಕೊಳೆ ಎಂಬಂತೆ ಈಗ ರೂಪಾಯಿ ಮೌಲ್ಯವೂ ಪಾತಾಳಕ್ಕೆ ಇಳಿದಿದೆ. ಅಲ್ಲಿನ ನಗರಗಳ ಸ್ವಚ್ಛತೆ, ನಗರ ಸಾರಿಗೆಯ ಕರಾರುವಾಕ್ಕಾದ ಚಾಲನೆ, ಸುಖವಾಗಿ ಯಾವ ಅಡೆತಡೆಯೂ ಇಲ್ಲದೆ ನಡೆದಾಡಬಹುದಾದ  ಫುಟ್‌ಪಾತ್ ಗಳು, ಇವೆಲ್ಲವನ್ನು ಗಮನಿಸಿದಾಗ, ನಮ್ಮ ಊರಿನಲ್ಲಿ ಇವುಗಳ ಅಭಾವವನ್ನೇ ಸಹಜ, ಸ್ವಾಭಾವಿಕ ಅಂತ ನಾವು ಒಪ್ಪಿಕೊಂಡಿರುವುದು ನೆನಪಾಗಿ ನಾಚುವಂತಾಯಿತು.

ಇಷ್ಟೆಲ್ಲ ಕಿರಿಕಿರಿಗಳಿದ್ದರೂ ನನ್ನ ಪ್ರವಾಸ ನಿಜಕ್ಕೂ ಅವಿಸ್ಮರಣೀಯವಾಗಿತ್ತು ಎನ್ನಬಹುದು. ಸಂತಸದಿಂದ ಆರಾಮವಾಗಿ ಅಲ್ಲೆಲ್ಲಾ ಓಡಾಡಿಕೊಂಡು ಒಂದು ಮರೆಯಲಾಗದ ಅನುಭವವನ್ನು ನನ್ನದಾಗಿಸಿಕೊಂಡದ್ದಕ್ಕೆ ಮುಖ್ಯಕಾರಣವೆಂದರೆ ನನ್ನ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ನಾನು ಒಬ್ಬೊಂಟಿಗಳಾಗಿ ಪ್ರಯಾಣಮಾಡಿದ್ದೆ.

"ಒಬ್ಬೊಂಟಿಗಳಾಗಿ" ಎಂದ ತಕ್ಷಣ, ನಿಮ್ಮ ಕಲ್ಪನಾ ಲಹರಿ ಜಾಗೃತವಾಗುವುದಕ್ಕೆ ಮುಂಚೆಯೇ ನಾನು ಇದನ್ನ ವಿವರಿಸಿಬಿಡುವೆ. ನಾನು ನೆದರ್ಲೆಂಡ್ಸಿನಲ್ಲಿರುವ ನನ್ನ ಮಗಳ ಮನೆಗೆ ಹೊರಟಿದ್ದೆ. ನನ್ನ ಮೂರು ವಾರಗಳ ಪ್ರವಾಸದಲ್ಲಿ ಎಲ್ಲೆಡೆಗಳಲ್ಲೂ ನಾನು ಗೆಳತಿಯರ, ಬಂಧು ಬಾಂಧವರ ಜೊತೆ ತಂಗುವ ವ್ಯವಸ್ಥೆ ಮಾಡಿಕೊಂಡಿದ್ದೆ. ಅಷ್ಟೇ ಅಲ್ಲದೆ ಅನೇಕ ಆಪ್ತರೊಡನೆ ನಾನು ನನ್ನ ಲೈವ್ ಲೊಕೇಷನ್ ಹಂಚಿಕೊಂಡಿದ್ದೆ. ಅವರುಗಳು, (ಬೇರೇನೂ ಕೆಲಸವಿಲ್ಲದಿದ್ದರೆ !)  ನಾನು ಎಲ್ಲಿದ್ದೇನೆ ಅಂತ 24/7 ಗುರುತಿಸಬಹುದಾಗಿತ್ತು. ನನ್ನ "ಒಬ್ಬೊಂಟಿತನ" ಕ್ಕೆ ಇಷ್ಟೆಲ್ಲ ಸೇಫ್ಟಿನೆಟ್ ಇತ್ತು ಅನ್ನಿ.

ನಾನು ಒಬ್ಬೊಂಟಿಗಳಾಗಿ ಪ್ರಯಾಣ ಮಾಡುವುದಕ್ಕೆ ಮುಖ್ಯ ಕಾರಣ, ನಾನು ಮೊಟ್ಟಮೊದಲ ಬಾರಿಗೆ ನನ್ನ ಇಬ್ಬರು ಹುಡುಗರನ್ನೂ-ಅಂದರೆ ನನ್ನ ಪತಿ ಹಾಗೂ ಇಪ್ಪತ್ತನಾಲ್ಕು ವರ್ಷ ವಯಸ್ಸಿನ ಮಗ–ಮನೆಯಲ್ಲಿ ಬಿಟ್ಟು ಪ್ರವಾಸ ಕೈಗೊಂಡಿದ್ದೆ. ಇನ್ನೊಂದು ಕಾರಣವೂ ಇತ್ತು. ಐವತ್ತರ ಗಡಿಯನ್ನು ದಾಟಿರುವ ನನಗೆ, ಹಿಂದೊಮ್ಮೆ ಈ ಎಲ್ಲ ದೇಶಗಳನ್ನೂ ನೋಡಿದ್ದ ಕಾರಣದಿಂದ, ಪ್ರೇಕ್ಷಣೀಯ ಸ್ಥಳಗಳನ್ನು ತಪ್ಪದೇ ನೋಡಲೇಬೇಕೆಂಬ ಇರಾದೆ ಇರಲಿಲ್ಲ. ನಾನು ತಂಗುತ್ತಿದ್ದ ಎಲ್ಲ ಸ್ಥಳಗಳಲ್ಲೂ, ನನ್ನ ಮಗಳಿಗಾಗಲೀ, ನನ್ನ ಸ್ನೇಹಿತೆಯರಿಗಾಗಲೀ ಅವರದ್ದೇ ಆದ ಕೆಲಸ ಕಾರ್ಯಗಳು ಇರುತ್ತಿದುದರಿಂದ, ನನ್ನ ಆರೈಕೆ ಮಾಡುವುದಕ್ಕೆ ಅವರುಗಳಿಗೆ ವ್ಯವಧಾನವೂ ಇರುತ್ತಿರಲಿಲ್ಲ. ಹಾಗಾಗಿ ಆ ಇಪ್ಪತ್ತೆರಡು ದಿನಗಳ ಕಾಲ ನಾನು ಯಾರೊಬ್ಬರ ಒಪ್ಪಿಗೆ, ಸಂಭಾಷಣೆ, ದಾಕ್ಷಿಣ್ಯ ಇವುಗಳಿಲ್ಲದೇ ನನಗೆ ಬೇಕಾದ್ದು ಮಾಡಿಕೊಂಡು, ಸುಖವಾಗಿ ಇರಬಹುದಾಗಿತ್ತು. ಎಂತಹ ಸುವರ್ಣಾವಕಾಶ !

ನಾನು ಈ ಸುವರ್ಣಾವಕಾಶವನ್ನು ಜಾರಿಹೋಗಲು ಬಿಡಲಿಲ್ಲ. ಪ್ರತಿದಿನ ಬೆಳಗ್ಗೆ ಸಂತಸದಿಂದ, ಪಾಸ್‌ಪೋರ್ಟ್, ಫಾರೆಕ್ಸ್ ಕಾರ್ಡ್ ಮತ್ತು ಫೋನ್‌ಗಳನ್ನು ಭದ್ರವಾಗಿ ನನ್ನ ಸೊಂಟಪಟ್ಟಿಯ ಚೀಲದ ಒಳ ಜೇಬಿನಲ್ಲಿರಿಸಿ, ನನ್ನ ದಿನದ ಅನ್ವೇಷಣೆಗೆ ಹೊರಡುತ್ತಿದ್ದೆ. ಆ ಊರುಗಳಲ್ಲಿ ಪಿಕ್ ಪಾಕೆಟ್‌ಗಳು ಜಾಸ್ತಿ. ಹಾಗಾಗಿ ಈ ಭದ್ರತಾ ಕ್ರಮಗಳು ಅಗತ್ಯ. ಗೂಗಲ್ ಮ್ಯಾಪ್ ಸಹಾಯದಿಂದ ಯಾವುದಾದರೂ ಒಂದು ಮ್ಯೂಸಿಯಮ್, ಉದ್ಯಾನವನ ಅಥವಾ ಗ್ರಂಥಾಲಯ ಇವುಗಳಿಗೆ ಹೋಗುವುದು, ಅಥವಾ ಒಂದು ವಾಕಿಂಗ್ ಟೂರ್ ಮಾಡುವ ಗುಂಪನ್ನು ಸೇರಿಕೊಳ್ಳುವುದು ಇಷ್ಟನ್ನು ಮಾಡುವ ಹೊತ್ತಿಗೆ ಅರ್ಧ ದಿನ ಮುಗಿದಿರುತ್ತಿತ್ತು. ಉದ್ದೇಶ ಪೂರ್ವಕವಾಗಿಯೇ ನಾನು ಮಿಕ್ಕ ಅರ್ಧದಿನಕ್ಕೆ ಯಾವ ಕಾರ್ಯಕ್ರಮವನ್ನು ನಿಗದಿಸುತ್ತಿರಲಿಲ್ಲ. ಅಚಾನಕ್ಕಾಗಿ ಏನಾದರೊಂದು ಖುಷಿ ಕೊಡುವ ಅನುಭವ ನನಗಾಗಿ ಕಾದಿದ್ದರೆ, ಅದಕ್ಕೆ ಅವಕಾಶ ಸಿಗಲಿ ಅಂತ ಈ ಹಂಚಿಕೆ. ಇದಕ್ಕೆ ಇಂಗ್ಲೀಷಿನಲ್ಲಿ ಸೆರಿಂಡಿಪಿಟಿ (ಅನಿರೀಕ್ಷಿತ ಸುಯೋಗ) ಅನ್ನುತ್ತಾರೆ.



ಅಂತಹ ಅನಿರೀಕ್ಷಿತ ಸುಯೋಗಗಳು ಧಾರಾಳವಾಗಿಯೇ ಒದಗಿಬಂದದ್ದು ನನ್ನ ಅದೃಷ್ಟ! ಮ್ಯೂನಿಕ್, ಸಾಲ್ಸ್‌ಬರ್ಗ್, ರಾಟರ್‌ಡ್ಯಾಮ್, ಆ್ಯಂಟ್‌ವೆರ್ಪ್ ಮತ್ತು ಲಂಡನ್ ಗಳಲ್ಲಿ ನಾನು ಕಣ್ಣಿಗೆ ಚಂದವೆನಿಸಿದ ರೆಸ್ಟ್ ರಾಂಟ್ ಒಂದಕ್ಕೆ ನುಗ್ಗುವುದು. ಅಲ್ಲಿ ದೊರಕುವ ಬೆಣ್ಣೆ ಹಚ್ಚಿದ ಕ್ರಸಾಂಟ್, ಒಣ ದ್ರಾಕ್ಷಿ ಭರಿತ ಸ್ಕಾನ್‌ಗಳು, ರುಚಿಕರ ಸಾಹರ್ಟೋರ್ಟೆ, ಆರೋಗ್ಯಕರ ಡಚ್ ತಿನಿಸು ಪ್ಯಾನಿಕೋಕನ್ (ಚೀಸ್ ಮತ್ತು ಸಕ್ಕರೆ ಲೇಪದ ಶುಂಠಿ–ಆಹಾ, ಅದರ ರುಚಿಯೇ ರುಚಿ!) ಇವೆಲ್ಲವನ್ನೂ ಸಾವಧಾನವಾಗಿ ಸವಿದ ಮಧುರ ಕ್ಷಣಗಳನ್ನು ಸುಲಭವಾಗಿ ಮರೆಯಲಾಗದು. ಒಮ್ಮೊಮ್ಮೆ ನನಗೆ ಅದೃಷ್ಟ ಖುಲಾಯಿಸಿದ್ದರೆ ಈ ರೆಸ್ಟ್ ರಾಂಟ್ ಗಳಲ್ಲಿ ಉಚಿತವಾಗಿ ಕುಡಿಯುವ ನೀರೂ ದೊರಕುತ್ತಿತ್ತು. ಸಾಮಾನ್ಯವಾಗಿ ಇಲ್ಲೆಲ್ಲಾ ಒಂದು ಬಾಟಲ್ ನೀರಿನ ಬೆಲೆ ಬೀರಿನ ಬೆಲೆಯನ್ನೂ ಮೀರಿರುತ್ತಿತ್ತು.

ಕಂಡ ಕಂಡ ಕಡೆ ನಾನು ಓಡಾಡುತ್ತಿದ್ದೆ. ಬೀದಿಯಲ್ಲಿ ಸಾಗುತ್ತಿದ್ದ ಪೆರೇಡುಗಳು, ಚಿಕ್ಕಪುಟ್ಟ ಬೀದಿ ಸಂತೆಗಳು, "ವರ್ಡ್ಸ್ ಆನ್ ವಾಟರ್" ಎಂಬ, ದೋಣಿಯ ಮೇಲಿನ ಪುಸ್ತಕದ ಅಂಗಡಿ, ಇವೆಲ್ಲವನ್ನು ನಾನು ಬೆರಗುಗಣ್ಣಿನಿಂದ ನೋಡುತ್ತ ಸಾಗಿದ್ದೆ. ಒಂದೆಡೆ ನೂರ್ ಇನಾಯತ್ ಖಾನ್ ಳ ಪ್ರತಿಮೆಯೊಂದನ್ನು ಮಾರ್ಕೆಟ್ ಚೌಕದಲ್ಲಿ ನೋಡಿದೆ. ನಮ್ಮ ಟಿಪ್ಪು ವಂಶಸ್ಥಳಾದ ಈಕೆ ಎರಡನಯ ಮಹಾಯುದ್ಧದಲ್ಲಿ ಬ್ರಿಟಿಷರ ಪರವಾಗಿ ಗೂಢಚರ್ಯೆ

ಮಾಡಿ, ಜರ್ಮನರ ಕೈಗೆ ಸಿಕ್ಕು, ತನ್ನ ಇಪ್ಪತ್ತೇಳನೆಯ ವಯಸ್ಸಿನಲ್ಲಿ ಜರ್ಮನರಿಂದ ಗಲ್ಲು ಶಿಕ್ಷೆಗೆ ಗುರಿಯಾದಳು. ಇಲ್ಲಿನ ಜನಭರಿತ ನಗರಗಳಲ್ಲೂ ಪಾರ್ಕುಗಳನ್ನು, ನಾಲೆಗಳನ್ನು ಬಳಸಿ ಹತ್ತಿರದ ದಾರಿಗಳನ್ನು ಕಂಡುಕೊಳ್ಳಬಹುದಾಗಿತ್ತು.

ಬಸ್ಸು, ಟ್ರಾಮ್, ಮೆಟ್ರೋ, ಟ್ರೇನ್ ಇವುಗಳನ್ನು ಬಳಸಿ ಎಲ್ಲಿ ಬೇಕೆಂದರಲ್ಲಿ ನಾನು ಓಡಾಡುತ್ತಿದ್ದೆ. "ನಿಜವಾಗಿ ಅಲ್ಲಿಗೆ ಹೋಗಲೇ ಬೇಕಾ?", "ಈ ಜಾಗಕ್ಕೇಕೆ ಹೋಗಬಾರದು?", "ಸುಸ್ತಾಗ್ತಾ ಇದೆ ಕಣೆ", "ಹಸಿವಾಗ್ತಾ ಇದೆ", "ಇಲ್ಲೀಗ್ ಬಂದು ವೆಜಿಟೇರಿಯನ್ ರೆಸ್ಟ್ರಾಂಟ್‌ಗೆ ಹೋಗ್ಬೇಕೇ ?", "ಎಲ್ಲಾನೂ ಇವತ್ತೇ ನೋಡಿ ಮುಗಿಸ್ಬೇಕೆ?", "ಇನ್ನೊಂದು ಡೆಸರ್ಟ್", "ಇನ್ನೊಂದು ಬುಕ್ ಶಾಪಾ?"

.........ಇವ್ಯಾವುದರ ಕಾಟಾನೂ ಇರಲ್ಲ ನೋಡಿ, ಒಬ್ಬೊಂಟಿಗಳಾಗಿ ಪ್ರವಾಸ ಮಾಡುವವಳಿಗೆ.

ಒಬ್ಬೊಂಟಿ ಪ್ರವಾಸದ ಬಗ್ಗೆ ನಾನು ಉತ್ಪ್ರೇಕ್ಷೆ ಮಾಡ್ತಾ ಇದೀನಿ ಅಂತ ಅನ್ನಿಸಬಹುದು ನಿಮಗೆ. ಆದರೆ ಕಳೆದ ಹಲವು ವಾರಗಳಲ್ಲಿ ನಾನು ಕಲಿತಿರುವ ಮುಖ್ಯ ಪಾಠವೆಂದರೆ ನಮ್ಮ ಆಳ ಅನಿಸಿಕೆಗಳ ಮೇಲೆ ಭರವಸೆಯನ್ನಿಡುವುದು ನಿಜಕ್ಕೂ ಅತಿ ಮುಖ್ಯ.

ಹಾಗಾಗಿ ನನ್ನ ಅಭಿಪ್ರಾಯಕ್ಕೆ ನಾನು ಬದ್ಧಳು. ಜೀವನವೆಂಬ ಈ ತಿರುಗು ಚಕ್ರದಲ್ಲಿ ನಾವು ಮಗಳಾಗಿ, ಪತ್ನಿಯಾಗಿ, ಸ್ನೇಹಿತೆಯಾಗಿ, ತಾಯಿಯಾಗಿ ಅನೇಕ ವೇಷಗಳನ್ನು ಧರಿಸಬೇಕಾದದ್ದು ಅನಿವಾರ್ಯ. ಎಲ್ಲ ವೇಷಗಳೂ ಉಲ್ಲಾಸಕರ ಮತ್ತು ತೃಪ್ತಿದಾಯಕ. ಒಪ್ಪುತ್ತೇನೆ. ಆದರೂ ನಾನು ಕೇವಲ ನನ್ನೊಂದಿಗೆ ಒಂದು ಹೊಸ ಸಾಹಸಕ್ಕೆ, ಒಂದು ನೂತನ ಅನ್ವೇಷಣೆಗೆ ತೊಡಗಿಸಿಕೊಳ್ಳುವದರಲ್ಲಿನ ವರ್ಣಿಸಲಾಗದ ಸುಖವನ್ನು ಅನುಭವಿಸಿಯೇ ತಿಳಿಯಲು ಸಾಧ್ಯ

ಐ ಹೈಲಿ ರೆಕಮೆಂಡ್ ಇಟ್.



# ವೈದ್ಯರಲ್ಲಿ ರಸನಿಮಿಷಗಳು

ಡಾ. ಓಂಪ್ರಕಾಶ್

ಆಸ್ಪತ್ರೆ , ವೈದ್ಯರು, ಇಂಜೆಕ್ಷನ್ ಅಂದರೆ ಯಾರಿಗಾದರೂ ಗಾಬರಿ ಆಗೋದು ಸಹಜ. ಆದರೂ ವೈದ್ಯವೃತ್ತಿಯಲ್ಲಿ ಆಗಾಗ್ಗೆ ಹಾಸ್ಯದ ಬುಗ್ಗೆಗಳು ಚಿಮ್ಮುತ್ತಿರುವುದು ಬಹುಮಂದಿಗೆ ಗೊತ್ತೇ ಇರುಲ್ಲ. ಈ ಕೊರತೇನ ಕಡಿಮೆಮಾಡಲು ಈ ಲೇಖನ. ಪರಾಂಬರಿಸಿ.

ಒಂದು ಸೋಮವಾರ ಬೆಳಗ್ಗೆ, ನಾನು, ನನಗೆ ನಿಗದಿತವಾದ ಔಟ್ ಪೇಷಂಟ್ ಕೊಠಡಿಯಲ್ಲಿ ಕುಳಿತಿದ್ದೆ. ಸಮಯ ಎಂಟೂ ಮುಕ್ಕಾಲಾಗಿತ್ತು. ಮೋಡ ಕವಿದ ವಾತಾವರಣ. ಹಾಗಾಗಿ ರೋಗಿಗಳೂ ಕಡಿಮೆ. ದಿನದ ಮೊದಲ ಪೇಷಂಟು ಒಬ್ಬ ಅರುವತ್ತು ವರ್ಷ ವಯಸ್ಸಿನ ಸಜ್ಜನರು. ಅವರನ್ನು ನರ್ಸ್ ನನ್ನ ಮುಂದಿನ ಸ್ಟೂಲಿನಲ್ಲಿ ಕೂರಿಸಿದಳು. ಆವರ ಹೆಸರು ರಾಜಾರಾಮ್. ದೊಡ್ಡಬಳ್ಳಾಪುರದ ನಿವಾಸಿ. ಆತ ಗಂಭೀರವಾಗಿ ಕುಳಿತಿದ್ದರು. ನಾನು ಅವರನ್ನು ಕುರಿಕು, "ಏನು, ರಾಜಾರಾಮ್, ಏನು ತೊಂದರೆ?" ಅಂತ ಪ್ರಶ್ನಿಸಿದೆ. ಆತ ಉತ್ತರಿಸಲಿಲ್ಲ. " ಕಿವಿ ಕೇಳುತ್ತೇನು?" ಅಂತ ಕೇಳಿದೆ.

"ನನಗಾ?" ಅಂತ ನನ್ನನ್ನೇ ಪ್ರಶ್ನಿಸಿದರು.

"ಈ ರೂಮಿನಲ್ಲಿ ಇರೋದು ನಾವಿಬ್ಬರೇ . ನಿಮ್ಮನ್ನೇ ಕೇಳ್ತಿರೋದು" ಅಂದೆ.

"ನನ್ನ ಮಗ ಬರ್ತಾನೆ" ಅಂದರು ಆ ಮಿತಭಾಷಿ. ಅಷ್ಟುಹೊತ್ತಿಗೆ ಸುಮಾರು ಮೂವತ್ತು ವರ್ಷ ವಯಸ್ಸಿನ ಒಬ್ಬ ಯುವಕ ಬೇಗ ಬೇಗ ನಡೆಯುತ್ತಾ ಒಳಕ್ಕೆ ಬಂದ." ಸಾರಿ ಡಾಕ್ಟರ್ ಸ್ಕೂಟರ್ ನಿಲ್ಲಿಸಿ ಬರೋದು ನಿಧಾನ ಆಯ್ತು. ನಾನು ರಾಜೀವ್ " ಅಂತ ಏದುಸಿರು ಬಿಡುತ್ತಾ ಹೇಳಿದ.

"ಇದೇನ್ರೀ, ನಿಮ್ಮ ತಂದೆ ಸ್ಲೋಮೋಷನ್‌ನಲ್ಲಿ ಮಾತಾಡ್ತಾ ಇದಾರಲ್ಲಾ?" ಅಂತ ನಾನು ಕೇಳಿದೆ.

"ಡಾಕ್ಟರ್, ಚೆನ್ನಾಗಿಯೇ ಇದ್ರು, ಎರಡು ವಾರಗಳ ಹಿಂದೆ. ಇದ್ದಕ್ಕಿದ್ದಂತೆ ಮಾತು ನಿಂತುಹೋಯ್ತು. ಲೋಕಲ್ ಡಾಕ್ಟರ್ ಬ್ರೇನ್ ಸ್ಕ್ಯಾನ್ ಮಾಡಬೇಕು ಅಂದ್ರು. ಸೆಕೆಂಡ್ ಒಪೀನಿಯನ್ ಇರಲಿ ಅಂತ ನಿಮ್ಹತ್ರ ಕರ್ಕೊಂಡು ಬಂದೆ" ಅಂದ ಮಗಮಹರಾಯ.

ನಾನು "ರೋಗಿ" ಯನ್ನ ಸಾವಧಾನವಾಗಿ ಪರಿಶೀಲಿಸಿದೆ. ಎಲ್ಲ ಸರಿಯಾಗಿದ್ದಂತೆ ಕಂಡಿತು. ಇಂತಹ ಕೇಸುಗಳಲ್ಲಿ ಅನೇಕ ಬಾರಿ ರೋಗಿಗಳು ಮನೆಯವರ ಮುಂದೆ ಮನಸ್ಸು ಬಿಚ್ಚಿ ಯಾವುದನ್ನೂ ಹೇಳುವುದಿಲ್ಲ.

"ಮಿಸ್ಟರ್ ರಾಜೀವ್, ನೀವು ಸ್ವಲ್ಪಹೊತ್ತು ಆಚೆ ಹೋಗುತ್ತೀರಾ? ನಿಮ್ಮ ತಂದೆಯವರನ್ನ ಸ್ವಲ್ಪ ಖಾಸಗಿಯಾಗಿ ಮಾತನಾಡಿಸಬೇಕಾಗಿತ್ತು." ಅಂತ ಮಗನಿಗೆ ಹೇಳಿದೆ. ರಾಜೀವ್ ಹೊರಕ್ಕೆ ಹೋದಮೇಲೆ, ನಾನು ತಂದೆಯ ಕಡೆ ತಿರುಗಿ, "ನೋಡಿ ರಾಜಾರಾಮ್, ನಿಮಗೆ ದೈಹಿಕವಾಗಿ ಯಾವ ಬಗೆಯ ತೊಂದರೆಯೂ ಇಲ್ಲ. ನನ್ನ ಮುಂದೆ ಮುಚ್ಚುಮರೆಯಿಲ್ಲದೇ ಎಲ್ಲಾ ವಿಷಯಗಳನ್ನು ತಿಳಿಸಿಬಿಡಿ." ಅಂತ ನಯವಾಗಿಯೇ ಹೇಳಿದೆ.

ರಾಜಾರಾಮ್ ಒಂದೆರಡುನಿಮಿಷ ಅತ್ತಿತ್ತ ನೋಡಿ, "ಡಾಕ್ಟ್ರೇ ನನ್ನ ಹೆಂಡ್ತಿ ಬಹಳ ಮೊಂಡು. ರಾಜೀವ, ತನ್ನ ಕೊಲೀಗ್ ಒಬ್ಬಳನ್ನ ಪ್ರೀತಿಸ್ತಾ ಇದ್ದಾನೆ. ಹುಡುಗಿ ಬಹಳ ಒಳ್ಳೆಯವಳು. ನನ್ನ ಹೆಂಡ್ತಿ ಈ ಮದುವೆ ಬೇಡ ಅಂತ ಹಠ ಹಿಡಿದುಬಿಟ್ಟಿದ್ದಾಳೆ. ಅದಕ್ಕೆ

ನಾನು, ನಿನಗೆ ಬುದ್ಧಿ ಬರೋವರ್ಗೂ ಮಾತಾಡುಲ್ಲ ಅಂತ ಮೌನವ್ರತ ಹಿಡಿದುಬಿಟ್ಟಿದ್ದೀನಿ" ಅಂತ ಹೇಳಿದ್ರು.

ಸರಿ ಈ ಸಂಸಾರ ಕದನಕ್ಕೆ ಉದಾಸೀನವೇ ಮದ್ದು, ಹೇಗಿದ್ದರೂ ಟೈಮ್ ಈಸ್ ದ ಗ್ರೇಟೆಸ್ಟ್ ಹೀಲರ್ ಅಲ್ಲವೇ ಅಂದುಕೊಂಡು, ನಾನು

ರಾಜೀವನ್ನ ಒಳಗೆ ಕರೆದು "ಈ ವೈಟಮಿನ್ ಮಾತ್ರೆನ ನಿಮ್ಮ ತಂದೆ ಎಂಟು ವಾರ ತಗೋಬೇಕು. ಇದು ತಾನೇ ಸರಿಹೋಗತ್ತೆ " ಅಂತ ಹೇಳಿ ಕಳಿಸ್ದೆ.

ಎರಡು ತಿಂಗಳಾದ ಮೇಲೆ ರಾಜೀವನೇ ಖುದ್ದು ಬಂದು ತನ್ನ ಮದುವೆ ಆಮಂತ್ರಣ ಕೊಟ್ಟು ಹೋದ.

*****

ಅಂದು ಬೆಳಗ್ಗೆ ಒಂಭತ್ತು ಘಂಟೆ. ಕಾರ್ ನಿಲ್ಲಿಸಿ, ವಾರ್ಡ್ ಗೆ ರೌಂಡ್ಸ್ ಮಾಡಲು ನಡೀತಿದ್ದೆ. ಒಬ್ಬ ಧೃಢಕಾಯ ಸೂಟುಧಾರಿ ಯುವಕ, ಮೋಟರ್ ಸೈಕಲ್ ನಿಲ್ಲಿಸಿ, ನನ್ನ ಬಳಿ ಬಂದು ನಿಂತು, "ಡಾಕ್ಟ್ರೇ ಲೇಬರ್ ವಾರ್ಡ್ ಎಲ್ಲಿದೆ?" ಅಂತ ಆತುರದಿಂದ ಕೇಳಿದ. ಅರೆ, ಅಲ್ಲಿ ಇವನಿಗೇನು ಕೆಲಸ ಅಂದುಕೊಂಡು, "ಆರ್ ಯು ಎಕ್ಸ್‌ಪೆಕ್ಟಿಂಗ್ ಎ ಬೇಬಿ?" ಅಂತ ಕೇಳಿದೆ.

"ಅಯ್ಯೋ ನನಗೆ ಮದುವೆನೇ ಆಗಿಲ್ಲ ಡಾಕ್ಟರ್, ಡಾ.ಶೋಭಾ ಅವರಿಗೆ ಔಷಧಿ ಸ್ಯಾಂಪಲ್ ಕೊಡುಕ್ಕೆ ಬಂದಿದೀನಿ. ನಾನು ಸಿಪ್ಲ ಕಂಪನಿ ರೆಪ್" ಅಂದುಬಿಡೋದೇ!!

*****

ಶುಕ್ರವಾರ ಬೆಳಗ್ಗೆ ವಾರ್ಡ್ ರೌಂಡ್ಸ್ ಮಾಡುತ್ತಿದ್ದೆವು. ಇಪ್ಪತ್ತೇಳನೆಯ ಬೆಡ್ ನಲ್ಲಿ ಒಬ್ಬ ಡಯಾಬಿಟೀಸ್ ರೋಗಿ ಇದ್ದರು. ನಮ್ಮನ್ನು ನೋಡಿದ ತಕ್ಷಣ ಅವರು," ಯಾಕೋ ಶುಗರ್ ಕಡಿಮೆ ಆಗ್ತಾನೇ ಇಲ್ಲ. ಇನ್ಸುಲಿನ್ ಎರಡು ವಾರದ ಹಿಂದೆ ಶುರು ಮಾಡಿತ್ತು.

ಮಾತ್ರೇನೇ ಕೊಡಿ ಡಾಕ್ಟರ್, ಈ ಇನ್ಸುಲಿನ್ ನನಗೆ ಒಗ್ತಾ ಇಲ್ಲ" ಅಂತ ಅಲವತ್ತುಕೊಂಡರು.

ನನ್ನ ಸಹೋದ್ಯೋಗಿ ವೈದ್ಯರು, "ಯಾವ ಇನ್ಸುಲಿನ್ ತಗೋತಿದೀರಾ?" ಅಂತ ಕೇಳಿದರು.

"ಜಾಸ್ತಿ ಬೆಲೆ ಇರೋ ಹನುಮಾನ್ ಇನ್ಸುಲಿನ್" ಅಂತ ಉತ್ತರ ಬಂತು. ಪಾಪ, ಅವರ ಬಾಯಲ್ಲಿ ಹ್ಯೂಮನ್ ಪದ ಹನುಮಾನ್ ಆಗಿತ್ತು!

ನನ್ನ ಸಹೋದ್ಯೋಗಿ ಬಹು ಗಂಭೀರವಾಗಿ, "ಲಂಕಾ ಫಾರ್ಮಸಿಯಿಂದ ಬರುತ್ತೇನು?" ಎಂದರು.

*****

ಆಕೆಯ ಹೆಸರು ಸೀತಾಬಾಯಿ. ವಯಸ್ಸು ಎಪ್ಪತ್ತೈದು. ಆಕೆಯ ಪತಿ ಎರಡು ವರ್ಷಗಳ ಹಿಂದೆಯೇ ಹೃದಯಾಘಾತದಿಂದ ತೀರಿಕೊಂಡಿದ್ದರು.. ಸೀತಾಬಾಯಿಗೆ ರಕ್ತದೊತ್ತಡ, ಕೀಲು ನೋವು ಈ ತೊಂದರೆಗಳಿಗಾಗಿ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದರು. ಹಲವು ದಿನಗಳ ಚಿಕಿತ್ಸೆಯಿಂದಲೂ ಏನೂ ಪ್ರಯೋಜನವಾದಂತೆ ಕಾಣಲಿಲ್ಲ. "ಮನೇಗೇ ಕಳಿಸ್ಬಿಡಿ ಡಾಕ್ಟರೇ, ನನ್ನ ಕಾಯಿಲೇಗೆ ಮದ್ದೇ ಇಲ್ಲ. ಯಾವ ಕರ್ಮದಿಂದಲೋ ಈಗ ಅನುಭವಿಸ್ತಾ

ಇದ್ದೀನಿ" ಅಂತ ಆಕೆ ನನ್ನನ್ನು ನೋಡಿದ ಕೂಡಲೇ ಗೋಳಾಡಿದರು.

"ನೋಡೀಮ್ಮಾ ನಿಮ್ಮ ಪತಿ ರಾಮಾಚಾರ್, ನೀವು ಸೀತಾಬಾಯಿ. ರಾಮಾಯಣದ ಸೀತೆಗೆ ಎಷ್ಟು ಕಷ್ಟ ಬಂತು ನೆನಪಿಸಿಕೊಳ್ಳಿ. ಈಗ ನೋಡಿ. ನೀವು ಹುಟ್ಟಿದಾಗ, ಭಗವಂತ ಭೂಮಿಗಿಳಿದು "ಈ ಮಗೂಗೆ ಜೀವನ ಪರ್ಯಂತ ಆರೋಗ್ಯ ದಯಪಾಲಿಸ್ತೇನೆ" ಅಂತ ಕರಾರು ಪತ್ರ ಏನಾದ್ರೂ ಕೊಟ್ಟಿದ್ದನೇನು?" ಅಂತ ಹೇಳಿಬಿಟ್ಟೆ.

ಅಷ್ಟುಹೊತ್ತಿಗೆ ಸರಿಯಾಗಿ ವಾರ್ಡಿನ ವೆಂಟಿಲೇಟರಿನ ಬಳಿ ಕಪಿಯೊಂದು ಕಾಣಿಸಿಕೊಂಡಿತು. ನಾನು ಆ ಕಪಿಯನ್ನು ಸೀತಮ್ಮನವರಿಗೆ ತೋರಿಸಿ, "ಸೀತಮ್ಮಾ, ನೋಡಿ ನನ್ನ ಮಾತಿನ ಸಾಕ್ಷಿಗಾಗಿ ಸಾಕ್ಷಾತ್ ಆಂಜನೇಯನೇ ದಯಮಾಡಿಸಿದ್ದಾನೆ." ಅಂತ ಹೇಳಿದೆ. ಅಂದಿನಿಂದ ಮೂರು ದಿನಗಳಲ್ಲಿ ಆಕೆ ಅಚ್ಚರಿಯಾಗುವಂತೆ ಗುಣಮುಖರಾದರು. ಕಾಕತಾಳೀಯ ಅಂತೀರಾ? ಇರಬಹುದು ಬಿಡಿ!



# ಬಕೆಟಿಗರು

ನಳಿನಿ ಟಿ. ಭೀಮಪ್ಪ, ಧಾರವಾಡ

ಮಹಿಳೆಯರು ಚರ್ಮದ ಅಂದ ಚಂದ ಹೆಚ್ಚಿಸಲು ಹಾಗೂ ಇರುವ ವಯಸ್ಸನ್ನು ಮರೆ ಮಾಡಲು ಮತ್ತು ಬಿಗಿಗೊಳಿಸಲು ಕಾಲಕಾಲಕ್ಕೆ ಬ್ಯೂಟಿ ಹಟ್‌ಗಳಿಗೆ ತೆರಳಿ, ಅಲ್ಲಿನ ರೂಪದರ್ಶಿಯರ ಮೂಲಕ ಫೇಶಿಯಲ್ಲು, ಬ್ಲೀಚಿಂಗು, ಮೇಕಪ್ಪುಗಳ ಮೊರೆ ಹೋಗುವುದು ಸಹಜ. ಹಾಗೆಯೇ ಕಟ್ಟಡಗಳ ಅಂದ ಚಂದ ಹೆಚ್ಚಿಸಲು ಹಾಗೂ ದೀರ್ಘಾವಧಿ ಬಾಳಿಕೆ ಬರಲು ಕಾಲಕಾಲಕ್ಕೆ ಸುಣ್ಣ, ಬಣ್ಣಗಳ ಲೇಪನಗಳಾಗುವುದು ಬಹುಮುಖ್ಯ. ಪೈಂಟರ್ಸ್‌ಗಳು ಉಪ್ಪುಕಾಗದದಿಂದ ಉಜ್ಜಿ, ಕನ್ಸೀಲರ್‌ನಂತೆ ಕ್ರಾಕ್ಸ್‌ಗಳಿಗೆಲ್ಲ ತುಂಬಿ ಲಪ್ಪ ಬಳಿದು ನಂತರ ಸುಣ್ಣ ಬಣ್ಣ ಬಳಿದು ಹೊಸರೂಪ, ಹೊಸ ನೋಟ ಕೊಡುವುದರಲ್ಲಿ ಯಶಸ್ವಿಯಾಗುವರು.




ಹಚ್ಚಿದ ಬಣ್ಣ ವರ್ಷಾನುಗಟ್ಟಲೆ ಬಾಳಿಕೆ ಬರುತ್ತದೆ ಎಂದು ಜಾಹೀರಾತುಗಳಲ್ಲಿ ತಮ್ಮ ತಮ್ಮ ಪೈಂಟ್ಸ್‌ಗಳ ಬಗ್ಗೆ, ಬಣ್ಣಬಣ್ಣದ ರೂಪದರ್ಶಿಯರ ಬಣ್ಣಬಣ್ಣದ ಮಾತುಗಳಿಂದ ಜನಪ್ರಿಯಗೊಳಿಸಲು ಸಾಕಷ್ಟು ಹಣ ವ್ಯಯಿಸಿದರೂ, ಮುಖ ತೊಳೆಯುತ್ತಿದ್ದಂತೆ ಮೇಕಪ್ಪು ಕಳಚುವ ಹಾಗೆ, ಒಂದೆರಡು ಮಳೆಗಾಲಕ್ಕೆ ಮುಖವೊಡ್ಡಿದ ಕಟ್ಟಡಗಳೂ ಅದೇ ಸ್ಥಿತಿ ತಲುಪುವವು. ಆದರೆ ‘ಸಾಲೋಂ ಸಾಲ್ ರಖೇ ಖಯಾಲ್’ ಎನ್ನುವ ಸ್ಲೋಗನ್ ಪೇಂಟ್‌ಗೆ ಸಂಬಂಧಿಸಿದ್ದೇ ಆದರೂ, ಅದು ಬಣ್ಣಕ್ಕಿಂತ ಹೆಚ್ಚಾಗಿ ಅದನ್ನು ತುಂಬಿಕೊಂಡ ಬಕೆಟ್‌ಗಳಿಗೇ ಹೆಚ್ಚು ಅನ್ವಯವಾಗುವುದು ಸತ್ಯ. ಮೊಬೈಲ್ ಇರದ ಮನೆಯಿಲ್ಲ ಎನ್ನುವಂತೆ, ಬಣ್ಣದ ಬಕೆಟ್ ಉಪಯೋಗಿಸದ ಮನೆಗಳು ವಿರಳ ಎನ್ನಬಹುದು. ಮನೆಯ ಪೇಂಟಿಂಗ್ ಮುಗಿಯುವಷ್ಟರಲ್ಲಿ ಅರ್ಧಲೀಟರ್ ಮಗ್‌ಗಳಿಂದ ಹಿಡಿದು, ದೊಡ್ಡ ಅಳತೆಯ ಸ್ನಾನದ ಬಕೆಟ್‌ವರೆಗೂ ಸಂಗ್ರಹವಾಗಿರುವವು. ಮನೆಗೆ ಬಣ್ಣತುಂಬಿಕೊಂಡು ಪ್ರವೇಸಿಸುವ ಈ ಬಕೆಟುಗಳು, ತುಂಬಿದಮನೆಗೆ ಸೇರೊದ್ದು ಬಣ್ಣಬಣ್ಣದ ಕನಸುಗಳನ್ನು ಹೊತ್ತು ಬರುವ ಮನೆಸೊಸೆಯರಂತೆ ಮೇಲುಕೀಳೆನ್ನದೆ ಅನೇಕ ಗೃಹಕೃತ್ಯಗಳಿಗೂ ನೆರವಾಗಿ ಕೊನೆಯವರೆಗೂ ಅಲ್ಲಿಯೇ ಬೀಡುಬಿಟ್ಟು ಜೀವಸವೆಸುವುದಿದೆ.

ಇವುಗಳ ಆಕಾರ, ಗಾತ್ರ, ಗಟ್ಟಿತನಕ್ಕೆ ಮನಸೋಲದವರಿಲ್ಲ. ಸಿಲಿಂಡ್ರಿಕಲ್ ಫಿಗರ್ ಕಾಯ್ದುಕೊಂಡಿರುವ ಇವುಗಳು ಬಳುಕಾಡುವ ಮಾತೇ ಇಲ್ಲ. ಆನಕೊಂಡದಂತಹ ಬಲಶಾಲಿಯಾಗಿರುವ ಬಕೆಟ್‌ಗಳು ಮಿಡಿನಾಗರ ಅಥವಾ ಪ್ಲಾಸ್ಟಿಕ್ ಟೇಪಿನಂತಹ ಹಿಡಿಕೆ ಹೊಂದಿರುವುದು ವಿಶೇಷ. ಬಕೆಟ್ ಹಾಗೂ ಮುಚ್ಚಳಗಳು ಬಣ್ಣ ಬಳಿಯುವವರೆಗೆ ಮಾತ್ರ

ಜೊತೆಯಾಗಿದ್ದು, ನಂತರ ಮನ್ನಣೆ ಇರದ ಪತಿಯ ಪಾತ್ರದಂತೆ ಮುಚ್ಚಳಗಳು ಮೂಲೆ ಗುಂಪಾಗುವುದು ಹೆಚ್ಚು. ಕೆಲವೊಮ್ಮೆ ಹಿಡಿಕೆಗಳೂ ಹಿಡಿತ ಸಡಲಿಸಿ ಅಗಲುವುದಿದೆ. ‘ಆನೆ ನಡೆದದ್ದೇ ದಾರಿ’ ಎನ್ನುವಂತೆ ಬಕೆಟ್ ಮಾತ್ರ ಯಾರನ್ನೂ ಅವಲಂಬಿಸದೆ ತನ್ನ ಕಾಯಕಕ್ಕೆ ಪಕ್ಕಾಗಿರುತ್ತದೆ. ಸೂರ್ಯನ ತಾಪಕ್ಕೂ ಸುಲಭವಾಗಿ ಫೇಡ್ ಆಗದೆ ಮಹಿಳೆಯರು ದುಬಾರಿ ಹೆಚ್‌ಡಿ ಮೇಕಪ್ ಲೇಪಿಸಿಕೊಂಡಂತಹ ನಯ, ನುಣುಪು ಸೌಂದರ್ಯವನ್ನು ಸದಾ ಕಾಪಾಡಿಕೊಂಡಿರುತ್ತದೆ

ಗೃಹಕೃತ್ಯದಲ್ಲಿ ಈ ಬಣ್ಣದ ಬಕೆಟ್‌ಗಳ ಪಾತ್ರ ಹೆಚ್ಚು. ಪಾತ್ರೆ ತೊಳೆಯುವ ಟಬ್ ಆಗಿ, ತೊಳೆದ ಪಾತ್ರೆ ಹಾಕುವ ಬುಟ್ಟಿಯಾಗಿ, ಬಟ್ಟೆಗಳನ್ನು ತೊಳೆಯುವ ಬಕೆಟ್‌ಗಳಾಗಿ, ಮಜ್ಜನ ಮಾಡುವ ಬಕೆಟ್ ಹಾಗೂ ಮಗ್ಗುಗಳಾಗಿ, ನೆಲ ಒರೆಸುವ ಉಪಯೋಗಕ್ಕಾಗಿ, ಕಸ ಹಾಕುವ ಡಸ್ಟ್‌ಬಿನ್‌ಗಳಾಗಿ ಹೀಗೆ ಪ್ರತಿ ಕೆಲಸದಲ್ಲೂ ತಮ್ಮ ಛಾಯೆಯನ್ನು ಬಿಂಬಿಸುತ್ತಿವೆ. ಸ್ಟೋರೇಜ್ ಡಬ್ಬಿಗಳಾಗಿ ಕಾರ್ಯನಿರ್ವಹಿಸುವುದಲ್ಲದೆ, ಉಲ್ಟಾ ತಿರುಗಿಸಿ ಹಾಕಿದರೆ ಗಜತೂಕವನ್ನೂ ತಡೆದುಕೊಳ್ಳುವ ಸಾಮರ್ಥ್ಯವಿರುವ ಸ್ಟೂಲ್‌ನಂತೆ ಬದಲಾಗುವುದು. ಹಸಿಕಸ, ಒಣಕಸವನ್ನು ಸಂಗ್ರಹಕ್ಕೆ ಇವುಗಳಿಗಿಂತ ಸೂಕ್ತ ಆಯ್ಕೆ ಮತ್ತೊಂದಿಲ್ಲ. ಮುಂಜಾನೆಯಿಂದ ಸಂಜೆಯವರೆಗೆ ಬೀದಿಯಲ್ಲಿ ಇಟ್ಟರೂ ಕಳ್ಳಕಾಕರು ಅಷ್ಟಾಗಿ ಇವುಗಳನ್ನು ಕದಿಯಲು ಆಸಕ್ತಿ ತೋರರು. ಕದ್ದರೂ ಬೇಸರವಾಗದು. ಹಾಗಾಗಿ ಕಸದ ಗಾಡಿ ಆಗಮಿಸುವವರೆಗೆ ನಿರ್ಭೀತಿಯಿಂದ ಬಿಡಬಹುದು. ನಾಯಿ, ಹಂದಿ, ಹಸುಗಳು ಬಂದು ಬಾಯಿಹಾಕಿ ಕೆಡವಿದರೂ, ಉರುಳಿಸಿದರೂ ಇವುಗಳ ಗಟ್ಟಿತನಕ್ಕೆ ಧಕ್ಕೆಯಾಗಲಾರದು.

ಹೈನೋದ್ಯಮ ನಡೆಸುವ ಹೆಚ್ಚಾನುಹೆಚ್ಚು ಗೌಳಿಗಳಿಗೆ ಬಣ್ಣದ ಬಕೆಟ್‌ಗಳು ವರದಾನವಾಗಿವೆ ಎನ್ನಬಹುದು. ರಾಸುಗಳಿಗೆ ನೀರುಣಿಸಲು ಮುಸುರೆ ಬಾನಿಯಂತೆ ಕಾರ್ಯನಿರ್ವಹಿಸುತ್ತದೆ. ಎಳೆದಾಡಿದರೂ, ಉರುಳಿಸಿದರೂ ಅಷ್ಟು ಸುಲಭವಾಗಿ ಹಾನಿಗೊಳಗಾಗಲಾರವು. ಹಿಂದೆಲ್ಲ ಕಬ್ಬಿಣ ಹಾಗೂ ಪ್ಲಾಸ್ಟಿಕ್ ಬಕೆಟ್‌ಗಳನ್ನು ಹೋಟೆಲ್‌ಗಳು, ಖಾನಾವಳಿ, ಬೇಕರಿ ಹಾಗೂ ಕೆಲವು ಪರಿಚಿತರ ಮನೆಗಳಲ್ಲಿ ಮುಸುರೆ ಸಂಗ್ರಹಕ್ಕಾಗಿ ಇಡುತ್ತಿದ್ದರು. ಕಬ್ಬಿಣದ ಬಕೇಟಿನ ಸೊಂಟ ಗಟ್ಟಿಯಿದ್ದರೂ, ತೂಕ ಹೆಚ್ಚಿರುತ್ತಿದ್ದರಿಂದ ಸಲೀಸಾಗದೆ ಹೊರಲಾಗದೆ ತುಳುಕಾಡಿಸಿಕೊಂಡು, ಕೆಲದಿನಗಳಲ್ಲೇ ತುಕ್ಕು ಹಿಡಿದು ತೂತು ಬಿದ್ದು ಆಗಾಗ ಆಪರೇಷನ್ ಕಲಾಯಿ ಅಥವಾ ಬೆಸುಗೆಗೆ ತುತ್ತಾಗುತ್ತಿರುತ್ತಿದ್ದವು. ಸಾಮಾನ್ಯ ಪ್ಲಾಸ್ಟಿಕ್ ಬಕೆಟ್‌ಗಳು ಹ್ಯಾಂಡಲ್ ಹಿಡಿದು ಮೇಲಕೆತ್ತುತ್ತಿದ್ದಂತೆ, ಸೊಂಟದಲ್ಲಿ ಕರ್ವ್ ಮೂಡಿಸಿಕೊಂಡು, ಹೇರ್‌ಲೈನ್ ಫ್ರಾಕ್ಚರ್‌ನಂತೆ, ತೆಳುವಾದ ಕ್ರ್ಯಾಕ್ ಮೂಡಿಸಿಕೊಂಡು, ಬಕೆಟ್ ರಿಪೇರಿಯವರು ಆ ಬಿರುಕಿಗೆ ಹೆಚ್ಚುವರಿ ಪ್ಲಾಸ್ಟಿಕ್ ತುಂಡನ್ನು ಬಿಸಿ ಮಾಡಿ ಕರಗಿಸಿ ಅಂಟಿಸುತ್ತಿದ್ದುದರಿಂದ ವಿವಿಧ ವಿನ್ಯಾಸದ ಬ್ಯಾಂಡೇಜ್‌ಗಳಿಂದ ಬಾಂಡ್ ಆದಂತೆ ಗೋಚರಿಸುತ್ತಿದ್ದವು. ಇಂತಹ ಪ್ಲಾಸ್ಟಿಕ್ ಸರ್ಜರಿಗೆ ಒಳಗಾದ ಬಕೆಟ್‌ಗಳು ಕೆಲವೇ ದಿನಗಳಲ್ಲಿ, ಬಿದ್ದವನಿಗೇ ಗುದ್ದು ಎಂಬಂತೆ, ವೆಲ್ಡಿಂಗ್ ಮಾಡಿದ ಅಕ್ಕಪಕ್ಕದಲ್ಲೇ ಬಿರುಕು ಮೂಡುತ್ತಿದ್ದರಿಂದ ಅವುಗಳ ಕಾರ್ಯಕ್ಷಮತೆ ಕ್ಷೀಣಿಸುತ್ತಿತ್ತು. ಹೆಚ್ಚುವರಿ ಕೆಲಸಗಳಿಗೆ ಬಳಸಲಾಗದೆ, ಕೇವಲ ಉಸ್ತುವಾರಿ ಕಾರ್ಯಗಳಿಗೆ ಬಳಸುವುದಾಗುತ್ತಿತ್ತು. ಪೈಂಟ್ ಬಕೆಟ್‌ಗಳು ಅವತರಿಸಿದಾಗಿನಿಂದ, ಮುಸುರೆ ಸಂಗ್ರಹಕ್ಕೆ ಇದಕ್ಕಿಂತ ಉತ್ಕೃಷ್ಟ ಗುಣಮಟ್ಟದ ವಸ್ತು ಸಿಗಲಾರದು ಎಂಬುದು ಮನವರಿಕೆಯಾಗಿದೆ. ಅವಶ್ಯಕತೆ ಇರುವೆಡೆಯೆಲ್ಲ ಇವುಗಳನ್ನು ಇಟ್ಟು, ತುಂಬಿದ ನಂತರ ಬೈಕ್‌ನ ಎರಡೂ ಕಡೆ ದಾರ ಕಟ್ಟಿ ಒಮ್ಮೆಲೇ ನಾಲ್ಕಾರು ಬಕೆಟ್‌ಗಳನ್ನು ಇಳೆಬಿಟ್ಟು ಸಾಗಿಸುವುದು ಸುಲಭವಾಗಿದೆ. ಅಕ್ಕಪಕ್ಕದಲ್ಲಿ ಅಕಸ್ಮಾತ್

ತಾಗಿದರೂ, ಹಾನಿ ತಾಗಿದವರಿಗೇ ಹೊರತು ಇವುಗಳಿಗಲ್ಲ. ಅಲುಗದೆ, ನಲುಗದೆ, ಮುಸುರೆಯನ್ನು ಹೆಚ್ಚು ತುಳುಕಿಸದೆ ಸ್ಥಿರತೆಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುವವು.

ವರ್ಷಕ್ಕೊಮ್ಮೆ ಬೇಸಿಗೆಯಲ್ಲಿ ಹಪ್ಪಳ ಸಂಡಿಗೆ ಮಾಡುವಾಗ, ನೆರೆಹೊರೆಯವರ ಕಣ್ಣುಗಳು ಅವುಗಳ ಮೇಲೆಯೇ ಠಳಾಯಿಸಿ, ಮಾಹಿತಿ ಸಂಗ್ರಹಕ್ಕೆ ಮುಂದಾಗುತ್ತಿದ್ದಂತೆ ರುಚಿನೋಡಲು ಒಂದಿಷ್ಟು ಕೊಡುವ ಪ್ರಮೇಯ ಒದಗುವಂತೆ, ಪೇಂಟಿಂಗ್ ಮಾಡುವಾಗಲೂ ಕೂಡ ಬಣ್ಣ ನೋಡುವ ನೆಪದಲ್ಲಿ ಆಗಮಿಸಿ ಬಕೆಟ್‌ಗಾಗಿ ಬಕೆಟ್ ಹಿಡಿಯುವ ಗುಂಪಿನವರೂ ಇರುವರು. ಅವುಗಳ ತಯಾರಿಕೆಯಲ್ಲಿ ಉಪಯೋಗಿಸುವ ದೊಡ್ಡ ದೊಡ್ಡ ಪಾತ್ರೆಗಳನ್ನು ತೊಳೆಯುವಾಗ ಮನೆಗೆಲಸದವಳಿಗೂ ಕ್ಲೂ ಸಿಗುವುದರಿಂದ ಅವರನ್ನೂ ಲೆಕ್ಕಕ್ಕಿಡುವಂತೆ, ಮನೆಯ ಪೇಂಟಿಂಗ್ ಮಾಡಿಸುವಾಗ ಒಂದಿಷ್ಟು ಬಕೆಟ್‌ಗಳನ್ನು ಮನೆಗೆಲಸದವರಿಗೆ, ಗಾರ್ಡನ್ ಕೆಲಸದವರಿಗೆ, ಅಡುಗೆ ಮಾಡುವವರಿಗೆ ಮೀಸಲಿಡಬೇಕಾಗುವುದು. ಕೈತೋಟ ಬೆಳೆಸುವ ಆಸಕ್ತರು ಇತ್ತೀಚೆಗೆ ಮಣ್ಣು, ಪ್ಲಾಸ್ಟಿಕ್, ಸಿಮೆಂಟಿನ ಕುಂಡಗಳಿಗಿಂತ ಹೆಚ್ಚಾಗಿ ಬಣ್ಣದ ಬಕೆಟ್‌ಕುಂಡಗಳ ಮೊರೆಹೋಗಿರುವರು. ಅನೇಕ ಬಾರಿ ಮಕ್ಕಳ ಗಲ್ಲಿ ಕ್ರಿಕೆಟ್ ಆಟದಲ್ಲಿ ಎರಡೂ ಬದಿಗಳಲ್ಲಿ ನಿಲ್ಲಿಸುವ ಆಫ್‌ಸ್ಟಂಪ್, ಮಿಡಲ್ ಸ್ಟಂಪ್, ಲೆಗ್ ಸ್ಟಂಪ್‌ಗಳ ಸ್ಥಾನವನ್ನು ತ್ರಿಪಾತ್ರಧಾರಿಯಾಗಿ ಏಕೈಕ ಪೈಂಟ್ ಬಕೆಟ್ ನಿರ್ವಹಿಸುವುದಿದೆ. ಅದೆಂತಹ ವೇಗದ ಬೌಲಿಂಗ್‌ಗೂ ಪರ್ವತದಂತೆ ಅಚಲವಾಗಿ ಮಕಾಡೆ ನಿಂತಿರುವ ಬಕೆಟ್ ಸುಲಭವಾಗಿ ಕದಲಲಾರದು.

ಮಾರುಕಟ್ಟೆಯಲ್ಲಿ ಬಣ್ಣಬಣ್ಣದ ವಿವಿಧ ಅಳತೆಯ ಬಕೆಟ್ಟುಗಳು ಸಿಗಬಹುದು. ಆದರೆ ಬಣ್ಣದ ಬಕೆಟ್‌ಗಳ ಉಪಯೋಗದ ಮುಂದೆ ಅವುಗಳೆಲ್ಲ ಸಪ್ಪೆಸಪ್ಪೆ. 'ಇಟ್ಟರೇ ಸೆಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ, ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ' ಎನ್ನುವ ಎಸ್‌ಜಿ ನರಸಿಂಹಾಚಾರ್ಯರು ರಚಿಸಿದ ಕವಿತೆಯ ಸಾಲುಗಳಂತೆ, ಬಣ್ಣದ ಬಕೆಟ್ ಕೂಡಾ ಮನುಷ್ಯನ ದೈನಂದಿನ ಜೀವನದಲ್ಲಿ ಬಹುಪಯೋಗಿ ಕಾರ್ಯಗಳಿಗೆ ಹೇಳಿ ಮಾಡಿಸಿದ್ದಂತಿದೆ. 'ಆವ ರೂಪದೊಳು ಬಂದರೂ ಸರಿಯೇ, ಆವ ವೇಷದೊಳು ನಿಂದರು ಸರಿಯೇ' ಎಂಬಂತೆ ವಿವಿಧ ಅಳತೆಯ ಬಣ್ಣದ ಬಕೆಟ್‌ಗಳು, ತಮ್ಮ ಒಡಲೊಳಗೆ ಗೃಹಶೋಭೆಯ ಬಣ್ಣಗಳನ್ನು ಹೊತ್ತು ತರುವುದು ಹೌದಾದರೂ, ಬರಿದಾದಾಗ ಒಡಲು 'ಬಹುಜನ ಸುಖಾಯ ಬಹುಜನ ಹಿತಾಯ' ಎನ್ನುವ ಪರಿಕಲ್ಪನೆಯಂತೆ, ಮನೆಮಂದಿಯ ಒಡನಾಡಿಗಳಾಗಿ ಮತ್ತಷ್ಟು ಜನಸ್ನೇಹಿಯಾಗಿ ಅನೇಕ ಜನೋಪಯೋಗಿ ಕಾರ್ಯಗಳಿಗೆ ಬಳಕೆಯಾಗಿ ಸೇವೆಸಲ್ಲಿಸುತ್ತಿರುವುದರಲ್ಲಿ ಸಂಶಯವಿಲ್ಲ.

ಸಂಗೀತ ಕಛೇರಿಯಲ್ಲಿ
ಗಾಯಕರು ಸಂಗೀತ ಹಾಡುತ್ತಾರೆ
ಮೈ ಮರೆತು
ಕೆಲವರು ಸಂಗೀತ ಕೇಳುತ್ತಾರೆ
ಮೈ ಮರೆತು
ಮತ್ತೂ ಕೆಲವರು ಗೊರಕೆ ಹೊಡೆಯುತ್ತಾರೆ
ಈ ಎರಡನ್ನೂ ಮರೆತು...

# ಗಾದೆಗೊಂದು ಕಥೆ

ಬೇಲೂರು ರಾಮಮೂರ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ ಎನ್ನುವ ಮಾತಿದೆ. ಹಾಗಿದ್ದರೆ ಒಂದೊಂದು ಗಾದೆಯ ಹಿಂದೆಯೂ ಒಂದೊಂದು ಕಥೆ ಇರಬೇಕಲ್ವೆ ಅನಿಸುವುದು ಸಹಜ. ನಿಜ ಅವೆಲ್ಲಾ ರೋಚಕ ಕಥೆಗಳು. ಓದಿ ನೋಡಿ

**ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ**

ಈ ಗಾದೆಯನ್ನು ನಮ್ಮ ಬದುಕಿನಲ್ಲಿ ಕೆಲವು ಸಂದರ್ಭಗಳಲ್ಲಿ ಬಳಸುತ್ತೇವೆ. ಆದರೆ ಗಾದೆಯ ಹಿಂದಿನ ಕಥೆ ಅರಿತು ಉಪಯೋಗಿಸಿದರೆ ಇನ್ನಷ್ಟು ಮೆರಗು ಬರುತ್ತದಲ್ಲವೇ. ಒಂದು ಊರಿನಲ್ಲಿ ಒಬ್ಬ ರೈತ ತನ್ನ ಮನೆಯ ಹಿತ್ತಲಿನಲ್ಲಿ ಅನೇಕ ತರಕಾರಿಗಳನ್ನು ಬೆಳೆಯುತ್ತಿದ್ದ. ಹಾಗೆ ಒಂದು ವರ್ಷ ಕುಂಬಳಕಾಯಿ ಬೆಳೆದಿದ್ದ. ಅವುಗಳ ಪೈಕಿ ಒಂದು ಕುಂಬಳಕಾಯಿ ತುಂಬಾ ದಪ್ಪವಾಗಿ ಬೆಳೆಯುತ್ತಿತ್ತು. ಇದು ಎಷ್ಟು ದಪ್ಪ ಬೆಳೆಯುತ್ತೋ ನೋಡೋಣ ಅಂತ ರೈತ ಅದನ್ನು ಕುಯ್ಯದೇ ಪ್ರತೀದಿನ ಅದನ್ನು ಗಮನಿಸುತ್ತಿದ್ದ. ಹೀಗಿರುವಾಗ ರೈತ ಒಂದು ದಿನ ಬೆಳಗ್ಗೆ ಎದ್ದು ಬಂದು ನೋಡಿದರೆ ಆ ದಪ್ಪ ಕುಂಬಳಕಾಯಿ ಅಲ್ಲಿರಲೇ ಇಲ್ಲ. ಯಾರೋ ಕದ್ದಿದ್ದಾರೆ ಎನ್ನುವುದು ಖಚಿತವಾಯಿತು. ನಾನು ತುಂಬಾ ಆಸೆ ಇಟ್ಟುಕೊಂಡಿದ್ದ ಕುಂಬಳಕಾಯಿ ಹೀಗೆ ಕಳುವಾಗಿದ್ದು ರೈತನಿಗೆ ಬಹಳ ದು:ಖವಾಗಿ ರಾಜನ ಬಳಿಗೆ ಹೋಗಿ ದೂರು ಕೊಟ್ಟ. ಆಗಿನ ಕಾಲದಲ್ಲಿ ಚಿಕ್ಕ ಪುಟ್ಟ ಕಳ್ಳತನಗಳನ್ನೂ ರಾಜ ತುಂಬಾ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದ. ಅದರಲ್ಲೂ ರೈತರ ದೂರಿಗೆ ಹೆಚ್ಚು ಗಮನ ಕೊಡುತ್ತಿದ್ದ. ಕೂಡಲೇ ರಾಜ ಮಂತ್ರಿಯನ್ನು ಕರೆದು ನನ್ನ ರಾಜ್ಯದಲ್ಲಿರುವ ಎಲ್ಲ ಕಳ್ಳರನ್ನೂ ಹಿಡಿದು ತಾ ಎಂದು ಆಜ್ಞೆ ಮಾಡಿದ. ಇವರೆಲ್ಲಾ ಯಾರು ಎಂದರೆ ಈ ಹಿಂದೆ ಒಂದಲ್ಲ ಒಂದು ಕಳ್ಳತನ ಮಾಡಿ ಸಿಕ್ಕಿಕೊಂಡು ಶಿಕ್ಷೆ ಅನುಭವಿಸಿ ಹೊರಬಂದಿದ್ದವರು. ಮಿಕ್ಕ ಕಳ್ಳರು ಜೈಲಿನಲ್ಲೇ ಇದ್ದರು. ಕೂಡಲೇ ಮಂತ್ರಿ ಅಂಥಾ ಕಳ್ಳರನ್ನೆಲ್ಲಾ ರಾಜನ ಮುಂದೆ ಹಾಜರುಪಡಿಸಿದ. ರಾಜ ಅವರನ್ನೆಲ್ಲಾ ಕುರಿತು ನೋಡಿ ನಮ್ಮ ರೈತನ ದಪ್ಪ ಕುಂಬಳಕಾಯಿ ಕಳುವಾಗಿದೆ. ನಿಮ್ಮಲ್ಲಿ ಯಾರೇ ಕದ್ದಿದ್ದರೂ ಅದನ್ನು ತಂದು ಒಪ್ಪಿಸಿ. ನಾನು ಶಿಕ್ಷೆ ಕೊಡುವುದಿಲ್ಲ. ಆದರೆ ಸುಳ್ಳು ಹೇಳಿದವರಿಗೆ ಶಿಕ್ಷೆ ಕಾದಿದೆ ಅಂದ. ಎಲ್ಲ ಕಳ್ಳರೂ ಒಂದೇ ಧ್ವನಿಯಿಂದ ನಾವು ಕಳ್ಳತನ ಮಾಡಿಲ್ಲ ದೊರೆ, ನಮಗೆ ಕುಂಬಳಕಾಯಿ ವಿಚಾರ ಗೊತ್ತೇ ಇಲ್ಲ ಅಂದರು. ರಾಜ ಮಂತ್ರಿ ಎಷ್ಟು ಕೇಳಿದರೂ, ಹೆದರಿಸಿದರೂ ಎಲ್ಲರದೂ ಒಂದೇ ಮಾತು. ಕಡೆಗೆ ರಾಜ ಮಂತ್ರಿಯನ್ನು ಕರೆದು, ಮಂತ್ರಿಗಳೇ ಇಲ್ಲಿ ಇರುವ ಎಲ್ಲ ಕಳ್ಳರ ಹೆಗಲುಗಳನ್ನೂ ಸೂಕ್ಷ್ಮವಾಗಿ ಗಮನಿಸಿ ಏಕೆಂದರೆ ರೈತನ ಕುಂಬಳಕಾಯಿ ಬಹಳ ದಪ್ಪ ಇತ್ತು. ಅದನ್ನು ಕದ್ದವನು ಕೈಯಲ್ಲಿ ಹಿಡಿದುಕೊಂಡು ಹೋಗಿರೋಕೆ ಸಾಧ್ಯವಿಲ್ಲ. ಅವನು ಅದನ್ನು ತನ್ನ ಹೆಗಲ ಮೇಲೆ ಇಟ್ಟುಕೊಂಡು ಹೋಗಿರುತ್ತಾನೆ. ಎಲ್ಲರ ಹೆಗಲು ಗಮನಿಸಿದರೆ ಅಲ್ಲಿ ಒಂದು ಚೂರಾದರೂ ಗುರುತು ಇರುತ್ತೆ ಅಂದ. ಒಡನೆಯೇ ಮಂತ್ರಿ ಎಲ್ಲರ ಹೆಗಲುಗಳನ್ನೂ ನೋಡಲು ಹೊರಟ. ರಾಜ ಸೂಕ್ಷ್ಮವಾಗ ಗಮನಿಸುತ್ತಿದ್ದ. ಎಲ್ಲರೂ ಸುಮ್ಮನೆ ನಿಂತಿದ್ದರೂ ಒಬ್ಬ ಮಾತ್ರ ಮಂತ್ರಿ ತನ್ನತ್ತ ಬರುವ ಮೊದಲು ತನ್ನ ಎರಡೂ ಹೆಗಲುಗಳನ್ನು ಕೈಯಿಂದ ಒರೆಸಿಕೊಳ್ಳುತ್ತಿದ್ದ. ಅದನ್ನು ನೋಡಿದ ತಕ್ಷಣ ರಾಜ ಮಂತ್ರಿಗಳೇ ಹಿಡಿಯಿರಿ ಅವನನ್ನು ಅಂದರು. ಮಂತ್ರಿ ಅವನನ್ನು ಹಿಡಿದು ರಾಜನ ಮುಂದೆ ನಿಲ್ಲಿಸಿದ. ಒಡನೆಯೇ ಅವನು ತಾನು ಕುಂಬಳಕಾಯಿ

ಕದ್ದಿದ್ದನ್ನು ಒಪ್ಪಿಕೊಂಡು ರಾಜ ವಿಧಿಸಿದ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾದ. ಅಂದಿನಿಂದ ಈ ಗಾದೆ ಬಳಕೆಯಲ್ಲಿದೆ ಎನ್ನುತ್ತಾರೆ.

**ಹಿತ್ತಾಳೆ ಕಿವಿಗೆ ಚಿನ್ನದ ಬೆಂಡೋಲೆ ಬೇರೆ ಕೇಡು**

ಹಿತ್ತಾಳೆ ಕಿವಿ ಅಂದರೆ ಯಾರು ಏನು ಹೇಳಿದರೂ ಅದನ್ನು ಕೇಳಿಸಿಕೊಂಡು ನಂಬುವುದು. ಹಾಗೆ ನೋಡಿದರೆ ಬೆಂಡೋಲೆ ಎನ್ನುವ ಆಭರಣವೇ ಇಲ್ಲ ಎನ್ನುತ್ತಾರೆ. ಬೆಂಡು ಮತ್ತು ಓಲೆ ಎರಡೂ ಸೇರಿ ಬೆಂಡೋಲೆ ಆಗಿದೆ. ಕಿವಿಯ ಆಭರಣಕ್ಕೆ ಬೆಂಡೋಲೆ ಎನ್ನುವ ಹೆಸರೇಕೆ ಎನ್ನುವುದೇ ಕುತೂಹಲ. ಬಹಳ ವರ್ಷಗಳ ಹಿಂದೆ ನಮ್ಮ ದೇಶದ ಹೆಂಗಸರು ಕಿವಿ ಚುಚ್ಚಿಕೊಂಡ ಮೇಲೆ ಆ ತೂತಿಗೆ ಸಣ್ಣದಾಗಿ ಕೊಳವೆಯಂತೆ ಸುತ್ತಿದ ಓಲೆಪತ್ರದ ತುಂಡನ್ನು ಧರಿಸುತ್ತಿದ್ದರಂತೆ. ಬಳೆ, ಕುಂಕುಮ ಹೇಗೆ ಸೌಭಾಗ್ಯದ ಸಂಕೇತವಾಗಿತ್ತೋ ಹಾಗೆ ಓಲೆಪತ್ರ ಕೂಡಾ ಸೌಭಾಗ್ಯದ ಸಂಕೇತವಾಗಿತ್ತಂತೆ. ಮುಂದೆ ಅದರ ಜಾಗದಲ್ಲಿ ಹೊಳೆಯುವ ಆಭರಣಗಳು ಬಂದವು. ಕಿವಿ ಚುಚ್ಚಿಕೊಂಡ ಕೂಡಲೇ ಓಲೆ ಹಾಕಿಕೊಳ್ಳಲು ಆಗುವುದಿಲ್ಲ. ಏಕೆಂದರೆ ಚುಚ್ಚಿದ ಜಾಗ ಹಸಿಯಾಗಿರುತ್ತದೆ. ಅದು ಒಣಗಬೇಕು. ನೀರು ಬಿದ್ದರೆ ಕೀವು ಕಟ್ಟುತ್ತದೆ. ಅದಕ್ಕೆ ಚುಚ್ಚಿದ ಕಿವಿಯ ತೂತಿಗೆ ಒಂದು ಸಣ್ಣ ಬೆಂಡು ಸಿಕ್ಕಿಸುತ್ತಿದ್ದರು. ಇದರಿಂದ ಚುಚ್ಚಿದ ಕಿವಿಯ ತೂತು ದೊಡ್ಡದಾಗುವುದೂ ತಪ್ಪುತ್ತಿತ್ತು. ಕೆಲವು ದಿನಗಳಾದ ಮೇಲೆ ಕಿವಿಯ ತೂತು ಬಿಟ್ಟುಕೊಳ್ಳುತ್ತಿತ್ತು. ಆಗ ಓಲೆ ಹಾಕಿಕೊಳ್ಳಬಹುದಿತ್ತು. ಅದಕ್ಕಾಗಿ ಕಿವಿ ಚುಚ್ಚಿದ ಕೂಡಲೇ ಅದರ ಜಾಗದಲ್ಲಿ ಒಂದು ಸಣ್ಣ ಬೆಂಡಿನ ಚೂರನ್ನು ಸಿಗಿಸಿಬಿಡುತ್ತಿದ್ದರು. ಮೊದಲು ಕಿವಿಯಲ್ಲಿ ಓಲೆಪತ್ರ ಇಟ್ಟುಕೊಳ್ಳುತ್ತಿದ್ದಾಗ ಅದನ್ನು ಕೇವಲ ಓಲೆ ಅಂದಷ್ಟೇ ಕರೆಯುತ್ತಿದ್ದರು. ನಂತರ ಕಿವಿ ಚುಚ್ಚಿದ ಜಾಗದಲ್ಲಿ ಬೆಂಡು ಇಟ್ಟುಕೊಳ್ಳುತ್ತಿದ್ದುದರಿಂದ ಅದು ಬೆಂಡೋಲೆ ಆಯಿತು. ಚಿನ್ನದ ಅಥವಾ ವಜ್ರದ ಓಲೆ ಇಟ್ಟುಕೊಂಡಾಗ ಅದು ಚಿನ್ನದ ಬೆಂಡೋಲೆ, ವಜ್ರದ ಬೆಂಡೋಲೆ ಎನಿಸಿಕೊಂಡಿತು. ಈಗೀಗ ಕಿವಿಗೆ ಹಾಕಿಕೊಳ್ಳುವ ಆಭರಣಗಳಲ್ಲಿ ಬೆಂಡೂ ಇಲ್ಲದಿದ್ದರೂ ಓಲೆ ಇಲ್ಲದಿದ್ದರೂ ಬೆಂಡೋಲೆ ಎನ್ನುವ ಹೆಸರು ಶಾಶ್ವತವಾಗಿ ನೆಲೆಸಿದೆ.

**"ತುಪ್ಪ ಅಂದ್ರೆ ಮೀಸೆ ಚೇಷ್ಟೆ, ಎಣ್ಣೆ ಅಂದ್ರೆ ಜುಟ್ಟು ಚೇಷ್ಟೆ!"**

ಗುಂಡಪ್ಪನಿಗೆ ಯಾರ ಮನೆಯಲ್ಲಾದರೂ ಪುಕ್ಕಟೆ ಊಟ ಅಂದರೆ ಬಹಳ ಪ್ರೀತಿ. ಒಂದು ದಿನ ಅವನ ಸ್ನೇಹಿತ ಸುಬ್ಬು ಮನೆಯಲ್ಲಿ ಊಟ. ಅದಕ್ಕೆ ಗುಂಡಪ್ಪ ಅವತ್ತು ಬೆಳಗ್ಗೆ ತಿಂಡಿಯನ್ನೂ ತಿನ್ನದೇ ಹೊಟ್ಟೆ ಖಾಲಿ ಇಟ್ಟುಕೊಂಡಿದ್ದ. ಸಮಯಕ್ಕೆ ಸರಿಯಾಗಿ ಸುಬ್ಬು ಮನೆಗೆ ಹೋದಾಗ ಗುಂಡಪ್ಪನನ್ನು ಪ್ರೀತಿಯಿಂದ ಒಳಗೆ ಕರೆದು ಕೂರಿಸಿದ ನಂತರ ಸುಬ್ಬ ಹೆಂಡತಿ ಬಾಳೆ ಎಲೆ ಹಾಕಿ ಅದರ ಮೇಲೆ ಬಿಸಿಬಿಸಿ ಒಬ್ಬಟ್ಟು ಬಡಿಸಿಬ್ಬಳು. ಸುಬ್ಬು ಒಬ್ಬಟ್ಟಿನ ಮೇಲೆ ಬಿಸಿಬಿಸಿ ತುಪ್ಪ ಹಾಕಿದ. ಗುಂಡಪ್ಪನೂ ಸುಬ್ಬು ಇಬ್ಬರೂ ಒಬ್ಬಟ್ಟು ತಿನ್ನಲು ಷುರು ಮಾಡಿದ ಮೇಲೆ ಸುಬ್ಬ ಗುಂಡಪ್ಪ ಸಂಕೋಚ ಮಾಡ್ಕೊಬೇಡ ಇನ್ನೂ ಸ್ವಲ್ಪ ತುಪ್ಪ ಹಾಕಿಸಿಕೋ ಅಂದ. ಗುಂಡಪ್ಪ ಎದೆಯುಬ್ಬಿಸಿ ಓಹೋ ಅದಕ್ಕೇನಂತೆ ಅಂದ ತಕ್ಷಣ ಸುಬ್ಬು ಹೆಂಡತಿ ಇನ್ನಷ್ಟು ತುಪ್ಪ ಬಡಿಸಿದಳು. ಗುಂಡಪ್ಪ ಒಬ್ಬಟ್ಟು ತಿನ್ನುವ ಆತುರದಲ್ಲಿ ಸೋರುತ್ತಿದ್ದ ತುಪ್ಪ ಅವನ ದಪ್ಪ ಮೀಸೆಗೆಲ್ಲಾ ಸವರಿಕೊಂಡಿತು. ಪ್ರತೀ ಒಬ್ಬಟ್ಟಿನ ತುತ್ತು ತಿನ್ನುವಾಗಲೂ ಗುಂಡಪ್ಪನ ಮೀಸೆ ತುಪ್ಪದಲ್ಲಿ ನೆನೆಯುತ್ತಿತ್ತು. ಒರೆಸಿ ಒರೆಸಿ ಸಾಕಾದ ಗುಂಡಪ್ಪ ತುಸು ಬೇಜಾರಿನಿಂದಲೇ ನೋಡು ನಿನ್ನ ತುಪ್ಪದ ಪ್ರಭಾವ ನನ್ನ ಮೀಸೆಯನ್ನೆಲ್ಲಾ ನೆನೆಸಿದೆ ಅಂದ. ನಂತರ ಬಿಸಿಬಿಸಿ ಅನ್ನ ಅದಕ್ಕೆ ತರಕಾರಿ ಹಾಕಿದ ಹುಳಿ. ಅದರ ಜೊತೆಗೆ ರುಚಿ ಹೆಚ್ಚಿಸಲು ಎಣ್ಣೆ ಬಡಿಸಿದರು. ತುಪ್ಪಕ್ಕಿಂತ ಇದು ಎಷ್ಟೋ ವಾಸಿ ಇನ್ನಷ್ಟು ಎಣ್ಣೆ ಹಾಕು ರುಚಿ ಚನ್ನಾಗಿರುತ್ತೆ

ಅಂದು ಗುಂಡಪ್ಪ ಇನ್ನಷ್ಟು ಎಣ್ಣೆ ಹಾಕಿಸಿಕೊಂಡ. ಸುಬ್ಬು ಹೆಂಡತಿ ಎಣ್ಣೆ ಬಡಿಸುವಾಗ ಕೈ ತಾಕಿ ಅಷ್ಟಿಷ್ಟು ಎಣ್ಣೆ ಗುಂಡಪ್ಪನ ತಲೆಗೂದಲಿನ ಮೇಲೂ ಬಿತ್ತು. ಅದು ಗುಂಡಪ್ಪನಿಗೆ ಗೊತ್ತಾಗಲಿಲ್ಲ. ಆದರೆ ಊಟ ಮಾಡುವಾಗ ಒಮ್ಮೆ ತನ್ನ ತಲೆಗೂದಲನ್ನು ಕೈ ಬೆರಳಿನಿಂದ ಸವರಿಕೊಂಡಾಗ ಅವನ ಬೆರಳಿಗೆ ಎಣ್ಣೆ ಸೋಕಿತು. ಇಡೀ ಕೈಯನ್ನು ತಲೆಗೂದಲಲ್ಲಿ ಆಡಿಸಿದಾಗ ಬೆರಳುಗಳೆಲ್ಲಾ ಎಣ್ಣೆ ಆಯಿತು. ಆಗ ಸಿಟ್ಟಿನಿಂದ ಗುಂಡಪ್ಪ ನೋಡು ನಿಮ್ಮ ಮನೆಯವರು ಬಡಿಸಿದ ಎಣ್ಣೆ ನನ್ನ ತಲೆಗೂದಲಿಗೂ ತಾಕಿ ನೀಟಾಗಿ ಬಾಚಿಕೊಂಡ ನನ್ನ ತಲೆಗೂದಲು ಹೇಗಾಗಿದೆ ಅಂದು ಗೊಣಗಿದ. ಅದಕ್ಕೆ ಸುಬ್ಬು ಏನಯ್ಯಾ ಹೀಗೆ ದೂರುತ್ತೀಯ, ನಿನಗೆ ತುಪ್ಪ ಬಡಿಸಿದರೆ ನಿನ್ನ ಮೀಸೆ ದೂರುತ್ತದೆ, ಎಣ್ಣೆ ಬಡಿಸಿದರೆ ನಿನ್ನ ತಲೆಗೂದಲು ದೂರುತ್ತದೆ. ಹಾಗಾದರೆ ಏನು ಮಾಡೋದು ಅಂತ ಕೇಳಿದ. ಅದಕ್ಕೆ ಗುಂಡಪ್ಪ ನಕ್ಕು ಅದು ತುಪ್ಪದ ತಪ್ಪೂ ಅಲ್ಲ ಎಣ್ಣೆಯ ತಪ್ಪೂ ಅಲ್ಲ. ನಾನು ಸರಿಯಾಗಿ ಕಲಸಿಕೊಳ್ಳದೇ ಇದ್ದುದು ಅಂತ ಆನಂದದಿಂದ ಊಟ ಮುಂದುವರಿಸಿದ. ಆದರೆ ಈ ಪ್ರಸಂಗದಿಂದ ತುಪ್ಪ ಅಂದ್ರೆ ಮೀಸೆ ಚೇಷ್ಟೆ ಎಣ್ಣೆ ಅಂದ್ರೆ ಜುಟ್ಟು ಚೇಷ್ಟೆ ಎನ್ನುವ ಗಾದೆ ಮಾತು ನಮ್ಮಲ್ಲಿ ಉಳಿದುಕೊಂಡಿದೆ.

**ಒಟ್ಟಿಗೆ ಇದ್ದರೆ ಗೆಲುವು ಬೇರೆಯಾದರೆ ಸೋಲು**

ಒಂದು ದಿನ ದೇಹದ ಎಲ್ಲ ಭಾಗಗಳೂ ನಾನು ಹೆಚ್ಚು ನಾನು ಹೆಚ್ಚು ಎಂದು ತಮ್ಮ ತಮ್ಮಲ್ಲೇ ಕೂಗಾಡಿಕೊಂಡವಂತೆ. ಒಂದೊಂದು ಭಾಗವೂ ನಾನು ಇಲ್ಲದಿದ್ದರೆ ದೇಹವೇ ಇಲ್ಲದಂತೆ ಎನ್ನುತ್ತಾ ತನ್ನನ್ನು ಹೊಗಳಿಕೊಂಡು ಇತರ ಭಾಗಗಳನ್ನು ತಮಾಷೆ ಮಾಡುತ್ತಿದ್ದವು. ಕೈಗಳು ನಾವೇ ಇಲ್ಲದಿದ್ದರೆ ಈ ದೇಹ ಏನು ಕೆಲಸ ಮಾಡಲು ಆಗುತ್ತೆ. ದೇಹದ ಎಲ್ಲ ಕೆಲಸಗಳನ್ನು ಮಾಡಲು ನಾವು ಬೇಕೇಬೇಕು ಎಂದವು. ಕಾಲುಗಳು ನಾವು ಇಲ್ಲದಿದ್ದರೆ ಈ ದೇಹ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೇಗೆ ಹೋಗುತ್ತೆ. ನಡೆದು ಆರೋಗ್ಯ ಸುಧಾರಿಸಿಕೊಳ್ಳಬೇಕು, ನಡೆದು ಕೆಲಸಕ್ಕೆ ಹೋಗಬೇಕು. ಬಚ್ಚಲು ಮನೆಗೆ ಹೋಗಲು ನಾವು ಬೇಕು. ಮಹಡಿ ಹತ್ತಲು ನಾವು ಬೇಕು. ಅಷ್ಟೇ ಏಕೆ ದೇಹ ನಿಂತಿರುವುದಕ್ಕೂ, ಚಲನೆಗೂ ನಾವು ಬೇಕೇ ಬೇಕು ಎಂದವು. ನಾಲಿಗೆ ನಾನೇ ಇಲ್ಲದಿದ್ದರೆ ದೇಹದಲ್ಲಿರುವ ಆತ್ಮ ಹೇಗೆ ಮಾತಾಡುತ್ತದೆ, ತನಗೆ ಬೇಕಾದುದನ್ನು ಹೇಗೆ ಕೇಳುತ್ತದೆ, ನಾನು ಇಲ್ಲದಿದ್ದರೆ ಬಾಯಿಗೆ ಬಿದ್ದ ಆಹಾರವನ್ನು ಈ ಕಡೆ ಆ ಕಡೆ ಮಾಡುವವರು ಯಾರು, ಅದಕ್ಕೆ ನಾನೇ ಮುಖ್ಯ ಅಂದಿತು.  ನಂತರ ಹಲ್ಲಿನ ಸರದಿ, ನಾನು ಬಾಯಿಗೆ ಬಿದ್ದ ಆಹಾರವನ್ನು ಚನ್ನಾಗಿ ಅಗಿಯದಿದ್ದರೆ ಅದು ಹೇಗೆ ಅರಗುತ್ತದೆ. ಅಗಿಯದೇ ಒಳಗೆ ಆಹಾರ ಹೋದರೆ ಅದನ್ನು ಹೊಟ್ಟೆ ಹೇಗೆ ಅರಗಿಸಿಕೊಳ್ಳುತ್ತದೆ ಎಂದಿತು. ಹೀಗೆ ದೇಹದ ಪ್ರತಿಯೊಂದು ಭಾಗವೂ ನಾನೇ ಮುಖ್ಯ ಎಂದು ಕೂಗಾಡುವಾಗ ಬೇರೆ ಅಂಗಗಳು ಅದನ್ನು ಒಪ್ಪಿಕೊಳ್ಳಲೇ ಇಲ್ಲ. ಕಡೆಗೆ ಎಲ್ಲ ಭಾಗಗಳೂ ಇಂದಿನಿಂದ ನಾನು ಯಾವ ಕೆಲಸವನ್ನೂ ಮಾಡುವುದಿಲ್ಲ ಎಂದು ಮುಷ್ಕರ ಹೂಡಿದವು. ನಾನು ಏನೂ ಕೆಲಸ ಮಾಡುವುದಿಲ್ಲ ಎಂದು ಕೈಗಳೂ, ನಾನು ಎಲ್ಲಿಗೂ ಹೋಗುವುದಿಲ್ಲ ಎಂದು ಕಾಲುಗಳೂ, ನಾನು ಅಗಿಯುವುದಿಲ್ಲ ಎಂದು ಹಲ್ಲುಗಳೂ, ನಾನು ಮಾತಾಡುವುದಿಲ್ಲ ಎಂದು ನಾಲಿಗೆಯೂ ತಟಸ್ಥವಾದವು.

ಇದು ಷುರುವಾದ ಮೇಲೆ ಇಡೀ ದೇಹದಲ್ಲಿ ನಿಶ್ಶಕ್ತಿ ಪ್ರಾರಂಭವಾಯಿತು. ಹೊಟ್ಟೆಗೆ ಏನೂ ಆಹಾರವೇ ಬರದೇ ಪಚನ ಕ್ರಿಯೆ ನಿಂತುಹೋಯಿತು. ರಕ್ತ ಸಂಚಲನದಲ್ಲಿ ಏರುಪೇರಾಯಿತು. ನಾಲಿಗೆ ಒಣಗಲು ಷುರುವಾಯಿತು. ಇಡೀ ದೇಹ ಕಂಪಿಸಲು

ಶುರುವಾಯಿತು. ದೇಹಕ್ಕೆ ನೀರು ಬೇಕೆನಿಸಿದಾಗ ಕೈಗಳು ನೀರಿನ ಲೋಟ ಎತ್ತಲು ನಿರಾಕರಿಸಿದವು. ಆಹಾರ ಇದ್ದರೂ ಕೈಗಳು ಅವುಗಳನ್ನು ತೆಗೆದು ಬಾಯಿಗೆ ಹಾಕಲಿಲ್ಲ. ಇದರಿಂದಾಗಿ ಯಾವ ಅಂಗಗಳಿಗೂ ಏನೂ ಕೆಲಸವೇ ಇಲ್ಲದೇ ದೇಹ ನಲುಗಿತು. ಕೈಗಳು ನಡುಗಲಾರಂಭಿಸಿದವು, ಕಾಲುಗಳು ಆಯಾಸದಿಂದ ಕುಸಿದವು. ಇನ್ನೇನು ದೇಹ ಕುಸಿಯಬೇಕು ಎನ್ನುವಾಗ ಎಲ್ಲ ಅಂಗಗಳಿಗೂ ತಮ್ಮ ತಪ್ಪಿನ ಅರಿವಾಯಿತು. ನಮ್ಮನ್ನು ಕಾಪಾಡುತ್ತಿರುವ ದೇಹ ಕ್ಷೇಮವಾಗಿರಬೇಕಾದರೆ ನಾವು ಒಬ್ಬೊಬ್ಬರೂ ಅದಕ್ಕೆ ಸಹಕರಿಸಬೇಕು. ಇಲ್ಲದಿದ್ದರೆ ನಮಗೇ ಉಳಿಗಾಲವಿಲ್ಲ. ನಾವು ಕೆಲಸ ಮಾಡಿ ದೇಹಕ್ಕೆ ಏನೂ ಉಪಯೋಗ ಮಾಡುತ್ತಿಲ್ಲ, ಬದಲಿಗೆ ನಮ್ಮನ್ನು ನಾವೇ ಸಂರಕ್ಷಣೆ ಮಾಡಿಕೊಳ್ಳುತ್ತಿದ್ದೇವೆ. ಇದರಿಂದ ನಾವು ಯಾರೂ ಇನ್ನು ಮುಂದೆ ಹೀಗೆ ಯೋಚಿಸದೇ ಒಗ್ಗಟ್ಟಿನಿಂದ ಇರೋಣ ಎಂದು ತೀರ್ಮಾನಿಸಿದವು. ಅಂದಿನಿಂದ ಒಟ್ಟಿಗೆ ಇದ್ದರೆ ಗೆಲುವು, ಬೇರೆಯಾದರೆ ಸೋಲು ಎನ್ನುವ ಗಾದೆ ಪ್ರಚಲಿತಕ್ಕೆ ಬಂತು.



# ಕ್ರಾಂತಿಯ ಅಲೆಯಲ್ಲಿ ಸಿಲುಕಿ....

ಕುಮುದಾ ಪುರುಷೋತ್ತಮ್

ಸಾವಿರದ ಒಂಬೈನೂರ ಅರವತ್ತರ ಕಡೆಯದಿನಗಳು. ನಾನು ಖರಗಪುರದಲ್ಲಿದ್ದ ಐ.ಐ.ಟಿಯ ಶಿಕ್ಷಕರೊಬ್ಬರ ನವ ವಧುವಾಗಿ ಅಲ್ಲಿಯ ಕ್ಯಾಂಪಸ್ಸನ್ನು ಪ್ರವೇಶಿಸಿದೆ. ಅಲ್ಲಿ ಸಿಬ್ಬಂದಿಗಾಗಿ ಬೆಂಕಿ ಪೊಟ್ಟಣದಂತಹ ಸಾಲು ಸಾಲು ಮನೆಗಳು. ಅಂತಹ ಒಂದು ಮನೆಯಲ್ಲಿ ನಮ್ಮ ವಾಸ. ಅಂದಿನ ದಿನಗಳಲ್ಲಿ ನಮ್ಮಿಬ್ಬರಲ್ಲೂ ಒಬ್ಬರನ್ನೊಬ್ಬರು ಅರಿತುಕೊಳ್ಳುವ ತವಕ. ಪರಸ್ಪರ ಮೆಚ್ಚಿಸಲು  ಅಪರಿಮಿತ ಉತ್ಸಾಹ. ಒಟ್ಟಿನಲ್ಲಿ ನಮ್ಮನ್ನು ಮೀರಿಸುವ ಪ್ರೇಮಿಗಳು ಈ ಜಗತ್ತಿನಲ್ಲಿ ಇಲ್ಲವೆಂಬ ಭ್ರಮೆಬೇರೆ! ಇಂತಹ ರಸಮಯ ಸನ್ನಿವೇಶದಲ್ಲಿ ಹೊರಜಗತ್ತಿನ ಕ್ರಾಂತಿ ನಮ್ಮನ್ನು ಕಬಳಿಸಿದ ಅನುಭವವೇ ಈ ಕಥನ.

'ನಕ್ಸಲ್ಬಾರಿ' ಪಶ್ಚಿಮಬಂಗಾಳದ ಒಂದು ಪುಟ್ಟ ಊರು. ಹೊರಜಗತ್ತಿಗೆ ತೆರೆದುಕೊಳ್ಳದೆ ಅನಾದಿಕಾಲದಿಂದ ಅಜ್ಞಾತವಾಗಿದ್ದ ಊರು. ಇದು ಒಮ್ಮೆಲೇ ಸ್ಫೋಟಗೊಂಡು ಎಲ್ಲರ ಚರ್ಚೆಯ ವಿಷಯವಾಯಿತು. ಕಾರಣ ಅಲ್ಲಿ ಹೊತ್ತಿಕೊಂಡ ಕ್ರಾಂತಿಯ ಕಿಡಿ. ಅದು ಬಂಡವಾಳಶಾಹಿಗೆ ಸೆಡ್ಡುಹೊಡೆದು ನಿಂತಿತು. ಕ್ರಮೇಣ ಇದು ಕಲ್ಕತ್ತೆಗೆ ಹರಡಿ ಹೊತ್ತಿ ಉರಿದು ಹಿಂಸಾಚಾರಕ್ಕೆಡೆ ಮಾಡಿತು. ಯುವಜನರೇ ಇದರಲ್ಲಿ ಮುಂದಿದ್ದು ಅವರನ್ನು ತಡೆಯುವ ನಿಟ್ಟಿನಲ್ಲಿ ಆಡಳಿತ ಸಂಪೂರ್ಣ ಸೋತಿತು. ನಾವಿದ್ದ ಖರಗಪುರದಲ್ಲೂ ಹಲವು ವರ್ಷದಿಂದ ಲೇವಾದೇವಿ ನಡೆಸುತ್ತಿದ್ದ ಮಾರವಾಡಿ ವರ್ತಕನನ್ನು ರಸ್ತೆಯಲ್ಲಿ ಕೊಚ್ಚಿಹಾಕಲಾಯಿತು. ಅದಾದ ಮರುದಿನವೇ ರೈಲು ನಿಲ್ದಾಣದ ಗೋಡೆಯಮೇಲೆ ಊರಿನ ಪ್ರಸಿದ್ಧ ವರ್ತಕರ ಹೆಸರನ್ನು ಬರೆದು ಜನತೆಯ ನ್ಯಾಯಾಲಯ ನಿಮಗೂ ಇದೇ ಶಿಕ್ಷೆ ವಿಧಿಸಿದೆ. ನಿಮ್ಮ ಸರದಿಗಾಗಿ ಕಾದಿರಿ ಎಂಬ ಭಯಾನಕ ಬರಹ ಕಾಣಿಸಿಕೊಂಡಿತು.

ಒಂದು ಮುಂಜಾನೆ ಮನೆಯಿಂದ ಹೊರಗೆ ಬಂದರೆ ನಮ್ಮ ಮನೆಯ ಗೋಡೆಯಮೇಲೆಯೂ ಕ್ರಾಂತಿಯ ಲಾಂಛನದ ಜೊತೆಗೆ ಕ್ರಾಂತಿಗೆ ಜೈ ಎಂದು ಯಾರೋ ಬರೆದು ಹೋಗಿದ್ದರು. ಇದರಿಂದ ನಮಗಿನ್ನಾವ ಗ್ರಹಚಾರ ಕಾದಿದೆಯೋ ಎಂಬ ಭೀತಿ ಶುರುವಾಯಿತು. ಈ ಊರೂ ಬೇಡ ಉದ್ಯೋಗವೂ ಬೇಡ. ನಮ್ಮೂರಿಗೆ ತಿರುಗಿ ಹೋಗಿಬಿಡೋಣ ಎಂಬ ಭಾವನೆ ಕಾಡಿತು. ಒಂದುವಾರ ಕಳೆದಮೇಲೆ ಸಂಶಯದಿಂದ ತಲಾಶು ಮಾಡಲು ಬಂದ ಪೋಲೀಸರಿಗೆ ಐ.ಐ.ಟಿ ಹಾಸ್ಟಲ್‌ನ ಕೊಠಡಿ ಒಂದರಲ್ಲಿ ಚಳುವಳಿಯ ಕರಪತ್ರಗಳು ದೊರೆತವು. ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿ ಕರೆದೊಯ್ದರು. ಅಂತೂ ಕ್ರಾಂತಿ ನಮ್ಮ ಬಾಗಿಲಿಗೇ ಬಂದು ಕದ ತಟ್ಟತೊಡಗಿತ್ತು.

ಅಂದು ಸೋಮವಾರ. ನನ್ನವರು ಎಂದಿಗಿಂತ ಮುಂಚೆಯೇ ತಯಾರಾಗಿ ಕಾಲೇಜಿಗೆ ಹೊರಟು ನಿಂತರು. "ಇವತ್ತು ನನ್ನ ಕ್ಲಾಸಿನ ಹುಡುಗರಿಗೆ ಟೆಸ್ಟ್ ಕೊಡುವುದಿದೆ. ನಾ ಬರುವುದು ತಡವಾಗಬಹುದು. ಊಟಕ್ಕಾಗಿ ಕಾಯಬೇಡ." ಎಂದು ಹೇಳಿ ಸೈಕಲ್ಲೇರಿ ಹೊರಟರು. ನಾನು ಎಂದಿನಂತೆ ದಿನಚರಿಯ ಕೆಲಸ ಮುಗಿಸಿ ಟೇಬಲ್ ಮೇಲೆ ಮಾಡಿದ್ದ ಅಡುಗೆಯನ್ನು ಜೋಡಿಸಿಟ್ಟು ಅಂದಿನ ದಿನಪತ್ರಿಕೆ ಅಮೃತ ಬಝಾರ್ ಪತ್ರಿಕಾ ಕೈಲಿ ಹಿಡಿದು ಆರಾಮ ಕುರ್ಚಿಯಲ್ಲಿ ಓದಲು ಕುಳಿತೆ. ಮುಖಪುಟದಲ್ಲಿದ್ದ ತಲೆಬರಹ ಕಣ್ಣಿಗೆ ರಾಚಿತು. " ಭಾಗಲ್ಪುರ್ ವಿಶ್ವವಿದ್ಯಾಲಯದ ಪ್ರೊಫೆಸರ್ ಹತ್ಯೆ. ಕ್ರಾಂತಿಕಾರಿ ವಿದ್ಯಾರ್ಥಿಗಳಿಂದ'. ನನ್ನ ನಡುಗುವ ಕೈಗಳು ಹಿಡಿದಿದ್ದ ಪೇಪರೂ ನಡುಗುತ್ತಿತ್ತು. ಎಲ್ಲೆಲ್ಲೂ ನಡೆಯುತ್ತಿದ್ದ

ಹಿಂಸಾಚಾರವನ್ನು ವಿರೋಧಿಸಿ ಈ ಯುವ ಪ್ರೊಫೆಸರ್ ಹಿಂದಿನ ದಿನ ತರಗತಿಯಲ್ಲಿ ಭಾಷಣ ಮಾಡಿದ್ದರಂತೆ. ಇದರಿಂದ ಕುಪಿತಗೊಂಡ ವಿದ್ಯಾರ್ಥಿಗಳು ಮರುದಿನಗುಂಪಾಗಿ ಅವರ ಮನೆಗೆ ಹೋಗಿ ಹೊರಗೆಳೆದು ತಂದು ಕೊಚ್ಚಿಹಾಕಿದ್ದ ವರದಿ ನೋಡಿ ನಡುಗಿಹೋದೆ. ಇದ್ದದ್ದನ್ನು ಇದ್ದಂತೆ ಎಗ್ಗಿಲ್ಲದೆ ಹೇಳುವ ಸ್ವಭಾವದ ನನ್ನವರನ್ನು ಪಾಠದ ವಿಷಯಬಿಟ್ಟು ಬೇರ್‍ಯಾವುದರ ಬಗ್ಗೆಯೂ ಬಾಯಿಬಿಡದಿರಲು ಹೇಳಬೇಕೆಂದುಕೊಂಡು ಗೋಡೆಯ ಗಡಿಯಾರ ನೋಡಿದೆ. ಒಂದು ಗಂಟೆ ದಾಟಿ ಚಿಕ್ಕ ಮುಳ್ಳು ಮುಂದೆ ಹೋಗಿತ್ತು. ಇನ್ನೂ ಏಕೆ ಬರಲಿಲ್ಲ ಎಂದುಕೊಳ್ಳುತ್ತಾ ಹೊರ ವರಾಂಡಕ್ಕೆ ಬಂದು ಬರುವ ದಾರಿ ಕಾಯುತ್ತಾ ನಿಂತೆ. ನಾನು ನಿರೀಕ್ಷಿಸುತ್ತಿದ್ದ ಸೈಕಲ್ ಬರಲಿಲ್ಲ. ಬದಲಿಗೆ ಒಮ್ಮೆಗೇ ಎಂಟು ಹತ್ತು ಸೈಕಲ್ಗಳು ರಸ್ತೆಯ ಕೊನೆಯಲ್ಲಿ ಕಾಣಿಸಿಕೊಂಡು ಮೆರವಣಿಗೆಯಂತೆ ಬರುತ್ತಿದ್ದುವು. ಇಷ್ಟೊಂದು ಜನ ಯಾರ ಮನೆಗೋಎಂದುಕೊಳ್ಳುತ್ತಿದ್ದಂತೆ ಖಾತ್ರಿ ಪಡಿಸಲು ನಮ್ಮ ಮನೆಯ ಗೇಟಿನ ಬಳಿಯೇ ಬಂದು ಎಲ್ಲರೂ ಇಳಿದರು! ನಾನು ಬೆದರಿ ಒಳಗೋಡಿಹೋಗಿ ಬಾಗಿಲು ಭದ್ರ ಪಡಿಸಿಕೊಂಡೆ. ಹರಡಿದ್ದ ದಿನಪತ್ರಿಕೆಯ ತಲೆಬರಹ ಹುಶಾರಾಗಿರು ಎಂದು ಸೂಚಿಸಿತು. ಬಾಗಿಲ ಗಂಟೆ ಶಬ್ದವಾದಾಗ ಬಾಗಿಲು ತೆರೆಯದೆ ಪಕ್ಕದ ಕಿಟಕಿಯಿಂದ ಇಣುಕಿ 'ಯಾರು ಬೇಕಿತ್ತು?" ಕೇಳಿದೆ.

"ಪ್ರೊಫೆಸರ್ ಸರ್ ಇದ್ದಾರಾ?"

"ಇಲ್ಲ. ಇಂದು ಅವರು ತಡವಾಗಿ ಬರ್ತಾರೆ."

"ಪರವಾಗಿಲ್ಲ. ನಿಧಾನಕ್ಕೆ ಬರಲಿ. ನಾವು ಕಾಯುತ್ತೇವೆ."ನನ್ನ ಬಾಯಿ ಒಣಗಿ ಎದೆ ನಗಾರಿಯಾಯಿತು.

"ನೀವು ಕಾದು ಪ್ರಯೋಜನವಿಲ್ಲ.ಬಹಳ ತಡವಾಗಿ ಬರ್ತಾರೆ. ನೀವೆಲ್ಲಾ ಹೋಗಿ ಊಟಮಾಡಿ ಬನ್ನಿ."

"ಸಾಧ್ಯವಿಲ್ಲ. ಇಂದು ನಾವು ಅವರನ್ನು ನೋಡಿದಮೇಲೆಯೇ ಊಟ ಗೀಟ ಎಲ್ಲ."ಎಂದ ಅವರಲ್ಲೊಬ್ಬ ಸಿಡುಕುತ್ತಾ. ಆಗೆ ನನಗೆ ಅವರು ಯಾತಕ್ಕೆ ಬಂದಿದ್ದಾರೆಂದು ಖಚಿತವಾಯಿತು." ಬಾಗಿಲು ತೆಗೀರಿ ಮೇಡಂ, ತುಂಬಾ ಬಿಸಿಲು. ಒಳಗೆ ಬಂದು ಫ್ಯಾನ್ ಕೆಳಗೆ ಕುಳಿತುಕೊಳ್ಳುತ್ತೇವೆ"ಎಂದ ಧಡಿಯನೊಬ್ಬ.

"ನಮ್ಮ ಮನೇಲಿ ನಾಲ್ಕೇ ಕುರ್ಚಿಇರೊದು. ಅದು ಸಾಲೋಲ್ಲ. ಕರೆಂಟ್ ಹೋಗಿದೆ. ಫ್ಯಾನ್ ಓಡುತಿಲ್ಲ. ಅದಕ್ಕೇ ಹೇಳಿದ್ದು. ಈಗ ಹೋಗಿ ಊಟ ಮುಗಿಸಿ ಬನ್ನಿ ಅಂತ"

"ನಾವು ಎಲ್ಲೂ ಹೋಗೋಲ್ಲ. ತುರ್ತಾಗಿ ಅವರನ್ನು ಭೇಟಿಯಾಗಲೇ ಬೇಕು. ಅವರು ಬರುವವರೆಗೆ ಇಲ್ಲಿಯೇ ಕಾಯುತ್ತೇವೆ" ಎನ್ನುತ್ತಾ ಬಾಳೆ ಎಲೆ ಊಟಕ್ಕೆ ಕುಳಿತವರಂತೆ ಚಕ್ಕಮಕ್ಕಳ ಹಾಕಿ ಕುಳಿತೇ ಬಿಟ್ಟರು."

ನಾನೀಗ ಏನಾದರೂ ಮಾಡಲೇ ಬೇಕಿತ್ತು. ಹೇಗಾದರೂ ಯಾರ ಮೂಲಕವಾಗಿಯಾದರೂ ನನ್ನವರಿಗೆ ಮನೆಗೆ ಬರದಿರಲು ಸೂಚಿಸಲೇಬೇಕಿತ್ತು. ಆದರೆ ಹೇಗೆ? ಅಂದಿನ ದಿನಗಳಲ್ಲಿ ಫ್ಯಾನ್ ಕೇವಲ ಶ್ರೀಮಂತರ ಮನೆಗೇ ಸೀಮಿತಆಗಿತ್ತು. ಅಕ್ಕಪಕ್ಕದವರ ಸಹಾಯ ಪಡೆಯೋಣವೆಂದರೆ ಅವರಿಗೆ ಬೆಂಗಾಲಿ ಭಾಷೆ ಒಂದು ಬಿಟ್ಟರೆ ಬೇರೆ ಭಾಷೆಯ ಗಂಧವೂ ತಿಳಿಯದವರು. ಇಂಗ್ಲಿಷ್ ತಿಳಿದವರೂ ಅದಕ್ಕವರ ಮಾತೃಭಾಷೆಯ ಪಾಲಿಸ್ ಮಾಡಿ ಅರ್ಥವಾಗದಂತೆ ಉಚ್ಚರಿಸುತ್ತಿದ್ದರು! ಶಬ್ದ ಮಾಡದಂತೆ

ಹಿತ್ತಿಲ ಬಾಗಿಲು ತೆರೆದು ಹಿಂದಿನ ರಸ್ತೆಯಲ್ಲಿ ಯಾರಾದರೂ ಸಹಾಯಕ್ಕೆ ಒದಗುವವರೆನೋ ಎಂದು ನೋಡಲು ಹೋದೆ. ಬಿರು ಬಿಸಿಲಿನಲ್ಲಿ ರಸ್ತೆ ನಿರ್ಜನವಾಗಿತ್ತು. ನಿರಾಸೆಗೊಂಡು




ಹಿಂದಿಗುವುದರಲ್ಲಿದ್ದಾಗ ನಮ್ಮ ಮನೆಯ ಕೆಲಸದವಳು ಕಣ್ಣಿಗೆ ಬಿದ್ದಳು. ಅವಳು ಆಂಧ್ರಬುಡಕಟ್ಟು ಜನಾಂಗಕ್ಕೆ ಸೇರಿದ್ದು ಒರಿಸ್ಸಾರಾಜ್ಯದಲ್ಲಿ ಹಲವು ವರ್ಷಗಳು ಕಳೆದು ಈಗ ಬಂಗಾಳಕ್ಕೆ ಬಂದು ಹೊಟ್ಟೆ ಹೊರೆಯುತ್ತಿದ್ದವಳು. ಬಾಯ್ಬಿಟ್ಟರೆ ಮೂರೂ ಭಾಷೆಗಳನ್ನು ಸಮ್ಮಿಶ್ರಮಾಡಿ ಮಾತನಾಡುತ್ತಿದ್ದಳು. ಆ ಮೂರು ಭಾಷೆಗಳ ಗಂಧವಿಲ್ಲದ ನಾನು ಕೇವಲ ಸಂಜ್ಞೆ, ಹಾವಭಾವಗಳ ಮೂಲಕ ವ್ಯವಹರಿಸುತ್ತಿದ್ದೆ. ಈಗ ಹೇಗಾದರೂ ಮಾಡಿ ಅವಳು ಓಡಿಹೋಗಿ ಸಾಹೆಬ್ ಬರುವ ದಾರಿಯಲ್ಲಿ ನಿಂತು ಮನೆಗೆ ಬರಕೂಡದೆಂದೂ, ಶತ್ರುಗಳು ಬಂದಿದ್ದಾರೆಂದೂ, ಪೋಲಿಸ್ಗೆ ದೂರುಕೊಡಬೇಕೆಂದೂ ಹೇಳಲೇಬೇಕಿತ್ತು. ಕೈ ಚಪ್ಪಾಳೆ ತಟ್ಟಿದೆ. ಐದನೇ ಬಾರಿ ಕಿವಿಗೆ ಬಿದ್ದು ನನ್ನತ್ತ ತಿರುಗಿ ನೋಡಿದಳು. ಅವಳ ಬಾಯಿಯಲ್ಲಿ ಕಚ್ಚಿಕೊಂಡಿದ್ದ ಬೀಡಿ ಹೊಗೆಯಾಡುತ್ತಿತ್ತು! ನಾಚಿಕೆಯಾಯಿತೇನೋ. ನಾ ಕೈಬೀಸಿ ಕರೆದರೆ ಅವಳೂ ಟಾ.ಟಾ ಮಾಡುವಂತೆ ಕೈಬೀಸಿ ಹೋಗಿಬಿಟ್ಟಳು ಪಾಪಿ!

ಆವೇಳೆಗೆ ಬೆಂಗಾಲಿ ಮಾಧ್ಯಮದಲ್ಲಿ ಹತ್ತನೇ ಕ್ಲಾಸಿನಲ್ಲಿ ಓದುತ್ತಿದ್ದ ಪಕ್ಕದ ಮನೆಯ ಹುಡುಗ ಹೊರಬಂದ. ನಾನು ಹತ್ತಿರ ಕರೆದು ಸರಳವಾದ ಇಂಗ್ಲಿಷ್ನಲ್ಲಿ ಟೆರರಿಸ್ಟ್ ಬಂದಿದ್ದಾರೆ ಅಂತ ಅಂಕಲ್ಗೆ ಹೇಳು ಎನ್ನುತ್ತಿದ್ದಂತೆ " ಟೆರರಿಶ್ಟ? ನೋ" ಎನ್ನುತ್ತಾ ಒಳಗೋಡಿಬಿಟ್ಟ ಬೃಹಸ್ಪತಿ! ಮನೆಬಾಗಿಲ ಬೆಲ್ಲಾಯಿತು. ನಾನ್ಯಾವುದು ಆಗಬಾರದೆಂದಿದ್ದೆನೋ ಅದಾಗೇ ಬಿಟ್ಟಿತು. ಮನೆಯ ಯಜಮಾನತಮ್ಮ ಶಿಷ್ಯಂದಿರೊಂದಿಗೆ ನಗುತ್ತಾ ಒಳಬಂದರು!

“ಬನ್ನಿ ಒಳಕ್ಕೆ. ಈ ಬಿಸಿಲಿನಲ್ಲಿ ಹೊರಗೇಕೆ ಕಾಯುತ್ತಿದ್ದಿರಿ?”

"ಮೇಡಂ ಒಳಗೆ ಎಲ್ಲರೂ ಕೂಡಲು ಜಾಗವಿಲ್ಲ ಎಂದರು" ಎಂದು ಒಬ್ಬ ನನ್ನ ಮೇಲೆ ಗೂಬೆ ಕೂರಿಸಿದ.

"ನೋ ನೋ ಇಲ್ದಿದ್ರೆ ಏನಾಯ್ತು? ಸವರಿಸಿಕೊಳ್ಳೋಣ ಬನ್ನಿ". ಒಳಗೆ ಹೋಗಿ ಊಟದ ಟೇಬಲಿನ ಕುರ್ಚಿಗಳು, ನನ್ನಮ್ಮ ಪಾತ್ರೆ ಪಡಗ ಹಾಕಿ ಕಳುಹಿಸಿದ್ದ ಈಗ ಖಾಲಿಯಾಗಿದ್ದ ಸ್ಟೀಲಿನ ಟ್ರಂಕು ಎಲ್ಲಾ ಹೊರಬಂದು ಎಲ್ಲರೂ ಆಸೀನರಾದರು.

“ಈಗ ಹೇಳಿ ಏನು ಬಂದದ್ದು?”

ನನಗೆ ಮೈ ಪರಚಿಕೊಳ್ಳುವಂತಾಯ್ತು. ನನ್ನ ಆಂತರಂಗದ ಸಂದೇಹವನ್ನು ಇವರಿಗೆ ಹೇಗೆ ಹೇಳಲಿ? ಮುಂದೆ ತೆರೆದು ಕೊಂಡಿದ್ದ ಪತ್ರಿಕೆಯ ತಲೆ ಬರಹ ಕಣ್ಮುಂದೆ ಹಿಡಿಯಲೇ? ಗಟ್ಟು ಮುಟ್ಟಾಗಿದ್ದ ಧಾಂಡಿಗರು ಅವರನ್ನಾಗಲೇ ಸುತ್ತುವರೆದಿದ್ದರು. ಒನಕೆಯ ಓಬವ್ವನಂತೆ ಚಚ್ಚಿಬಿಡಲು ಮನೆಯಲ್ಲಿ ಒನಕೆಯೂ ಇರಲಿಲ್ಲ. ಕೈಚೆಲ್ಲಿ ದೇವರ ಸ್ಮರಣೆ ಮಾಡುತ್ತಾ ಬಾಗಿಲ

ಪರದೆಯ ಹಿಂದಿನ ಡೈನಿಂಗ್ ಹಾಲ್ನಲ್ಲಿ ನಿಂತುಬಿಟ್ಟೆ,

"ಸರ್, ಇಂದು ನೀವು ಕೊಟ್ಟ ಟೆಸ್ಟ್ ಪೇಪರ್ ತುಂಬಾ ಕಠಿಣವಾಗಿತ್ತು." ನನಗೆ ಇವರ ಮೇಲೆ ಸಿಟ್ಟು ಉಕ್ಕಿ ಹರಿಯಿತು.ಇಂತಹ ಕ್ರಾಂತಿಯ ಸಮಯದಲ್ಲಿ ಕಷ್ಟವಾದ ಪೇಪರ್ ಯಾಕೆ ಕೊಡಬೇಕಿತ್ತು? ತನ್ನ ರಕ್ಷಣೆಗಾಗಿ ಸುಲಭದ ಪೇಪರ್ ಕೊಟ್ಟಿದ್ದರೆ ಇಂದು ಇಂತಹ ಪರಿಸ್ಥಿತಿ ಉಂಟಾಗುತ್ತಿತ್ತೇ?

"ಏನು? ಕಷ್ಟದ ಪೇಪರ್ರೇ? ಕೇಳಿದವರು ನಕ್ಕಾರು. ಕ್ಲಾಸಿನಲ್ಲಿ ಕಲಿಸಿದ್ದನ್ನೇ ಕೊಟ್ಟಿದ್ದೆನಲ್ಲಾ. ಬೇಕಿದ್ದರೆ ಈಗದನ್ನು ಚರ್ಚಿಸೋಣ" ಎಂದರು. ಮುಂದಿನ ಮುಕ್ಕಾಲು ಗಂಟೆ ನನಗರ್ಥವಾಗದ ಚರ್ಚೆ. ಕಿವಿಗೆ ಬಿದ್ದದ್ದು ಕೇವಲ ಆಲ್ಫಾ, ಬೀಟಾ, ಡಿಫರೆನ್ಸಿಏಷನ್, ಲಿಮಿಟ್, ಕಾಂಪ್ಲೆಕ್ಸ್ ನಂಬರ್. ಎಲ್ಲಾ ನನಗರ್ಥವಾಗದ ಶಬ್ದಗಳು.

"ಸಾರ್, ನಾವ್ಯಾರೂ ಸರಿಯಾಗಿ ಮಾಡಿಲ್ಲ. ನಮ್ಮ ಗ್ರೇಡ್ ಕಮ್ಮಿಯಾಗಿ ಬಿಡುತ್ತೆ. ಈಗ ಏನು ಮಾಡೋದು?"

"ಚಿಂತೆ ಬೇಡ. ನಾಳೆಯಿಂದ ನನ್ನ ಸ್ಪೆಷಲ್ ಕ್ಲಾಸಿಗೆ ಬನ್ನಿ, ಎಲ್ಲಾ ಕಲಿತಮೇಲೆ ಮುಂದಿನ ವಾರ ಇನ್ನೊಂದು ಟೆಸ್ಟ್ ಕೊಡುತ್ತೇನೆ. ಚೆನ್ನಾಗಿ ಓದಿಕೊಂಡು ಬಂದು ಬರೀರಿ"

"ತುಂಬಾ ಥ್ಯಾಂಕ್ಸ್ ಸಾರ್. ನಿಮಗ್ಯಾಕೆ ವೃಥಾ ತೊಂದರೆ? ಎಲ್ಲರಿಗು ಐದೈದು ಗ್ರೇಸ್ ಮಾರ್ಕು ಕೊಟ್ಬಿಡಿ. ಬದುಕ್ಕೋತೀವಿ" ಎಂದ ಒಬ್ಬ ಚಾಲಾಕಿ ಹುಡುಗ.

"ನಾನಿಲ್ಲಿ ಉದ್ಯೋಗ ಮಾಡುತ್ತಿರುವುದು ನಿಮ್ಮ ಜ್ಞಾನವನ್ನು ಉನ್ನತ ಮಟ್ಟಕ್ಕೇರಿಸಲು. ಗ್ರೇಸ್ ಮಾರ್ಕು ಕೊಟ್ಟು ಮಟ್ಟವನ್ನೇ ಕೆಳಗಿಳಿಸುವುದಕ್ಕಲ್ಲ" ನಾಳೆಯಿಂದ ಕ್ಲಾಸಿಗೆ ಬನ್ನಿ." ಎಂದು ಮೇಲಕ್ಕೆದ್ದರು. ಏನೋ ನೆನಪಾದವರಂತೆ ಒಳಬಂದು ಪರದೆ ಹಿಂದೆ ನಿಂತಿದ್ದ ನನ್ನನ್ನು ಕಂಡು ಎಲ್ಲರಿಗೂ ನಿಂಬೇ ಪಾನಕ ಮಾಡಿಕೊಡು ಎಂದರು. ಅಷ್ಟೂ ಮಂದಿಗೆ ಪಾನಕ ಕೊಟ್ಟು ಮಿಕ್ಕಿದ್ದನ್ನು ದೊಡ್ಡ ಲೋಟಕ್ಕೆ ಬಗ್ಗಿಸಿ ಕುಡಿದೆ. ಉರಿಯುತ್ತಿದ್ದ ಹೊಟ್ಟೆ ತಂಪಾಯಿತು.

---

ಆ ಅಮಾವಾಸ್ಯೆಯ ರಾತ್ರಿ ಇದ್ದಕ್ಕಿದ್ದಂತೆ ಮಹಡಿ ಮೇಲೆ ಓವರ್ ಹೆಡ್ ಟ್ಯಾಂಕಿನ ಹತ್ತಿರ ಯಾರೋ ಓಡಾಡ್ತಿರೋ ಶಬ್ದ ಚೆನ್ನಾಗಿ ಕೇಳಿಸ್ತಿತ್ತು.
"..ಅಯ್ಯೋ, ಏನ್ರೀ ಮಾಡೋದು, ಕಳ್ಳ ಬಂದಿದ್ದಾನೆ ಅನ್ಸುತ್ತೆ.. ಅಂದ್ರು ಹೆದರಿದ ಜಯಮ್ಮ. ಯಜಮಾನ್ರು ಸೂಕ್ಷ್ಮವಾಗಿ ಶಬ್ದ ಆಲಿಸಿ, ಏ..ಅವ್ನು ಅಲ್ಲಿರುವ ಸ್ಟೀಲ್ ನಲ್ಲಿಗಳನ್ನು ಕದೀತಿದಾನೆ..ಅಂದ್ರು.
"..ಅಯ್ಯೋ ಹೌದಾ?? ಅಲ್ಲಿ ಹೊಸ ಬಕೀಟು, ಇತ್ತು, ಕೆಲವು ಹೊಸ ಸೀರೆಗಳನ್ನು ಒಗೆದು ಒಣ ಹಾಕಿದ್ದೆ ರೀ..ಏನಾದ್ರೂ ಬೇಗ ಐಡಿಯಾ ಮಾಡಿ..ಅಂದ ಹೆಂಡತಿಯತ್ತ ನೋಡಿ..ಸೀದಾ ಬಾತ್ರೂಮಿಗೆ ಹೋದವರೇ ಬಕೆಟ್ ಗಳಲ್ಲಿ ನೀರು ತುಂಬಿಸಲಾರಂಭಿಸಿದ ರಾಯರನ್ನು ಇದೇನು ಹೀಗ್ಮಾಡ್ತಿದೀರಿ ಅಂದ ಹೆಂಡತಿಯತ್ತ ನೋಡಿ..ಈ ನಡುರಾತ್ರಿ ಅವನು ನಲ್ಲಿ ಕದ್ದು ತೊಗೊಂಡು ಹೋದ್ರೆ..ಬೆಳಗಾಗೆದ್ದು ನಮ್ಮ ಅರ್ಜೆಂಟ್ ನಿತ್ಯ ಕರ್ಮಗಳಿಗೆ ನಮ್ಗೆ ನೀರು ಬೇಡ್ವೇನೇ ಅದಕ್ಕೇ ನೀರು ತುಂಬಿಸ್ತಿದೀನಿ..ಅಂದ ರಾಯರನ್ನು ನೋಡಿ ಆ ಭಯದ ವಾತಾವರಣದಲ್ಲೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು ಜಯಮ್ಮ.

**–ಸುಮನಾ**

# ಹರೇ ಸಮುದ್ರ ಪುರಾಣ

**ಎಚ್. ಗೋಪಾಲಕೃಷ್ಣ**

ನನ್ನ ಬಗ್ಗೆ ನಿಮಗೆ ಈಗಲೇ ಸಾಕಷ್ಟು ಗೊತ್ತಿರಬಹುದು. ಗೊತ್ತಿಲ್ಲದೇ ಇರುವ ವಿಷಯ ಹೇಳೋಣ ಅಂತ ಆಸೆ. ಹರೇ ಸಮುದ್ರ ನಮ್ಮ ಹಿರಿಯ ದೊಡ್ಡಪ್ಪನ ಊರು. ಈ ದೊಡ್ಡಪ್ಪನಿಗೆ ಐದುವರ್ಷ ಹಿಂದೇನೆ ಇರಬೇಕು ಆಗಲೇ ಎಂಬತ್ತರ ಹಬ್ಬ ಆಗಿತ್ತು. ಅಂದರೆ ಈಗ ಅವರಿಗೆ ಕನಿಷ್ಠ ಅಂದರೂ ಎಂಬತ್ತೈದು ಇರಬೇಕು.ಇವರನ್ನು ದೊಡ್ಡ ದೊಡ್ಡಪ್ಪ ಅಂತ ನಾವು ಕರೆಯೋದು. ಯಾಕೆ ಅಂದರೆ ಇವರಗಿಂತಲೂ ಚಿಕ್ಕ ದೊಡ್ಡಪ್ಪ ಇನ್ನೊಬ್ಬರಿದ್ದಾರೆ.

ಈ ದೊಡ್ಡಪ್ಪ ನಮ್ಮ ತಂದೆ ಕಡೆಯವರು. ನಮ್ಮದು ಆಗ ಅಂದರೆ ನಾವು ಚಿಕ್ಕವರಿದ್ದಾಗ ಕೂಡು ಕುಟುಂಬ ಅಂದರೆ ಅಂದರೆ ಏನು ಹೇಳೋದು? ಇರಿ ಅದನ್ನ ಮೊದಲು ಹೇಳುತ್ತೇನೆ. ನಮ್ಮತಾತ ಅಜ್ಜಿ, ತಂದೆ ತಾಯಿ ನಾಲ್ಕು ಜನ ಅಣ್ಣತಮ್ಮಂದಿರು ಇದು ನಮ್ಮ ಕುಟುಂಬ ಅಂತ ಆದರೆ ನಮ್ಮ ಜತೆಗೆ ಇನ್ನೂ ಅಷ್ಟು ಜನ ಇದ್ದರು. ದೊಡ್ಡಪ್ಪ ನಮ್ಮ ತಂದೆಯ ಚಿಕ್ಕಪ್ಪನ ಮಗ ಅಪ್ಪನಿಗಿಂತಲೂ ವಯಸ್ಸಿನಲ್ಲಿ ಹಿರಿಯರು. ಅದರಿಂದ ಅವರು ದೊಡ್ಡ ದೊಡ್ಡಪ್ಪ. ಅವರ ಹೆಂಡತಿ ಮೂರು ಮಕ್ಕಳು ಇದೊಂದು ಗುಂಪು. ಇನ್ನೊಂದು ಗುಂಪು ಅಂದರೆ ಅಪ್ಪನ ಸೋದರತ್ತೆ, ಅವರ ಸಂಸಾರ. ಅವರು ಗಂಡ ಹೆಂಡತಿ ನಾಲ್ಕು ಮಕ್ಕಳು. ಇಷ್ಟೂ ಜನ ಒಂದು ಮನೇಲಿ ವಾಸ. ಅದರ ಜತೆಗೆ ಮನೆಗೆ ಬಂದು ಹೋಗುವ ನೆಂಟರು ಇಷ್ಟರು. ಹೀಗೆ ಫ್ಲೋಟಿಂಗ್ ಜನ ಬೇರೆ.

ಹೀಗಾಗಿ ಕೆಲವು ಸಲ ಹೊಸಬರು ನಮ್ಮ ಜತೆ ಇದ್ದಾಗ ಅವರು ಯಾರಿಗೆ ನೆಂಟರು ಎನ್ನುವ ಕುತೂಹಲ ಹುಟ್ಟುತ್ತಿತ್ತು. ಇದು ಪ್ರತಿನಿತ್ಯದ ಸಂಗತಿ.

ಇಂತಹ ಒಂದು ಮನೆಯ ಸಂಗತಿಯನ್ನು ಬೆಳಿಗ್ಗೆಯಿಂದ ಶುರು ಹಚ್ಚುತ್ತೇನೆ. ಆಗ ಇಂತಹ ಮನೆಗಳು ಸಾಮಾನ್ಯ

ಬೆಳಿಗ್ಗೆ ಬೆಳಿಗ್ಗೆ ನಾಲ್ಕು ನಾಲ್ಕುವರೆಗೆ ಅಡುಗೆ ಮನೆಯಲ್ಲಿ ಸೌದೆ ಒಲೆ ಹತ್ತಿಸುತ್ತಿದ್ದರು. ಅದರ ಮೇಲೆ ಕಾಫಿ ತಯಾರಿ ಶುರು ಆಗುತ್ತಿತ್ತು.ಇದು ನಮ್ಮಜ್ಜಿ ಮತ್ತು ನನ್ನ ಅಮ್ಮನ ಉಸ್ತುವಾರಿಯಲ್ಲಿ ಆದರೆ ಇತ್ತ ಬಚ್ಚಲು ಮನೆಯಲ್ಲಿ ತಾತ ಮತ್ತು ದೊಡ್ಡಪ್ಪ ಐವತ್ತು ಕೊಡ ಹಿಡಿಯುವ ಹಂಡೆಯ ಒಲೆಗೆ ಸೌದೆ ಸೀಳಿ ಅದಕ್ಕೆ ತುಂಬಿ ನೀರು ಕಾಯಿಸುವ ಕಾಯಕಕ್ಕೆ ಇಳಿಯುತ್ತಿದ್ದರು. ಒಲೆಯ ಪಕ್ಕ ದೊಡ್ಡ ಸೀಮೆಂಟ್ ತೊಟ್ಟಿ ಮತ್ತು ಅದರ ತುಂಬಾ ಬಾವಿಯಿಂದ ಮನೆಯ ಮಧ್ಯ ವಯಸ್ಕರು ಸೇದಿ ಸೇದಿ ಹಾಕಿದ ನೀರು. ಅದರ ಪಕ್ಕವೇ ಬಾವಿ.

ಬಾವಿ ದಾಟಿದರೆ ಅದರ ಪಕ್ಕದ ಇಟ್ಟಿಗೆಯಲ್ಲಿ ಕಟ್ಟಿದ ಪುಟ್ಟ ಪುಟ್ಟ ಪುಟಾಣಿ ರೂಮುಗಳಂತೆ ಕಾಣಿಸುವುದು ನಮ್ಮ ಮೂರು ಕಕ್ಕಸು ಮನೆ. ಅಲ್ಲಿ ಆಗಲೇ ಮನೆಮಂದಿಯ ಓಡಾಟ ಶುರು.

ಇಲ್ಲಿಂದ ಮುಂದಕ್ಕೆ ಬಂದರೆ ಬಚ್ಚಲು, ಅದರ ನಂತರ ಅಡುಗೆಮನೆ, ಅದರ ನಂತರ ಎರಡೂ ಕಡೆ ಐದೋ ಆರೋ ರೂಮುಗಳು ಅದನ್ನು ದಾಟಿದರೆ ಒಂದು ದೊಡ್ಡ ಹಾಲು ಅಥವಾ ಊಟದ ಮನೆ. ಇದು ಆದ ನಂತರ ದೊಡ್ಡ ಪಡಸಾಲೆ, ಅದರ ಪಕ್ಕ ವರಾಂಡ. ಮನೆಯ ಟಾಪೋಗ್ರಾಫಿ ಹೀಗೆ ನಾನು ಕೊನೆಯಿಂದ ಹೇಳಿದೆ. ತಿರುವ ಮುರುವ ಓದಿದರೆ ನಿಮಗೆ ಎಂಟ್ರಿಯಿಂದ ಅಂದರೆ ಮುಂಬಾಗಿಲಿನಿಂದ ಒಂದು ಐಡಿಯಾ ಸಿಗಬಹುದು!

ಈಗ ಕಾಫಿ ಕೇಂದ್ರಕ್ಕೆ ಬನ್ನಿ. ಸೌದೆ ಒಲೆಮೇಲೆ ಒಂದು ದೊಡ್ಡ ಡಬರಿ ಅದರಲ್ಲಿ

ಮರಳುತ್ತಿರುವ ನೀರು. ಪಕ್ಕದ ಇನ್ನೊಂದು ಒಲೆಮೇಲೆ ಹಾಲು, ಅದೂ ಕುದಿ ಹತ್ತಿದೆ. ಇನ್ನೇನು ಉಕ್ಕಬೇಕು..

ಅಜ್ಜಿ ಮರಳುತ್ತಿರುವ ನೀರು ಪಾತ್ರೆಯನ್ನು ದೊಡ್ಡ ಬಟ್ಟೆಯ ಸುರುಳಿಯಲ್ಲಿ ಹಿಡಿದು ಪಕ್ಕದಲ್ಲೇ ಇಟ್ಟಿರುವ ಅರ್ಧ ಕಾಲು ಭಾಗ ಕಾಫೀಪುಡಿ ತುಂಬಿರುವ ಪಾತ್ರೆಗೆ ಸುರಿಯುತ್ತಾರೆ. ಇಡೀ ಅರ್ಧ ಮೈಲು ಸುತ್ತ ಕಾಫಿ ಪುಡಿ ಗಮ ಗಮ ಹಬ್ಬುತ್ತೆ. ಹತ್ತು ನಿಮಿಷದ ನಂತರ ಈ ಪಾತ್ರೆಯಿಂದ ಮೇಲಿನ ತಿಳಿ ಬಗ್ಗಿಸುವ ಕಾರ್ಯ ಶುರು. ಅದು ಹೇಗೆ ಅಂದರೆ ಇನ್ನೊಂದು ಡಬರಿ ಮೇಲೆ ತೆಳು ಬಟ್ಟೆ ಹೊದ್ದಿಸಿ ಅದರ ಮೇಲೆ ಕಾಫೀಪುಡಿ ಡಬರಿಯಲ್ಲಿನ ನೀರನ್ನು ನಿಧಾನವಾಗಿ ಸುರಿಯೋದು. ಕಾಫಿ ಪುಡಿ ತೆಳು ಬಟ್ಟೆಯಲ್ಲಿ ಉಳಿದುಕೊಂಡು ಕಾಫಿ ನೀರು ಕೆಳಗಿನ ಡಬರಿ ಗೆ ಸೇರುತ್ತೆ. ಇದೇ ಕಾಫಿ ಡಿಕಾಕ್ಷನ್!

ಕಾಫಿ ಡಿಕಾಕ್ಷನ್ ಒಲೆ ಮೇಲೆ ಇಟ್ಟು ಅದಕ್ಕೆ ಹಾಲು ಸೇರಿಸಿ ಬೆಲ್ಲದ ಉಂಡೆ ಹಾಕಿ, ಅದು ಕರಗಿದರೆ ಕಾಫಿ ರೆಡಿ. ಸಕ್ಕರೆ ಇನ್ನೂ ಅಷ್ಟು ಚಾಲ್ತಿಗೆ ಬಂದಿರದ ಕಾಲ ಅದು. ಕಾಫಿ ಚರಟ ಸೇರಿರುವ ಬಟ್ಟೆ ಹಿಂಡಿ ಹಿಂಡಿ ಅದರಿಂದ ಡಿಕಾಕ್ಷನ್ ಹೊರ ಬರೋದು ತಾನೇ? ಈ ಡಿಕಾಕ್ಷನ್ ಚರಟ ಸೇರಿರುವ ಬಟ್ಟೆ ಅಮ್ಮನ ಅಜ್ಜಿಯ ಸೀರೆಯ ಬಾಳೆಕಾಯಿ ಆಕಾರದವು. ಈಗ ಸೀರೆಯ ಬಾಳೆಕಾಯಿ ಕಥೆಗೆ ಬರಲೇ?

ಮನೆಯ ಹೆಂಗಸರು ಆಗ ಹದಿನೆಂಟು ಮೊಳದ ಸೀರೆ ಉಡುತ್ತಿದ್ದ ಕಾಲ. ಇನ್ನೂ ಸೊಂಟಕ್ಕೆ ಸೀರೆಯ ಒಂದು ತುದಿ ಮತ್ತು ಒಂದು ಸುತ್ತು ಸುತ್ತಿದನಂತರದ ಅಂಚು ಹಿಡಿದು ಬಿಗಿ ಗಂಟು ಹಾಕುತ್ತಿದ್ದರು. ಸೀರೆ ಸುತ್ತಿಕೊಳ್ಳುತ್ತಾ ನೆರಿಗೆಗಳು ಹೊರಬರುತ್ತಿತ್ತು/ ಮೂಡುತ್ತಿತ್ತು. ನಂತರ ಫೈನಲ್ ಅಂದರೆ ನೆರಿಗೆಯ ಮೇಲು ಭಾಗವನ್ನು ಸೀರೆಯ ಗಂಟಿನ ಹೊರಭಾಗದಲ್ಲಿ ಇಟ್ಟು ಅದನ್ನು ಹೊರಮುಖವಾಗಿ ಸಿಕ್ಕಿಸುವುದು. ಇದು ಬಾಳೆಕಾಯಿ ಆಕಾರದಲ್ಲಿ ಮೂಡುತ್ತಿತ್ತು. ಕಾಫಿ ಪುಡಿ ಹಿಂಡಿದ ಬಟ್ಟೆ ಹಾಗೂ ಈ ಸೀರೆ ಸಿಕ್ಕಿಸಿಕೊಂಡದ್ದು ಎರಡೂ ಬಾಳೆಕಾಯಿ ತರಹ ತೋರುತ್ತಿದ್ದವು. ಈಗ ಯಾವುದಾದರೂ ಹಳೇ ಲೋ ಬಜೆಟ್ ಸಿನಿಮಾದಲ್ಲಿ ಹುಡುಕಿದರೆ ನಿಮಗೆ ಈ ಬಾಳೆಕಾಯಿ ಸೀರೆ ಕಾಣಬಹುದೇನೋ. ಅದರೆ ಕಾಫಿ ಶೋಧಿಸಿದ ಬಾಳೆಕಾಯಿ ಖಂಡಿತ ನೀವು ಕಲ್ಪಿಸಿಕೊಳ್ಳಬೇಕಷ್ಟೆ!

ಕಾಫಿ ರೆಡಿ ಆಯ್ತಾ? ಗಂಡಸರು ನೇರ ಅಡುಗೇ ಮನೆಗೆ ಹಾಜರು, ಅವರ ಹಿಂದೆ ಅವರ ಹೆಂಡರು. ದೊಡ್ಡ ಕಂಚಿನ ಲೋಟ ಅರ್ಧ ಸೇರು ಹಿಡಿಸಬಹುದು ಇದರಲ್ಲಿ. ಕಾಫಿ ಸಮಾರಾಧನೆ ಆಗುತ್ತಿದ್ದ ಹಾಗೆ ಸ್ಕೂಲಿಗೆ ಹೋಗುವ ಮಕ್ಕಳಿಗೆ ರಾಗಿ ಹುರಿಹಿಟ್ಟು, ತಾಳಿಪಿಟ್ಟು, ಡಬರಿ ರೊಟ್ಟಿ... ಹೀಗೆ ಏನಾದರೊಂದು, ಅದರ ನಂತರ ಕಂಚಿನ ಲೋಟದ ತುಂಬಾ ಹಾಲು.

ಮಕ್ಕಳ ತಾಯಂದಿರು ಮಕ್ಕಳನ್ನು ಸ್ಕೂಲಿಗೆ ಕಳಿಸುವಾಗ ಇತ್ತ ಹಿರಿಯ ಹೆಂಗಸರು ತಿಂಡಿಗೆ ತಯಾರಿ ಮಾಡುತ್ತಾರೆ. ಉಪ್ಪಿಟ್ಟು ತುಂಬಾ ಅಪ್ಯಾಯ ಮಾನ್ಯ ತಿಂಡಿ ಆಗ. ರವೆ, ಅವಲಕ್ಕಿ, ಗಂಜಿ,..... ಹೀಗೆ ವರೈಟಿಗಳು. ಮನೆಗೆ ಬಂದವರಿಗೆ ತಟ್ಟೆಯಲ್ಲಿ ಗೋಪುರದ ಹಾಗೆ ಪೇರಿಸಿ ತಿಂಡಿ ಕೊಡುತ್ತಿದ್ದರು. ನಾನು ಬೆಳೆದು ಅನಕೃ ಪುಸ್ತಕ ಓದುವಾಗ ಗೋಪುರದ ತಿಂಡಿ ನೆನಪು ಬರುತ್ತಿತ್ತು. ಅಂದಹಾಗೆ ನಮ್ಮ ಮನೆಯಲ್ಲಿ ಎಲ್ಲರಿಗೂ ಓದುವ ಚಟ. ಅನಕೃ, ತರಾಸು ಪುಸ್ತಕಗಳು,ಕೊರವಂಜಿ ನಗುವನಂದ ಮಾಸಿಕಗಳು, ಹಲವು ವಾರಪತ್ರಿಕೆಗಳು, ಎರಡು ಕನ್ನಡ ಪತ್ರಿಕೆಗಳು... ಮನೆಯಲ್ಲಿ ಎದ್ದು ಕಾಣುತ್ತಿತ್ತು. ಚಿತ್ರಾನ್ನ, ಬಿಸಿಬೇಳೆ ಬಾತ್, ಹುಗ್ಗಿ ಮುಂತಾದ ಒಟ್ಟಿಗೆ ತಯಾರಿಸಬಹುದಾದ ಅಕ್ಕಿಯ ತಿಂಡಿಗಳನ್ನು ಬೆಳಿಗ್ಗೆ ಮಾಡುತ್ತಿರಲಿಲ್ಲ, ಕಾರಣ ಬೆಳಿಗ್ಗೆ ಬೆಳಿಗ್ಗೆ ಅನ್ನ ತಿನ್ನಬಾರದು ಎನ್ನುವ ರೂಲು. ಒಮ್ಮೆ ಅಜ್ಜಿ ಬಳಿ ಅಜ್ಜಿ ಯಾಕೆ

ಬೆಳಿಗ್ಗೆ ತಿಂಡಿಗೆ ಚಿತ್ರಾನ್ನ ಮಾಡಲ್ಲ ಅಂತ ಕೇಳಿದ್ದೆ. ಅಜ್ಜಿ ಆಶ್ಚರ್ಯ ದಿಂದ ನನ್ನನ್ನು ನೋಡಿ ಅದು ಮುಸುರೆ ಅಲ್ವಾ ಅಂತ ಕೇಳಿತ್ತು. ನಾನು ಫಾಕ್ಟರಿ ಗೆ ಸೇರಿದ ಮೇಲೇನೆ ಬೆಳಿಗ್ಗೆ ತಿಂಡಿ ಅಂತ ಚಿತ್ರಾನ್ನ, ಬಿಸಿಬೇಳೆಭಾತ್, ಪೊಂಗಲ್ ಮೊದಲಾದ ಅಕ್ಕಿಯ ಪದಾರ್ಥಗಳನ್ನು ಫ್ಯಾಕ್ಟರಿ ಕಾಂಟೀನ್ ನಲ್ಲಿ ತಿಂದದ್ದು! ಇಡ್ಲಿ ವಾರಕ್ಕೊಮ್ಮೆ, ಅದರ ಜತೆಗೆ ತೆಂಗಿನ ಚಟ್ನಿ, ಕಡಲೆಕಾಯಿ ಚಟ್ನಿ ಮತ್ತು ಗಸಗಸೆ ಪಾಯಸ. ಇಡ್ಲಿಗೆ ಸಾಂಬಾರ್ ಎನ್ನುವುದು ಹೋಟಲಲ್ಲಿ ನಂತರ ಅಂಟಿದ್ದು! ದೋಸೆ, ಪೂರಿ ಚಪಾತಿ ಮೊದಲಾದ ಸಮಯ ಹಿಡಿಯುವ ತಿಂಡಿ ಬೇಕು ಅಂದರೆ ಅವು ರಜಾದಿವಸ ಕಾಯಬೇಕು, ಕಾರಣ ಅವಕ್ಕೆ ಹೆಚ್ಚು ಸಮಯ ಬೇಕು. ಪರೋಟ ರೋಟಿ ರುಮಾಲೆ ರೋಟಿ....ಮೊದಲಾದವುಗಳ ಹೆಸರು ಇನ್ನೂ ಕೇಳಿರಲಿಲ್ಲ ನಾವು! ಗೋಬಿ ಪನ್ನೀರ್ ಇವನ್ನೆಲ್ಲಾ ಕೇಳಿದ್ದು ನೋಡಿದ್ದು ನಾವು ಬೆಳೆದು ದೊಡ್ಡವರಾದ ಮೇಲೆ! ಈರುಳ್ಳಿ ಟೊಮೊಟೊ ಬೆಳ್ಳುಳ್ಳಿ ಇವೆಲ್ಲಾ ಪರಿಚಯ ಆಗಿದ್ದು ಕೂಡ ಬೆಳೆದು ದೊಡ್ಡವರಾದ ಮೇಲೆ.

ಇನ್ನು ಊಟದ ಮೊದಲು ಐದಾರು ಸಲ ಕಾಫಿ ಸಮಾರಾಧನೆ ಆಗುತ್ತಿತ್ತು. ಗಂಡಸರು ಕಚೇರಿಗೆ ಕೆಲಸಕ್ಕೆ ಹೋಗುವ ಮುನ್ನ ಕ್ಯಾರಿಯರ್ ನಲ್ಲಿ ಊಟ ತುಂಬಿಸಿಕೊಂಡು ಹೋಗುತ್ತಿದ್ದರು. ಕೆಲವರು ಮನೆಯಲ್ಲಿಯೇ ಬಿಸಿ ಬಿಸಿ ಅನ್ನದ ಮೇಲೆ ಇನ್ನೂ ಪೂರ್ತಿ ಆಗಿಲ್ಲದ ಹುಳಿ, (ಇದಕ್ಕೆ ಸಾಂಬಾರ್ ಅನ್ನುತ್ತಾರೆ ಅಂತ ಎಷ್ಟೋ ವರ್ಷದ ನಂತರ ತಿಳಿಯಿತು) ಅಂದರೆ ಬೇಳೆ ಕಟ್ಟು ಸುರಿದುಕೊಂಡು ಉಫ್ ಉಫ್ ಅಂತ ಊದಿ ಗಬಾ ಗಬಾ ತಿಂದು ಆಫೀಸಿಗೆ ಓಡುತ್ತಿದ್ದರು.

ಮಧ್ಯಾಹ್ನದ ಊಟದ ವಿಶೇಷವನ್ನು ಮತ್ತೊಮ್ಮೆ ನೀವು ಸಿಕ್ಕಾಗ ಹೇಳುತ್ತೇನೆ. ಯಾಕೆ ಅಂದರೆ ಅದು ತುಂಬಾ ತುಂಬಾ ದೀರ್ಘವಾದದ್ದು! ಈಗ ಸೀದಾ ಸಂಜೆಗೆ ಹಾರುತ್ತೇನೆ.

ಸಂಜೆ ಅಂದರೆ ಹಕ್ಕಿಗಳು ಗೂಡು ಸೇರುವ ಸಮಯ. ಸಮಯಕ್ಕೆ ಸರಿಯಾಗಿ ಮನೆಗೆ ಸೇರಿಕೊಂಡರೆ ಅದು ಎಲ್ಲರಿಗೂ ನೆಮ್ಮದಿ. ಕೊಂಚ ತಡ ಆದರೂ ದೊಡ್ಡವರ ತಳಮಳ ನೋಡುವ ಹಾಗಿಲ್ಲ. ಅದರಲ್ಲೂ ಹೆಣ್ಣುಮಕ್ಕಳು ಬರುವುದು ತಡ ಆದರೆ ಮನೆಯ ಗಂಡಸರು ಕಾತರದಿಂದ ಕಾಯುವರು.

ಸಂಜೆ ಮಕ್ಕಳಿಗೆ ಕೈ ತುತ್ತಿನ ಟಿಫಿನ್. ಚಕ್ಕಲಿ ಕೋಡುಬಳೆ ಬೋಂಡಾ ಬಜ್ಜಿ ಆಂಬೊಡೆ ಗುಲಪಾವಟೆ ಚೌ ಚೌ ತರಹದ ತಿನಿಸು ಮತ್ತು ಜತೆಗೆ ಲೋಟದ ಭರ್ತಿ ಹಾಲು. ಮಕ್ಕಳು ಸಂಜೆ ಆಟ ಮುಗಿಸಿ ಬಂದ ನಂತರ ಅವರಿಗೆ ಸಂಧ್ಯಾವಂದನೆ, ದೇವರ ಶ್ಲೋಕಗಳು, ರಾಮಾಯಣ ಮಹಾಭಾರತದ ಕತೆಗಳು, ಅಂದಿನ ಪಾಠ ನಾಳಿನ ಪಾಠದ ಬಗ್ಗೆ.... ಇದು ಮುಖ್ಯವಾಗಿ ಮನೆಯ ಹಿರಿಯರ ಕೆಲಸ. ದೇವರಿಗೆ ಸಂಬಂಧ ಪಟ್ಟವು ಎಂದರೆ ತಾತ ಅಜ್ಜಿ ದೊಡ್ಡಪ್ಪ ದೊಡ್ಡಮ್ಮ ಇವರದ್ದು. ಶಾಲೆ ಪಾಠಗಳನ್ನು ಚಿಕ್ಕ ತರಗತಿ ಅವರಿಗೆ ದೊಡ್ಡ ತರಗತಿಯವರು ಹೇಳಿಕೊಡುವುದು. ದೊಡ್ಡ ತರಗತಿ ಅವರಿಗೆ ಆಗಲೇ ಕಾಲೇಜಿಗೆ ಹೋಗುತ್ತಿದ್ದ ಅಥವಾ ಕಾಲೇಜು ಮುಗಿಸಿದ್ದ ಹಿರಿಯ ಅಣ್ಣನೋ ಅಕ್ಕನೋ ಜವಾಬ್ದಾರಿ ಹೊರುತ್ತಿದ್ದರು. ತಮಾಷೆ ಎಂದರೆ ಯಾರೂ ಯಾವ ಪರೀಕ್ಷೆಯಲ್ಲಿಯೂ ನಪಾಸು ಆಗುತ್ತಿರಲಿಲ್ಲ! ಫೇಲು ಅನ್ನುವ ಪದ ಗೊತ್ತಿರಲಿಲ್ಲ.

ಮನೆಯ ಹಿರಿಯ ಸೊಸೆ ಮತ್ತು ಅಜ್ಜಿ ಮಿಕ್ಕ ಹೆಂಗಸರಿಗೆ ಸಲಹೆ ಸೂಚನೆ ನೀಡುತ್ತಾ ಅಡುಗೆ ಕೆಲಸಕ್ಕೆ ನಿರ್ದೇಶನ ಮಾಡುತ್ತಾರೆ. ಕಾಲದ ಪರಿವೆ ಇಲ್ಲದೇ ಮನೆಗೆ ಜನ ಬರುತ್ತಿದ್ದರು. ಮನೆಯಲ್ಲಿ ಆಯುರ್ವೇದದ ಅಲ್ಪ ಸ್ವಲ್ಪ ಚಿಕಿತ್ಸೆ ಗೊತ್ತಿದ್ದ ದೊಡ್ಡಪ್ಪ, ಅಜ್ಜಿ, ತಾತ ಇವರು ತಜ್ಞರು!

ಅಜ್ಜಿಯಂತೂ ಮುಟ್ಟು ತಡವಾದ ಹೆಣ್ಣುಗಳಿಗೆ, ಮತ್ತೇನೋ ಸಮಸ್ಯೆ ಇರುವವರಿಗೆ

ಅದೇನೋ ಕಷಾಯ ಮಾಡಿಕೊಡುವರು.ಮನೆಯಲ್ಲಿ ಯಾವಾಗಲೂ ಸೊಗದೆ ಬೇರು, ಬೇವಿನ ಎಣ್ಣೆ, ಕುಪ್ಪಿ ಮಾತ್ರೆ, ಅಳಲೆ ಕಾಯಿ, ತ್ರಿಫಲ ಚೂರ್ಣ... ಮೊದಲಾದವು ಇದ್ದೇ ಇರುತ್ತಿತ್ತು. ಮಕ್ಕಳ ಸಣ್ಣಪುಟ್ಟ ಖಾಹಿಲೆಗಳಿಗೆ ನೂರಕ್ಕೆ ನೂರು ಮನೆ ವೈದ್ಯವೇ. ಓಮ್ ಕಾಳಿನ ಕುದಿಸಿದ ನೀರು,ತುಳಸಿ ರಸ ಮೊದಲಾದವುಗಳು ಮನೆಯಲ್ಲಿ ರೆಡಿ ಸ್ಟಾಕು.

ಕೆಲವು ಈಗಲೂ ಕಣ್ಣಿಗೆ ಕಟ್ಟಿದ ಹಾಗಿರುವ ಅಜ್ಜಿಯ ಚಿಕಿತ್ಸೆ ಎಂದರೆ. ಮಕ್ಕಳಿಗೆ ಚಿಟಿಕೆ ಹಾಕುವುದು. ಫಿಟ್ಸ್ ಬಂದ ಮತ್ತು ಚಟುವಟಿಕೆ ಇಲ್ಲದ ಆರೆಂಟು ತಿಂಗಳಿನ ಕೂಸುಗಳನ್ನು ಅಜ್ಜಿಯ ಬಳಿ ಕರೆತರುತ್ತಿದ್ದರು. ಅಜ್ಜಿ ಆ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟುತ್ತಾ ಸಮಾಧಾನ ಮಾಡುವಳು. ಪಕ್ಕದಲ್ಲಿ ಒಂದು ಎಣ್ಣೆಯ ದೀಪ. ಅದರ ಪಕ್ಕ ಬಳೆಯ ಚೂರುಗಳು.ಅಜ್ಜಿ ದೀಪಕ್ಕೆ ಬಳೆ ಚೂರು ಹಿಡಿದು ಕಾಯಿಸುವರು. ಅದು ಬಿಸಿಯಾದ ಹಾಗೆ ಅದನ್ನು ಮಗುವಿನ ಕಣ್ಣು ಕಿವಿಯ ನಡುವಿನ (ಅಂದರೆ ಮುದ್ರೆ ಹಾಕುವ) ಜಾಗಕ್ಕೆ ಒತ್ತುವಳು. ಬಿಸಿಗೆ ಮಗು ಕಿಟಾರನೆ ಕಿರುಚಿ ಅಳುತ್ತಿತ್ತಾ? ನಂತರದ ಎರಡು ಮೂರು ದಿವಸದಲ್ಲಿ ಮಗು ಮತ್ತೆ ಲವಲವಿಕೆಯಿಂದ ಆಡುವುದು. ಈ ರೀತಿಯ ಅಸಂಖ್ಯೆ ಚಿಕಿತ್ಸೆ ಅಜ್ಜಿ ನೀಡುತ್ತಿತ್ತು. ಮತ್ತೊಂದು ಚಿಕಿತ್ಸೆ ಎಂದರೆ ಮಗು ಎರಡು ಮೂರು ದಿವಸ ಕಕ್ಕ ಮಾಡದೇ ಒದ್ದಾಡುವಾಗ ಅಜ್ಜಿ ಅದಕ್ಕೆ ಚಿಕಿತ್ಸೆ ನೀಡುತ್ತಿತ್ತು. ತೊಡೆಯ ಮೇಲೆ ಮಗುವನ್ನು ಮಲಗಿಸಿ ಹೊಟ್ಟೆ ಸವರುತ್ತ ವಿಳೆದೆಲೆ ಮೇಲೆ ಎಣ್ಣೆ ಸವರಿ ಕಾಯಿಸಿ ಹೊಟ್ಟೆ ಮೇಲೆ ಇಡುವುದು ಮೊದಲ ಹಂತ. ಇದರಿಂದ ಕಟ್ಟಿರುವ ಹೊಟ್ಟೆ ಸರಿಹೋಗದಿದ್ದರೆ ಮಗುವಿನ ಗುದ ದ್ವಾರದಲ್ಲಿ ಸೋಪು ಇಟ್ಟು ಕಕ್ಕ ಮಾಡಿಸುವುದು. ಇಂತಹ ಅದೆಷ್ಟೋ ಚಿಕಿತ್ಸೆ ಮನೆಯಲ್ಲಿನ ಹಿರಿಯರು ಕಲಿತಿದ್ದರು.

ಗರ್ಭಿಣಿಯರಿಗೆ, ಹೆರಿಗೆ ಆದವರಿಗೆ ಚಿಕಿತ್ಸೆ ಮತ್ತು ಔಷಧ ತಯಾರಿ ಹಾಗೂ ವಿತರಣೆ ಮತ್ತೊಂದು ವಿಶೇಷ. ಸೌಭಾಗ್ಯ ಶುಂಠಿ, ಜೀರಿಗೆ ಲೇಹ್ಯ ಮೊದಲಾದ ರುಚಿರುಚಿಯ ಲೇಹ್ಯಗಳು ಯಾವಾಗಲೂ ಮನೆಯಲ್ಲಿರುತ್ತಿತ್ತು.ಹೊಟ್ಟೆ ಕೆಟ್ಟು ಸುಮಾರು ಜನ ಬರುತ್ತಿದ್ದರು. ದೊಡ್ಡ ತಂಬಿಗೆಯಲ್ಲಿ ಕೆಂಡ ತುಂಬಿ ಅದನ್ನು ದಾಟಿಸುತ್ತಿದ್ದರು. ನಂತರ ಚೆಂಬು ಅಗಲದ ನೀರು ತುಂಬಿದ ತಟ್ಟೆಯಲ್ಲಿ ಬೋರಲು ಬೀಳುತ್ತಿತ್ತು. ಅದು ತಟ್ಟೆಗೆ ಬೆಸುಗೆ ಹಾಕಿದ ಹಾಗೆ ಅಂಟಿಕೊಂಡು ಎರಡು ಮೂರು ದಿವಸದ ನಂತರ ಬಿಡುತ್ತಿತ್ತು.

ರಾತ್ರಿ ಊಟಕ್ಕೆ ಅನ್ನ, ಸಾರು, ಬೆಳಿಗ್ಗೆ ಮಿಕ್ಕಿದ ಹುಳಿ, ಪಲ್ಯ ಮಜ್ಜಿಗೆ ಎಂಟರ ಸುಮಾರಿಗೆ. ಊಟದ ನಡುವೆ ಮಾತು ಕೂಡದು ಮತ್ತು ತಟ್ಟೆಗೆ ಬಡಿಸಿದ ಯಾವುದನ್ನೂ ಚೆಲ್ಲಬಾರದು.. ಎನ್ನುವ ನಿಯಮ. ಒಂದೊಂದು ಅಗಳೂ ಒಂದು ಕೋಟಿ ಲಿಂಗಕ್ಕೆ ಸಮಾನ, ಅದರಿಂದ ಏನನ್ನೂ ತಟ್ಟೆಯಲ್ಲಿ ಬಿಡಬಾರದು ಎನ್ನುವ ಪಾಠ ಬುದ್ಧಿ ತಿಳಿಯುವ ಮೊದಲೇ ಮೆದುಳಿನಲ್ಲಿ ಆಳವಾಗಿ ಕೂತಿರುತ್ತಿತ್ತು. ರಾತ್ರಿ ಊಟದ ನಂತರ ಮತ್ತೆ ಲೋಟ ಹಾಲು. ಒಂಬತ್ತಕ್ಕೆ ಹುಡುಗರು ಸಾಲಾಗಿ ಒಂದುಕಡೆ ಮಲಗಿದರೆ ಎದುರು ಸಾಲಿನಲ್ಲಿ ಹುಡುಗಿಯರು ಅದೇ ರೀತಿ ಕಾಲು ಗೋಡೆಯೆಡೆಗೆ ಮಾಡಿ ಮಲಗುವುದು.

ಸಂಸಾರದ ಕಷ್ಟ ಸುಖವನ್ನು ಎಲ್ಲರೂ ಹಂಚಿಕೊಂಡು ಬದುಕು ನಡೆಸುವರು. ಸಹಜವಾಗಿ ಇಂತಹ ಪರಿಸರದಲ್ಲಿ ಬೆಳೆದ ಮಕ್ಕಳು ಒಂದು ರೀತಿ ಮಾನಸಿಕವಾಗಿ ದೈಹಿಕವಾಗಿ ಗಟ್ಟಿ ಜೀವದವರು. ಸುಖ ದುಃಖಗಳನ್ನು ಸಮಚಿತ್ತದಿಂದ ನೋಡುವ ಮನೋಸ್ಥೈರ್ಯ ಇರುವವರು. ಜತೆಗೆ ಜೀವನವನ್ನು ಸಂಪೂರ್ಣವಾಗಿ ಅದು ಬಂದಹಾಗೆಯೇ ಸ್ವೀಕರಿಸುವ ಸ್ಥಿತಪ್ರಜ್ಞರು.

# ಅಲ್ಲೇಪಾಕ್

ಜಯಶ್ರೀ ದೇಶಪಾಂಡೆ

"ಅಲ್ಲೇಪಾಕ್..ಅಲೀ ಪಾಕ್ ಅಲೆಪಾಕ್ರೀ ಈಈಈ...."

ಇಷ್ಟೇ ಕೂಗತಿದ್ದ ಮಾಮಡಾ. ಅದೂ ಇಲ್ಲಿ ನಿಂತು ಒದರಿದರ ಅಲ್ಲಿ ಕೋಟೆಯ ಹೆಬ್ಬಾಗಿಲ ತನಕ ಆ ಧ್ವನಿ ಮೈಕ್ ಹಚ್ಚದೇನೇ ಹರಿದು ಹೋಗಿ ಬಿತ್ತರವಾಗಿ ಬಡ್ಕೊಳ್ಳುತ್ತಿತ್ತು. ಅವ ಬರುವ ಟೈಮ್ ತಿಳಿದ ಹಾದಿ ಬೀದಿಯ ಮನೆಗಳು ಒಳಗೆ ಅಲ್ಲೇಪಾಕ್ ಸ್ಟಾಕ್ ಇದೆಯಾ ಇಲ್ಲವಾ ಹುಡುಕಿ ನೋಡಿ ಇದ್ದರೆ ಅವನನ್ನು ಹಂಗೇ ಹೋಗ್ಲಿಕ್ಕೆ ಬಿಟ್ಟು ಖಾಲಿ ಆಗಿದ್ರೆ 'ಬಾರೋ ಕೊಟ್ಹೋಗು' ಅಂತಿದ್ರು.ಕೆಮ್ಮು, ನೆಗಡಿ, ಗಲೇಮೇ ಖಿಚ್ ಖಿಚ್, ಕಣಕಣಿ ಎನ್ನುವಂಥಾ ಸಣ್ಣ ಜ್ವರ ಅಲ್ಲ ಮಳೆಗಾಲ ಅಂದ್ರೆ ಬೆನ್ಹತ್ತಿಕೊಂಡು ಬರೋವಂಥಾ ಅಪದ್ಧ ಕಿರಿಕಿರಿಗಳ ಅಪಸವ್ಯ ಕಾಡಿ ಮುಗಿಸಿ ಕಡಿಮೆ ಆದ ಮೇಲೆ ಇನ್ನೊಂದಿರ್ತಿತ್ತು, ಬಾಯಿರುಚಿ ಕೆಟ್ಟು ಹುಣಿಸೆಣ್ಣು ತೀಡಿ ತಿಕ್ಕಿದಂಗ ನಾಲಿಗೆ ಚರಚರ...ಆಗ ನಾ ಇದ್ದೀನಿ ತೊಗೋ ಅಂತಿತ್ತು ಈ ಮಾಮಡಾನ ಅಲ್ಲೇಪಾಕ್!

ಒಂದರೆಡು ವಡಿ ಬಾಯಿಗೆ ಹಾಕಿ ಎರಡು ಗಳಿಗೆ ನಾಲಿಗೆ ದವಡೆ ಹಲ್ಲಿನ ನಡುವೆ ಒತ್ತಿಟ್ರೆ ಸಕ್ಕರೆ, ಶುಂಠಿ, ನಿಂಬೆರಸದ ಆಟೋಮ್ಯಾಟಿಕ್ ಜ್ಯೂಸು ಹನಿಯಾಗಿ ಇನಿಯಾಗಿ ಒಳಗಿಳಿದರೆ ಕೆಟ್ಟ ಬಾಯಿರುಚಿ, ನೆಗಡಿ-ಕೆಮ್ಮು, ಗಂಟಲೊಳಗಿನ ಖರ್ಖರ್... ಎಲ್ಲಕ್ಕೂ ಚಿಕ್ಕದಾಗಿ ಒಂದು ಕರೆಂಟ್ ಶಾಕ್! ಆದರೂ ಅದರಂಥ ಮಜಾ ಇನ್ನೊಂದಿಲ್ಲ..

ಅವನಿಗೆ ಇದ್ದ ಹೆಸರಿನ ಜೊತೆಗೇ ಮಾಮಡಾ ಎನ್ನೋ ಹೆಸರು ಬೀಳಲಿಕ್ಕೂ ಒಂದು ಕಾರಣ ಇತ್ತು ಹೇಳ್ತೀನಿ. ಅದಕ್ಕಿಂತ ಮೊದಲು ಅವನ ಅಲೀಪಾಕ್ ಏನಿತ್ತು ಅಂದ್ರ ಹಿಂಗ..ನೆನಪಾಗಿಬಿಡ್ತದ, ಯಾಕಂದ್ರ ಎಷ್ಟು ತಿಂದೀವಿ ನಾವು ಲೆಕ್ಕ ಮರೆತಿದ್ರೂ, ಈಗದಕ್ಕೆ ವರ್ಷಾನುವರ್ಷ ಸರಿದು ಹೋಗಿದ್ರೂ ಅದರ ರುಚಿ ನಾಲಿಗೆ ಬಿಟ್ಟಿಳಿದಿಲ್ಲದ್ದು ನಮ್ಮ ಪಾಲಿನ ಐತಿಹಾಸಿಕ ಸತ್ಯ!

ತಿಳೀಹಳದೀ ಬಣ್ಣದ, ಬಾಯೊಳಗಿಟ್ರೆ ಕರಕರ ಅನ್ನುತ್ತ ಕರಗಿ ಸಿಳ್ ಅಂತ ಸಕ್ಕರೆಯ ಸಿಹಿ ರಸ ನಾಲಿಗೆಯ ಮೇಲಿಂದ ಹರಿದು ಗಂಟಲಿನ ಕಡೆ ಇಳಿಯುವಾಗ ಅದರೊಳಗೆ ಒತ್ತಾಗಿ ತುಂಬಿಕೊಂಡಿದ್ದ 'ಅಲ್ಲ' ಅರ್ಥಾತ್ ಹಸಿ ಶುಂಠಿಯ ಘಾಟು ತನ್ನ ಎಕ್ಸಿಸ್ಟನ್ಸ್ ನ ಪ್ರಕಟ ಮಾಡಿಬಿಡ್ತಿತ್ತು..ಜೊತಿ ಜೊತಿಗೆ ಚೂರೇ ಚೂರು ಹಿಂಡಿ ಕಲಿಸಿದ ನಿಂಬೆಹಣ್ಣಿನ ಹುಳಿ, ಶುಂಠಿಯ ಖಾರ, ಎಷ್ಟು ಬೇಕೋ ಅಷ್ಟು, ಆದರೂ ನಮ್ಮ ಎಳೆ ನಾಲಿಗೆಗಳಿಗೆ ಅದೇ ಭಯಂಕರ ಖಾರ ಅಂತನ್ನಿಸುತ್ತ ಸಕ್ಕರೆಯ ಸಿಹಿಗೆ ಮನಸ್ಸು ಅದರತ್ತಲೇ ಜಗ್ಗುತ್ತಿದ್ದರೂ ಶುಂಠಿಯ ಘಾಟು ಎದ್ದು ಹೊಡೆದ ಹಾಗನಿಸಿ, ಆದರೂ ತಡ್ಕೊಳ್ಳುವುದಾಗದೆ ನಾಲ್ಕು ಅಲ್ಲೆಪಾಕ್ ವಡೆ ಬಾಯಿಗಿಳಿದೇಬಿಡ್ತಿದ್ದುವು. ನಾನು, ನನ್ನ ತಮ್ಮ, ಸಣ್ಣಕ್ಕ, ಈ ಮಾಮಡಾನ ಪರಾತದ ಸಿಹಿಗೆ ಕಾಯಂ ಮತ್ತ ಖಾಸಾ ಗಿರಾಕಿಗಳು ಖರೆ...ಆದರೂ ದೊಡ್ಡವರು ಬಂದು ನಿಂತರೆ ಆರಿಸಿ ಆರಿಸಿ ಕೊಡ್ತಿದ್ದಂಥಾ ಪರ್ಫೆಕ್ಟ್ ಚೌಕದ ವಡೆಗಳು ತಪ್ಪಿ ಒಂಚೂರು ಮುಕ್ಕಾಗಿ ಅಥವಾ ಡಿ ಶೇಪ್ ಆದ ಅಲೇಪಾಕ್ ಕೊಡ್ತಿದ್ದ ಅಂತ ತಕರಾರಿತ್ತು..ಆದರೇನು ಒಮ್ಮೆ ಬಾಯಿಗೆ ವಡಿ ಹೋದರೆ ಅದೆಲ್ಲಾ ಮರೆತೇ ಹೋಗಿ ಅದರ ರಸಾಸ್ವಾದನೆ ಮಾತ್ರ ಅಲ್ಲೇ ಕೂತಿರುತ್ತಿತ್ತು!

ಬೆಳಗಾವಿ ಫೋರ್ಟ್ ಅಂದ್ರೆ ಒಂದಾನೊಂದು ಊರಿನೊಳಗಿದ್ದ ಒಂದು ಕೋಟೆ ಅಷ್ಟೇ. ಎಲ್ಲಾ ಕೋಟೆಗಳಿಗೂ ಇರೋವಂಥಾ ಆ ರಾಜ ಕಟ್ಟಿಸಿದ, ಈ ರಾಜ ಆಳಿದ, ಮತ್ತ

ಮುಂದೆ ಇನ್ಯಾರೋ ರಾಜ ಅಭಿವೃದ್ಧಿ ಮಾಡಿದ..ಒಳಗೆ ನೀರು, ನಿಡಿ, ರಸ್ತೆ, ಆಫೀಸು, ಗುಡಿಗುಂಡಾರ, ಬಸದಿ, ತೋಟ, ದವಾಖಾನಿ ಶಾಲೆ, ಹುಚ್ಚೆಬ್ಬಿಸುವಷ್ಟು ಮರಗಿಡ...ಎಲ್ಲ ತುಂಬಿ ತುಂಬಿತ್ತು.

ಅಲ್ಲೇಪಾಕ್ ಮಾಮಡಾ ಇದೇ ಕೋಟೆ ಒಳಗ ತಾನೂ ಇರ್ತಿದ್ದ, ಪ್ರತಿ ದಿನದ ಸಂಜಿಮುಂದ ಅಲ್ಲೇಪಾಕ್ ಮಾಡಿಟ್ಟು ಮರುದಿವ್ಸ ಬೆಳಗು ಹರೀತಲೇ ಎದ್ದು ಪರಾತದೊಳಗೆ ಅವನ್ನೆಲ್ಲ ಚಕ್ಕ ಚೌಕಾಕಾರ ಜೋಡಿಸಿಕೊಂಡು ಸಣ್ಣ ಪುಟ್ಟ ಪುಡಿಪುಡಿ ಅಂಥಾವು– ಖರೇ ಅಂದ್ರೆ ಅವನ ಅಲ್ಲೇಪಾಕಿನೊಳಗ ಅಂಥಾ ಚೂರು ಪುಡಿ ಇರ್ತನೇ ಇರಲಿಲ್ಲ. ಆದರೂ ನಾಜೂಕಿನ ವಸ್ತು, ಎಷ್ಟಿಲ್ಲ ಅಂದ್ರೂ ತುಕಡಾ ಆಗೂದು ಸಹಜನೇ. ಅಂಥಾ ತುಕಡಾಗಳನ್ನ ಕೆಳಗ ಮತ್ತು ಬಾಜೂಕ ಇಟ್ಟುಕೊಂಡು ಮ್ಯಾಲಿನ ಎಲ್ಲಾ ಲೇಯರ್ ಅತ್ಯಂತ ಪರ್ಫೆಕ್ಟ್ ಇದ್ದಂಥಾ ಅಲ್ಲೇಪಾಕ್ ವಡೆಗಳನ್ನ ಜೋಡಿಸಿ ಅದರ ಮೇಲೊಂದು ಸ್ವಚ್ಛ ಬಿಳೀದು ಸಣ್ಣ ಟವೆಲ್ ಮುಚ್ಚಿ ತನ್ನ ಹೆಗಲಿಗೂ ಕುತ್ತಿಗೆಗೂ ಇರುವ ಮಧ್ಯದ ಜಾಗಕ್ಕೆ ಏರಿಸಿಕೊಂಡು ಬರ್ತಿದ್ದ..

ಅವನ ಹೆಸರು ಮಾಮೂಸಾಬ್. ಅವನದು ಮೂರೂವರೆ ಖೋಲಿಯ ಮನೆ, ಹನ್ನೆರಡು ಮಂದಿಯ ಭರಚಕ್ಕ ಸಂಸಾರ, ಅದರೊಳಗವನ ಅಬ್ಬೂ, ಅಮ್ಮಿ, ಬುವಾ, ಆಪಾ ಹಿಡ್ಕೊಂಡು ಅವನ ಮಕ್ಳು ಮರಿ, ಆಡು ಕುರಿ ಕೋಳಿ ಖುಶಿಯಿಂದಿದ್ವು.

ಆಗ ಬೆಳಗಾವಿ ಕೋಟೆಯ ಹೆಬ್ಬಾಗಿಲಿಗಿದ್ದ ದುರ್ಗಾದೇವಿಯ ಗುಡಿಯ ಎಡಭಾಗದ ಕಮಾನುಗಳೊಳಗೆ ಯಾರಿಗೂ ತಟಕ್ಕನೆ ಕಾಣಿಸಿಬರದಂಥ, ಸೂಕ್ಷವಾಗಿ ಲಕ್ಷ್ಯಕೊಟ್ಟು ಕಂಡರೆ ಮಾತ್ರ ಎದುರಿಗೆ ಜಾಣಿಸ್ತಿದ "ಹೊಕ್ಕುಕಿಂಡಿ" ಯಂಥಾ ಓಪನಿಂಗ್,  ಅಲ್ಲಿ ನಾಲ್ಕೆಂಟು ಫಡಿಕಲ್ಲಿನ ಮೆಟ್ಟಿಲು, ಏರಲಿಕ್ಕೇ ಮೊಳಕಾಲು ಬಿಗಿಬಂದರೂ ಒಮ್ಮೆ ಹತ್ತಿ ಹೋದರೆ ಬತೇರಿಯಂಥ ಅಗಲಾತಿ ಅಗಲದ ಬಂಡೆಗಲ್ಲಿನ ಹಾಸು ಚಾಚಿಕೊಂಡಿದ್ದು,ಅಲ್ಲಿ ರುಮುರುಮು ಬೀಸುವ ಗಾಳಿ ಬೇಸಿಗೆಯ ಧಗೆಗೆ ಏಟು ಹೊಡೀತಿತ್ತು.

ಕ್ಯಾಮರಾ ಕೈಯಲ್ಲಿದ್ದರೆ ದೂರದೂರದ ಲಕ್ಷ್ಮೀ ಟೇಕಡಿ ಕೊಳ್ಳದ ವರೆಗೂ ಒಂದು ವಿಹಂಗಮ ದೃಶ್ಯ ಬಂದಿಳಿದುಬಿಡ್ತಿತ್ತು. ಅಂದಂದಿನ ಕಿಶೋರ್ ಕುಮಾರ್, ಮನ್ನಾಡೇ, ರಫಿ, ಲತಾರ ಹಾಡುಗಳನ್ನು ಹಾಡುತ್ತಲೂ, ಸಿಳ್ಳೆಯಲ್ಲಿ, ಮೌತ್ ಆರ್ಗನ್ ನಲ್ಲಿ ನುಡಿಸುತ್ತಲೂ ಗಾಳಿಯ ಸುಖ ಅನುಭವಿಸುತ್ತ ಅಡ್ಡಾಡುವ ಜನ ತಮ್ಮದೇ ತಂದ್ರಿಯೊಳಗಿರ್ತಿದ್ರು.. ಅಲ್ಲಿಗೂ ಮಾಮೂನ ಅಲೇಪಾಕ್‌ನ ಪರಾತ ಸವಾರಿಗೈದು ವ್ಯಾಪಾರ ಮಾಡಿದ್ದಿತ್ತು.

ಮಾಮೂಸಾಬನ ಆಡು, ಕುರಿ ಅಲ್ಲಿ ಹೆಂಗೋ ಮೇಲೇರಿ ಹೋಗಿ ಬಂಡೆಯ ಸಂದುಗೊಂದಿಯೊಳಗೆ ಎದ್ದು ನಿಂತ ಕುರುಚಲು ಗಿಡದೆಲೆಗಳನ್ನು ಸ್ವಾಹಾ ಮಾಡ್ತಿದ್ದುವು.

ಹಂಗೊಮ್ಮೆ ಬಂಡೆಸಂದಿ ಏರಿ ಜಿಗಿದಿದ್ದ ಆಡನ್ನು ಇಳಿಸಿ ಕರ್ಕೊಂಡು ಬರಲಿಕ್ಕೆ ಹೋಗಿದ್ದ ಮಾಮೂಸಾಬನ ಆಪಾನ ಮಗ ಆಡು ಅಟ್ಟಾಡಿಸಿಕೊಂಡು ಪಾರಾಗ್ಲಿಕ್ಕೆ ನೋಡಿದಾಗ ಸಹಾಯಕ್ಕ ಇವನನ್ನು ಕರೆದೇ ಕರೆದ.. ಮಾಮೂಸಾಬ್ ಅಲ್ಲೇ ಎಲ್ಲೋ ಇದ್ದ ಖರೆ, ಅವನಿಗೆ ಹುಡುಗನ ದನಿ ಕೇಳಿಸ್ಲೇ ಇಲ್ಲ..ಕಡೆಗೆ ಬೇಸತ್ತು ಹುಡುಗ "ಕಂಹಾ ಹೋರೇ ಮಾಮರ್ಯಾ ರೇ ರೇ ರೇ...." ಅಂತ ಗಂಟಲು ಹರಿಯುವಂತೆ  ಕಿರುಚಿದ್ದಕ್ಕೆ ಆಗ ಅದು ಇವನಿಗೆ ಕೇಳಿಸಿ ಅಲ್ಲಿಗೆ ಓಡಿ ಹೋದ..

ಅಲ್ಲೇ ಕೆಲವು ಮಂದಿ ಗಾಳಿ ಕುಡೀಲಿಕ್ಕೆ ಬಂದು ಕೂತವರು ಈ ಹೊಸಾ ಹೆಸರು ಕೇಳಿ ತಂತಮ್ಮೊಳಗೇ ಮುಗುಳ್ನಕ್ಕರು. "ಮಾಮೂಸಾಬ್ ಇದೇನೋ?" ಅಂದರೆ

"ಅನ್ನಿ ಬಿಡ್ರಿ ಕಾಕಾ, ಬಚ್ಚಾ ಹೈ" ಅಂದು ಅಲ್ಲಿಗೇ ಸರಿಸಿ ಹೋದವ.

ಅವತ್ತು ಅದೇ ಪ್ರಸಂಗಕ್ಕೆ ಇನ್ನಷ್ಟು ಜನ ಕೂಡಿ ಅವನ 'ಅಲ್ಲೇಪಾಕ್' ಪರಾತ ಅಲ್ಲೇ ಖಾಲಿ ಆಗಿ ಮರುದಿವಸ ಇನ್ನಷ್ಟು ತೊಗೊಂಬಾ ಅಂತ ರಿಕ್ವೆಸ್ಟ್ ಬಂದಿದ್ದಕ್ಕೆ ಬಂಡೆ ಏರಿ ಹಾವಳಿ ಮಾಡಿದ ಅವನ ಆಡೇ ಕಾರಣ!

ಅದಕ್ಕೇ ಅವನ ಮನೆಯವರೇ ಒಮ್ಮೊಮ್ಮೆ ಮಾಮರಾರೇ ಅಂತ ಕರೆದರೂ "ಅಗೇ ಭೋಡಗೇ" ಅನ್ನುವವ..

***

ಮೊನ್ನೆ ಮೊನ್ನೆ ಅಂದ ಹಾಗೆ,

"ಅದೇನೋ ಜಿಂಜರ್ ಸಕ್ರೆ ಹಾಕಿ ಮಾಡ್ತಾರಲ್ಲ ಆ ಮಿಠಾಯಿ ಮಾಡಿಕೊಡ್ತೀಯಾ ಮಮ್ಮಾ, ಇವತ್ತು ಆಫೀಸ್ ವೆಬಿನಾರ್ ನಲ್ಲಿ ಆಯುರ್ವೇದ ವೈದ್ಯರು ಶುಂಠಿ ಮಿಠಾಯಿ ಬಗ್ಗೆ ಹೇಳಿದ್ರು..."

ಒಮ್ಮೆ ನನ್ನ  ಮಗ ಕೇಳಿದಾಗ ಮತ್ತದೇ ಬೆಳಗಾವಿ, ಮಾಮೂಸಾಬ್, ಅಲ್ಲೇಪಾಕ್ ಎಲ್ಲಾ ಕಣ್ಮುಂದೆ ಬಂದ್ಬಂದು ಮಾಯ ಆದುವೋ. ನೆನಪುಗಳಿಗೆ ಬಾಲ್ಯದ ಮತ್ತು ಇತಿಹಾಸದ ಪುಟಗಳನ್ನು ತೆರೆಯುವ ಶಕ್ತಿಯೂ ಉಂಟು ಅಲ್ಲವೇನು ಹೇಳ್ರಿ!

**ನನ್ನ ಹೆಸರೇನು ಹೇಳಿ ನೋಡೋಣ**

ಒಮ್ಮೆ ಟೀಚರ್ ತನ್ನ ವಿದ್ಯಾರ್ಥಿಗಳಿಗೆ– ಮಕ್ಕಳೇ, ನನ್ನ ಹೆಸರು ಏನು ಅಂತ ಹೇಳಿ ನೋಡೋಣ ? ಎಂದು ಕೇಳಿದಾಗ, ಒಬ್ಬ ತುಂಟ ಹುಡುಗ – ಮೇಡಂ, ನಿಮ್ಮ ಹೆಸರು " ಕೋಳಿ " ಅಂತ ಎಂದು ಹೇಳಿದನು. ಮೇಡಂ ಸ್ವಲ್ಪ ಆಶ್ಚರ್ಯ, ಸ್ವಲ್ಪ ಕೋಪದಿಂದ ಯಾಕೋ ಅದು ಎಂದು ಕೇಳಿದಾಗ, ಆ ಹುಡುಗ – ಮತ್ತೆ, ನೀವು ಎಲ್ಲರಿಗೂ ಗಣಿತದಲ್ಲಿ ಸದಾ ಕೋಳಿ ಮೊಟ್ಟೆಯನ್ನು ಕೊಡ್ತಾನೆ ಇರ್ತೀರಲ್ಲ,  ಅದಕ್ಕೆ...! ಎಂದಾಗ, ಆ ಟೀಚರ್ ನಸುಗೋಪಗೊಂಡು ಕತ್ತೆ ಭಡವಾ ಎಂದು ಮುದ್ದಿನಿಂದ ಬೈಯ್ದರು.

**–ವಿ.ವಿಜಯೇಂದ್ರ ರಾವ್**

**ಏಪ್ರಿಲ್ ಫೂಲ್ಸ್ ಡೇ!**



# ಕಣ್ಣ ಬಾಣಂತನ

ಶರತ್ ಕಲ್ಕೋಡ್

“ಬಸರಿ–ಬಾಣಂತನ ಕೇಳಿದ್ದುಂಟು! ಇದೆಂತದ್ದು ಹೊಸ್ತು ಕಣ್ಣಿನ ಬಾಣಂತನ?" ಮುಖ ಸಿಂಡೆರಿಸ್ಕೊಂಡ್ಹೋಗಬೇಡಿ ಮಾರಾಯ್ರೇ!, ನಾನೇ ಟಂಕಿಸಿ ಕನ್ನಡಕ್ಕೆ ನೀಡಿದ ಕೊಡುಗೆ!!

"ಅನುಭವವೇ ಗಟ್ಟಿ ಸಾಹಿತ್ಯ" ಕೇಳಿರಲಿಕ್ಕೂ ಸಾಕು ನೀವು. ಆ ಮಾತಿಗೆ ನನ್ನದೂ ಸಂಪೂರ್ಣ ಸಹಮತ. ನನ್ನಾನುಭವಾಮೃತ ಫಲವೇ “ಕಣ್ಣ ಬಾಣಂತನ!”

ರೋಗ ಬಂದಾಗ ವೈದ್ಯರ ಸಂಪರ್ಕಿಸಿ ಮದ್ದು ತೆಗೆದುಕೊಂಡು, ಪಥ್ಯ– ಆರೈಕೆ ಮಾಡಿ ಸುಧಾರಿಸಿಕೊಳ್ಳುವುದೆಲ್ಲವೂ ಒಂದಲ್ಲೊಂದು ಬಗೆ ಬಾಣಂತನ ಎಂಬುದೇ ನನ್ನ ಖಚಿತ ಅಭಿಪ್ರಾಯ!

ಏನ್ ಹೇಳ್ಲೀಕೆ ಹೊರಟದ್ದು ನಾನು? ಹಾಂ. ಕಣ್ಣ ಬಾಣಂತನ ಅಲ್ವಾ!? ಹೌದು, ಆ ಮಹಾವುಪದ್ಯಾಪ ಬೇರೇ ಯಾರೋ ಮಾಡಿದೆಡವಟ್ಟಲ್ಲ; ಬೀದೀಲ್ಹೋಗೋ ಮಾರೀನಾ, ಮನೆಗೆ ಕರೆತಂದ್ದು ನಾನೇ ಮಾರಾಯ್ರೇ!

ಆದದ್ದಿಷ್ಟು:

ಎಂದಿನಂತೊಂದೂ ಬೆಳಗ್ಗೆ ಎದ್ದವನೇ ಹೋದದ್ದು ಪಾರ್ಕಿಗೆ. ಒಂದೆಡೆ ವಾಕಿಂಗರು ಸಾಲುಗಟ್ಟಿ ನಿಂತಿದ್ದರು. ಪುಕ್ಸಾಟೆ ಡಯಾಬಿಟೀಸ್, ಬಿಪಿ ಚೆಕಪ್ ಇರಬಹುದೆಂಬ ಅಸಡ್ಡೆಯಿಂದ ನಾಲ್ಕೆಜ್ಜೆ ಮುಂದಡಿಯಿಟ್ಟವನ ಕಣ್ಣಿಗೆ ಬೆಂಗಳೂರ ಪ್ರಸಿದ್ಧ ನೇತ್ರಾಲಯದ "ಉಚಿತ ನೇತ್ರ ತಪಾಸಣೆ" ಬ್ಯಾನರ್ ಬೀಳಬೇಕೇ!? ತಡಬಡಿಸಿ ಬಂದು ಸಾಲು ಸೇರ್ಪಡೆಗೊಂಡೆ! ಬೆಳ್ಳಂಬೆಳಗ್ಗೇಯೇ ಲಕ್!! ದಾಸರು ಹಾಡಿ, ಕುಣಿದ ಹಾಗೆ "ಇದು ಭಾಗ್ಯ... ಇದು ಭಾಗ್ಯ.....ಇದು ಭಾಗ್ಯವಯ್ಯಾ...!"

ಸರದಿ ಬಂದಾಗ ವೈದ್ಯೆ ಬಂಗಾಲಿ ಬೆಡಗಿಯೆದುರು ಕುರ್ಚಿಯಲ್ಲಿ ಕುಕ್ಕರಿಸಿದೆ. ಕೋಕಿಲ ಇಂಗ್ಲಿಷ್ ಉಲಿಗೆ ನಾಮಧೇಯ, ವಯಸ್ಸು, ಮೊಬೈಲ್ ನಂಬರ್ ಪ್ರವರ ಹೇಳಿದೆ. "ಕಣ್ಣು ತೆರೆದು ನೋಡಿ... ರಪ್ಪೆ ಮುಚ್ಚಬೇಡಿ..." ಎರಡೂ ಕಣ್ಣಿಗೆ ಬ್ಯಾಟರಿ ಬಿಡುತ್ತಿದ್ದವಳ ಆದೇಶ ಪಾಲಿಸಲು ಹರಸಾಹಸಗೈದೆ. ಜೇನಿನ ಮೆಲುದನಿಯಲ್ಲಿ ಉಲಿದಳು ಚೆಲುವೆ: "ಕ್ಯಾಟರ್ಯಾಕ್ಟ್ ಡೆವಲಪ್ ಆಗ್ತಾಯಿದೆ. ಹೆಚ್ಚಿನ ಟೆಸ್ಟ್ ಅಗತ್ಯ. ನಾಳೆ ಬೆಳಗ್ಗೆ ಆಸ್ಪತ್ರೆಗೆ ಬನ್ನಿ. ಜೊತೆಗೆ ಇದನ್ನೂ ತನ್ನಿ ಆಯ್ತಾ... ಓಕೆ" ಸ್ಲಿಪ್ ಹರಿದು ಕೈಯಲ್ಲಿಟ್ಟು, "ನೆಕ್ಸಟ್" ಎಂದಳು.

ಕೈಯಲ್ಲಿಟ್ಟದ್ದು ಚೀಟಿಯಲ್ಲ ಮಾರಾಯ್ರೇ, ಆ ಬಂಗಾಲಿ ತಲೆಯೊಳಗೆ ಬಿಟ್ಟದ್ದು ಹುಳ..!

ಕಣ್ಣ ಪೊರೆ ಬೆಳೆದರೇನು ಗತಿ? ನಮ್ಮ (ಮಲೆನಾಡ) ಕಡೆ " ಹೂ ಕೂತದೆ.." ಅಂತಾರೆ. ಅದಾದ್ರೆ ಕಣ್ಣುಗುಡ್ಡೆ ಬೆಳ್ಳಗಾಗ್ತದೆ. (ಒಂದು ಕಣ್ಣಿಗಾದ್ರೆ, ಒಕ್ಕಣ್ಣ ಶುಕ್ರಾಚಾರ್ಯ, ನಾಮಾಂಕಿತ ಬೇರೆ) ಎರಡೂ ಆದರೆ ಕಣ್ಣು ಕಾಣದೇ ತಡವರಿಸುತ್ತಾ ಜೀವನವಿಡೀ ಬೆಳಚುತ್ತಾ ಕಳೀಬೇಕು! ಆಪರೇಷನ್ ಮಾಡಿಸಿದ್ರೂ, ಕಣ್ಣಿಗೆ ಬ್ಯಾಂಡೇಜ್ ಸುತ್ತಿಕೊಂಡು ವಾರಗಟ್ಟಲೆ ಕಳೀಬೇಕು. ಬ್ಯಾಂಡೇಜ್ ಬಿಚ್ಚದ್ಮೇಲೂ, ಬಿಸಿಲಲ್ಲಿ ಓಡಾಡುವಾಗ ಕಣ್ಣು ಚುಚ್ಚುತ್ತದೆ. ಕುದುರೆಗೆ ತೊಡಿಸುವ ಕಣ್ಕಾಪಿನ್ಹಾಗೆ ಕಪ್ಪುಕನ್ನಡಕ ಹಾಕದೇ ಆಚೇ ಈಚೇ ಹೋಗೋಹಾಗಿಲ್ಲ. ವೃಥಾ ಖರ್ಚು ಬೇರೇ! ಆಪರೇಷನ್ ಸಕ್ಸಸ್ಸಾದರೆ ಅದೃಷ್ಟ! ಇಲ್ಲದಿದ್ದರೆ ಬದುಕಿಡೀ ಕುರುಡು... ಕಗ್ಗತ್ತಲು.!

ಊರುಗೋಲ್ಹಿಡಿದು ತಡವುತ್ತಾ, ಎಡವುತ್ತಾ ಜೀವನವಿಡೀ ಕಳೀಬೇಕು... ದೇವರೇ..ದೇವರೇ..!!

ದಿನವಿಡೀ ಅದೇ ಚಿಂತೆ! ರಾತ್ರಿ ಕಣ್ಣು ಮುಚ್ಚಿದರೂ ಅದೇ... ಆತಂಕ, ತಲ್ಲಣ, ಭಯ!

ಬೆಳಕು ಹರಿದದ್ದೇ ತಡ ಚೀಟಿ ಹಿಡಿದು ಓಡಿದ್ದು ಸೀದಾ ಆಸ್ಪತ್ರೆಗೆ....

ರೋಗಿಗೆ ಅರ್ಜಂಟೆಂದರೆ, ಆಸ್ಪತ್ರೆಗೆ ಅರ್ಜೆಂಟಾ? ಸೆಕ್ಯೂರಿಟಿ ಹೇಳಿದ:

"ಬಾಗಿಲು ತೆರೆಯುವುದೇಳೂವರೆಗೆ..."

ಅಂತೂ ಇಂತೂ ಕೊನೆಗೂ ತೆರೆಯಿತು ಸ್ವರ್ಗದ ಬಾಗಿಲು..!

ಓಡಿದೆ ರಿಸೆಪ್ಷನ್ ಕೌಂಟರಿಗೆ....

"ಕಾರ್ಡ್ ಇದೆಯಾ?"

ಬಂಗಾಲಿ ಬೆಡಗಿ ಕೊಟ್ಟ ಚೀಟಿ ತೋರಿಸಿದೆ.

"ಅದಲ್ಲ; ಮೊದಲು ಆಸ್ಪತ್ರೆ ಕಾರ್ಡ್ ಮಾಡಿಸಿಕೊಳ್ಳಿ.."

ಮಲೆಯಾಳಿ ಕನ್ನಡದಲ್ಲಿ ಉಲಿದ ರಿಸೆಪ್ಷನಿಸ್ಟ್ ತೋರಿದ ಕೌಂಟರ್ ಕಡೆಗೆ ಓಡಿದೆ.

"ಏನು?"

"ಕಾರ್ಡ್ ಮಾಡಿಸಬೇಕಿತ್ತು."

"ಐನೂರು ಕೊಡಿ..."

ಸಂಕಟದಲ್ಲೇ ಐನೂರರ ಗರಿಗರಿ ನೋಟು ತೆತ್ತು, ಯಥಾ ಪ್ರಕಾರ ಹೆಸರು, ವಿಳಾಸ, ಮೊಬೈಲ್ ನಂಬರ್ ಪ್ರವರ ಒದರಿದೆ. ಕಾರ್ಡ್ ಜೊತೆ ಬಂದ ಫೈಲ್ ಹಿಡಿದು ಅವಳು ತೋರಿದೆದುರ ಕಟ್ಟಡಕ್ಕೆ ಹಾರಿ, ಅಲ್ಲಿದ್ದ ಮಂಗಳೂರು ಕನ್ನಡದ ಚೆಲುವೆ ಕೈಗೆ ಒಪ್ಪಿಸಿ ಸಾನಿಧ್ಯದಲ್ಲಿ ಬಾಲ ಮುದುರಿ ನಿಂತೆ.

"ನೋಡಿ, ಕಣ್ಣು ಟೆಸ್ಟ್ಗೆ ಮೂನ್ನೂರಾಗುತ್ತೆ. ಓ ಆ ಕೌಂಟರ್ ಗೆ ಹೋಗಿ ಹಣ ಕಟ್ಟಿ, ರಸೀದಿ ತನ್ನಿ ಆಯ್ತಾ?"

"ಈಗಷ್ಟೇ ಹಣ ಕಟ್ಟಿ ಬಂದಿದ್ದೇನೆ!" ಕಾರ್ಡ್, ಫೈಲ್ ತೋರಿಸಿದೆ.

"ಅದು ಆಸ್ಪತ್ರೆ ಅಡಮಿಷನ್ ಕಾರ್ಡ ಫೀಸು. ಫಸ್ಟ್ ಟೈಂ ಬಂದವರು ಅದನ್ನು ಕಟ್ಟಲೇಬೇಕು. ಮುಂದೆ ಎಷ್ಟು ಸಲ ಬಂದರೂ ಮತ್ತೆ ಕಟ್ಬೇಕಾಗಿಲ್ಲ. ಕಾರ್ಡ್ ತೋರಿಸಿದರೆ ಸಾಕು. ಆದ್ರೆ ಎಲ್ಲಾ ಟೆಸ್ಟ್ಗೂ ಪ್ರತ್ಯೇಕ ಹಣ ಕಟ್ಟಿ ರಸೀದಿ ನೀಡಿದ ಮೇಲೇ ಡಾಕ್ಟರ್ ನೋಡೋದು ಅರ್ಥವಾಯ್ತಾ?

ಕೋಲೇಬಸವನಂತೆ ಗೋಣಾಡಿಸಿ ಹಣ ತೆತ್ತು, ರಸೀದಿ ತಂದು ಒಪ್ಪಿಸಿದೆ.

"ಕುಳಿತುಕೊಳ್ಳಿ, ಡಾಕ್ಟರ್ ಬರೋದು ಲೇಟಾಗುತ್ತೆ. ಅಷ್ಟರಲ್ಲಿ ಕಣ್ಣಿಗೆ ಡ್ರಾಫ್ಸ್ ಬಿಡ್ತೇನೆ. ಅವ್ರು ಬಂದು ಕೂಡ್ಲೇ ಟೆಸ್ಟ್ ಮಾಡ್ತಾರೆ ...." ನರ್ಸ್ ಎರಡೂ ಕಣ್ಣಿಗೆ ಎರಡೆರಡು ಹನಿ ಎಂತದ್ದೋ ಡ್ರಾಫ್ಸ್ ಬಿಟ್ಟಳು. ಉರಿ...ಉರಿ...ಜೀರಿ ಮೆಣಸು ತಿಕ್ಕಿದಷ್ಟು ಉರಿ.. ಆದರೆ ಬೊಬ್ಬೆ ಹೊಡೆವ ಹಾಗಿಲ್ಲ, ಆಸ್ಪತ್ರೆ!!

ಉರಿ ಕಮ್ಮಿಯಾಗುತ್ತಿದ್ದಾಗೆ ಡಾಕ್ಟರ್ ಆಗಮಿಸಿದರು. ನರ್ಸ ಸೂಚನೆ ಮೇರೆಗೆ ಅವರನ್ನು ಹಿಂಬಾಲಿಸಿದೆ.

"ಏನ್ ಪ್ರಾಬ್ಲಂ?"

ಬಂಗಾಲಿ ನೀಡಿದ ಚೀಟಿ ಒಪ್ಪಿಸಿದೆ. ಪರಿಶೀಲಿಸಿ ಕೇಳಿದರು: "ಬಿ.ಪಿ. ?"

"ನಾರ್ಮಲ್.."

"ಡೈಯಾಬಿಟೀಸ್ ಇದೆಯಾ?"

"ಹೌದು..."

"ಎಷ್ಟು ವರ್ಷದಿಂದ..?"

"ಹತ್ತುವರ್ಷದ ಮೇಲಾಯ್ತು..."

"ಇನ್ಸುಲೀನ್....?"

"ಇಲ್ಲಾ, ಮಾತ್ರೇಲ್ಲೇ ಕಂಟ್ರೋಲಲ್ಲಿದೆ."

"ಆಗಾಗ ಚೆಕ್ ಮಾಡಸ್ತಾಯಿದ್ದೀರಾ?"

"ಹೌದು, ಎರಡು–ಮೂರು ತಿಂಗಳಿಗೊಮ್ಮೆ ರೆಗ್ಯುಲರಾಗಿ..."

"'ಶಭಾಸ್.. ಶಭಾಸ್... ಬನ್ನಿಯಿಲ್ಲಿ.."ತೋರಿದ ಅವರೆದುರು ಕುರ್ಚಿಯಲ್ಲಿ ಕುಳಿತು–ಕೊಳ್ಳುತ್ತಾ ಹೇಳಿದೆ:

"ನಿಮ್ಮ ಶಭಾಸ್ಗಿರಿ ನನ್ಗಲ್ಲ; ನನ್ನ ಹೆಂಡತಿಗೆ ಸಲ್ಲಬೇಕು ಸಾರ್..."

"ಯಾಕೆ?"

"ಡಯಾಬಿಟೀಸ್ ಬಂದಾಗಿಂದ ಊಟತಿಂಡಿ, ಔಷಧ–ಪಥ್ಯ–ನಾಟೀ, ಮನೆಮದ್ದು, ಕಷಾಯ– ಆರೈಕೆಯೆಲ್ಲಾ ಅವಳದ್ದೇ... "

"ಗ್ರೇಟ್! ನೀವು ಬಹಳ ಅದೃಷ್ಟವಂತರು..!!"

"ಬೇರೇಯವರ ಕಣ್ಣಿಗೆ ಹಾಗೆ ಸಾರ್..." ನಿಟ್ಟುಸಿರ ಜಾಡು ಹಿಡಿದ ಡಾಕ್ಟರ್, ವಿಷಯ ಬದಲಿಸಿದರು:

"ನೀವು ರೈಟರಾ?"

"ಅಲ್ಲಾ, ರಿಟೈರ್ಡ್ ಜರ್ನಲಿಸ್ಟ್ ..".

"ನಾನೂ ರೈಟರ್. ಕನ್ನಡ ಪತ್ರಿಕೇಲ್ಲಿ ಹಲವಾರು ಮೆಡಿಕಲ್ ಆರ್ಟಿಕಲ್ ಪಬ್ಲಿಷ್ ಆಗಿವೆ. ಪುಸ್ತಕ ಕೂಡ....."

ಟೇಬಲ್ ಮೇಲಿದ್ದ ನೇಮ್ ಪ್ಲೇಟ್ ನೋಡಿ, ಬೂಸಿಬಿಟ್ಟೆ: "ಪೇಪರ್ಲ್ಲಿ ನಿಮ್ಮ ಲೇಖನ, ಹೆಸರು ಓದಿದ ಜ್ಞಾಪಕವಿದೆ.. ಪ್ರಶಸ್ತಿಗಳೂ ಬಂದಿರಬೇಕಲ್ವಾ..?

"ಒಂದೆರಡಲ್ಲ, ಸಣ್ಣಪುಟ್ಟಪ್ರಶಸ್ತಿ–ಪುರಸ್ಕಾರಗಳು ರಾಶಿ, ನಿಮ್ಗೆ ಯಾರಾದ್ರೂ ಮಿನಿಸ್ಟರು ಅಥವಾ ಅವರ ಸಮೀಪದವರು ಗೊತ್ತಾ?"

" ಒಂದಿಬ್ಬರು ಗೊತ್ತು,ಯಾಕೆ? "

'ರಾಜ್ಯ ಪ್ರಶಸ್ತಿ ಬಂದಿದ್ರೆ, ಚೆನ್ನಾಗಿತ್ತು! ವಶೀಲಿ, ಬಾಜಿಯಿಲ್ಲದೇ ಪಡೆಯೋದು ಕಷ್ಟಾಂತಾರೆ!? ಬೇಕಾದರೆ ಹಣ. ಚಿನ್ನದ ಮೆಡಲ್ ಕೊಡುಸೋವ್ರೇಯಿಟ್ಟುಕೊಳ್ಳಲಿ. ಪೇಪರ್ಲ್ಲಿ ನನ್ಹೆಸ್ರು, ಫೋಟೋ ಬಂದ್ರೆ ಸಾಕು...."

"ಇಷ್ಟು ವರ್ಷ ಜರ್ನಲಿಸಂನಲ್ಲಿದ್ದರೂ ನನ್ಗೇ ಸಿಗಲಿಲ್ಲ...., ಇನ್ನೂ..."

"ಹೌದಲ್ವಾ...!?" ನಿಡುಸುಯ್ದು ಡಾಕ್ಟರ್, "ಗಲ್ಲ ಇಲ್ಲಿಡಿ.. ಹಣೆ ಇದಕ್ಕೆ ತಾಗಿಸಿ. ತಲೆ ಅಲ್ಲಾಡಿಸಬೇಡಿ." ಎಂದರು. ವಿಧೇಯನಾಗಿ ಅಜ್ಞೆ ಪಾಲಿಸಿದೆ.

"ಎದುರು ಬೋರ್ಡ್ನಲ್ಲಿ ಕಾಣುವ ಇಂಗ್ಲಿಷ್ ಅಕ್ಷರ ಓದಿ" ಎಂದರು. ಓದಿದೆ. ಆ ಮೇಲೆ ಸಣ್ಣಸಣ್ಣವಾಗುತ್ತಾ ಹೋಗುವ ಅಕ್ಷರ ಸಾಲು ಹಾಗೂ ನಂಬರ್ ಓದಲು ಹೇಳಿದರು. ಎಲ್ಲದರಲ್ಲೂ ಪಾಸಾದೆ.

ಡಾಕ್ಟರ್ ಲೆನ್ಸ್ ಸಿಕ್ಕಿಸಿಕೊಂಡು, ಪ್ರಖರ ಲೈಟ್ ಕಣ್ಣೊಳಗೆ ಬಿಟ್ಟು "ಕಣ್ಣು ಮುಚ್ಚಬೇಡಿ, ಅಲ್ಲಾಡಿಸಬೇಡಿ.." ಗದರಿಸುತ್ತಾ ಐದಾರು ನಿಮಿಷ ಪರೀಕ್ಷಿಸಿ, ಹೇಳಿದರು:

"ಕಣ್ಣಿನ ಪೊರೆ ಇನಿಷಿಯಲ್ ಸ್ಟೇಜ್ನಲ್ಲಿದೆ. ಡೆವಲಪ್ ಅಗಲು ವರ್ಷಗಳೇ ಬೇಕು. ಆ ಬಗ್ಗೆ ಈಗ್ಲೇ ನಿಖರವಾಗಿ ಹೇಳೋದು ಕಷ್ಟ. ನೀವು ಡಯಾಬಿಟೀಕ್, ಯಾವಾಗೇನು ಬೇಕಾದ್ರೂ ಆಗಬಹುದು.ಡಯಾಬಿಟಿಸ್ನವರು, ಮೊದಲು ಕಳೆದು ಕೊಳ್ಳೋದೇ ಕಣ್ಣನ್ನ. ಆದ್ರಿಂದ್ದ ಅಸಡ್ಡೆ ಮಾಡದೇ ತಿಂಗಳಿಗೊಮ್ಮೆ ನಮಲ್ಲಿಗೇ ಬಂದು ಟೆಸ್ಟ್ ಮಾಡಿಸಿ ಕೊಂಡು ಹೋಗುತ್ತಿರಬೇಕು..."

ಹೆದರಿದವನ ಮೇಲೆ ಹಾವೆಸೆದಂತೆ ಬೆಚ್ಚಿ ಕುಳಿತವನನ್ನು ಕಂಡ ಡಾಕ್ಟರ್ ಬಾಯಿಂದ ಹೊರಬಿದ್ದವು ಸಂತೈಕೆ ನುಡಿಮುತ್ತು:

"ಅಷ್ಟೇನೂ ಭಯ ಪಡೋದುಬ್ಯಾಡ. ನಿಮ್ಮ ಕಣ್ಣಿನ ಪೊರೆ ಇನಿಷಿಯಲ್ ಸ್ಟೇಜ್ನಲ್ಲಿ ಇರೋದ್ರಿಂದ ಅದನ್ನೀಗಲೇ ಪರಿಹಾರ ಮಾಡಲು ಸಾಧ್ಯ! ಪೊರೆ ಮಾತ್ರವಲ್ಲ, ಡಯಾಬಿಟಿಸ್ ಸಹ. ಇದೇ ಆಸ್ಪತ್ರೆ ಆ ವಿಂಗ್ಲಿ "ನಿಸರ್ಗ ಚಿಕಿತ್ಸಾಲಯ" ಹೊಸದಾಗಿ ಪ್ರಾರಂಭವಾಗಿದೆ. ಅಲ್ಲಿ ಡಾಕ್ಟರಿಗೆ ನಾನು ಕಳುಹಿಸಿದ್ದು ಅಂತ್ಹೇಳಿ" ಅಂದ್ರು. ಜೀವ ಎಡಗೈಯಲ್ಲೇ ಹಿಡಿದುಕೊಂಡು " ನಿಸರ್ಗ ಚಿಕಿತ್ಸಾಲಯ" ದತ್ತ ಹೆಜ್ಜೆ ಹಾಕಿದೆ.

ನಿಸರ್ಗದ ಡಾಕ್ಟರ್ ಆತ್ಮೀಯವಾಗಿಯೇ ಸ್ವಾಗತಿಸಿದರು. ಡಾಕ್ಟರ್ ಕಳುಹಿಸಿದ್ದೆಂದು ಹೇಳಿದ್ದೇ ತಡ. "ನೋಡಿ, ಆ ಕೌಂಟರಿಗೆ ಹೋಗಿ ಮುನ್ನೂರು ಕಟ್ಟಿ, ರಸೀದಿ ತನ್ನಿ. ಆ ದುಡ್ಡು ಆಸ್ಪತ್ರೆಗೆ. ನಾನು ಹಣ ತೆಗೆದುಕೊಳ್ಳುವುದಿಲ್ಲ. ಉಚಿತ ಸೇವೆ. ಭಾರತದ ಪ್ರಾಚೀನ ವೈದ್ಯಪದ್ಧತಿ ಎಷ್ಟು ಅಮೂಲ್ಯವೆಂಬುದನ್ನು ಸಾಮನ್ಯರಿಗೆ ತಿಳಿಸುವುದೇ ನಮ್ಮ ಮುಖ್ಯಧ್ಯೇಯೋದ್ದೇಶ!"

ಮೂನ್ನೂರು ರೂಪಾಯಿ ತೆತ್ತು ಬಂದೆ. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಆ ಡಾಕ್ಟರು ನೈಸರ್ಗಿಕ ಚಿಕಿತ್ಸೆ ಪಡೆಯುವ ಮೂಲಕ, ಎಂಥ ಖಾಯಿಲೆಗಳಿಂದಲೂ ಮುಕ್ತಿ ಹೊಂದಬಹುದು. ಆಧುನಿಕ ಪಾಶ್ಚಿಮಾತ್ಯ ವೈದ್ಯಕೀಯದಿಂದಾಗುವ ದುಭಾರಿ ವೆಚ್ಚ–ಅನಾಹುತಗಳಿಂದ ಹೇಗೆ ಪಾರಾಗಬಹುದು–ಮನಮುಟ್ಟುವಂತೆ ವಿಶ್ಲೇಷಿಸಿದರು.

ನನ್ನ ಡೈಯಾಬಿಟೀಸ್, ಕಣ್ಣಿನ ಪೊರೆ ಹೋಗಲಾಡಿಸಲು ಯಾವ ಯಾವ ತರಕಾರಿ, ಹಣ್ಣು–ಹಂಪಲು, ಬೇಳೆಕಾಳು, ಸರಳ ವ್ಯಾಯಮ ಯೋಗ, ಹಾಗೂ ಪಥ್ಯ ಕುರಿತು ಉಪದೇಶಂಗೈದರು.

ನಿಸರ್ಗ ಚಿಕಿತ್ಸೆ ನೀತಿ–ನಿಯಮ, ಆಹಾರ ಪದ್ಧತಿ ಪಾಲಿಸುವುದು ಅಸಾಧ್ಯವೆನಿಸಿ ಮತ್ತೆ ಆ ಕಡೆ ತಲೆ ಹಾಕಲಿಲ್ಲ!

ಮೂರು ವರ್ಷಕ್ಕೂ ಹೆಚ್ಚುಕಾಲ ಆ ಆಸ್ಪತ್ರೆಯನ್ನು, ತಿಂಗಳಿಗೊಮ್ಮೆ ಎಡತಾಕಿ, ಪ್ರತಿ

ಸಲವೂ  ಮುನ್ನೂರು ಬೋಳಿಸಿಕೊಂಡದ್ದು ಬಿಟ್ಟರೆ, ಕಣ್ಣಿನ ಸ್ಥಿತಿ–ಗತಿ ಸ್ಪಷ್ಟವಾಗಲಿಲ್ಲ!

ಕೊನೆಗೊಂದು ದಿನ ಜ್ಞಾನೋದಯವಾಯ್ತು!

ಈ ಆಸ್ಪತ್ರೆಗೆ ಹೀಗೆ ಅಲೆಯುತ್ತಿದ್ದರೆ, ಹಣ ನೀರಲ್ಲಿ ಮಾಡುವ ಹೋಮ ಹೊರತು, ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಬೇರೇ ಕಣ್ಣಿನ ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಮಾಡಿಸಲೇಬೇಕು. ದುಡ್ಡು ಹೋದರೂ ಅಷ್ಟೇ.., ಪೊರೆ ಬೆಳೆದು, ದೃಷ್ಟಿ ಹೋದರೆ... ಕತ್ತಲಜಗತ್ತು, ಭಯ.... ಆತಂಕ... ತಲ್ಲಣ....

ಅಂತೆಯೇ ಅದರ ಅಪ್ಪನಂತ ಹಾಸ್ಪಟಲ್ ತಲಾಷ್ ಮಾಡಿಯೇ ಬಿಟ್ಟೆ!

"ಸೂಪರ್ ಹೈಟೆಕ್ ಐ ಹಾಸ್ಪಟಲ್!"

ಅಡ್ಮಿಷನ್ ಕಾರ್ಡ್ ಎರಡು ಸಾವಿರ!! ಡೋಂಟ್ ಕೇರ್!!! ಪ್ರತಿ ಸಲವೂ ಕನ್ಸಲ್ಟೇಷನ್ ಫೀ ಐನೂರು. ತಿಂಗಳು ಬೆಳೆಯುತ್ತಾ ಹೋಗುತ್ತಿದ್ದವು....

ಸೂಪರ್ ಹೈಟೆಕ್ಕಿಗೊಮ್ಮೆ ಹೋದಾಗ–

ಪೇಶೆಂಟ್– ಡಾಕ್ಟರ್ ನಡುವೆ ಅಹಿಮಹಿರಾವಣರ ಕಾಳಗ:

"ದೃಷ್ಟಿಯಿನ್ನೂ ಸರಿಯಾಗಿಲ್ಲ. ಅದಕ್ಕೆ ನೀವು ಮಾಡಿದ ಆಪರೇಷನ್ ಎಡವಟ್ಟೇ ಕಾರಣ..." ರೋಗಿಯ ರೋಷಾವೇಷ, ಆರೋಪ...

"ಆಪರೇಷನ್, ಬಹಳ ಪರ್ಫೆಕ್ಟಾಗಿಯೇ ಮಾಡಿದ್ದೇವೆ. ನಾವು ಹೇಳಿದ ರೀತಿ ಸಮಯಕ್ಕೆ ಸರಿಯಾಗಿ ಮಾತ್ರೆ ತೆಗೆದುಕೊಳ್ಳದೇ ಡ್ರಾಪ್ಸ್ ಬಿಡದೇ, ತಲೆಗೆ ಸ್ನಾನ ಮಾಡಿ ಕಣ್ಣಿಗೆ ನೀರು ಸೇರಿ, ಅವಾಂತರ ಮಾಡಿಕೊಂಡ್ಬಂದಿದ್ದೀರಿ. ತಪ್ಪು ನಿಮ್ದಾಗಿ ಸುಮ್ಮಸುಮ್ಮನೆ ನನ್ನ ಹಾಗೂ ನಮ್ಮಾಸ್ಪತ್ರೆ ಮೇಲೆ ಅಲ್ಲಸಲ್ಲದ ಆರೋಪ ಹೊರಿಸಬೇಡಿ..." ಡಾಕ್ಟರರ ತಿರುಗೇಟು.

"ಬೇರೇ ಕಡೆಗಿಂತ ನಿಮ್ಮ ಹೈಟೆಕ್ನಲ್ಲಿ ಎಲ್ಲಾ ಚಾರ್ಜು ಹೈಟೆಕ್ಕೇ! ಕಣ್ಣ ಆಪರೇಷನ್ಗೇ ಎರಡು ಲಕ್ಷವೆಂದರೆ, ಹುಡುಗಾಟಿಕೆ ಮಾತೇ? ಅಷ್ಟು ತೆತ್ತರೂ ನಮ್ಮ ಮೇಲೆ ಆರೋಪ ಹೊರಿಸುತ್ತೀರಲ್ಲ!" ಸೆಡ್ಡು ಹೊಡೆದು ನಿಂತ ರೋಗಿ.

ಈ ಜಟಾಪಟಿ ಕೊನೆಗೊಂಡದ್ದು ಹೀಗೆ:

ಡಾಕ್ಟರ್ ಮತ್ತೊಮ್ಮೆ ಆಪರೇಷನ್ ಮಾಡಿ ದೃಷ್ಟಿ ಸರಿಪಡಿಸಬೇಕು. ಹೈಟೆಕ್ ಅದಕ್ಕೆ ಯಾವುದೇ ಛಾರ್ಜು ಮಾಡಬಾರದು.  ಡಾಕ್ಟರ್ ಹೇಳಿದ ನಿಯಮಗಳನ್ನು, ರೋಗಿ ಚಾಚೂ ತಪ್ಪದೇ ಪಾಲಿಸಬೇಕು.

ಸೂಪರ್ ಹೈಟೆಕ್ಗೆ ಕೆಟ್ಟೆಸರು ತರುವಂತೆ ಪ್ರಚಾರ ಮಾಡಬಾರದು. ಅಂತೂ ಇಂತೂ ಆದದ್ದು ಸುಖಾಂತ್ಯ! ಮುಂದೇನಾಯಿತೋ ದೇವರೇಬಲ್ಲ!!

ವರ್ಷವೆರಡಾದರೂ ಸ್ಪಷ್ಟ ಮಾಹಿತಿ ದೊರೆಯದೇ, ತಡೆಯಲ ಸಾಧ್ಯವಾಗಿ ಕೊನೆಗೊಮ್ಮೆ ಡಾಕ್ಟರನ್ನ ಕೇಳಿದೆ:

"ಪೊರೆ ಬೆಳವಣಿಗೆ ಯಾವ ಸ್ಥಿತಿಯಲ್ಲಿದೆ. ನಾನು ಇನ್ನೆಷ್ಟು ದಿನ ನಿಮ್ಮ ಹೈಟೆಕಿಗೆ ಅಲೆಯಬೇಕು?"

"ರೋಗಿಗೆ ಯಾವುದೇ ರೀತಿ ಮಾಹಿತಿ ನೀಡಬಾರದೆಂದು, ನಮಗೆ ಆಡಳಿತಮಂಡಳಿ ಸ್ಪಷ್ಟ ಆದೇಶ. ಆಪರೇಷನ್ ಅಗತ್ಯವೆನಿಸಿದಾಗ ತಿಳಿಸುತ್ತೇವೆ. ಆಗ ನೀವು ಬರ್ಬೇಕು..."

ಡಾಕ್ಟರ್ ಉತ್ತರ ಕೇಳಿ ಪಿತ್ತ ನೆತ್ತಿಗೇರಿ: "ರೋಗಿಗೆ ಮಾಹಿತಿ ನೀಡೋಲ್ಲ ಎಂದರೇನು?"

"ನೋಡಿ ಸಿಟ್ಟು ಮಾಡಿ ನಮ್ಮೊಡನೆ ಜಗಳವಾಡಿದರೆ, ಯಾವ ಪ್ರಯೋಜನವಿಲ್ಲ. ಡೈರೆಕ್ಟರ್ ಹತ್ತಿರ ಹೋಗಿ ಮಾತಾಡಿ. ಅವರೊಪ್ಪಿದರೆ, ನಾವು ಕೊಡಲು ರೆಡಿ!"

ಡೈರೆಕ್ಟರನ್ನು ಕಂಡೆ. "ಮಾಹಿತಿ ನೀಡುವುದಿಲ್ಲವೆಂದರೇನು? ಅದನ್ನು ಪಡೆವುದು ರೋಗಿ  ಹಕ್ಕು" ಲಾಪಾಯೆಂಟ್ ಎಸೆದೆ.

ಅವರು ಡೈರೆಕ್ಟಾಗಿಯೇ ಹೇಳಿದರು: "ನೋಡಿ ಮಿಸ್ಟರ್, ನಮ್ಮ ಹೈಟೆಕಿನ್ನ ಕಂಡೀಷನ್ನೇ ಹಾಗೇ. ಒಪ್ಪುವವರು ಮಾತ್ರ ಇಲ್ಲಿಗ್ಬರಬಹುದು. ಇಲ್ಲಾ ಬೇರೇ ಕಡೆ ಹೋಗಬಹುದು. ಬಾಗಿಲು ಸದಾ ತೆರೆದಿದೆ..."

ರೋಗಿಗಳ ಹಕ್ಕು ಕಾಯ್ದೆ ಬಗ್ಗೆ ಪ್ರಸ್ತಾಪಿಸಿದೆ. ಅದಕ್ಕೆ ಅವರು ತಣ್ಣಗೆ ಉತ್ತರಿಸಿದರು:

"ರೋಗಿಗಳಿಗೆ ಹಕ್ಕು ಕಾಯ್ದೆ ಇರುವ ಹಾಗೇ, ಆಸ್ಪತ್ರೆಗಳಿಗೂ ಹಕ್ಕು ಕಾಯ್ದೆಗಳುಂಟು. ಲಾಪಾಯೆಂಟ್ ನಿಮ್ಮೊಬ್ಬರಿಗೇಯಲ್ಲ; ನಮ್ಗೂ ಗೊತ್ತಿದೆ. ಬೇಕಾದ್ರೆ ಕೋರ್ಟಿಗೆ ಹೋಗಿ. ಅಲ್ಲೇ ಫೈಟ್ ಮಾಡೋಣ. ಕೋರ್ಟ್ ತೀರ್ಮಾನಕ್ಕೆ ನಾವೂ ಬದ್ಧ!"

ಕೋರ್ಟ್–ಕಛೇರಿ ಅಲೆಯುವಷ್ಟು ಆರ್ಥಿಕ ಬಲ, ದೇಹಶಕ್ತಿ ನನ್ನಲ್ಲಿ ಇರದಿದ್ದರಿಂದ ಬಾಲಮುದುರಿಕೊಂಡು ಮರಳಿದೆ!

ಸಂಜೆ ಪಾರ್ಕ್ ಕಲ್ಲುಬೇಂಚ್ ಮೇಲೆ "ರೋಗಿಗಳ ಹಕ್ಕು ಭಾದ್ಯತೆ" ಪ್ರಧಾನ ವಿಷಯ. ಚರ್ಚೆ ನಡುವೆ ಹಿರಿಯರೊಬ್ಬರು ಹೇಳಿದರು:

"ಈ ಹೈಟೆಕ್ ಆಸ್ಪತ್ರೆಗಳೇ ಹಾಗೆ, ಬಹಳ ಸೊಕ್ಕು ಅವಕ್ಕೆ! ಕಬ್ಬಿನ ಅಲೇಮುರಿಯಿದ್ದಾಗೆ ಕಣ್ರೀ. ರೋಗಿಗಳನ್ನ ಹಿಂಡಿಹಿಪ್ಪೆ ಮಾಡಿ ಬಿಡ್ತಾರೆ. ಅದಕ್ಕೆ ನಾನು ಅವುಗಳ ಕಡೆ  ಕಣ್ಣು ಹಾಯಿಸುವುದಿಲ್ಲ! ಏನಿದ್ರೂ ಸಣ್ಣಪುಟ್ಟ ಪ್ರವೀಟ್ ಪ್ರಾಕ್ಟೀಷನರೇ ವಾಸಿ. ಅವ್ರಹತ್ತಿರ  ಒಂದಲ್ಲ; ಮೂರು–ನಾಲ್ಕು ಸರ್ತಿ ಕೇಳಿ, ವಿಷಯ ಸ್ಪಷ್ಟಪಡಿಸಿಕೊಳ್ಳಬಹುದು. ಛಾರ್ಜು ಕಮ್ಮಿ. ಬಹಳ ವರ್ಷದಿಂದಲೂ ಕಣ್ಣ ಡಾಕ್ಟ್ರೊಬ್ರ ಹತ್ರಾನೇ ಹೋಗ್ತಾಯಿರೋದು..."

ಹುಡುಕುತ್ತಿದ್ದ ಬಳ್ಳಿ, ಕಾಲಿಗೇ ತೊಡರಿದಂತಾಯ್ತು. ಗಬಕ್ಕನೇ ಆ ಹಿರಿಯರ ಹಿಡಿದು ಕಣ್ಣಿನ ಡಾಕ್ಟರರ ವಿವರ ಪಡೆದು ಮರುದಿನ ಬೆಳಗ್ಗೆ, ಆ ಐ ಕ್ಲೀನಿಕೆದುರು ಅವತರಿಸಿದೆ!

"ಸುಸಜ್ಜಿತ ಐ ಕ್ಲಿನಿಕ್".

ನಡು ವಯಸ್ಸು ದಾಟಿದ ಡಾ. ಸಜ್ಜನ್, ಎತ್ತರವೂ ಅಲ್ಲದ ಕುಳ್ಳೂ ಅಲ್ಲದ ಆಳು. ನೆರೆತ ತಲೆಗೂದಲು. ಮೆಲುದನಿ. ರೋಗಿಗಳಿಂದ  ವಿವರವಾಗಿ ಕೇಳಿ ಮಾಹಿತಿ ಪಡೆಯುವ ತಾಳ್ಮೆ. "ಏನ್ ಸಾರ್" ಎಂದು ರೋಗಿ ಮತ್ತೆ ಕೇಳಿದರೂ ಸ್ಪಷ್ಟಪಡಿಸುವ ಸೈರಣೆ.   ಕೂಲಂಕುಶವಾಗಿ ಕಣ್ಣು ಪರೀಕ್ಷಿಸಿ, ರೋಗಿಗೆ ಮನದಟ್ಟಾಗುವಂತೆ ವಿವರ ನೀಡಿ ಬಾಂಧವ್ಯ ಬೆಸೆಯುವ ಜಾಣ್ಮೆ. ಚಿಕಿತ್ಸೆಗೆ  ತಕ್ಕಂತೆ, ರೋಗಿಗಳಿಗೆ ದುಭಾರಿಯಾಗದ  ಚಾರ್ಜು. ಅನವಶ್ಯಕವಾದ ವಿವರಣೆ ಬಯಸಿದಾಗ, ಸಮಾಧಾನದ ಮಾತು. "ಈಗಲೇ ಎಲ್ಲಾ ಬೇಡ. ಸಮಯ ಬಂದಾಗ ಎಲ್ಲಾ ವಿವರಿಸುತ್ತೇನೆ"

ನನ್ನಿಂದೆಲ್ಲಾ ವಿವರ ಪಡೆದು, ಪರೀಕ್ಷಿಸಿ ಹೇಳಿದರು:

"ನೋಡಿ, ನಿಮ್ಮ ಎಡಗಣ್ಣು ನೋಪ್ರಾಬ್ಲಂ.ಬಲ ಕಣ್ಣಿನಲ್ಲಿ ಪೊರೆ ಬೆಳೆಯಲಾರಂಭಿಸಿದೆ. ಇನಿಷಿಯಲ್ ಸ್ಟೇಜ್ ಆದ್ದರಿಂದ ಈಗಲೇ ಆಪರೇಷನ್ನಿನ ಅವಶ್ಯಕತೆಯಿಲ್ಲ. ಆದರೆ ನೀವು

ಡಯಾಬಿಟಿಕ್. ಯಾವ ಹೊತ್ತಿಗೇನಾಗುತ್ತೋ ಹೇಳೋದು ಕಷ್ಟ. ದೃಷ್ಟಿ ಮಬ್ಬಾದ್ರೆ ಕೂಡ್ಲೆ ಬನ್ನಿ. ಇಲ್ಲಾಂದ್ರೆ ಆರು ತಿಂಗಳಿಗೊಮ್ಮೆ ಟೆಸ್ಟ್ ಮಾಡಿಸಿಕೊಂಡು ಹೋಗಿ."




ಆರು ತಿಂಗಳು ಕಳೆದ ಮೇಲೆ ಬಂದು ಟೆಸ್ಟ್ ಮಾಡಿಸಿದೆ. "ಇನ್ನೂ ಸ್ವಲ್ಪ ಸಮಯ ಹೋಗಲಿ" ಎಂದರು. ಹಣ ತೆಗೆದುಕೊಳ್ಳಲಿಲ್ಲ. ಮತ್ತೆ ಆರು ತಿಂಗಳಿಗೆ ಬಂದೆ. ಈಗ ಬಲಗಣ್ಣಿನ ದೃಷ್ಟಿ ಸ್ವಲ್ಪ ಮಬ್ಬಾಗಿತ್ತು. ಪರೀಕ್ಷಿಸಿ ಹೇಳಿದರು:

"ನೋಡಿ, ಮೊದ್ಲೇ ಹೇಳಿದ್ದಾಗೆ ನಿಮ್ಮ ಎಡಗಣ್ಣು ಏನೂ ಪ್ರಾಬ್ಲಂಯಿಲ್ಲ. ಬಲಗಣ್ಣಲ್ಲಿ ಪೊರೆ ಬೆಳೀತಾಯಿದೆ. ಈಗ್ಲೇ ಆಪರೇಷನ್ ಅವಶ್ಯಕತೆಯಿಲ್ಲ ಸ್ವಲ್ಪ ಕಾಯೋಣ.." ಆಗಲೂ ಹಣ ಪಡೆಯಲಿಲ್ಲ!

ಮುಜುಗರವಾಗಿ ಕೇಳಿದೆ: "ಸಾರ್, ದಯವಿಟ್ಟು ಹಣ ಪಡೆಯರಿ..." ಅದಕ್ಕವರು: "ಆಪರೇಷನ್ ಆದ ಮೇಲೆ ಎಲ್ಲಾ ಒಟ್ಟಿಗೆ ತೆಗೆದು ಕೊಳ್ಳುತ್ತೇನೆ....."

"ಆದಷ್ಟು ಬೇಗ ಆಪರೇಷನ್ ಮಾಡಿ ಸಾರ್, ಊರಿಗೆ ಹೋಗಬೇಕು" ನನ್ನವಸರ ಕಂಡ ಡಾಕ್ಟರ್ "ಪೊರೆ ಬೆಳೀದೇ ಆಪರೇಷನ್ ಮಾಡುವ ಹಾಗಿಲ್ಲ, ನೀವು ಹೇಳ್ತೀರೀಂತ ಮಾಡಿದ್ರೆ ಕೆಟ್ಟೆಸ್ರು ಬರೋದು ನಂಗೆ" ಎಂದು ಬಾಯಿಮುಚ್ಚಿಸಿದರು.

ಕೊನೆಗೊಮ್ಮೆ ಹೋದಾಗ ಟೆಸ್ಟ್ ಮಾಡಿದ ಡಾಕ್ಟರ್ ಇಂಥ ದಿನ ಬೆಳಗ್ಗೆ, ಇಂಥ ಶುಭ ಘಳಿಗೆ ಆಪರೇಷನ್ ಮಾಡೋಣ ಮೂಹೂರ್ತವಿಟ್ಟರು. ಕಂಕಣ ಬದ್ಧನಾಗಿ ನಾನೂ "ಹುಂ" ಗುಟ್ಟಿದೆ.

"ಆಪರೇಷನ್ನಿಗೆ ಎಷ್ಟಾಗುತ್ತದೆ? ಆಸ್ಪತ್ರೆಲ್ಲಿ ಎಷ್ಟು ದಿನ ಇರಬೇಕಾಗುತ್ತದೆ?"

"ಲೇಸರ್ ಆಪರೇಷನ್ ಮಾಡುವುದರಿಂದ ಆಸ್ಪತ್ರೆಯಲ್ಲಿ ಅರ್ಧಗಂಟೆ ಇದ್ದರೆ ಸಾಕು. ಬಳಿಕ ಮನೆಗೆ ಹೋಗಬಹುದು .ಕಣ್ಣಿಗೆ ಅಳವಡಿಸುವ ಲೆನ್ಸ್, ಮೂರು–ನಾಲ್ಕು ವಿಧವುಂಟು. ಎರಡು, ಒಂದೂವರೆ, ಒಂದು ಲಕ್ಷ ಹಾಗೂ ಐವತ್ತು ಸಾವಿರದ್ದುಂಟು. ಆಯ್ಕೆ ನಿಮ್ಮದು. ಲಕ್ಷದ್ದೆಲ್ಲಾ ಫಾರಿನ್ನಿನದು. ಐವತ್ತರದು ಇಂಡಿಯನ್ ಮೇಡ್.."

"ಐವತ್ತರದ್ದು ಚೆನ್ನಾಗಿರುತ್ತದಾ ಸಾರ್.. ?"

"ಚೆನ್ನಾಗಿರುತ್ತೆ ಕಣ್ರೀ. ಕೆಲವರಿಗೆ ಫಾರಿನ್ ಹುಚ್ಚು.... ನನ್ನ ತಂದೆಗೆ ಆಪರೇಷನ್ ಮಾಡಿದಾಗ ಬಳಸಿದ್ದು ಇಂಡಿಯನ್ ಮೇಡೇ. ನಿಮ್ದು ಒಂದೇ ಕಣ್ಣಾದ್ದರಿಂದ ಇಪ್ಪತ್ತೈದಾಗುತ್ತದೆ. ಆಪರೇಷನ್ ಆದ್ಮೇಲೆ ಹೇಳಿದ ನಿಯಮ ಚಾಚೂ ತಪ್ಪದೇ ಪಾಲಿಸಬೇಕು. ಒಂದು ತಿಂಗಳು ಮುಖಕ್ಕೆ ನೀರು, ತಲೆಗೆ ಸ್ನಾನ ಮಾಡಬಾರದು. ಕಣ್ಣಿಗೆ ನೀರು ಹೋದ್ರೆ ಇನ್ಫೆಕ್ಷನ್ನಾಗಿ ರಂಪವಾಗುತ್ತೆ. ಬಿಸಲಲ್ಲಿ ಹೋಗಬೇಕಾದ್ರೂ ಕೂಲಿಂಗ್ ಗ್ಲಾಸ್ ಹಾಕಿ ಕೊಳ್ಳಬೇಕು. ನಾವು ಕೊಡುವ ಟ್ಯಾಬ್ಲೆಟ್ ಸರಿಯಾಗಿ ತೆಗೆದುಕೊಂಡು, ಹೊತ್ತಿಂದ

ಹೊತ್ತಿಗೆ ಡ್ರಾಪ್ಸ್  ಬಿಡಬೇಕು. ಆಪರೇಷನ್ ದಿನ ಬೆಳಗ್ಗೆ ತಿಂಡಿ, ಮಾತ್ರೆ ತೆಗೆದುಕೊಳ್ಳದೇ ಬನ್ನಿ. ಪಂಚೆ, ಅಂಗಿ, ಟವಲ್ಲೊಂದಿಗೆ  ಜೊತೆಗೊಬ್ಬರನ್ನು ಕರೆ ತನ್ನಿ..."

ಡಾಕ್ಟರ್ ಸೂಚನೆಗಳಲ್ಲಿ ನನ್ನನ್ನು ತಬ್ಬಿಬ್ಬಾಗಿಸಿದ್ದು–ತಿಂಗಳ ಕಾಲ ಮುಖಕ್ಕೆ ನೀರು, ತಲೆಗೆ ಸ್ನಾನ ಮಾಡಬಾರದೆಂಬ ಕಟ್ಟಪ್ಪಣೆ–ಎಚ್ಚರ.

ನಿತ್ಯ ಎದ್ದವನೇ ಮುಖ ತೊಳೆದು, ತಲೆಗೆ ಸ್ನಾನಮಾಡಿ ಅಭ್ಯಾಸವಾಗಿದ್ದವನಿಗೆ ತಿಂಗಳ ಕಾಲ, ಎರಡೂ ಮಾಡಬಾರದೆಂದರೆ....!?

ನಿಂತಲ್ಲಿ, ನಡೆವಲ್ಲಿ, ಕುಳಿತಲ್ಲಿ, ನಿದ್ದೆಮಂಪರಲ್ಲಿ ಎಲ್ಲಂದರಲ್ಲಿ ಬೇತಾಳನಾಗಿ ಕಾಡುತ್ತಿದ್ದದ್ದು ಅದೊಂದೇ....

"ಪಾಣೀಪಂಚೆ ನೆನಸಿ, ಮುರೀಹಿಂಡಿ, ಮುಖ, ತಲೆವೊರೆಸಿದರೆ ಆಯ್ತಪ್ಪಾ!" ತೊಳಲಾಟಕ್ಕೆ ಪತ್ನಿ ಗಾಯತ್ರಿ ಸೂಚಿಸಿದ ಪರಿಹಾರ, ನನಗದು ಹಿಡಿಸಲಿಲ್ಲ!

"ನಮ್ಮನೆಗೆ ಬನ್ನಿಯಪ್ಪಾ. ನಿಮ್ಮ ಸಮಸ್ಯೆ ಬಗೆ ಹರಿಸಿಕೊಡ್ತೀನಿ.." ಎಂದಳು ರಚನಾ.

ಆಪರೇಷನ್ ಬೆಳಗ್ಗೆ ನಾನು, ಮಗ ರಾಜೀವ ಎಂಟೂವರೆಗೆ ಹಾಜರಾದೆವು. ಬಟ್ಟೆ ಬದಲಿಸಲು ಹೇಳಿ ಆಪರೇಷನ್ ಥೇಟರಿಗೆ ಕರೆದೊಯ್ದರು. ಮಂಚದ ಮೇಲೆ ಮಲಗಿಸಿ, ಎರಡೂ ಕೈಗಳಿಗೆ ಬೆಲ್ಟ್ ಕಟ್ಟಿ ಮಂಚಕ್ಕೆ ಬಂಧಿಸಿದರು. ಕತ್ತನ್ನು ಹಿಂಭಾಗ ಬಗ್ಗಸಿ, ತಗ್ಗಿದ ದಿಂಬಿನ ಮೇಲೊರಗಿಸಿ  ಡಾಕ್ಟರ್ ಹೇಳಿದರು:

"ನೋಡಿ, ಈಗ ಡ್ರಾಪ್ಸ್ ಬಿಡುತ್ತೇನೆ. ಉರಿಯುತ್ತೆ. ಅಲ್ಲಾಡಬಾರದು. ಸ್ವಿಚ್ ಆನ್ ಮಾಡುವ ಲೈಟ್ನೇ ದಿಟ್ಟಿಸುತ್ತಿರಬೇಕು. ಕಣ್ಣ ಗೊಂಬೆ ಅತ್ತಿತ್ತ ತಿರುಗಿಸಬಾರದು...."

"ಬಂದದ್ದೆಲ್ಲಾ ಬರಲಿ...ಗೋವಿಂದನ ದಯೆಯಿರಲಿ.." ಮನಸ್ಸು ಗಟ್ಟಿಸಿಕೊಂಡೆ.

ಕಾರ್ಯಾಚರಣೆ ಆರಂಭವಾಯಿತು. ಕೆಲವೊಮ್ಮೆಯಿಚ್ಛೆಗೂ ಮೀರಿ ಕಣ್ಣಗೊಂಬೆ ಅತ್ತಿತ್ತ ಚಲಿಸುತ್ತಿತ್ತು, ಕುತ್ತಿಗೆ ಮೇಲೇಕೆಳಗಾಗುತ್ತಿತ್ತು. ಆಗ ಡಾಕ್ಟರ್ ಗಟ್ಟಿಯಾಗಿ...

"ಕುತ್ತಿಗೆ, ಕಣ್ಣುಗೊಂಬೆ ಅತ್ಲಾಗಿಯಿತ್ಲಾಗಿ ಮಾಡಬೇಡೀ... ಎಷ್ಟು ಸರಿ ಹೇಳದು ನಿಮ್ಗೆ.." ಭಾಷೆ ಅರ್ಥವಾಗೋಲ್ವಾ? ಕಿರುಚುತ್ತಾ ಅಬ್ಬರಿಸುತ್ತಿದ್ದರು...

ಮೃದು ಸ್ವರದ, ಮೆಲುನುಡಿಯ ಕ್ಲಿನಿಕ್ಲಿನ್ನ ಡಾಕ್ಟರು.., ಆಪರೇಷನ್ ಥೇಯಟರ್ರ್ನಲ್ಲಿ ಅಬ್ಬರಿಸುತ್ತಿರುವ ಈ ಡಾಕ್ಟರು, ಇಬ್ಬರೂ ಒಬ್ಬರೇನಾ ಅಥವಾ ಬೇರೇಬೇರೆನಾ...!?

ಉಸಿರುಬಿಗಿಹಿಡಿದು ಮಲಗಿದ್ದವನಿಗೆ ಕ್ಷಣಕ್ಷಣವೂ,ಯುಗಗಳಾದವು..

ಥೇಯಟರ್ನಿಂದ ಹೊರಬಂದಾಗ, ರಾಜೀವನನ್ನು ಕೇಳಿದೆ:

"ಆಪರೇಷನ್ನಿಗೆ ಎಷ್ಟು ಟೈಂ ತಗೊಂಡರು?"

"ಕರೆಕ್ಟಾಗಿ ಅರ್ಧಗಂಟೆ" ಎಂದ.

ಕ್ಲಿನಿಕ್ನಿಂದ ಹೊರಡುವಾಗ ಡಾಕ್ಟರ್, ಎರಡು ದಿನ (ಮೂರು ಹೊತ್ತು) ಮಾತ್ರೆ ಹಾಗೂ ಮೊದಲ ವಾರ, ಪ್ರತಿ ಗಂಟೆಗೊಮ್ಮೆ, ಎರಡನೇ ವಾರ ಎರಡು ಗಂಟೆಗೊಮ್ಮೆ ಡ್ರಾಪ್ಸ್ ಬಿಡುವಂತೆ ಹೇಳಿ, ನೀರು ಮುಟ್ಟಿಸಲೇಬಾರದೆಂದು ಮತ್ತೊಮ್ಮೆ ಎಚ್ಚರಿಸಿ ಮೂರನೇ ವಾರ ಬಂದು ತೋರಿಸುವಂತೆ ಹೇಳಿದರು.

ರಚನಾಳ ಮನೆಗೆ ಹೋದೆವು.

ಮುಖ, ತಲೆಗೆ ನೀರು ಮುಟ್ಟಿಸಬಾರದೆಂಬ ನನ್ನ ತೊಳಲಾಟದ ಕಂಡ ರಚನಾ "ನೀವೇನೂ ಯೋಚಿಸಬೇಡಿ. ಅದಕ್ಕೂ ಸುಲಭ ಪರಿಹಾರವುಂಟು" ಎಂದಳು.

"ದಿನಾ ತಲೆಗೆ ಸ್ನಾನ ಮಾಡುವುದು ಬೇಡ. ಕಣ್ಣಿಗೆ ನೀರು ಹೋಗದ ಹಾಗೇ ಎರಡು ದಿನಕ್ಕೊಮ್ಮೆ ಮಾಡಿದರೆ ನಿಮ್ಗೆ ಸಮಾಧಾನವಾ?" ಕೇಳಿದಳು. ಖುಷಿಯಿಂದಲೇ ತಲೆ ತೂಗಿದೆ!

ಬ್ಯೂಟಿಪಾರ್ಲರ್‌ಗಳಲ್ಲಿ "ಸ್ಪಾ" ಅನುಭವ ಪಡೆದಿದ್ದ ಅವಳು ನನ್ನ ಮೇಲೆ ಅದನ್ನು ಪ್ರಯೋಗಿಸಿದ್ದಳು.

ಮಕ್ಕಳ ಕುರ್ಚಿಯಲ್ಲಿ ಕೂರಿಸಿ, ತಲೆ ಹಿಂಭಾಗಿಸಿ, ಮುಂದಲೆಯಿಂದ ಮೆಲ್ಲನೆ ನೀರು ಹುಯ್ಯುವುದು. ಹೀಗೆ ನೀರೆರವಾಗ ಆಪರೇಷನ್ ಆದ ಕಣ್ಣಿಗೆ ಹತ್ತಿಯಟ್ಟು, ಅದರ ಮೇಲೆ ಪುಟ್ಟ ಬಟ್ಟೆಗಂಟಿರಿಸಿ, ನೀರೊಳಹೋಗದಂತೆ ಎಚ್ಚರ ವಹಿಸುವುದು. ಎಡಗಣ್ಣು ಸೇರಿದಂತೆ ಮುಖ, ಒದ್ದೆ ಬಟ್ಟೆ ಹಿಂಡಿ ಒರೆಸುವುದು– ಹೀಗೆ ದಿನ ಬಿಟ್ಟು ದಿನ ಸ್ನಾನ ಮಾಡಿಸಿದಳು.

ಹೆಣ್ಣು ಮಕ್ಕಳು ತೌರಿನಲ್ಲಿ ಬಾಣಂತನ ಮಾಡಿಸಿಕೊಂಡರೆ, ನಾನು ಮಗಳ ಮನೆಯಲ್ಲೇ ಅವಳ ಕೈಯಲ್ಲಿ ಕಣ್ಣ ಬಾಣಂತನ ಮಾಡಿಸಿಕೊಂಡೆ!

ಮೂರನೇವಾರ ಕುದುರೆ ಕಣ್ಣಿಗೆ ಕಟ್ಟಿದಂಥ ಕೂಲೀಂಗ್ಲ್ಯಾಗ್ಸ್ ಹಾಕಿಕೊಂಡು, ಮೆಟ್ರೋ ದಲ್ಲಿ ಆಸ್ಪತ್ರೆಗೆ ಹೋಗುತ್ತಿದ್ದೆವು ಪಕ್ಕದಲ್ಲಿದ್ದ ಗಾಯತ್ರಿ ಹೇಳಿದಳು: "ನೀವು ಯಾರ ಕಡೆ ನೋಡುತ್ತಿದ್ದೀರೆಂದು ಹೇಳುವುದಕ್ಕಾಗುವುದಿಲ್ಲ!." ಕಣ್ಣು ಕಾಪಿನ ಕೂಲೀಂಗ್ ಗ್ಲಾಸ್ ಮಹಿಮೆಯಿಷ್ಟು ಅಪಾರವೆಂದು ಜ್ಞಾನೋದಯವಾದ ಅಮೂಲ್ಯ ಕ್ಷಣವದು!!. ಸಾಮಾನ್ಯ ಕನ್ನಡಕ ಧರಿಸುತ್ತಿದ್ದ ನನ್ನ ದೃಷ್ಟಿ, ಪ್ರಯಾಣಿಸುವಾಗ ಯಾರ ಕಡೆ ಹೊರಳಿದೆ ಯೆಂಬುದನ್ನು ಗಾಯತ್ರಿ ಸುಲಭವಾಗಿ ಪತ್ತೆಹಚ್ಚಿ, "ಅವಳನ್ಯಾಕೆ ನುಂಗೋಹಂಗೆ ನೋಡುತ್ತಿದ್ದೀರಿ?", "ಕತ್ತು ಹೀಂಗೆ ತಿರುಗಿಸಿ ಈ ರಂಬೇನೇನ್ನೋಡೂದು?", "ಅಷ್ಟು ದೂರದಲ್ಲಿದ್ದರೂ ಆಕೆನಾ ಯಾಕೆ ಕೆಕ್ಕರಿಸಿ ನೋಡ್ತೀರಾ? ಆವಳೇನ್ ಹೇಮಮಾಲಿನಿಯಾ?" ಪಕ್ಕೆ ತಿವಿದು ಉತ್ತರಿಸಲಾಗದ ಪ್ರಶ್ನೆ ಕೇಳಿ ಕಂಗೆಡಿಸುತ್ತಿದ್ದಳು. ಈ ಕೂಲೀಂಗ್ಲಾಸ್ ಹಾಕಿಕೊಂಡರೆ ಅವಳ ಪತ್ತೇದಾರಿಕೆ ನಡೆಯುವುದಿಲ್ಲವೆಂಬುದು ಗ್ಯಾರಂಟಿಯಾಗಿ, ಎದುರಲ್ಲಿದ್ದ ಬಣ್ಣಬಣ್ಣದ ಚಿಟ್ಟೆಗಳ ಸೊಬಗ ಕಣ್ಣು ತುಂಬಿಸಿಕೊಂಡೆ!

ಕಣ್ಣು ಟೆಸ್ಟ್ ಮಾಡಿ, ಡಾಕ್ಟರ್ : "ಓಕೆ, ಆಪರೇಷನ್ ಸಕ್ಸಸ್ ಆಗಿದೆ. ಕಂಪ್ಲೀಟಾಗಿ ಇನ್ನೂ ಹೀಲ್ ಆಗಿಲ್ಲ. ಅದಾಗಕಿನ್ನೂ ನಾಲ್ಕೈದು ವಾರಬೇಕು. ಈ ಮೂರನೇ ವಾರ, ಮೂರು ಗಂಟೆಗೊಮ್ಮೆ, ನಾಲ್ಕನೇವಾರ ನಾಲ್ಕು ಗಂಟೆ, ಐದನೇ ವಾರ ಐದು ಗಂಟೆಗೊಮ್ಮೆ ಡ್ರಾಪ್ಸ್ ಬಿಡಿ. ಆರನೇ ವಾರ ಹಗಲೊಮ್ಮೆ, ರಾತ್ರಿಯೊಮ್ಮೆ ಬಿಟ್ಟರೆ ಸಾಕು. ಆನಂತರ ಬನ್ನಿ ಟೆಸ್ಟ್ ಮಾಡಿ, ಕನ್ನಡಕ ಬದಲಾಯಿಸಿ ಕೊಡ್ತೀನಿ" ಎಂದರು.

"ತಲೆಗೆ ಸ್ನಾನ ಮಾಡಬಹುದೇ?"

"ಮೊದಲೇ ಹೇಳಿದ್ದೇನಲ್ಲಾ, ತಿಂಗಳಾದ ಮೇಲೆ ಮಾಡೀಯಂತ"

"ಸದ್ಯ ಎಲ್ಲಾ ಸಂಕಷ್ಟಗಳಿಂದ ಪಾರಾದೆ" ಯೆಂದು ನಿಟ್ಟುಸಿರುಗರೆದೆ!

ಕೊನೇವಾರ ಡಾಕ್ಟರ್ ಬಳಿ ಹೋಗಿ. ಟೆಸ್ಟ್ ಮಾಡಿಸಿಕೊಂಡು, ಹೇಳಿದ ಚಿಕಿತ್ಸಾ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಿದ್ದಕ್ಕೆ "ಶಭಾಸ್ ಗಿರಿ" ಪಡೆದು, ಕೊಟ್ಟ ಹೊಸ ಕನ್ನಡಕ ಹಾಕಿಕೊಂಡಾಗ ಕಂಡದ್ದು...

"ಈ ಜಗ...! ಎಷ್ಟೊಂದು ಸೋಜಿಗ...!!"

# ಹಾರಿ ಹೋದವರು

**ಪಾಲಹಳ್ಳಿ ವಿಶ್ವನಾಥ್**

ನಾನು ಆಗತಾನೇ ಈ ಕ್ಲಬ್ ಸೇರಿದ್ದೆ. ಇದು ನಗರದ ಗಣ್ಯವ್ಯಕ್ತಿಗಳ ಕ್ಲಬ್. ನನಗೇನೂ ಅಂತ ಅರ್ಹತೆ ಇರಲಿಲ್ಲ. ನಮ್ಮ ತಾತ ಹಿಂದೆ ಏನೋ ಒಳ್ಳೆ ಕೆಲಸ ಮಾಡಿದ್ದು ಈ ಕ್ಲಬ್ಬು ಸೇರಿದ್ದರು. ವಂಶಪಾರಂಪರ್ಯವಾಗಿ ಅದರ ಸದಸ್ಯತ್ವ ನನಗೆ ಬಂದಿತ್ತು. ನನಗೆ ಗೊತ್ತಿದ್ದವರು ಅಲ್ಲಿಯ ಕಾರ್ಯದರ್ಶಿ (ಸೆಕ್ರೆಟರಿ) ಮಾತ್ರ. ಅವರ ಹೆಸರು ರಾಮನಾಥಯ್ಯ. ಅವರ ಜೊತೆ ಆಗಾಗ ಮಾತಾಡುತ್ತಿದ್ದೆ.ಹಾಗೇ ಒಂದು ದಿನ ಹರಟೆ ಹೊಡೆಯುತ್ತಿದ್ದಾಗ, ದೂರದಲ್ಲಿ ಒಬ್ಬ ವ್ಯಕ್ತಿ ಬರುವುದು ಕಾಣಿಸಿತು. ವಯಸ್ಸು ಐವತ್ತು ಇರಬಹುದು. ತೂರಾಡಿಕೊಂಡು ಬರುತ್ತಿದ್ದರು; ನಡೆಯುವುದರಲ್ಲಿ ಯಾವ ಲಯವೂ ಇರಲಿಲ್ಲ."ಕ್ಲಬ್ಬಿಗೆ ಬರೋಕೆ ಮುಂಚೆಯೇ ಈ ತರಹ ಇದ್ದಾರಲ್ಲ!" ಎಂದು ಕಾರ್ಯದರ್ಶಿಯವರ ಹತ್ತಿರ ತಮಾಷೆ ಮಾಡಿದೆ.ಅದಕ್ಕೆ ಅವರು, "ಇಲ್ಲ, ಅವರು ನಡೆಯುವುದೇ ಹಾಗೆ. ಇದರ ಹಿಂದೆ ಒಂದು ಕಥೆ ಇದೆ. ನೀವು ಯಾರಿಗೂ ಹೇಳುವುದಿಲ್ಲ ತಾನೆ...?" ಎಂದರು.ನಾನು, "ನನಗೆ ಇಲ್ಲಿ ಯಾರೂ ಗೊತ್ತೇ ಇಲ್ಲ, ಯಾರಿಗೆ ಹೇಳಲಿ?" ಎಂದೆ. ಸರಿ ಎಂದು ರಾಮನಾಥಯ್ಯನವರು ನನ್ನನ್ನು ತಮ್ಮ ಕೋಣೆಗೆ ಕರೆದುಕೊಂಡು ಹೋದರು.

"ಅವರ ಹೆಸರು ಲಂಬೋದರ ಪೈ. ಉಡುಪಿ ಕಡೆಯವರು. ದೊಡ್ಡ ಪೈ ಅವರ ದೂರದ ಸಂಬಂಧಿ. ಅವರ ಮನೆಯವರು ಗಣೇಶನ ಭಕ್ತರು. ಮಕ್ಕಳಿಗೆಲ್ಲಾ ಗಣೇಶನ ಹೆಸರನ್ನೇ ಇಟ್ಟಿದ್ದರು–ಗಣೇಶ, ವಿನಾಯಕ, ಗಜಾನನ, ಏಕದಂತ, ಹೇರಂಬ. ಕಡೆಯ ಮಗನಿಗೆ ಲಂಬೋದರ ಎಂಬ ಹೆಸರು ಕೊಟ್ಟರು. ಏನಾಗುತ್ತೆ ಅಂದರೆ, ಮಕ್ಕಳಿಗೆ ಅವರ ಹೆಸರಿನ ಪ್ರಕಾರ ಇರಬೇಕೆಂಬ ಆಸೆ ಇರುತ್ತೆ. ಅದು ಸಹಜ ಅಲ್ವೇ? ಹುಟ್ಟುತ್ತಾ ಅವನು ಸಣ್ಣಗೆಯೇ ಇದ್ದಿರಬಹುದು, ಆದರೆ ಬೆಳೆಯುತ್ತಾ ತನ್ನ ಹೆಸರಿಗೆ ಅನುಗುಣವಾಗಿ ಉದರವನ್ನು ಬೆಳೆಸುತ್ತಾ ಹೋದ. ಅತಿ ಭೋಜನಪ್ರಿಯ. ಮನೆಯಲ್ಲಿ ಅಲ್ಲದೆ ಬೆಳಿಗ್ಗೆ ಹೋಟೆಲು, ಸಂಜೆ ಹೋಟೆಲು. ಕೆಲವರು ಆಹಾರದಲ್ಲಿ ರುಚಿಯನ್ನು ನಿರೀಕ್ಷಿಸುತ್ತಾರೆ; ಆದರೆ ಇವರು ಯಾವ ನಿರೀಕ್ಷೆಯೂ ಇಲ್ಲದೆ ತಿನ್ನುತ್ತಿದ್ದರು. ಏನನ್ನೂ ಬೇಡ ಎಂದವರಲ್ಲ. ಹೀಗೇ ಹೋಗುತ್ತಾ, ನೋಡುವವರಿಗೆ ತಮ್ಮ ಹೆಸರಿಗೆ ತಕ್ಕ ಹಾಗೆ ಇದ್ದಾರೆ ಎಂದು ಅನಿಸತೊಡಗಿತು. ಅವನಿಗೂ ತನ್ನ ಬಗ್ಗೆ ಹೆಮ್ಮೆ ಅನಿಸಿತು.

ಆದರೆ ಅದೆಲ್ಲಾ ಹಿಂದೆ. ಕ್ರಮೇಣ ಲಂಬೋದರರಾಯರಿಗೆ ತಮ್ಮ ದೇಹದ ಬಗ್ಗೆ ಬೇಸರ ಬರಲು ಶುರುವಾಯಿತು. ತೂಕವನ್ನು ಇಳಿಸಲು ಬಹಳ ಯತ್ನಿಸಿದರು. ವ್ಯಾಯಾಮಶಾಲೆಗೆ ಸೇರಿದರು. ಅಲ್ಲಿ ಗುರುಗಳಾಗಿದ್ದ ಶ್ರೀಕಂಠಯ್ಯನವರು ಬಹಳ ಖ್ಯಾತ ವ್ಯಕ್ತಿ. ದೊಡ್ಡ ರಾಜರ ಮೈ ಸ್ವಲ್ಪ ಇಳಿಯಲು ಅವರೇ ಕಾರಣರಂತೆ. ಅಂತವರು ಲಂಬೋದರರಾಯರನ್ನು ಶಿಷ್ಯರಾಗಿ ಸ್ವೀಕರಿಸಿ ಅವರ ಮೇಲೆಯೂ ಪ್ರಯೋಗಗಳನ್ನು ನಡೆಸಿದರು. ಈ ಆಸನವಾಯಿತು, ಆ ಆಸನವಾಯಿತು–ಏನೂ ಪ್ರಯೋಜನವಾಗಲಿಲ್ಲ. ಒಂದು ಗುಲಗಂಜಿಯಷ್ಟೂ ತೂಕ ಕಡಿಮೆಯಾಗಲಿಲ್ಲ! ವ್ಯಾಯಾಮಶಾಲೆ ಶ್ರೀಕಂಠಯ್ಯನವರಿಗೆ ತಮ್ಮ ವಿಧಾನಗಳ ಬಗ್ಗೆಯೇ ಅನುಮಾನಗಳು ಬರಲು ಶುರುವಾಯಿತು. ಕಡೆಗೂ ಲಂಬೋದರರಾಯರಿಗೆ 'ಕ್ಷಮಿಸಿ' ಎಂದು ಹೇಳಿ ಅವರ ಹಣವನ್ನು ವಾಪಸ್ ಮಾಡಿದರು. ಲಡಾಕ್‌ನ ಕಾರಕೋರಂ ಪರ್ವತ ಶ್ರೇಣಿಯ ಗುಹೆಯೊಂದರಲ್ಲಿ ವಾಸಿಸುವ

ಲಾಮಾ ಪವಾಡಗಳನ್ನು ಮಾಡುತ್ತಾನೆ ಎಂದು ಕೇಳಿ ಲಂಬೋದರರಾಯರು ಅಲ್ಲಿಗೂ ಹೋದರು (ಹೇಗೆ ಹೋದರು ಎಂದು ಕೇಳಬೇಡಿ). ಹೋದ ಮೇಲೆ ಅವನೊಬ್ಬ ವೃದ್ಧ ಬೌದ್ಧ ಸಾಧು ಎಂದು ತಿಳಿಯಿತು. 'ನಾನು ಯಾವ ಪವಾಡವನ್ನೂ ಮಾಡಿಲ್ಲ' ಎಂದು ಹೇಳಿ, ಅವನು ರಾಯರಿಗೆ ಇರುವುದರಲ್ಲೇ ತೃಪ್ತಿಯಿಂದ ಇರಿ ಎಂದು ಅಲ್ಲೇ ಇದ್ದ ದೊಡ್ಡ ಲಾಫಿಂಗ್ ಬುದ್ಧನ ಹೊಟ್ಟೆ ತೋರಿಸಿದನಂತೆ. ಅಂತೂ ಲಂಬೋದರರಾಯರು ನಿರಾಳರಾಗಿ ವಾಪಸ್ ಬಂದು ಹಲವಾರು ವರ್ಷಗಳು ಹಾಗೆಯೇ ಇದ್ದರು.

ಒಂದು ದಿನ ಏನಾಯಿತೋ ಏನೋ, ಕ್ಲಬ್ಬಿನಲ್ಲಿ "ನನಗೆ ಈ ತೂಕದಿಂದ ಮುಕ್ತಿ ಬೇಕು, ರಾಮನಾಥಯ್ಯನವರೇ. ನೀವು ಭಿಷಗ್ರತ್ನ ನಂಜುಂಡಯ್ಯನವರ ಪುತ್ರರು, ಏನಾದರೂ ಉಪಾಯವಿರಲೇಬೇಕಲ್ಲವೇ?" ಎಂದರು."ಹೌದು, ನಮ್ಮ ತಂದೆ ದೊಡ್ಡ ವೈದ್ಯರಾಗಿದ್ದರು. ಆದರೆ ಅವರದ್ದೆಲ್ಲಾ ಸರಳ ಔಷಧಿಗಳು. ಈ ತರಹದ ವಿಚಿತ್ರ ಔಷಧಿಗಳು ಅವರ ಮನಸ್ಸಿನಲ್ಲೂ ಇದ್ದಿರಲಾರವು. ಆದರೆ..." ನಿಧಾನವಾಗಿ ನನ್ನ ಯೋಚನೆಗಳು ಇನ್ನೂ ಹಿಂದೆ ಹೋದವು. "ನನ್ನ ಮುತ್ತಜ್ಜಿ ಲಕ್ಷ್ಮಮ್ಮ ! ಅವರಿಂದಲೇ ನಮ್ಮ ತಂದೆಗೆ ವೈದ್ಯಶಾಸ್ತ್ರ ಓದಲು ಸ್ಫೂರ್ತಿ ಸಿಕ್ಕಿತು ಎಂದು ಕೇಳಿದ್ದೆ. ಲಕ್ಷ್ಮಮ್ಮ ಮಲಯಾಳ ದೇಶದಿಂದ ಬಂದವರು. ಅಲ್ಲಿ ತಂತ್ರ-ಮಂತ್ರ ಏನೋ ಕಲಿತಿದ್ದಿರಬಹುದು. ಏನೇನೋ ವಿಚಿತ್ರ ಗಿಡಮೂಲಿಕೆಗಳಿಂದ ಔಷಧಿಗಳನ್ನು ತಯಾರಿಸುತ್ತಿದ್ದರಂತೆ. ಊರಿನ ಹೊರಗೆ ಹೋಗಿ ಮರಗಳ ಮಧ್ಯೆ ಗಿಡಗಂಟಿ ಹುಡುಕಿ ಯಾವು ಯಾವುದೋ ಎಲೆಗಳನ್ನು ತರುತ್ತಿದ್ದರಂತೆ. ಅವರು ವಿದ್ಯಾವಂತರಾಗಿದ್ದು ಇವೆಲ್ಲವನ್ನೂ ಬರೆದಿಡುತ್ತಿದ್ದರು. ನಮ್ಮ ತಂದೆಯನ್ನು ಅವರ ಬಗ್ಗೆ ಕೇಳಿದಾಗ ಅವರು ತೇಲಿಸಿ ಉತ್ತರ ಕೊಡುತ್ತಿದ್ದರು. ನಮ್ಮ ಮುತ್ತಜ್ಜನ ಬಗ್ಗೆಯೂ ಏನೇನೋ ಸುದ್ದಿಗಳಿದ್ದವು; ಅವರು 'ಹಾರಿಹೋದರು' ಎಂದೆಲ್ಲಾ ಅರ್ಥವಿಲ್ಲದ ಮಾತುಗಳನ್ನು ಕೇಳಿದ್ದೆ.

ಸರಿ ನೋಡೋಣ ಎಂದು ಅಟ್ಟದ ಮೇಲೆ ನಮ್ಮ ತಂದೆ ಇಟ್ಟಿದ್ದ ಹಳೆಯ ಕಬ್ಬಿಣದ ಪೆಟ್ಟಿಗೆಯನ್ನು ತೆಗೆದೆ. ಕಾಗದ ಪತ್ರಗಳ ಹಲವಾರು ಕಟ್ಟುಗಳು. ಒಂದರ ಮೇಲೆ 'ಅಜ್ಜಿ' ಎಂದು ಬರೆದಿತ್ತು. ಒಳಗಿನ ಕಾಗದಗಳಲ್ಲಿ ಕೆಲವು ಶಿಥಿಲವಾಗಿದ್ದವು. ಅನೇಕ ಪತ್ರಗಳ ಮೇಲೆ ಏನೋ ಬರಹಗಳಿದ್ದವು... ಯಾವುದೋ ಲಿಪಿಯಲ್ಲಿ, ಮಲಯಾಳ ಭಾಷೆಯಲ್ಲಿರಬೇಕು. ಏನೇ ಆಗಲಿ ಎಂದು ಆ ಕಾಗದದ ಕಟ್ಟನ್ನು ತೆಗೆದುಕೊಂಡು ಅಟ್ಟದಿಂದ ಕೆಳಗಿಳಿದೆ. ಅವುಗಳನ್ನು ನನ್ನ ಮಲಯಾಳಿ ಗೆಳೆಯನಿಗೆ ತೋರಿಸಿ ಎಲ್ಲವನ್ನೂ ಅನುವಾದ ಮಾಡಿಸಿಕೊಂಡೆ. ಲಕ್ಷ್ಮಮ್ಮನವರು ಪುಸ್ತಕಗಳನ್ನು ಓದಿ ಏನೇನೋ ಬರೆದಿಟ್ಟುಕೊಂಡಿದ್ದರು. ಖಗೋಳ ವಿಜ್ಞಾನದ ಬಗ್ಗೆ ಏನೇನೋ ರೇಖಾಚಿತ್ರಗಳು (ಕೇರಳದಲ್ಲಿ ಈ ವಿಷಯದಲ್ಲಿ ಶತಮಾನಗಳ ಹಿಂದೆ ಬಹಳ ಸಂಶೋಧನೆ ಮಾಡಿದ್ದರು ಎಂದು ಓದಿದ್ದೆ). ಯಾವುದೋ ಅನುವಾದಗಳೂ ಇದ್ದವು-'ಡಾನ್ ಕಿಹೋಟೆ' ಸ್ಪ್ಯಾನಿಷ್ ಪುಸ್ತಕದ ಒಂದು ಅಧ್ಯಾಯ! ಎಲ್ಲಿಂದ ಬಂದಿತ್ತೋ ಈ ವಿದ್ವತ್ತು ಆಕೆಗೆ!

ಒಂದು ಚಿಕ್ಕ ಕಟ್ಟು ಬೇರೆಯೇ ಇತ್ತು. 'ಔಷಧಗಳು' ಎಂದು ಮೇಲೆ ಬರೆದಿತ್ತು. ಅವುಗಳಲ್ಲಿ ಒಂದರಲ್ಲಿ "ತೂಕವನ್ನು ಕಳೆದುಕೊಳ್ಳುವ ಔಷಧ" ಎಂದು ಇತ್ತು. ಓದಿದಾಗ: 'ಆಗುಂಬೆಯಿಂದ ಈ ಮೂಲಿಕೆಗಳನ್ನು ತರಿಸಿ ಇಟ್ಟುಕೊಳ್ಳಿ (ಹತ್ತು ಹೆಸರುಗಳಿದ್ದವು). ನಂತರ ಅವುಗಳನ್ನು ಒಣಗಿಸಿ, ಪುಡಿ ಮಾಡಿ ತುಂಗಾ ನದಿಯ ನೀರು ಮತ್ತು ಜೇನುತುಪ್ಪದ ಜೊತೆ ತೆಗೆದುಕೊಳ್ಳಿ. ಒಂದೇ ಚಮಚ ! ಮೂರು ರಾತ್ರಿ ತೆಗೆದುಕೊಳ್ಳಬೇಕು. ಎಚ್ಚರಿಕೆ: ಒಂದೇ ಚಮಚ, ಮೂರು ದಿನ ಮಾತ್ರ!'

ನಾನು ರಾಯರನ್ನು ತಡೆಯಲು ಯತ್ನಿಸಿದೆ: "ನಾವೇ ಮೂಲಿಕೆಗಳನ್ನು ಸಂಗ್ರಹಿಸಬೇಕು. ಆದರೂ ಇದನ್ನು ತೆಗೆದುಕೊಳ್ಳುವುದು ಅಪಾಯಕರವಾಗಬಹುದು, ಯೋಚಿಸಿ." ಆದರೆ ಅವರು ಕೇಳಲಿಲ್ಲ. "ನನಗೆ ಕೊಡಿ, ನಾನು ಮೂಲಿಕೆಗಳನ್ನು ತರಿಸುತ್ತೇನೆ, ಪ್ರಯತ್ನಿಸುತ್ತೇನೆ" ಎಂದರು. 'ಆಗುಂಬೆಯಲ್ಲೇ ಎಲ್ಲ ಸಿಕ್ಕಿತು' ಎಂದು ಹೇಳಿಕಳುಹಿಸಿದ್ದರು. ಹಾಗೇ ಕೆಲವು ದಿನಗಳ ನಂತರ "ತುಂಗೆಯ ನೀರೂ ಬಂದಿದೆ, ಇವತ್ತು ರಾತ್ರಿ ಔಷಧ ತೆಗೆದುಕೊಳ್ಳುತ್ತೇನೆ" ಎಂದು ಸಂದೇಶ ಬಂದಿತ್ತು. ಎರಡು ದಿನಗಳ ನಂತರ ಅವರಿಂದ ಒಂದು ಸಂದೇಶ ಬಂತು: "ಔಷಧಿ ಕೆಲಸ ಮಾಡುತ್ತಿದೆ, ತೂಕ ಸ್ವಲ್ಪ ಇಳಿದಿದೆ."

ಆದರೆ ಒಂದು ವಾರದ ನಂತರ ಅವರ ಸೆಕ್ರೆಟರಿ ಕ್ಲಬ್ಬಿಗೆ ಓಡೋಡಿ ಬಂದು, "ಬೇಗ ಬನ್ನಿ ಸರ್! ಯಜಮಾನರು ಕರೀತಿದ್ದಾರೆ," ಎಂದು ಹೇಳಿದ. ಅವನ ಜೊತೆಯಲ್ಲೇ ರಾಯರ ಮನೆಗೆ ಹೊರಟೆ. "ಸರ್ ಇಪ್ಪತ್ತನಾಲ್ಕು ಗಂಟೆಗಳಿಂದ ತಮ್ಮ ಕೋಣೆಯಿಂದ ಹೊರಬಂದಿಲ್ಲ," ಎಂದ.ನಾನು ಒಳಗೆ ಹೋದೆ. ಕೋಣೆ ತುಂಬಾ ಅವ್ಯವಸ್ಥೆಯಾಗಿರುವುದು ಕಂಡಿತು. "ಬನ್ನಿ, ಬನ್ನಿ! ಇಲ್ಲಿ, ಇಲ್ಲೀ!" ರಾಯರ ಧ್ವನಿ. ಆದರೆ ಎಲ್ಲಿ? ಈ ಕಡೆ ಆ ಕಡೆ ನೋಡಿ, ಕಡೆಗೆ... ಅಲ್ಲಿದ್ದರು ಲಂಬೋದರರಾಯರು! ಛಾವಣಿಯ (ಸೀಲಿಂಗ್) ಹತ್ತಿರ, ಒಂದು ಮೂಲೆಯಲ್ಲಿ ಅವರ ಬೃಹತ್ ದೇಹ ತೇಲುತ್ತಿತ್ತು! ಗಾಳಿಯಿಂದ ತುಂಬಿದ ದೊಡ್ಡ ಬಲೂನಿನಂತೆ ಮೇಲಕ್ಕೆ ತೇಲಿ ಛಾವಣಿಗೆ ಅಪ್ಪಳಿಸುತ್ತಿದ್ದರು.

"ರಾಯರೇ! ಇದು ಏನು?". ಅವರು ಕಷ್ಟಪಟ್ಟು ಗೋಡೆಯನ್ನು ತಡವಿಕೊಂಡು ಕೆಳಗೆ ಬರಲು ಪ್ರಯತ್ನಿಸುತ್ತಿದ್ದರು. "ಆ ಔಷಧ!" ಎಂದು ಅವರು ಜೋರಾಗಿ ಉಸಿರಾಡುತ್ತ ಹೇಳಿದರು. "ನಿಮ್ಮ ಮುತ್ತಜ್ಜಿಯ ಔಷಧ!" ಅಷ್ಟರಲ್ಲಿ ಅವರು ಗೋಡೆಯ ಮೇಲಿನ ಚಿತ್ರವನ್ನು ಹಿಡಿದುಕೊಂಡರು. ಚಿತ್ರವೂ ಗೋಡೆಯಿಂದ ಕಿತ್ತುಬಂತು; ರಾಯರು ಮತ್ತೆ ಮೇಲಕ್ಕೆ ಹಾರಿ ಛಾವಣಿಗೆ ಅಪ್ಪಳಿಸಿದರು. ಆಗ ನನಗೆ ವಿಷಯ ಅರ್ಥವಾಗಲು ಶುರುವಾಯಿತು."ಅಯ್ಯೋ ರಾಯರೇ! ಔಷಧಿ ಕೆಲಸ ಮಾಡಿದೆ." "ಚೆನ್ನಾಗಿಯೇ ಮಾಡಿದೆ!" "ಹೌದು, ನೀವು ಹೆಚ್ಚು ತೆಗೆದುಕೊಂಡುಬಿಟ್ಟಿದ್ದೀರಿ." "ಒಂದರ ಬದಲು ಮೂರು ಚಮಚ ತೆಗೆದುಕೊಂಡೆ!" "ಅಂತೂ ನಿಮ್ಮ ತೂಕವೆಲ್ಲಾ ಹೋಗಿಬಿಟ್ಟಿದೆ." "ಅದಕ್ಕೆ ಈ ಗತಿ!" ಎಂದು ಹಲುಬಿಕೊಂಡರು. "ಔಷಧವು ನಿಮ್ಮ ತೂಕವನ್ನೇ ತೆಗೆದುಹಾಕಿದೆ!" "ಎಷ್ಟು ಸತಿ ಹೇಳ್ತೀರಿ! ಈಗ ಏನಾದರೂ ಮಾಡಿ," ಎಂದರು ಲಂಬೋದರರಾಯರು.

ನಾನು ಅವರ ಸಮಸ್ಯೆಗೆ ಪರಿಹಾರ ಹುಡುಕತೊಡಗಿದೆ. ಸೆಕ್ರೆಟರಿಗೆ ತಿಳಿಸಲೇಬೇಕಾಯಿತು. ಅಂತೂ ಅವರಿಗೆ ಏನೆಂದರೆ ಏನೇನೂ ತೂಕವಿರದೆ , ರಾಯರು ಛಾವಣಿಯ ಮೇಲೆಯೇ ತಲೆಕೆಳಗಾಗಿ ಓಡಾಡಬೇಕಾಗಿತ್ತು. ಹಾಸಿಗೆಯನ್ನೂ ತಲೆಕೆಳಗಾಗಿ ಕಟ್ಟಿದೆವು. ಆಹಾರವನ್ನು ಪುಸ್ತಕದ ಕಪಾಟಿನ ಮೇಲ್ಭಾಗದಲ್ಲಿ ಇಡಬೇಕಾಯಿತು. ನೆಲಕ್ಕೆ ಬರಬೇಕಾದರೆ 'ಬ್ರಿಟಿಷ್ ವಿಶ್ವಕೋಶ'ದ (ಎನ್ಸೈಕ್ಲೋಪೀಡಿಯಾ) ಕೆಲವು ತೂಕದ ಪುಸ್ತಕಗಳನ್ನು ಹಿಡಿದುಕೊಂಡು ನಿಧಾನವಾಗಿ ಕೆಳಗೆ ಇಳಿಯಬೇಕಿತ್ತು. ರಾಯರು ಒಂದು ದೊಡ್ಡ ದಪ್ಪ ನೊಣದಂತೆ, ಛಾವಣಿಯ ಮೇಲೆ ತಲೆಕೆಳಗಾಗಿ ಓಡಾಡುತ್ತಿದ್ದರು. "ಹೊರಗೆ ಮಾತ್ರ ಹೋಗಬೇಡಿ" ಎಂದು ಎಚ್ಚರಿಕೆ ಕೊಟ್ಟೆ.

ಆದರೆ ಒಂದು ದಿನ ನನಗೆ ಇನ್ನೂ ಸರಳವಾದ ಉಪಾಯ ಹೊಳೆಯಿತು. "ರಾಯರೇ, ಇವೆಲ್ಲಾ ಏಕೆ? ನಿಮ್ಮ ಬಟ್ಟೆಗಳಿಗೆ ಸೀಸ ಹಾಕಿಬಿಡೋಣ!" ಸೀಸದ ಹಾಳೆಗಳನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಅವರ ಒಳಬಟ್ಟೆಗಳಿಗೆ ಹೊಲೆಸಿದೆವು. ಸೀಸದ ಅಡಿಭಾಗವಿರುವ

ಬೂಟುಗಳನ್ನು ಧರಿಸಲು ವ್ಯವಸ್ಥೆ ಮಾಡಿದೆವು. ಬೇಕಾದರೆ ಸೀಸದ ಚೀಲವನ್ನೂ ಕೈಯಲ್ಲಿ ಹಿಡಿದುಕೊಳ್ಳಬಹುದು. ಹೀಗೆ ಮಾಡಿದರೆ ಅವರು ಮತ್ತೆ ನೆಲದ ಮೇಲೆ ಸರಿಯಾಗಿ ನಡೆಯಬಹುದು. ರಾಯರಿಗೆ ಬಹಳ ಸಂತೋಷವಾಯಿತು."ಹಾಗಾದರೆ ನಾನು ಮತ್ತೆ ಕ್ಲಬ್ಬಿಗೆ ಬರಬಹುದೇ?" "ಖಂಡಿತ, ಹಾಗೂ ಹಿಂದಿನಂತೆ ತಿನ್ನಲು ಶುರು ಮಾಡಿ," ಎಂದೆ. ಅವರು ಮತ್ತೆ ಕ್ಲಬ್ಬಿಗೆ ಬರಲು ಶುರುಮಾಡಿದರು. ಈ ವಿಷಯ ಜಗತ್ತಿನಲ್ಲಿ ಯಾರಿಗೂ ಗೊತ್ತಿಲ್ಲ–ಅವರ ಸೆಕ್ರೆಟರಿ ಮತ್ತು ನನಗೆ ಮಾತ್ರ ಗೊತ್ತು–ಈ ಅಪಾರ ದಪ್ಪನಾದ ಪೈಕ್ರಾಫ್ಟ್‌ನ ತೂಕ ಬಹುತೇಕ ಶೂನ್ಯ. ಆದರೂ ಅವರಿಗೆ ಒಂದು ಭಯ ಮಾತ್ರ ಇದೆ: "ರಹಸ್ಯ ಯಾರಿಗೂ ಗೊತ್ತಾಗುವುದಿಲ್ಲ ತಾನೆ?" ಎಂದು ಅವರು ಆಗಾಗ ಕೇಳುತ್ತಿರುತ್ತಾರೆ.

ಲಂಬೋದರರಾಯರ ಈ ಪ್ರಸಂಗ ಕೇಳಿ ಬಹಳ ವಿಸ್ಮಯವಾಯಿತು. ಅದರಲ್ಲೂ ಒಂದು ಅಂಶ ನನ್ನ ಮನಸ್ಸಿನಲ್ಲಿ ಉಳಿದೇ ಹೋಯಿತು. "ನಮ್ಮ ಮುತ್ತಜ್ಜ ಹಾರಿಹೋದರು ಎಂದು ಅರ್ಥವಿಲ್ಲದ ಸುದ್ದಿಗಳನ್ನು ಕೇಳಿದ್ದೆ" ಎಂದು ರಾಮನಾಥಯ್ಯ ಹೇಳಿದ್ದರು. ಆದರೆ ರಾಯರ ಕಥೆ ಕೇಳಿದ ನಂತರ ನನಗೆ ಇದು ಅರ್ಥವಿಲ್ಲದ ಸುದ್ದಿ ಎಂದು ಅನಿಸಲಿಲ್ಲ. ಆ ಸಂಶಯವನ್ನೇ ರಾಮನಾಥಯ್ಯನವರಿಗೆ ವ್ಯಕ್ತಪಡಿಸಿದೆ. ಅವರೂ ಯೋಚನೆ ಮಾಡಲು ಶುರುಮಾಡಿರಬೇಕು. ಇದಾದ ಒಂದೆರಡು ದಿನಗಳ ನಂತರ ಅವರು ನನ್ನ ಬಳಿ ಬಂದು, "ಅದು ನಿಜವೋ ಏನೋ! ನಮ್ಮ ಮುತ್ತಜ್ಜಿ ಅವರ ಗಂಡನ ಮೇಲೆ ಈ ಔಷಧಿ ಪ್ರಯೋಗಿಸಿದ್ದಿರಬಹುದು. ಈಗ ನೆನಪಾಗುತ್ತಿದೆ–ಅವರ ಹಜಾರದ ಛಾವಣಿಯಲ್ಲಿ ಒಂದು ಕಡೆ ಗಾರೆ ತುಂಬಾ ಹೊರಟುಹೋಗಿತ್ತು. ಮೊದಲ ಪ್ರಯೋಗಗಳು ಹಜಾರದಲ್ಲಿ ಮತ್ತು ಮುಂದಿನ ಪ್ರಯೋಗ ಮನೆಯ ಹೊರಗೆ ನಡೆದಿರಬೇಕು... ಹೌದು, ಮುತ್ತಜ್ಜಿ ಬಲವಂತಕ್ಕೋ ಅಥವಾ ಸ್ವಪ್ರೇರಣೆಯಿಂದಲೋ, ಅಂತೂ ಮುತ್ತಜ್ಜ ಅದನ್ನು ಕುಡಿದು ತೇಲುತ್ತಾ ಹಾರಿ ಹೋಗಿರಬೇಕು!" ಎಂದರು.ಇದಾದ ನಂತರ ಏನೋ ಕೆಲಸವಿದ್ದಿದ್ದರಿಂದ ಬಹಳ ದಿನ ಕ್ಲಬ್ಬಿಗೆ ಹೋಗಲಿಲ್ಲ. ಒಂದು ದಿನ ಕ್ಲಬ್ಬಿನ ಅಧ್ಯಕ್ಷರು ಫೋನ್ ಮಾಡಿ ರಾಮನಾಥಯ್ಯನವರು ಬಹಳ ದಿನಗಳಿಂದ ಬಂದಿಲ್ಲ ಎಂದು ಚಿಂತೆಯನ್ನು ವ್ಯಕ್ತಪಡಿಸಿದರು. ನಾನು ಹೊರಗೆ ಹೋಗಿ ಆಕಾಶದತ್ತ ನೋಡಿದೆ; ಕಣ್ಣಲ್ಲಿ ನೀರು ಬಂದಿತು.

(ಇದು ಎಚ್.ಜಿ. ವೆಲ್ಸ್ ಅವರ 'ದಿ ಟ್ರೂತ್ ಅಬೌಟ್ ಪೈಕ್ರಾಫ್ಟ್' ಫ್ಯಾಂಟಸಿ ಕಥೆಯ ರೂಪಾಂತರ) ಒಂದು ಚಿತ್ರ – ಮೊದಲು ಪ್ರಕಟವಾದಾಗ ಆ ಮ್ಯಾಗಜೈನಿನಲ್ಲಿ ಹಾಕಿತ್ತು



# ಮನೆಯ ಟೀಂ ಲೀಡರ್ ಯಾರು ?

ಎಂ. ಎಸ್. ನರಸಿಂಹ ಮೂರ್ತಿ

ಮದುವೆ ಆದ ಹೊಸದರಲ್ಲಿ ಗಂಡ ಹೆಂಡತಿಯ ನಡುವೆ ಸೂಪರ್ ಸಾಮರಸ್ಯ ಇರುತ್ತೆ. ಮೇಡ್ ಫಾರ್ ಈಚ್ ಅದರ್ ಅಂತ ಜನ ಅಸೂಯೆ ಪಡೋಷ್ಟು ಹೊಂದಾಣಿಕೆ. ಹೆಂಡತಿಯ ಸೌಂದರ್ಯಕ್ಕೆ ಮರುಳಾದ ಹುಡುಗ ಓನಿಡಾ ಟೀವಿಯ ಧ್ಯೇಯವಾಕ್ಯ ಆಗಾಗ ಹೇಳಿಕೊಳ್ಳುವ:

"ನೈಬರ್ಸ್ ಎನ್ವಿ, ಓನರ್ಸ್ ಪ್ರೈಡ್ !"

ಆದ್ರೆ ಕ್ರಮೇಣ ಈ ಸೆಳೆತ ಕಡಿಮೆ ಆಗುತ್ತಾ ಹೋಗುತ್ತೆ. ಹೆಂಡ್ತಿ ಹೇಳ್ತಾಳೆ, ಗಂಡ ತೆಪ್ಪಗೆ ಪಾಲಿಸ್ತಾನೆ. ಹೆಂಡ್ತಿ ಹೇಳಿದ ತರಕಾರಿಯಿಂದ ಹಿಡಿದು ರೇಷನ್ ಸೇರಿದಂತೆ ಪ್ರತಿಯೊಂದನ್ನೂ ತರಬೇಕು. ಇನ್ನು ಹಬ್ಬ ಹರಿದಿನಗಳು ಬಂದರೆ ಹೊಸ ಬಟ್ಟೆ ಖರೀದಿ. ಗಂಡನಿಗೆ ಚೆಡ್ಡಿ ತರದಿದ್ದರೂ ಪರವಾಗಿಲ್ಲ, ಹೆಂಡತಿಗೆ ಮಿಡ್ಡಿ ತರಲೇಬೇಕು. ರೇಷ್ಮೆ ಸೀರೆಯ ಬೆಲೆ ವಿಚಾರಿಸಿದರೆ ಚೆಡ್ಡಿಯಲ್ಲಿ ರೇಷ್ಮೆ ಹುಳ ಬಿಟ್ಟಂತಾಗುತ್ತದೆ. ವಿಶ್ವ ವಿಶಾಲು ಮನೆ ಪರಿಸ್ಥಿತಿ ಇದಕ್ಕಿಂತ ಭಿನ್ನ ಅಲ್ಲ.

ಮದುವೆ ಆದ ಹೊಸದರಲ್ಲಿ ವಿಶಾಲು ನಗುನಗುತ್ತಾ ಮಾತಾಡ್ತಾ ಇದ್ಲು. "ನಗು ನಗುತ್ತಾ ನಲ್ಲೀ ನಲ್ಲೀ" ಅಂತ "ನಲಿಗೆ" ಒತ್ತು ಸೇರಿಸಿ ನಲ್ಲಿ ಮಾಡಿ ಆನಂದಿಸ್ತಾ ಇದ್ದಳು. ನಲ್ಲಿಯಲ್ಲಿ ನೀರಿಗಿಂತ ಹೆಚ್ಚಾಗಿ ಗಾಳಿ ಬಂತು. ಪ್ರೀತಿಯ ಕೊರತೆಯಿಂದಾಗಿ ಮೂತಿಗೆ ಮೆಣಸಿನ ಖಾರ ಬೆರೆಯಿತು. ವಿಶಾಲು ಗಂಡನ ಜೊತೆ ಮಾತಾಡುವಾಗ ಮೂತಿ ಸ್ವಲ್ಪ ಸೈಡ್‌ಗೆ ವಾಲಿ ಸೊಟ್ಟ ಆಗ್ತಾ ಇತ್ತು. ಯಾಕೆ ಹೀಗೆ ಆಗ್ತಾ ಇದೆ ಎಂದು ಅವನು ಮಡದಿಯನ್ನು ಕೆಣಕಿದ.

"ಮನದನ್ನೆ, ನಿನ್ನ ಸುಂದರ ಮೂತಿ ಯಾಕೆ ಒಂದು ಸೈಡಿಗೆ ಎಳೆಯುತ್ತಿದೆ ?"

"ಮನದನ್ನೆ, ನಿನ್ನ ಸುಂದರ ಮೂತಿ ಯಾಕೆ ಒಂದು ಸೈಡಿಗೆ ಎಳೆಯುತ್ತಿದೆ ?"

ಮೊದಲಿಂದಾನೂ ಹೀಗೇ ಇದೆ ಎಂಬುದು ಅವಳ ಉತ್ತರ. ಆದ್ರೆ ನಿಮ್ಮಮ್ಮನಿಗೆ ಮೂತಿ ಇಷ್ಟು ಸೊಟ್ಟ ಇರಲಿಲ್ಲ ಎಂದು ವಿಶ್ವ ಹೇಳಿದಾಗ ವಿಶಾಲೂಗೆ ಟೆಂಪರೇಚರ್ ತಲೆಗೇರಿತು.

"ಹೌದು ಕಣ್ರೀ, ನಮ್ಮ ವಂಶಾನೇ ಹಾಗೆ. ನಾವೆಲ್ಲ ಸೊಟ್ಟ ಮೂತಿಯವರು. ನಮ್ಮ ಜೀನ್ಸೇ ಹಾಗೆ" ಎಂದು ಸಿಟ್ಟು ಮಾಡಿಕೊಂಡಳು. ವಿಶ್ವ ತಾನೇ ಸಮಾಧಾನ ಮಾಡಿಕೊಂಡ. ಪೊಲೀಸ್ ಸ್ಟೇಷನ್ನಲ್ಲಿ ಪೇದೇನ ಎದುರು ಹಾಕ್ಕೋಬಾರದು, ಬೆಡ್‌ರೂಮಲ್ಲಿ ಹೆಂಡ್ತೀನ ಎದುರು ಹಾಕ್ಕೋಬಾರದು ಎಂಬ ಸತ್ಯ ಅವನಿಗೆ ಗೊತ್ತಿತ್ತು.

ಬೆಳಗಾಗೆದ್ದು ತಿಂಡಿ ಮಾಡಬೇಕಾದ ವಿಷಯದಲ್ಲಿ ಎಲ್ಲರ ಮನೆಯಲ್ಲಿ ಸಾಮಾನ್ಯವಾಗಿ ಗಲಾಟೆ ಇದ್ದೇ ಇರುತ್ತದೆ. ಪ್ರತಿನಿತ್ಯ ಉಪ್ಪಿಟ್ಟು ಮಾಡಿದರೆ ಸೌಮ್ಯ ಸ್ವಾಭಾವದ ಗಂಡ ಕೂಡ ಸಹಿಸುವುದಿಲ್ಲ. ಆದರೆ ಉಪ್ಪಿಟ್ಟಿಗಿಂತ ಸಲೀಸಾಗಿ ಮಾಡುವ ಇನ್ನೊಂದು ಐಟಮ್ ಇಲ್ಲವೇ ಇಲ್ಲ ಎಂಬುದು ಗೃಹಿಣಿಯರ ಅಭಿಪ್ರಾಯ. ಅದರಲ್ಲೂ ರವೆಯನ್ನ ಹದವಾಗಿ ಹುರಿದು, ಅದಕ್ಕೆ ಒಗ್ಗರಣೆಯೂ ಹಾಕಿ ಡಬ್ಬಕ್ಕೆ ತುಂಬಿಟ್ಟರೆ ಸಾಕು. ಗಂಡ ತಿಂಡಿ ಎಂದು ಕೇಳಿದಾಗ ರೆಡಿ ರವೆಗೆ ಬಿಸಿ ನೀರು ಬಡಿದು ತಟ್ಟೆಗೆ ಸುರಿದರೆ ಸದ್ದಿಲ್ಲದೆ ಎಂಥ ಪತಿದೇವನೂ ತಿನ್ನಬೇಕು.

ವಿಶ್ವ ಎಷ್ಟೋ ಸಲ ಇಡ್ಲಿ ಮತ್ತು ದೋಸೆ ತಿನ್ನಲು ಇಷ್ಟ ಪಟ್ಟಿದ್ದಾನೆ. ಮೊದಮೊದಲು ಮಡದಿ ಬಳಿ ಹೇಳುತ್ತಲೂ ಇದ್ದ. ಆದರೆ ಅದರಿಂದ ಅವನಿಗೇ ಸಮಸ್ಯೆ ಆಗಲು ಶುರುವಾಯಿತು. "ಇಡ್ಲಿ ಖಂಡಿತ ಮಾಡ್ತೀನಿ. ಆದ್ರೆ ಇಡ್ಲಿಗೆ ಹಿಟ್ಟು ರುಬ್ಬಿಕೊಡ್ತೀರಾ" ಎಂದು

ಹೆಂಡತಿ ಕೇಳುತ್ತಿದ್ದಳು. ವಿಶ್ವ ರುಬ್ಬೇ ರುಬ್ಬಿದ. ಗಂಡನಾದ ಮೇಲೆ ರುಬ್ಬಲೇಬೇಕು. ಹೀಗಾಗಿ ರೆಟ್ಟೆಗಳಲ್ಲಿ ನೋವು ಕಾಣಿಸಿತು. ಹೋಟೆಲ್‌ನಿಂದ ಇಡ್ಲಿ ತರಿಸಿದ್ದರೆ 50 ರೂಪಾಯಲ್ಲಿ ಮುಗಿದಿರೋದು. ರೆಟ್ಟೆ ನೋವಿನ ಮುಲಾಮಿನ ಚೀಟಿ ಬರೆದು ಕೊಡಲು ಡಾಕ್ಟರಿಗೆ 500 ರೂಪಾಯಿ ತೆರಬೇಕಾಗಿ ಬಂತು. ಆದರೂ ಇಡ್ಲಿ ಸ್ವಲ್ಪ ಗಟ್ಟಿಯಾಗಿತ್ತು. ರೆಟ್ಟೆ ನೋವಿನ ಸಿಟ್ಟಲ್ಲಿದ್ದ ವಿಶ್ವ ತರಕಾರು ತೆಗೆದ.

"ಇಷ್ಟೆಲ್ಲ ನಾನು ರುಬ್ಬಿ ಕೊಟ್ರೂ ನಿಮ್ಮ ತವರು ಮನೆಯಲ್ಲಿ ನಿಮ್ಮ ತಾಯಿ ಮಾಡಿದ ಇಡ್ಲಿಯಷ್ಟು ಮೃದುವಾಗಿ ನೀನು ಮಾಡೇ ಇಲ್ಲ" ಎಂದು ದಬಾಯಿಸಿಬಿಟ್ಟ. ಅದಕ್ಕೆ ಹೆಂಡತಿಯ ಬಳಿ ಸಿದ್ಧ ಉತ್ತರವಿತ್ತು. "ನಮ್ಮ ತಂದೆ ಅಂದ್ರೆ ನಿಮ್ಮ ಮಾವ ಎಷ್ಟು ಚೆನ್ನಾಗಿ ಹಿಟ್ಟು ರುಬ್ಬಿ ಕೊಡ್ತಾರೆ ಗೊತ್ತಾ ? ನಮ್ಮ ತವರು ಮನೆಗೆ ಹೋಗಿ ನಿಮ್ಮ ಮಾವನ ಹತ್ರ ರುಬ್ಬೋ ಟ್ರೈನಿಂಗ್ ತೆಗೆದುಕೊಂಡು ಬನ್ನಿ" ಎಂದು ವಿಶಾಲು ತಿರುಗು ಬಾಣ ಬಿಟ್ಟಾಗ ವಿಶ್ವ ಸುಮ್ಮನಾದ.

ಇನ್ನು ಬಟ್ಟೆಬರೆ ವಿಷಯ. ಹಬ್ಬಕ್ಕೆ ಹೊಸ ಅರಿವೆ ಕೊಳ್ಳಲೇಬೇಕು. ಈ ಹಬ್ಬಕ್ಕೆ ಕೊಳ್ಳುವುದು ಬೇಡ ಎಂದು ನಾವು ಸುಮ್ಮನಿದ್ದರೂ ಟೀವಿ, ದಿನಪತ್ರಿಕೆಗಳ ಮುಖಾಂತರ ಅಂಗಡಿಯವರು ನಮ್ಮನ್ನ ಚುಚ್ಚಿ ಎಬ್ಬಿಸುತ್ತಾರೆ. ಡಿಸ್ಕೌಂಟುಗಳ ಆಸೆ ತೋರಿಸುತ್ತಾರೆ. 'ಒಂದು ಸೀರೆ ಕೊಂಡರೆ ಮತ್ತೊಂದು ಸೀರೆ ಫ್ರೀ' ಎನ್ನುತ್ತಾರೆ. ಹಬ್ಬದ ಸೀಸನ್‌ನಲ್ಲಿ ಕಡಿತದ ಶೇಕಡಾವಾರು ಹೆಚ್ಚಿಸುತ್ತಾ ಹೋಗುತ್ತಾರೆ. ಶೇಕಡ 20 ಕಡಿತ, ಶೇಕಡ 30 ಕಡಿತ, ಶೇಕಡ 50 ಕಡಿತ ಎಂದೆಲ್ಲ ಗಾಳ ಹಾಕಿದಾಗ ಎಂಥವರೂ ಮೀನಾಗಿ ಬಾಯಿ ತೆರೆದು ಸಿಕ್ಕಿ ಬೀಳಲೇಬೇಕು.

ಮಡದಿಯ ಜೊತೆ ಸೀರೆ ಸೆಲೆಕ್ಷನ್‌ಗೆ ಹೋಗುವುದೆಂದರೆ ವಿಶ್ವನಿಗೆ ತಲೆನೋವು. ವಿಧಿ ಇಲ್ಲದೆ ಹೋಗಿ ಒಂದು ಸ್ಟೂಲ್ ಮೇಲೆ ಕುಳಿತು ತನ್ನ ಪಾಡಿಗೆ ತಾನು ಮೊಬೈಲಲ್ಲಿ ಚಾಟ್ ಮಾಡುತ್ತಾ ಇರುತ್ತಾನೆ. ಇದು ವಿಶಾಲೂಗೆ ಎಷ್ಟೋ ಸಲ ಸಿಟ್ಟನ್ನು ತರಿಸಿದೆ. ತಾನು ಗಂಡನನ್ನು ಕರೆತರುವುದು ಸೀರೆ ಸೆಲೆಕ್ಷನ್‌ಗಾಗಿ, ಬಿಲ್ ಪೇಮೆಂಟ್‌ಗಾಗಿ ಅಲ್ಲ. ಆದರೆ ಗಂಡ ತನಗೂ ಸೀರೆಗೂ ಸಂಬಂಧ ಇಲ್ಲವೇನೋ ಎಂಬಂತೆ ಮೊಬೈಲ್ ನೋಡುತ್ತಾ ಕೂತರೆ ಅವಳಿಗೆ ಸಿಟ್ಟು ಬರುವುದು ಸಹಜ. ಜವುಳಿ ಅಂಗಡಿಯಲ್ಲಿ ಗಿಜಿಗುಡುವ ಜನ ಇದ್ದಾಗ ಎಲ್ಲರಿಗೆ ಕೇಳಿಸುವಂತೆ ವಿಶಾಲು ರೇಗಾಟ !

"ರೀ, ಆ ಮೊಬೈಲ್ ಎತ್ತಿ ಎಸೆದು ಇಲ್ಲಿ ಬಂದು ಸೀರೆ ಸೆಲೆಕ್ಟ್ ಮಾಡಿ"

"ನನಗೆ ಸೀರೆ ಸೆಲೆಕ್ಷನ್ ಬರೊಲ್ಲ ವಿಶಾಲೂ" ಎಂದ ವಿಶ್ವ.

"ಪಕ್ಕದ ಮನೆ ಪಂಕಜಾಗೆ ನೀವೇ ಸೀರೆ ಸೆಲೆಕ್ಟ್ ಮಾಡಿಕೊಡ್ತೀರಂತೆ ? ಸೆಲೆಕ್ಟ್ ಮಾಡ್ರೀ" ಎಂದಳು. ಸುತ್ತ ಮುತ್ತ ಇದ್ದ ಗಂಡಸರೆಲ್ಲ ಗೊಳ್ ಎಂದು ನಕ್ಕರು. ಆದರೆ ಹೆಂಗಸರು "ಪಾಪ, ಇವರ ಮನೇಲೂ ಇದೇ ಪರಿಸ್ಥಿತೀನಾ ? ನಮ್ಮ ಮನೇನೇ ವಾಸಿ" ಎಂಬಂತೆ ವಿಶ್ವನ ಮುಖ ನೋಡಿದರು.

ಯಾವುದೇ ಆಯ್ಕೆ ವಿಷಯದಲ್ಲಿ ಮಡದಿಗೆ ನಾವು ಯಾವುದೇ ಸೂಚನೆ ಕೊಡುವಂತಿಲ್ಲ. ಕೊಟ್ಟರೆ ಬಹಳ ಕಷ್ಟ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಮದುವೆ ಆದ ಸಂದರ್ಭ ಮರೆಯಬಾರದು. ಗಂಡನನ್ನು ಸೆಲೆಕ್ಟ್ ಮಾಡಿದ್ದು ಹೆಂಡತಿ ತಾನೇ ? ಅವಳ ಆಯ್ಕೆ ಸೂಪರ್ ಆಗಿರುತ್ತದೆ. ಆದ್ದರಿಂದ ಮಡದಿಯನ್ನು ಟೀಂ ಲೀಡರ್ ಮಾಡಿ 'ಯಸ್ ಮೇಡಂ' ಎನ್ನಬೇಕು. ಆಗ ಆ ಮನೆಯಲ್ಲಿ ತೊಂದರೆ ತಕರಾರು ಇರುವುದಿಲ್ಲ. ಮನೆ ಶಾಂತಿನಿಕೇತನವಾಗುತ್ತದೆ !

# ಮತ್ತೆ ವರ್ಕ್ ಶಾಪಂತೆ!

ಕವಿತಾ ಹೆಗಡೆ ಅಭಯಂ

ವಾಹ್! ಈ ಟೀಚರ್ ಗಳ ವೃತ್ತಿಪರತೆಯನ್ನು ಹೆಚ್ಚಿಸುವ ವರ್ಕ್ ಶಾಪ್‌ಗಳು ಎಂಥಾ ಅದ್ಭುತ ಮಾರಾಯ್ರೆ! ಇಂಥಾ ಮಜಾ ಮಾತ್ರ ಎಲ್ಲೂ ಇರಲ್ಲ ಗೊತ್ತಾ? ಎಂಥದ್ದೋ ಫಾರಿನ್ ಸಕ್ಸಸ್ ಸೂತ್ರ ಹಿಡಿದುಕೊಂಡು ಇಂಡಿಯನ್ ಟೀಚರ್ ಕುತ್ತಿಗೆಗೆ ಬಿಗಿಯೋ ಕೆಲಸ ಸುಮ್ನೇನಾ? ಪ್ರೊಫೆಷನಲ್ ಡೆವಲಪ್ಮೆಂಟ್ ಹೆಸರಲ್ಲಿ ಟೀಚರುಗಳು ಒಪ್ಪಿಕೊಳ್ಳೋ ತ್ರಾಸಿಗೆ ಲೆಕ್ಕವೇ ಇಲ್ಲ.

ಶನಿವಾರ ವರ್ಕ್ ಶಾಪ್ ಎನ್ನುವ ಮೆಸೇಜ್ ಬರೋದೂ ಒಂದೇ, ಬಾಂಬು ಬೀಳೋದೂ ಒಂದೇ. "ಹಾಫ್ ಡೇ ಅಲ್ಲಾ, ಶಾಪಿಂಗ್ ಹೋಗೋಣು, ತವರು ಮನೀಗ್ ಹೊಂಟೀನಿ, ಫಂಕ್ಷನ್ ಐತಿ, ಗೆಸ್ಟ್ ಬರ್ತಾರ, ಇಲ್ಲಾ ಚಲೋ ನಿದ್ದಿ ಮಾಡ್ಬೇಕು" ಎನ್ನುತ್ತ ಒಬ್ಬೊಬ್ಬರು ಒಂದೊಂದು ಥರ ಒಂದು ವಾರ ಕಂಡ ಎಲ್ಲಾ ಕನಸನ್ನು ಸುತ್ತಿ ಅಟ್ಟಕ್ಕೆ ಎಸೆದು, ಬಲಿ ಪೀಠಕ್ಕೆ ಏರಲು ತಯಾರಾಗಿ ಹೊರಟ ಲುಕ್ಕಲ್ಲಿ ಬಡಜೀವಗಳು ವರ್ಕ್ ಶಾಪಿಗೆ ಹೊರಡುತ್ತವೆ.

ಕೊರೊನಾ ಕಾಲದಲ್ಲಿ ಎಲ್ಲಾ ಆನ್ಲೈನ್ ವೆಬಿನಾರ್ ಇದ್ದಾಗ ತಿಂತಾ, ಕುಡೀತಾ, ಮಲಗಿಕೊಂಡು ಎಲ್ಲೆಲ್ಲೋ ಹೇಗೇಗೋ ನೈಟಿ ಬರ್ಮುಡಾದಲ್ಲಿ ಲಾಗಿನ್ ಆಗೋದು ತುಂಬಾ ಸಾಮಾನ್ಯವಾಗಿಬಿಟ್ಟಿತ್ತು. ಆ ರಿಸೋರ್ಸ್ ಪರ್ಸನ್‌ಗಳೋ, ಇಂಥಾ ಕಿಲಾಡಿಗಳನ್ನು ಹಿಡಿಯೋಕೆ ಅಂತಲೇ ಹುಟ್ಟಿದ ಹಾಗೆ ಒಬ್ಬರನ್ನು ಹೆಸರಿಸಿ ನೀವು ಮುಖ ತೋರಿಸಿ ಉತ್ತರ ಹೇಳಿ ಅಂದ ತಕ್ಷಣವೇ ನೆಟ್ವರ್ಕ್ ಪ್ರಾಬ್ಲಮ್ ಅಂತ ಎಸ್ಕೇಪ್ ಆಗೋದನ್ನು ಮಕ್ಕಳೇ ಶಿಕ್ಷಕರಿಗೆ ಕಲಿಸಿದ್ದು ಗೊತ್ತಾ?

ಈಗೀಗ ಅಲ್ಲಲ್ಲಿ ಆನ್ಲೈನ್ ವರ್ಕ್ ಶಾಪ್ ಇದ್ದರೂ ಅವು ಅಷ್ಟು ಎಫೆಕ್ಟಿವ್ ಅನಿಸೋಲ್ಲ. ಯಾರು ಎಷ್ಟೇ ಹಿಡಿಯೋಕೆ ಪ್ರಯತ್ನ ಮಾಡಿದರೂ ಯಾರೂ ಅಷ್ಟು ಕೇರ್ ಮಾಡಲ್ಲ. ಹಾಗಾಗಿ ಮತ್ತೆ ಆಫ್ ಲೈನ್ ವರ್ಕ್ ಶಾಪ್ ಬಂದು ಬಾಗಿಲ ಮುಂದಿನ ಭೂತವಾಗಿಬಿಟ್ಟಿದೆ.

ಇನ್ನು ಈ ವರ್ಕ್ ಶಾಪ್ ಯಾವುದೋ ಬೇರೆ ಊರಲ್ಲಿ ಅಂದರಂತೂ ಸತ್ತ ಹಾಗೆ. ಬೆಳಬೆಳಿಗ್ಗೆ ಎಂಟು–ಎಂಟೂವರೆಗೆ ರಿಪೋರ್ಟ್ ಮಾಡಿಕೊಳ್ಳಿ ಅಂತಾರೆ, ಅಲ್ರೀ, ಒಂದೋ ಎರಡೋ ತಾಸು ಜರ್ನಿ ಇರೋ ಊರಿಗೆ ನಿದ್ದೆಗೆಟ್ಟ ಮುಖದ ಕೂದಲು ಕೆದರಿದ ಟೀಚರುಗಳನ್ನು ಕರೆಸಿಬಿಡ್ತಾರೆ. ಪ್ರಯಾಣದ ಆಯಾಸದಿಂದ ಸುಧಾರಿಸಿಕೊಳ್ಳೋಕೆ ಬಿಡದೆ ಗಬ್ ಗಬಕ್ ಅಂತ ಬ್ರೇಕ್ ಫಾಸ್ಟ್ ನುಂಗಿಸಿ ವರ್ಕ್ ಶಾಪ್ ಹಾಲಿಗೆ ದೂಡಿ ಬಿಟ್ಟರೆ ಎಲ್ಲಿ ಬರಬೇಕು ಎಫೆಕ್ಟಿವ್ ಲರ್ನಿಂಗ್?

ಇನ್ನೇನು ಎಸಿ ಚಳಿಗೋ ಫ್ಯಾನ್ ತಗುಲದ ಮೂಲೆಯ ಸೆಕೆಗೋ ಅಡ್ಜಸ್ಟ್ ಆಗುವಷ್ಟರಲ್ಲಿ ವರ್ಕ್ ಶಾಪ್ ಉದ್ಘಾಟನೆ ಶುರು!

ಎಲ್ಲಕ್ಕಿಂತ ಸಂಕಟ ಅಂದರೆ ತಮ್ಮದೇ ಸ್ಕೂಲಿನ ಫ್ರೆಂಡ್ಸ್ ಜೊತೆ ಕೂತವರನ್ನು ಒಂದು ಆಕ್ಟಿವಿಟಿ ಕೊಟ್ಟ ಶಾಸ್ತ್ರ ಮಾಡಿ ಹೊಸಬರ ಜೊತೆ ಗ್ರೂಪ್ ಮಾಡೋದು. ಗುರುತು ಪರಿಚಯ ಇಲ್ಲದ ಹೊಸ ಮುಖಗಳ ಜೊತೆ ಇಡೀ ದಿನ ಕೂರೋದು, ಆಕ್ಟಿವ್ ಆಗಿ ಪಾರ್ಟಿಸಿಪೇಟ್ ಮಾಡೋದು ಅಂದರೆ ಒಲ್ಲದ ಗಂಡನ ಜೊತೆ ಸಂಸಾರ ಮಾಡಿದ ಹಾಗೇ ಅಲ್ವಾ?

ಇನ್ನು ಐಸ್ ಬ್ರೇಕರ್ ಆಕ್ಟಿವಿಟಿ ಅಂತ ದೊಡ್ಡ ಹೆಸರು ಕೊಟ್ಟ ಫನ್ನಿ ಆಕ್ಟಿವಿಟಿ ಮಾಡಿಸುವುದು ಒಮ್ಮೊಮ್ಮೆ ಮಜಾ, ಇಲ್ಲ ಸಜಾ. ದಿನವಿಡೀ ಒಂದಲ್ಲ ಒಂದು ಆಕ್ಟಿವಿಟಿ ಮಾಡಿಸುತ್ತ ಅದಕ್ಕೆ ಶಿಕ್ಷಕರು ಏನು ಕಳಪೆ ಉತ್ತರ ಕೊಟ್ಟರೂ "ವೇರಿ ನೈಸ್..ಎಕ್ಸಲೆಂಟ್..ಔಟ್ ಸ್ಟ್ಯಾಂಡಿಂಗ್" ಎನ್ನುತ್ತ ಹುರಿದುಂಬಿಸಿ ಒಳ್ಳೇ ಟ್ರೈನರ್ ಎನಿಸಿಕೊಳ್ಳುವ ಹಂಬಲದವರು ಬೇರೆ. ಫೀಡ್ ಬ್ಯಾಕ್ ನಲ್ಲಿ ಎಲ್ಲಾ ಪಾಸಿಟಿವ್ ಇರ್ಲಿ ಎಂದು ಸಿಟ್ಟು ಬಂದರೂ, ಸುಸ್ತಾದರೂ, ಎಂಥಾ ಮಳ್ಳು ಪ್ರಶ್ನೆ ಎನಿಸಿದರೂ, ಮುಸುಡಿಗೆ ಒಂದು ಇಕ್ಕಬೇಕು ಅನಿಸಿದರೂ, ಥೂ ಎಂದು ಉಗಿಯುವಷ್ಟು ಕೋಪ ಬಂದರೂ ಬಿಳೀ ಬಿನಾಕಾ ಸ್ಮೈಲಿನಲ್ಲೇ ಇಡೀ ದಿನ ಕಳೆಯುವ ಆಷಾಢಭೂತಿತನ ತೋರುವ ಸಂಪನ್ಮೂಲ ವ್ಯಕ್ತಿಗಳನ್ನು ನೋಡಿದರೆ ಅಯ್ಯೋ ಪಾಪ ಅನಿಸಿಬಿಡುತ್ತೆ. ಒಮ್ಮೊಮ್ಮೆ ತಾವು ಮಾಡಿಸೋ ಆಕ್ಟಿವಿಟಿ ಸೂಕ್ತವಲ್ಲ ಎಂಬುದೇ ತಿಳಿಯದ ಮುಗ್ಧರಾದ ಅಥವಾ ತಿಳಿದೂ ಮಾಡುವ ಅನಿವಾರ್ಯತೆಯಿಂದ ಹುಟ್ಟಿದ ಹುಸಿ ನಗು ಬೀರುವ ಸಂಪನ್ಮೂಲ ವ್ಯಕ್ತಿಗಳಿಗೆ ಶಿಕ್ಷಣ ರತ್ನ ಅವಾರ್ಡ್ ಮೊದಲು ಕೊಡ್ಬೇಕು.

ಅಂಥದ್ದೊಂದು ಗೋಳು ನೋಡಿದರೆ ಅನುಭವ ಇರೋ ಶಿಕ್ಷಕರಿಗೆ ನಗು ತಡೆಯೋಕಾಗಲ್ಲ.

ಟೀಮ್ ಬಿಲ್ಡಿಂಗ್, ಕೊಲೇಬೋರೇಷನ್, ಹ್ಯಾಪಿ ಕ್ಲಾಸ್ ರೂಮ್ ಅಂತೆಲ್ಲ ದೊಡ್ಡ ದೊಡ್ಡ ಶಬ್ದ ಕೇಳಿದಾಗ ಟೀಚರುಗಳಿಗೆ ವಾಸ್ತವದಲ್ಲಿ ಏನು ಸಾಧ್ಯ ಎಂಬ ಕಲ್ಪನೆ ಇರೋದರಿಂದ ಹುಸಿ ನಗು ನಕ್ಕು ಹಾ.. ಹಾ..ಹಾ..ಎಂದು ತಲೆದೂಗಿಬಿಡುತ್ತಾರೆ. ಎಂದೂ ಕ್ಲಾಸಿಗೆ ಹೋಗದ ಸಾಫ್ಟ್ ಸ್ಕಿಲ್ ಟ್ರೈನರು ಇನ್ನೋವೆಟಿವ್ ಟೀಚಿಂಗ್ ಬಗ್ಗೆ ಮಾತನಾಡುವಾಗ ಹಾಗೆ ಮಾಡಿದರೆ ಕ್ಲಾಸಲ್ಲಿ ಆಗೋ ಗದ್ದಲ ನೋಡಿ ರೌಂಡ್ಸ್ ಮುಗಿಸಿ ಹೋಗೋ ಪ್ರಿನ್ಸಿಪಾಲರು ಓಡಿ ಬಂದು ಕ್ಲಾಸ್ ಕಂಟ್ರೋಲ್ ಮಾಡಕ್ಕಾಗಲ್ಲ ಎಂದು ಉಗಿದ ಹಾಗನ್ನಿಸಿ ಅಲ್ಲೇ ಭರವಸೆ ಹೊರಟುಹೋಗುತ್ತೆ.

ಎಲ್ಲಕ್ಕಿಂತ ಮಜಾ ಅಂದರೆ ತಾವು ತಮ್ಮ ಸ್ಕೂಲಲ್ಲಿ ಮಾಡೋ ಬೆಸ್ಟ್ ಪ್ರಾಕ್ಟೀಸ್ ಶೇರ್ ಮಾಡಿ ಅಂದಾಗ ಕೆಲವು ಟೀಚರುಗಳು ಮಾಡೋ ಅವಾಂತರ ಕೇಳಿ ನಕ್ಕು ಹೊಟ್ಟೆ ಹುಣ್ಣಾಗುತ್ತೆ. ತಾವು ಎಷ್ಟು ಫೂಲಿಶ್ ಎಂದು ಕೆಲವರಿಗೆ ಅಲ್ಲೇ ತಿಳಿಯುತ್ತೆ.

ಕೊಟ್ಟ ಆಕ್ಟಿವಿಟಿಯೇ ಒಂದು, ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡು ಇನ್ನೊಂದೇ ಮಾಡುವವರು ಇಡೀ ವರ್ಕ್ ಶಾಪಿನ ನಗೆ ಗುಳಿಗೆಗಳು.

ಸಣ್ಣ ಮಕ್ಕಳ ಹಾಗೆ ಚಾರ್ಟು, ಕಲರ್ಸ್ ಹರಡಿಕೊಂಡು ಚಿತ್ರ ವಿಚಿತ್ರ ಸ್ವಭಾವದ ಗ್ರೂಪ್ ಮೆಂಬರ್ಸ್ ಜೊತೆ ಏಗೋ ಕರ್ಮಕ್ಕೆ ಬಂದಿದ್ದೂ ಮರೆತುಹೋಗೋದಿದೆ.

ಲಾಭ ಏನಪ್ಪಾ ಅಂದರೆ ಬಿಟ್ಟಿ ಊಟ ತಿಂಡಿ ಟೀ ಕಾಫಿ, ಎಂದೂ ಕಣ್ಣೆತ್ತಿ ನೋಡದ ಒಂದಿಷ್ಟು ರಿಸೋರ್ಸ್ ಕಿಟ್ ಅಷ್ಟೇ.

ಇಡೀ ದಿನ ಕಣ್ಣು ಮುಚ್ಚಿ ಬರುತ್ತಿದ್ದರೂ ಭಾರೀ ಚುರುಕು ಎನ್ನುವಹಾಗೆ ನಟಿಸುವ, ಕಣ್ಣು ಬಿಟ್ಟುಕೊಂಡೇ ನಿದ್ರಿಸುವ ಟೀಚರುಗಳ ತಾಕತ್ತಿಗೆ ಯಾರೂ ಸಾಟಿಯಿಲ್ಲ ಅಲ್ವಾ?

ಇಲ್ಲಿ ಇಡೀ ದಿನ ವಿಚಿತ್ರ ಕಾಟ ಅನುಭವಿಸುವಾಗ ದಿನಾ ತಾವು ಮಕ್ಕಳನ್ನು ಹೀಗೇ ಆಟ ಆಡಿಸೋದು ನೆನಪಾಗಿ 'ಅಯ್ಯೋ ನನ ಬಂಗಾರದಂಥ ಮಕ್ಕಳೇ...ವಿನಾಕಾರಣ ನಿಮ್ಮನ್ನು ಕಾಡ್ತಾ ಇದ್ನಾ' ಎಂಬ ಜ್ಞಾನೋದಯದ ಸ್ಪಾಟ್ ಆಗುತ್ತೆ ಆ ವರ್ಕ್ ಶಾಪ್ ಹಾಲ್. ಆದರೂ ವಾಪಸ್ಸು ಬಂದಮೇಲೆ ಯಥಾ ಬುದ್ಧಿ....

ಇಷ್ಟೆಲ್ಲ ಪ್ರಹಸನ ಮಾಡಿದ ಮೇಲೂ ಫೀಡ್ ಬ್ಯಾಕ್ ಸೆಷನ್ ಬಂದಾಗ 'ಇದೊಂದು ಅದ್ಭುತ ವರ್ಕ್ ಶಾಪ್ ಆಗಿತ್ತು, ನಾನು ಎಷ್ಟೊಂದು ಕಲಿತೆ, ಖಂಡಿತ ಸ್ಕೂಲಿಗೆ ಹೋಗಿ ಇಂಪ್ಲಿಮೆಂಟ್ ಮಾಡ್ತೀನಿ' ಅಂದ ಮರುಕ್ಷಣವೇ ಹೈ ಟೀ ಸೇವಿಸಿ ಎಲ್ಲ ಮರೆತು ತಮ್ಮ ಹಳೇ ಬುದ್ಧಿಯನ್ನೇ ಮುಂದುವರಿಸುವ ಟೀಚರುಗಳು ದೇಶದ ನಿಜವಾದ ಪಿಲ್ಲರುಗಳು.

ಹೊಸದಾಗಿ ನೇಮಕವಾಗಿರೋ ಟೀಚರುಗಳು ಉತ್ಸಾಹಕ್ಕೋ ಭಯಕ್ಕೋ ಸ್ವಲ್ಪವಾದರೂ ಕಲಿತರೆ ಸೀನಿಯರ್ ಟೀಚರುಗಳಿಗೆ ಎಲ್ಲ ಗೊತ್ತಿರೋ ಕಾರಣ ಮನಸ್ಸಲ್ಲೇ ನಗುತ್ತ ಕುಳಿತುಕೊಳ್ಳುತ್ತಾರೆ.

ವೃತ್ತಿಯಲ್ಲಿ ನಾವೀನ್ಯ, ಪ್ರಾವೀಣ್ಯ ಎಲ್ಲಾ ಬೇಕು ನಿಜ, ಆದರೆ ಪ್ರಾಕ್ಟಿಕಲ್ ಆಗಿ ಸಾಧ್ಯವಾಗೋ ರೀತಿ ವರ್ಕ್ ಶಾಪ್ ಇದ್ದರೆ ಅದು ಖಂಡಿತ ಒಳ್ಳೇದು. ಆದರೆ ಹೊಟ್ಟೆ ಬಿರಿ ಊಟ ಮಾಡಿದ ಮೇಲೆ ನಿದ್ದೆ ಮಾಡೋಕೆ ಬಿಡದೆ ಇರೋ ವರ್ಕ್ ಶಾಪ್ ನ್ಯಾಯವಾ ನೀವೇ ಹೇಳಿ.

**ಮೈಸೂರು ದಸರಾ ಉದ್ಘಾಟನೆಗೆ ಬರಲಿರುವ ಭಾರತದ ಮೈಕೆಲ್ ಜಾಕ್ಸನ್ 'ಪ್ರಭುದೇವ'.**

ಸುದ್ದಿ

**ನಮ್ ಆನೆಗೂ ಪ್ರಭುದೇವ ಬರ್ತಿರೋದು ಗೊತ್ತಾಗಿರ್ಬೇಕು...!!**



# ಕೋಡಂಗಿ – ಗೋವಿಂದ – ಈರಭದ್ರ!

ಜಿ. ವಿ. ಅರುಣ

ಆತ ಎಲ್ಲರಿಗೂ 'ನಕಲಿ ಅರ್ಥಶಾಸ್ತ್ರಜ್ಞ' ಎಂದೇ ಪರಿಚಿತ. ಆತನ ಈ ಇಷ್ಟುದ್ದದ ಹೆಸರನ್ನು ಪದೇಪದೇ ಬರೆಯಲು ನನಗೆ ಕಷ್ಟ. ಅದನ್ನು ಓದುವ ನಿಮಗೂ ಹೆಚ್ಚು ಕಷ್ಟಕೊಡುವುದು ತರವಲ್ಲ. ಹಾಗಾಗಿ ಇನ್ನು ಮುಂದೆ ಆತನನ್ನು 'ತೋರ್ಕೆ' ಎಂದು ಕರೆಯೋಣ. ನಕಲಿ (ಸ್ಯೂಡೊ) ಎಂದರೆ 'ತೋರಿಕೆ'ಯ ವ್ಯಕ್ತಿ ಎಂದೂ ಆಗುತ್ತದೆ. ತೋರ್ಕೆ ಎನ್ನುವುದು ಎಲ್ಲರಿಗೂ ಗೊತ್ತಿರುವ ತೇನ್ಸಿಂಗ್ ನೋರ್ಗೆ ಎನ್ನುವ ಪ್ರಸಿದ್ಧಹೆಸರಿಗೆ ಪ್ರಾಸಬದ್ಧವಾಗಿ ಹೊಂದುತ್ತದೆ. ಈ ನಾಮಕರಣದಿಂದ ತೋರ್ಕೆಗೂ ಸಂತೋಷವಾಗುತ್ತದೆ.

ಕನ್ನಡಪ್ರೇಮಿ ಶ್ರೀ ತೋರ್ಕೆ ಒಂದು ಸಣ್ಣಗುಂಪಿಗೆ, 'ತಗೋ ಕನ್ನಡ' ಅಂಕಣದಲ್ಲಿ ಬರುವ, ಅವನಿಗೆ ಇಷ್ಟವಾದ ಕೆಲವು ಪದಗಳನ್ನು ಮಾತ್ರ ಹಂಚಿಕೊಳ್ಳುತ್ತಾನೆ. ಅದರಲ್ಲಿ 'ತನಗೆ ಏಕೆ ಇಷ್ಟವಾಯಿತು' ಎಂಬ ಅನಿಸಿಕೆಯನ್ನೂ ಸೇರಿಸಿರುತ್ತಾನೆ. ಅಂದು ಬಂದ 'ಗೋವಿಂದಗತಿ' ಪದ ಅವನಿಗೆ ಬಹಳ ಇಷ್ಟವಾಗಿತ್ತು. ಗೋವಿಂದ ಪದಕ್ಕಿರುವ ಆಲಂಕಾರಿಕ ಅರ್ಥ– "ಅವನಿಗೆ ದುಡ್ಡು ಕೊಟ್ಟರೆ ಅಷ್ಟೇ! ಗೋವಿಂದ!'" ಎನ್ನುವುದಕ್ಕೆ ಸಖತ್ತಾಗಿ ತನ್ನ ವಿಶ್ಲೇಷಣೆಯನ್ನು ಸೇರಿಸಿ ಎಲ್ಲರಿಗೂ ಕಳುಹಿಸಿದ್ದ. ಅಂದು ವಾಯುವಿಹಾರವಾದ ಮೇಲೆ ತೋರ್ಕೆಯ ಗೆಳೆಯರು ಕೂರುವ ಕಲ್ಲಿನ ದುಂಡುಮೇಜಿನ ಬಳಿ ಸೇರಿದ್ದರು. ಅಲ್ಲಿ, ಆ ಅಂಕಣವನ್ನು ನಿತ್ಯವೂ ಓದುವ ಹಲವು ಮಿತ್ರರು ಎಂದಿನಂತೆ ಅವರಿಗೆ ತೋರಿದಂತೆ ಅದರ ಬಗ್ಗೆ ವಿಶ್ಲೇಷಣೆಯಲ್ಲಿ ತೊಡಗಿದರು. ಅದರ ಜೊತೆಗೆ ಅವರೆಲ್ಲರ ಭೇಟಿಯ ಅತಿಮುಖ್ಯವಾದ ಅಂಶವೆಂದರೆ ಮನಸ್ಸನ್ನು ಹಗುರ ಮಾಡಿಕೊಳ್ಳುವ ಹಾಸ್ಯ, ಪರಸ್ಪರ ಕಾಲೆಳೆಯುವಿಕೆ ಇದ್ದೇಇರುತ್ತದೆ. ಅವರ ಅನುಭವದಲ್ಲಿ, ಹೀಗೆ ಕಾಲೆಳೆಸಿಕೊಂಡರೆ ಗಟ್ಟಿಯಾಗಿ ನಿಲ್ಲಲು ಶಕ್ತಿ–ಯುಕ್ತಿ ಎರಡೂ ಸಿದ್ಧಿಸುವುದು, ಬುದ್ಧಿ ಚುರುಕಾಗುವುದು.

ಅಂದು ವಾಯುವಿಹಾರಕ್ಕೆ ಸೇರಿದ್ದ ಮಿತ್ರರಿಗೆಲ್ಲ 'ಗೋವಿಂದಗತಿ' ಬಹಳ ಇಷ್ಟವಾಗಿತ್ತು. ಹಾಗಾಗಿ ಅದರ ಬಗ್ಗೆ ವಿಶ್ಲೇಷಣೆ ಸ್ವಲ್ಪ ವಿಶೇಷವಾಗಿಯೇ ನಡೆಯಿತು. ಅವರೆಲ್ಲರೂ ಯಾವಯಾವ ಸಂದರ್ಭದಲ್ಲಿ ತಾವು 'ಗೋವಿಂದ ನಾಮಸ್ಮರಣೆ ಮಾಡಿದ್ದರು' ಎಂದು ರಸವತ್ತಾಗಿ ಹೇಳಿದರು. ಆ ಎಲ್ಲ ಕಥೆಗಳು 'ಜೀವನದಲ್ಲಿ ಮೋಸಹೋಗದಂತೆ ಹೇಗೆ ಎಚ್ಚರಿಕೆ ವಹಿಸಬೇಕು' ಎನ್ನುವುದಕ್ಕೆ ಮಾರ್ಗದರ್ಶಿ ಸೂತ್ರಗಳಾಗಿದ್ದವು. ಹಾಗೆ ನೋಡಿದರೆ "ಜನರನ್ನು ಮರುಳು ಮಾಡುವುದು ಹೇಗೆ?" ಎಂಬ ತರಗತಿಗೆ ಇವು ಕೇಸ್ ಸ್ಟಡಿಗಳಾಗಬಹುದಾದ ಯೋಗ್ಯತೆಯನ್ನು ಹೊಂದಿದ್ದವು. ಈಗಿನವರಿಗೆ "ಮರುಳು ಮಾಡು" ಎಂದರೆ ಏನು ಎಂದು ತಿಳಿಯದೆ ಇರಬಹುದು. ಅವರ ಭಾಷೆಯಲ್ಲಿ, "ಬಕರ ಮಾಡುವುದು ಹೇಗೆ?" ಎಂದರೆ ಸುಲಭವಾಗಿ ಅರ್ಥವಾಗುತ್ತದೆ.

"ಗೋವಿಂದೇತಿ ಸದಾ ಧ್ಯಾನಂ" ಎನ್ನುತ್ತಲೇ ವಾಯುವಿಹಾರ ಮಾಡುತ್ತಿದ್ದ ಹಿರಿಯರೊಬ್ಬರು "ಅಪ್ಪಾ, ನಮ್ಮ ಹಿರಿಯರು 'ಗೋವಿಂದ, ನಿನ್ನ ಪಾದವೇ ಗತಿ' ಎಂದು ವೆಂಕಟರಮಣನಿಗೆ ಅಡ್ಡಬೀಳುವುದನ್ನು ಹೇಳಿಕೊಟ್ಟಿದ್ದರು. ಇಲ್ಲಿ ನೋಡಿದರೆ 'ಗೋವಿಂದಗತಿಗೆ' ಬೇರೆಯ ಗತಿಯನ್ನೇ ಕಾಣಿಸಿಬಿಟ್ಟಿದಾರಲ್ಲಪ್ಪಾ" ಎಂದು ಪೇಚಾಡಿಕೊಂಡರು.

ಅವರಿಗೆ "ಸರ್, ಆ ಅರ್ಥದಲ್ಲಿ ಹಿಂದೆ ಲೇಖಕರು ಬರವಣಿಗೆಯಲ್ಲಿ ಬಳಸಿದ್ದಾರೆ. ಅದನ್ನು ಅಂಕಣದಲ್ಲಿ ಆಸಕ್ತರ ಗಮನಕ್ಕೆ ತಂದಿದ್ದಾರೆ" ಎಂದು ಸಮಜಾಯಿಸಿ ಕೊಟ್ಟ ತೋರ್ಕೆ.

ಅವರು "ಬರೆದವರದ್ದೇನು ತಪ್ಪಿಲ್ಲಪ್ಪ. ಎಲ್ಲಾ ಅವನು ಆಡಿಸಿದಂತೆ ಆಡಬೇಕು! ಅವರು ಹೇಳಿದ್ದು ಆಸಕ್ತಜನರಿಗೆ ಇಷ್ಟವಾಗುತ್ತದೆ. ಆದರೆ ನನ್ನಂಥ ಆಸ್ತಿಕಜನರು ಏನು ಮಾಡಬೇಕು?" ಎಂದರು. ಸ್ನೇಹಿತರಲ್ಲ ಸೇರಿ ಅವರಿಗೆ ಸಮಾಧಾನ ಮಾಡುವಷ್ಟರಲ್ಲಿ ಸಾಕುಬೇಕಾಯಿತು. ಕೊನೆಗೆ 'ಶನಿವಾರ ಸಾಮೂಹಿಕವಾಗಿ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಹೋಗುವುದು' ಎಂದು ನಿರ್ಧಾರವಾದಾಗ ಅವರಿಗೆ ಸಮಾಧಾನವಾಯಿತು. ಹೀಗೆ ಬುದ್ಧಿಯನ್ನೆಲ್ಲ ಖರ್ಚುಮಾಡಿ ಮನೆಗೆ ಹಿಂದಿರುಗುತ್ತಿದ್ದಂತೆ, ತೋರ್ಕೆಯ ಹೆಂಡತಿ "ಯಾಕ್ರೀ ಇವತ್ತು ಇಷ್ಟು ಹೊತ್ತು? ಭಾಮ ಐದು ಸಲಿ ಫೋನ್ ಮಾಡಿದ್ಲು. ಅರ್ಜೆಂಟಾಗಿ ನಿಮ್ಮ ಹತ್ತಿರ ಮಾತಾಡಬೇಕಂತೆ" ಎಂದಳು.

"ಯಾವ ಭಾಮಾ? ಅದು ಬೆಳಬೆಳಗ್ಗೆನೇ ಕರೆಮಾಡೋಕೆ ಅವಳಿಗೆ ನನ್ನ ಮೊಬೈಲ್ ನಂಬರ್ ಯಾರು ಕೊಟ್ರು?" ಎಂದು ತೋರ್ಕೆ ಅನುಮಾನ ಪರಿಹರಿಸಿಕೊಳ್ಳಲು ಕೇಳಿದ.

"ಅವಳಿಗೆ ಯಾರೋ ಏಕೆ ಕೊಡುತ್ತಾರೆ! ಅವಳ ಗಂಡ ಶಾಮನ ಹತ್ತಿರ ನಿಮ್ಮ ನಂಬರ್ ಇಲ್ವಾ? ಯಾಕೋ ಸ್ವಲ್ಪ ಗರಂ ಆಗಿದ್ಲು. 'ನಿಮ್ ಯಜಮಾನ್ರು ಹೀಗೆ ಮಾಡಬಹುದೇ?' ಎಂದು ಬೇರೆ ಕೇಳಿದಳು. ಅದೇನು ಅಂತ ವಿಚಾರಿಸಿದೆ, ನೇರವಾಗಿ ನಿಮ್ಮ ಬಳಿಯೆ ಹೇಳ್ತೀನಿ ಅಂದ್ಲು".

"ನಾನೇನು ಮಾಡಿದ್ದೆ?" ತೋರ್ಕೆಯ ಆತಂಕದ ಪ್ರಶ್ನೆ. "ನಾನು ಅದನ್ನೇ ಕೇಳ್ತಾ ಇರೋದು; ಅವಳು ಹೀಗೆ ಹೇಳಲು ಏನೋ ಘನಂದಾರಿ ಕೆಲಸ ಮಾಡಿರಬೇಕು".

ಇದಕ್ಕೆ ತೋರ್ಕೆಯ ಬಳಿ ಉತ್ತರವಿರಲಿಲ್ಲ. "ಅಲ್ಲ ಕಣೇ ಶಾಮನ್ನ ನೋಡಿ ಮೂರುತಿಂಗಳ ಮೇಲಾಯಿತು; ಮಾತನಾಡಿ ಹತ್ತಿರ ಒಂದು ತಿಂಗಳಾಯಿತು. ಇನ್ನು ಆ ಭಾಮನ್ನ ನೋಡಿದ್ದು, ಹೊಸಛತ್ರದಲ್ಲಿ ಮದುವೆಗೆ ಹೋಗಿದ್ವಲ್ಲ, ಆಗ. ಅವಳಿಗೆ ನಾನೇನು ಮಾಡಿದೆ? ನೆನಪಿಗೆ ಬರ್ತಾ ಇಲ್ವಲ್ಲೇ" ಎಂದು ಆತಂಕದಿಂದ ಹೇಳಿದ.

"ನೀವೇ ಫೋನ್ ಮಾಡಿನೋಡಿ. ನಿಮ್ಮನ್ನ ಉಪ್ಪಿನಕಾಯಿ ಹಾಕ್ತಾಳೋ ಬಿಸಿಬಾಂಡ್ಲೆಯಲ್ಲಿ ಹುರಿತಳೋ ಗೊತ್ತಾಗುತ್ತೆ." ಆ ಧ್ವನಿಯಲ್ಲಿ ಅವಳ ಕೋಪ ಹೆಚ್ಚಾಗುತ್ತಿದ್ದ ಸೂಚನೆ ಧಾರಾಳವಾಗಿತ್ತು. "ಅಲ್ಲಾ ಕಣೆ, ನೀನು ಈಗಲೇ ಹೀಗೆ ಹೆದರಿಸಿದರೇ ಹೇಗೆ?" ಎನ್ನುತ್ತಾ ಶ್ಯಾಮನ ಮೊಬೈಲ್ ಸಂಖ್ಯೆ ಒತ್ತಿದ. ಅದು 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದ' ಎಂದು ಹಾಡಿತು.

ಆ ಕಡೆಯಿಂದ ಭಾಮಾಳ ಧ್ವನಿ, "ನೀವು ಹೀಗೆ ಮಾಡಬಹುದಾ? ನಮ್ಮನೆಯವರು ಎಷ್ಟು ಬೇಜಾರು ಮಾಡಿಕೊಂಡು ಕೂತಿದ್ದಾರೆ ಗೊತ್ತಾ? ಅದಕ್ಕೆ ನಾನೇ ಮಾತಾಡ್ತಿದಿನಿ" ಎಂದಳು. "ನಾನು ಏನು ಮಾಡಿದೆ ಎಂದು ಹೀಗೆ ಬೇಜಾರು ಮಾಡ್ಕೊಂಡಿದ್ದೀರಿ?" ಎಂದು ತೋರ್ಕೆ ಕೇಳಿದ.

---

ಗೋವಿಂದಗತಿ (ತಗೋ ಕನ್ನಡ)

ಇದು ದಾಸರ ಪದಕ್ಕೆ ಸಂಬಂಧಿಸಿದ ಪದವಲ್ಲ. ಹೆಚ್ಚು ಬಳಕೆಯಲ್ಲಿಲ್ಲದಿದ್ದರೂ ನೋಡಿದೊಡನೆಯೇ ಗಮನ ಸೆಳೆಯುತ್ತದೆ. ಗೋವಿಂದ ಎಂದರೆ 'ಗೊಲ್ಲ, ಕೃಷ್ಣ'. ಆಲಂಕಾರಿಕವಾಗಿ 'ಇಲ್ಲದಾಗುವಿಕೆ; ಮಾಯವಾಗುವಿಕೆ' ಎನ್ನುವ ಅರ್ಥವೂ ಪ್ರಸಿದ್ಧ. "ಅವನಿಗೆ ಹಣ ನೀಡಿದರೆ ಅಷ್ಟೇ! ಗೋವಿಂದ!" ಎನ್ನುವುದರ ಅರ್ಥ ಸ್ಪಷ್ಟ! ಗತಿ ಎನ್ನುವುದಕ್ಕೆ ಇರುವ ವಿವಿದಾರ್ಥಗಳಲ್ಲಿ ಇಲ್ಲಿರುವುದು "ಕಾರ್ಯಸಾಧಿಸುವ ಯುಕ್ತಿ". ಗೋವಿಂದದ ಆಲಂಕಾರಿಕ ಅರ್ಥವನ್ನು ಯುಕ್ತಿಗೆ ಕುಶಲತೆಯಿಂದ ಬೆರೆಸಿ, 'ಗೋವಿಂದಗತಿ' ಪದವನ್ನು ಮಾಡಿಕೊಂಡಿದ್ದಾರೆ. ಅದಕ್ಕೆ 'ಇದ್ದದ್ದನ್ನು ಇಲ್ಲದಂತೆಯೂ ಇಲ್ಲದ್ದನ್ನು ಇರುವಂತೆಯೂ ತೋರಿಸುವ ಕಣ್ಕಟ್ಟು, ಗಾರುಡಿ, ಇಂದ್ರಜಾಲ, ಯಕ್ಷಿಣೀವಿದ್ಯೆ' ಎಂದು ಅರ್ಥ.

ಸುಮಾರು ಹೊತ್ತು ಸುತ್ತಿಬಳಸಿ ಮಾತನಾಡಿದಮೇಲೆ ವಿಚಾರ ಬಂದುನಿಂತದ್ದು ಅಂದಿನ ಅಂಕಣಕ್ಕೆ. “ಏನೋ ಕಷ್ಟ ಇತ್ತು ಎಂದು ಒಂದುವರೆವರ್ಷದ ಹಿಂದೆ ನಮ್ಮ ಯಜಮಾನರು ನಿಮ್ಮ ಬಳಿ ಕೈಸಾಲ ತೆಗೆದುಕೊಂಡಿದ್ದರು. ಆದರೆ ಹೀಗೆ ಎಲ್ಲರಿಗೂ ತಿಳಿಯುವ ಹಾಗೆ ‘ಅವನಿಗೆ ದುಡ್ಡುಕೊಟ್ಟರೆ ಅಷ್ಟೇ! ಗೋವಿಂದ’ ಎಂದು ಜಗಜ್ಜಾಹೀರು ಮಾಡಬಹುದೇ?” ಎಂದಳು. ತೋರ್ಕೆಗೆ ಶ್ಯಾಮನಿಗೆ ಹಣಕೊಟ್ಟಿದ್ದು ಮರೆತುಹೋಗಿತ್ತು. “ಅಂಥದ್ದೇನು ಇಲ್ಲ. ನಾನೇ ಬಂದು ನಿಮ್ಮ ಬಳಿ ಮಾತನಾಡುತ್ತೇನೆ” ಎಂದು ಸಮಾಧಾನ ಮಾಡಲು ನೋಡಿದ.

“ಬೇಡಬೇಡ, ನೀವೇನು ‘ಹಣವಸೂಲಿಗೆ’ ನಮ್ಮ ಮನೆಬಾಗಿಲಿಗೆ ಬರುವುದು ಬೇಡ. ಮುಂದಿನ ತಿಂಗಳ ಸಂಬಳ ಬರುತ್ತಿದ್ದಂತೆಯೇ ‘ನಾವೇ’ ನಿಮ್ಮ ಮನೆಗೆಬಂದು, ಹೂವುಹಣ್ಣು ಸಮೇತ ತೆಗೆದುಕೊಂಡ ಸಾಲ ಹಿಂದಿರುಗಿಸಿಬಿಡುತ್ತೇವೆ” ಎಂದು ಕರೆಯನ್ನು ಕತ್ತರಿಸಿದಳು.

ಈ ವಿಚಾರ ತಿಳಿದು ತೋರ್ಕೆಯ ಹೆಂಡತಿ, “ನನಗೆ ಗೊತ್ತಿಲ್ದೆ ಆ ಭಾಮಳಿಗೆ ಯಾವಾಗ ಸಾಲ ಕೊಟ್ಟಿದ್ರಿ?” ಎಂದು ತರಾಟೆಗೆ ತೆಗೆದುಕೊಂಡಳು.

ತೋರ್ಕೆ “ಭಾಮಳಿಗೆ ಕೊಟ್ಟಿರ್ಲಿಲ್ಲ ಕಣೆ; ಶಾಮನಿಗೆ ಕೊಟ್ಟಿದ್ದು ” ಎಂದು ಹೇಳಲು ಹೋದ. “ನಾನು ಕೇಳ್ತಾ ಇರೋದು ಭಾಮಾ, ಶಾಮ ಅಲ್ಲ. ಅವರಿಗೆ ಸಾಲಕೊಟ್ಟಿದ್ದು ನನಗೆ ಯಾಕೆ ಹೇಳಿರ್ಲಿಲ್ಲ ಅಂತ. ಆಗ ನಾನೇ ಅವರಿಗೆ ನೆನಪಿಸಿ ವಸೂಲ್ ಮಾಡಿಕೊಂಡುಬಿಡ್ತಿದ್ದೆ. ಈಗ ನೋಡಿ ಗೋವಿಂದಗತಿ ಬಂದು ಕಾಪಾಡ್ತಾ ಇದೆ”. ಅದಕ್ಕೆ ಉತ್ತರ ತೋರ್ಕೆಯ ಬಳಿ ಇರಲಿಲ್ಲ. ಆದರೆ ಅವನ ಕಣ್ಣೆದುರಿಗೇ “ಅವರವರ ಭಾವಕ್ಕೆ ಅವರವರ ರೀತಿಯಲಿ” ಗೋವಿಂದ ಸಾಕ್ಷಾತ್ಕಾರ ಆಗುತ್ತಿತ್ತು.

ಇದೇ ರೀತಿ ಇನ್ನೂ ಮೂರುನಾಲ್ಕು ಜನ ಕರೆಮಾಡಿ “ಯಾಕಪ್ಪ ಹೀಗೆ ಎಲ್ಲರ ಮುಂದೆ ನನ್ನ ಮಾನ ತೆಗೀತಿ? ಮುಂದಿನವಾರನೇ ಹಣ ಕೊಟ್ಬಿಡ್ತೀನೀ” ಎಂದು ಹೇಳಿದರು. ಒಂದು ಅಂಕಣದ ವಿಶ್ಲೇಷಣೆಯಿಂದ ಇಷ್ಟೆಲ್ಲಾ ಲಾಭವಾಗಬಹುದೇ ಎಂದು ತೋರ್ಕೆಗೆ ಒಂದು ರೀತಿ ಖುಷಿಯಾಯಿತು. ಯಾಕೆಂದರೆ, ಇವರು ಯಾರಿಗೂ ಸಾಲಕೊಟ್ಟಿದ್ದು ಅವನಿಗೆ ನೆನಪೇ ಇರಲಿಲ್ಲ. ‘ಅಲ್ಲಾ, ಸಾಲ ಈಸ್ಕೊಂಡ ಇವರು ಈರಭದ್ರನ ತರಹ ಇರಬೇಕು. ಆದರೆ ಕೋಡಂಗಿ ತರಹ ಕರೆ ಮಾಡುತ್ತಾ ಇದ್ದಾರಲ್ಲ!’ ಎಂದುಕೊಂಡ. ಗೋವಿಂದನಿಂದಾಗಿ ಈಗ ತಾನೇ ಈರಭದ್ರನಾಗಿರುವುದು ಹೊಳೆಯುತ್ತಿದ್ದಂತೆ ತೋರ್ಕೆಯ ಎದೆ ಐವತ್ತಾರು ಇಂಚಿನಷ್ಟು ಉಬ್ಬಿತು.

ತಾನು ಕೂಡ ಹಿಂದೆ ಕೆಲವರ ಬಳಿ ಕೈಸಾಲ, ಬಾಯ್ಸಾಲ ತೆಗೆದುಕೊಂಡು, ನಿಯತ್ತಾಗಿ ಹಿಂದಿರುಗಿಸಿದ್ದು ಥಟ್ಟಂತ ಅವನಿಗೆ ನೆನಪಾಯಿತು. ‘ಆದರೆ, ಅಕಸ್ಮಾತ್ತಾಗಿ ತಾನು ಯಾರಿಂದಲಾದರೂ ತೆಗೆದುಕೊಂಡ ಸಾಲ ಹಿಂದಿರುಗಿಸುವುದು ಮರೆತಿರಬಹುದೇ?’ ತೋರ್ಕಗೆ ಆತಂಕ ಪ್ರಾರಂಭವಾಯಿತು. ಯಾರಾದರೂ ಕರೆಮಾಡಿ, “ದೊಡ್ಡಮನುಷ್ಯ! ನನ್ನ ಹಣ ವಾಪಸ್ ಕೊಡ್ತೀಯಾ? ಅಥವಾ ಅದು ಗೋವಿಂದಾನೋ!” ಎಂದರೆ? ಎಂದು ಚಿಂತಿಸತೊಡಗಿದ. ಅವನ ಮೊಬೈಲ್ “ನಿನ್ನದೇ ನೆನಪು ” ಹಾಡಲು ಪ್ರಾರಂಭಿಸಿತು!

ಅದಕ್ಕೆ ಹಿರಿಯರು ಹೇಳುವುದು “ಗಾಜಿನ ಮನೆಯಲ್ಲಿ ನಿಂತು ಬೇರೆಯವರಿಗೆ ಕಲ್ಲು ಹೊಡೆಯಬಾರದು.” ಒಟ್ಟಿನಲ್ಲಿ ಸಾಲದ ವಿಚಾರ ಬಂದಾಗ “ಕೋಡಂಗಿ, ಈರಭದ್ರ” ಒಬ್ಬರೇ ಆಗಿರುವುದು ಸಾಧ್ಯವಿಲ್ಲ ಅಲ್ಲವೇ? ಆ ಕರೆ ಯಾರದು ಅಂತ ಮುಂದಿನ ಸಾರಿ ಅವನ ಭೇಟಿಯಾದಾಗ ವಿಚಾರಿಸಿಬಿಡೋಣ.

# ಮನಿ ! ಮನಿ ! ಮಣಿ !

ಚಿತ್ರಾ ರಾಮಚಂದ್ರನ್

"ಅಪ್ಪಾ ಅಮ್ಮಾ ! ಯಾರು ಬಂದಿದ್ದಾರೆ ನೋಡಿ !" ಎಂದು ಉತ್ಸಾಹದಿಂದ ಕೂಗುತ್ತ ಹಾಲನ್ನು ಪ್ರವೇಶಿಸಿದ ನವೀನ್.

ದಿನ ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದ ಅಪ್ಪಾ, ಮತ್ತು ಅವರಿಗಾಗಿ ಕಾಫಿ ಲೋಟ ಹಿಡಿದು ಬಂದ ಅಮ್ಮಾ, ನಗುಮೊಗದೊಂದಿಗೆ ಮಗನನ್ನು ಹಿಂಬಾಲಿಸಿ ಬಂದ ವ್ಯಕ್ತಿಯನ್ನು ಕಂಡು ಹರ್ಷದಿಂದ ಒಟ್ಟಿಗೇ ಉದ್ಗರಿಸಿದರು.

"ಓಹ್ ! ಉದ್ಯು !"

"ಬಾಪ್ಪಾ ! ಎಷ್ಟು ದಿನಗಳಾಯಿತು ನಿನ್ನನ್ನ ನೋಡಿ !" ತುಂಬು ಹೃದಯದಿಂದ ಸ್ವಾಗತಿಸಿದರು ಅಪ್ಪ.

"ನವೀನ್ ಇದ್ದರೆ ಮಾತ್ರ ಬರೋದು ಅಂತ ನಿಯಮ ಮಾಡಿಕೊಂಡಿದ್ದೀಯೋ ಹೇಗೆ? ! "ಹುಸಿಕೋಪದಿಂದ ಪ್ರಶ್ನಿಸಿದರು ಅಮ್ಮ.

"ಸಾರೀ ಅಮ್ಮ. ಹಾಗೇನು ಇಲ್ಲ ! ಅಲ್ಲೊಂದು ಕಲ್ಲಿದೆ, ಇಲ್ಲೊಂದು ಕಲ್ಲು ಇದೆ ಎಂದು ಸುತ್ತಮುತ್ತಲಿನ ವಠಾರಗಳಿಂದ ಕಾಲ್ಗಳು ಬರುತ್ತಲೇ ಇವೆ. ಹಾಗಾಗಿ ಆ ಕಲ್ಲುಗಳನ್ನು ಪರಿಶೀಲಿಸಲು ಹೋಗಬೇಕಿದೆ. ಮನೆಯಲ್ಲಿ ಉಳಿಯಲು ಕೂಡ ಸಮಯವಿಲ್ಲದೆ ಊರೂರು ತಿರುಗುತ್ತಲೇ ಇರುವೆ !" ನಗುತ್ತ ನುಡಿದ ಉದಯ.

"ಕೆಲಸದ ಒತ್ತಡ ತಾಳಲಾರದೆ ಅಲ್ಲವೇ ನೀನು ಅಷ್ಟು ಒಳ್ಳೆಯ ಕಂಪೆನಿ ಕೆಲಸ ಬಿಟ್ಟಿದ್ದು? ಆದರೆ ಈಗಲೂ ಅಷ್ಟೇ ವರ್ಕ್ ಪ್ರೆಷರ್ ತಲೆ ಮೇಲೆ ಎಳೆದುಕೊಂಡಿರುವೆಯಲ್ಲಪ್ಪ ಉದ್ಯು !"

"ಇದು ನನ್ನ ಹವ್ಯಾಸಕ್ಕೆ ಸಂಬಂಧಿಸಿದ ಕೆಲಸ ಅಂಕಲ್. ನಾನು ಇಷ್ಟಪಟ್ಟು ಮಾಡುತ್ತಿರುವ ಕೆಲಸ. ಯಾವ ಮೇಲಧಿಕಾರಿಗೂ ಉತ್ತರಿಸಬೇಕಾಗಿಲ್ಲ ! ಎಂತಹ ಒತ್ತಡವೂ ಇಲ್ಲ ! ನನಗೆ ನಾನೇ ಬಾಸ್ !"

"ಫೀಲ್ಡ್ ವರ್ಕ್ ಇದೆ ಅನ್ನೋದು ಬಿಟ್ಟು ನಿನ್ನ ಕೆಲಸದ ಬಗ್ಗೆ ನನಗೆ ಸ್ಪಷ್ಟವಾಗಿ ತಿಳಿದಿಲ್ಲ. ನೀನು ಕಲ್ಲನ್ನು ಹುಡುಕಿ ಹೋಗುವಾದ ಒಮ್ಮೆ ನಾನೂ ಜೊತೆಗೆ ಬರುತ್ತೇನೆ! ನಿಧಾನವಾಗಿ ಎಲ್ಲವನ್ನೂ ನನಗೆ ವಿವರಿಸಿ ಹೇಳೋ ಮಾರಾಯ." ಕುತೂಹಲ ವ್ಯಕ್ತಪಡಿಸಿದ ನವೀನ್.

"ಇವು ಸಾಮಾನ್ಯ ಕಲ್ಲುಗಳಲ್ಲ ನವೀನ್. ನಮ್ಮ ಸ್ಥಳೀಯ ಇತಿಹಾಸ, ಕಲಾಚಾರ, ಹಿಂದಿನ ಕಾಲದ ಆಡಳಿತದ ರೀತಿ ನೀತಿ, ಆಯಾ ಕಾಲಘಟ್ಟದ ಜನರ ಜೀವನ ಶೈಲಿ, ವಾಣಿಜ್ಯ, ತೆರಿಗೆ, ನೀರಾವರಿ ವ್ಯವಸ್ಥೆ, ರಾಜಮಹಾರಾಜರೆಡೆ ನಡೆದಂತಹ ಯುದ್ಧದ ವಿವರಗಳು, ದಾನ ದತ್ತಿಗಳು, ದೇಗುಲ ಮತ್ತು ಕೆರೆಕಟ್ಟೆಗಳ ನಿರ್ಮಾಣ, ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಭಾಷೆ ಮತ್ತು ಲಿಪಿಗಳು ಮುಂತಾದ ಅನೇಕ ಮಾಹಿತಿಗಳನ್ನು ಹೊತ್ತ ಭಂಡಾರಗಳಾಗಿವೆ ಶಾಸನ ಕಲ್ಲುಗಳು.....! ಅಮೂಲ್ಯವಾದ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಸಂರಕ್ಷಿಸುವುದು ನಮ್ಮ ಮಣ್ಣಿನಲ್ಲಿ ಹುಟ್ಟಿದ ಪ್ರತಿಯೊಬ್ಬರ ಕರ್ತವ್ಯ ಅಲ್ಲವೇ ? ಆ ನನ್ನ ಕರ್ತವ್ಯವನ್ನು ನಿಭಾಯಿಸುತ್ತಿರುವೆ ಅಷ್ಟೆ."

ಭಾವೋದ್ವೇಗದಿಂದ ಕೂಡಿದ ಉದಯನ ಮಾತು, ಆ ಕ್ಷೇತ್ರದಲ್ಲಿ ಅವನಿಗಿದ್ದ ಅತ್ಯಂತ ಆಸಕ್ತಿಯನ್ನು ವ್ಯಕ್ತಪಡಿಸಿತು. ಭಾವಪರವಶನಾಗಿದ್ದ ಉದಯ ಥಟ್ಟನೆ ತನ್ನನ್ನು ಸುಧಾರಿಸಿಕೊಂಡನು.

"ನವೀನ ಜೆಟ್ ಲ್ಯಾಗ್ ಎಂದು ಮಲಗಿದ್ದರೂ ಪರವಾಗಿಲ್ಲ ! ಒಂದು ಬಕ್ಕೆಟ್ ನೀರು ತಲೆಯಮೇಲೆ ಸುರಿದು ಎಬ್ಬಿಸಿ, ಇವನಿಗೆ ಪ್ರೀತಿಯಿಂದ ಒಂದು ಹಲೋ ಹೇಳಿ ಹೋಗಬೇಕು ಅಂತ ಬಂದದ್ದು ! ಇವನು ನೋಡಿದರೆ ಬೇಗ ಎದ್ದು ಗೇಟಿನ ಬಳಿ ಕಾಯುತ್ತ ನಿಂತಿರುವನು!"

"ಪ್ರಾಣ ಸ್ನೇಹಿತನ ಬಗ್ಗೆ ಅಷ್ಟೂ ಊಹಿಸಲಾರೆನೇ ? ಹಾಸ್ಟೆಲ್ ನಲ್ಲಿದ್ದಾಗ ಹೇಗೆಲ್ಲಾ ಸತಾಯಿಸುತ್ತಿದ್ದೆ ! ನಿನ್ನ ಭಯಂಕರ 'ಪ್ರೀತಿಯಿಂದ' ತಪ್ಪಿಸಿಕೊಳ್ಳಲೆಂದೇ ಬೇಗ ಎದ್ದು ಗೇಟ್ ಬಳಿಯೇ ಕಾಯುತ್ತ ನಿಂತಿದ್ದೆ !" ಎನ್ನುತ್ತ ಗೆಳೆಯನ ಹೊಟ್ಟೆಗೆ ಮೆಲ್ಲನೆ ಗುದ್ದಿದ ನವೀನ್.

"ಚಿಕ್ಕಂದಿನಲ್ಲಿ ನೀವಿಬ್ಬರೂ ಸೇರಿ ಹೊಡೆಯುತ್ತಿದ್ದ ಲೂಟಿ ! ಅಬ್ಬಬ್ಬಾ ! ಮರೆಯಲು ಸಾಧ್ಯವೇ ? ಒಮ್ಮೆ ರಜೆಯಲ್ಲಿ ತೋಟದ ಮನೆಗೆ ನಮ್ಮ ಜೊತೆ ನೀನೂ ಬಂದಿದ್ದೆ ! ನಿಮ್ಮ ಚೇಷ್ಟೆಗಳಿಗೆ ತಕರಾರು ಮಾಡುತ್ತಿದ್ದ ದೊಡ್ಡಣ್ಣನನ್ನು ಹೇಗೆಲ್ಲಾ ಗೋಳು ಹೋಯ್ಕೊಂಡಿರಿ !" ಎಂದು ಕಿಸಿ ಕಿಸಿ ನಕ್ಕರು ಅಪ್ಪ.

"ಹೌದು ಅಂಕಲ್ ! ಈಗ ನೆನಪಿಸಿಕೊಂಡರೆ ನಾಚಿಕೆಯಾಗುತ್ತದೆ ! ಹಳ್ಳಿಮನೆ ತೋಟ ಎಲ್ಲವನ್ನೂ ಈಗಲೂ ದೊಡ್ಡಣ್ಣನೇ ನೋಡಿಕೊಳ್ಳುತ್ತಿರುವನೇ ?"

"ಇವಾಗ ಅವನು ಅಂದಿದ್ದಷ್ಟು  ಚುರುಕಾಗಿಲ್ಲ. ಹಾಗಾಗಿ ಎಲ್ಲ ಜವಾಬ್ದಾರಿಗಳನ್ನೂ ಅವನ ಮಗ ತರಲೆ ಮಣಿಗೆ ವಹಿಸಿದ್ದಾನೆ. ಮಣಿ ವಾರಕ್ಕೊಮ್ಮೆ ಫೋನ್ ಮಾಡಿ ಏನೇನೋ ವಟ ವಟ ಒದರುತ್ತಾನೆ ! ನನಗೆ ಏನೂ ಅರ್ಥವಾಗುವುದಿಲ್ಲ ! ' ಇನ್ಮುಂದೆ ಎಲ್ಲವನ್ನೂ ನವೀನನೇ ನೋಡಿಕೊಳ್ಳುತ್ತಾನೆ. ನೀನಾಯಿತು ಅವನಾಯಿತು 'ಎಂದುಬಿಟ್ಟೆ." ಎಂದು ನಿಟ್ಟುಸಿರೆಳೆದರು ಅಪ್ಪ.

"ಈ ವೀಕ್ ಎಂಡ್ ಹಳ್ಳಿಗೆ ಹೋಗೋ ಪ್ರೋಗ್ರಾಮ್ ಇದೆ. ಫ್ರೀ ಇದ್ದರೆ ನೀನೂ ಜೊತೆಗೆ ಬಾರೊ ಉದ್ಯು !"

"ಓಹ್ ವಂಡರ್ಫುಲ್ ! ಖಂಡಿತ ಹೋಗೋಣ ನವೀ ! ನನಗೆ ಯಾವಾಗಲೂ ಕೆಲಸ ಇದ್ದದ್ದೆ ! ಆದರೂ ಯಾವಾಗ ಬೇಕಾದರೂ ಫ್ರೀ ಮಾಡಿಕೊಳ್ಳಬಹುದು !" ಎಂದು ನಕ್ಕನು ಉದಯ.

"ಹಾಗಾದರೆ ಕ್ಯಾಬ್ ಬುಕ್ ಮಾಡಿಬಿಡಲೇ ?"

"ಕ್ಯಾಬ್ ಗೀಬ್ ಏನೂ ಬೇಡ . ನನ್ನ ಕಾರ್ ತರುತ್ತೇನೆ ! ನಾನೇ ಡ್ರೈವ್ ಮಾಡುತ್ತೇನೆ !"

"ನಾನಂತೂ ಸಿಟಿಯಲ್ಲಿ ಡ್ರೈವ್ ಮಾಡುವುದಿಲ್ಲ ! ಅದೇನು ಟ್ರಾಫಿಕ್ ! ಅಬ್ಬಬ್ಬ !"

"ಸರಿ ಮತ್ತೆ ! ಈಗ ನಾನು ಹೊರಡುವೆ ! ಸೀ ಯು ಆನ್ ಸಾಟರ್ಡೆ ! ಅಂಕಲ್, ಬೆಳ್ಳಂಬೆಳಿಗ್ಗೆ ಬಂದು ನಿಮಗೆಲ್ಲ ತೊಂದರೆ ಕೊಟ್ಟಿದ್ದಕ್ಕೆ ಸೋರಿ !" ಎನ್ನುತ್ತ ಹೊರಟು ನಿಂತನು ಉದಯ.

"ಉದ್ಯು ! ಸ್ವಲ್ಪ ತಡಿ ! ಇನ್ನೇನು ಖಾರಾಬಾತ್ ಕೇಸರಿಬಾತ್ ತಯಾರಾಗಿಬಿಡುತ್ತೆ. ಆರಾಮಾಗಿ ತಿಂಡಿ ತಿಂದು ಹೋಗುವೆಯಂತೆ." ಅಮ್ಮ ಸಡಗರದಿಂದ ಉಪಚರಿಸಿದರು.

"ಅಯ್ಯೋ ! ಬೇಡ ಅಮ್ಮ ! ಇಗೋ ಹೊರಡುತ್ತಿರುವೆ. ದೊಡ್ಡುಬ್ಬಿಯಲ್ಲಿ ಒಂದು ಕಲ್ಲು ಪತ್ತೆಯಾಗಿದೆ ! ಸ್ಕ್ಯಾನ್ ಮಾಡಲು ನಮ್ಮ ಹುಡುಗರು ಆಗಲೇ ಹೊರಟಿದ್ದಾರೆ ! ಶಾಸನ ಪಾಠ ಓದಲು ಪ್ರೋಫೆಸರ್ ಶಂಕರ್ ಅವರನ್ನ ಪಿಕ್ ಅಪ್ ಮಾಡಿಕೊಂಡು ಹೋಗಬೇಕು. ಈಗ ಹೊರಟರೆ ಆಫೀಸ್ ಟೈಮ್ ಟ್ರಾಫಿಕ್ಕಿಂದ ಬಚಾವ್ ಆಗಬಹುದು." ಎನ್ನುತ್ತ ಹೊರಟುಬಿಟ್ಟ ಉದಯನಿಗೆ ಶುಭ ಹಾರೈಸಿ ಬೀಳ್ಕೊಟ್ಟರು ಹಿರಿಯರು.

ಶನಿವಾರ ಸೂರ್ಯೋದಯದ ಸಮಯ ! ಉದಯನ ಬೊಲೆರೋ ಕಾರು ಫ್ಲೈಓವರ್ಗಳನ್ನು ಹಾದು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಣ್ಣೆಯಲ್ಲಿ ಕೂದಲು ಎಳೆದಂತೆ ಸಲೀಸಾಗಿ ಜಾರಿಕೊಂಡು ಹೋಗುತ್ತಿತ್ತು. ಇಕ್ಕೆಲಗಳಲ್ಲಿ ಅಂತರರಾಷ್ಟ್ರೀಯ ಕಂಪನಿಗಳ ಗಗನಚುಂಬಿ ಕಟ್ಟಡಗಳ ಗಾಜಿನ ಕಿಟಕಿಗಳು ಉದಯ ಸೂರ್ಯನ ಕಿರಣಗಳನ್ನು ಪ್ರತಿಬಿಂಬಿಸುತ್ತ ಚಿನ್ನದಂತೆ ಹೊಳೆಯುತ್ತಿದ್ದವು.

"ವಾವ್ ! ಬ್ಯೂಟಿಫುಲ್ ! ನಮ್ಮೂರು ಅದೆಷ್ಟು ಮುಂದುವರೆದಿದೆ ! ಎತ್ತ ತಿರುಗಿದರು ಪ್ರಗತಿಯ ಕೈವಾಡ ಗೋಚರಿಸುತ್ತಿದೆ ! ಫ್ಲೈಓವರ್ಸ್, ರಿಂಗ್ ರೋಡ್ಸ್, ಸ್ಕೈಸ್ಕ್ರೇಪರ್ಸ್, ಮೆಟ್ರೋ, ಇಲ್ಲೇ ತಯಾರಾಗುವ ಕರುಗಳು ! ಓಹ್ ! ನನಗಂತೂ ಫಾರಿನ್ನಲ್ಲಿ ಇರುವಂತೆಯೇ ಅನ್ನಿಸುತ್ತಿದೆ !" ಬೆರಗಿನಿಂದ ನುಡಿದ ಸ್ನೇಹಿತನ ಮೊಗವನ್ನು ಒಮ್ಮೆ ನೋಡಿ, ಪ್ರತಿಕ್ರಿಯೆ ನೀಡದೆ ಕಾರು ಚಲಿಸುವುದರಲ್ಲೇ ಮಗ್ನನಾಗಿದ್ದ ಉದಯ.

"ಉದ್ಯು ! ನಿನಗೆ ನೆನಪಿದೆಯಾ ? ವರ್ಷಗಳ ಹಿಂದೆ ಸಿಎಂ ಆಗಿದ್ದ ವ್ಯಕ್ತಿ ಓರ್ವ ತನ್ನ ರಾಜ್ಯದ ರಸ್ತೆಗಳನ್ನು, ಕನಸಿನ ರಾಣಿಯಾಗಿದ್ದ ಸಿನೆಮಾ ತಾರೆಯೋರ್ವಳ ಮೃದುವಾದ ಕೆನ್ನೆಗಳಿಗೆ ಹೋಲಿಸಿ ಬೀಗುತ್ತಿದ್ದ ! ಮುದುಕನಾಗಿದ್ದರೂ ರಸಿಕ ! ಈ ರಸ್ತೆ ನೋಡಿ ಆ ಪ್ರಕರಣ ನೆನಪಿಗೆ ಬಂತು." ನಗುತ್ತ ನುಡಿದ ನವೀನ.

"ಮಂತ್ರಿಮಂಡಲಗಳು ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗಳನ್ನು ಕೈಗೊಳ್ಳುವಾಗ ಅದರಿಂದ ಆಗಬಹುದಾದ ಹಾನಿಯನ್ನು ಸಹ ತುಲನೆ ಮಾಡಿ ಮುಂದುವರೆಯಬೇಕು ! ಪ್ರಗತಿ ಎಂಬ ಬಕಾಸುರನ ಬಾಯಿಗೆ ತುತ್ತಾಗುತ್ತಿರುವ ಸುತ್ತಮುತ್ತಲಿನ ಹಳ್ಳಿಗಳ ಜೊತೆ, ಸ್ಥಳೀಯ ಇತಿಹಾಸ ಹೇಳುವ ಅಲ್ಲಿಯ ಅಮೂಲ್ಯ ಶಾಸನ ಕಲ್ಲುಗಳು ಸಹ ನಾಶವಾಗುತ್ತಿವೆ. ಮಂತ್ರಿಗಳು ತಮ್ಮ ರಸಿಕತನವನ್ನು ಸ್ವಲ್ಪ ದೂರವಿಟ್ಟು ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ, ಶಾಸನ ಕಲ್ಲುಗಳನ್ನು ಸಂರಕ್ಷಿಸುವುದರ ಬಗ್ಗೆಯೂ ಯೋಚಿಸಿದ್ದರೆ ಚೆನ್ನಾಗಿತ್ತು.."

ಗದ್ಗದಿತ ದನಿಯಲ್ಲಿ ಮಾತನಾಡಿದ ಗೆಳೆಯನನ್ನು ಬೆರಗಿನಿಂದ ನೋಡಿದ ನವೀನ್.

"ಉದ್ಯು! ಶಾಸನ ಕಲ್ಲುಗಳ ಬಗ್ಗೆ ಮಾತನಾಡುವಾಗಲೆಲ್ಲ ನೀನು ಭಾವುಕನಾಗುವುದನ್ನು ಗಮನಿಸಿದೆ. ನಿನಗೆ ಯಾವಾಗಿನಿಂದ ಈ ಶಾಸನಗಳ ಹುಚ್ಚು ಪ್ರಾರಂಭವಾಯಿತು ?"

"ಸಾರಿ ನವೀ ! ಅದು ಏಕೋ ಏನೋ, ಶಾಸನ ಕಲ್ಲುಗಳ ಬಗ್ಗೆ ಮಾತು ಬಂದಾಗಲೆಲ್ಲ ನಾನು ಗತಕಾಲಕ್ಕೇ ಹೋಗಿಬಿಡುತ್ತೇನೆ. ಮನಸ್ಸು ಕರಗುತ್ತದೆ. ಒಮ್ಮೆ ಫೇಸ್ ಬುಕ್ ನೋಡುತ್ತಿದ್ದಾಗ ಬೆಂಗಳೂರಿನ ಶಿಲಾ ಶಾಸನಗಳ ಬಗ್ಗೆ ಒಂದು ಪೋಸ್ಟ್ ನೋಡಿದೆ. ಅದರಲ್ಲಿ ಲೂಯಿಸ್ ರೈಸ್ ಎಂಬಾತನ ಬಗ್ಗೆ ಒಂದು ವಿಷಯ ಪ್ರಕಟವಾಗಿತ್ತು. ನವೀ, ನಿನಗೆ ಬೇಸರವಾಗದಿದ್ದರೆ ಆ ಮಹಾನ್ ವ್ಯಕ್ತಿಯ ಬಗ್ಗೆ ಹೇಳುತ್ತೇನೆ."

"ಹೇಳು ಉದ್ಯು ! ನಿನ್ನ ಚಟುವಟಿಕೆಗಳ ಬಗ್ಗೆ ಅರಿತುಕೊಳ್ಳುವ ಕುತೂಹಲ ನನಗಿದೆ !"

"ಲೂಯಿಸ್ ರೈಸ್ ! ಬೆಂಗಳೂರಿನಲ್ಲಿ ಹುಟ್ಟಿದ ಬ್ರಿಟಿಷರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮೈಸೂರು ರಾಜ್ಯದಲ್ಲಿ ಮುಗಿಸಿ, ಉನ್ನತ ಶಿಕ್ಷಣವನ್ನು ಯುನೈಟೆಡ್ ಕಿಂಗ್ಡಮ್ನಲ್ಲಿ ಪಡೆದು ಹಿಂದಿರುಗಿದರು. ಬೆಂಗಳೂರು ಹೈ ಸ್ಕೂಲ್ ಪ್ರಿನ್ಸಿಪಾಲರಾಗಿದ್ದರು. ಕ್ರಮೇಣ ಶಿಕ್ಷಣ ಇನ್ಸ್ಪೆಕ್ಟರ್ ಆಗಿದ್ದರು. ಹುದ್ದೆಯ ಸಲುವಾಗಿ ಅವರು ಮೈಸೂರು ಮತ್ತು ಕೂರ್ಗ್ ಜಿಲ್ಲೆಗಳಲ್ಲಿ ಓಡಾಡಬೇಕಾಗಿತ್ತು. ಪ್ರಯಾಣ ಮಾಡುತ್ತಿದ್ದ ಹಾಗೆಯೇ ಅಲ್ಲಲ್ಲಿ ಅವರು ಕಂಡ ಶಿಲಾ ಶಾಸನಗಳ ಬಗ್ಗೆ ಕುತೂಹಲ ಏರ್ಪಟ್ಟಿತು. ರಾಜ್ಯದಾದ್ಯಂತ ಪಯಣಿಸಿ ಶಾಸನಗಳ ಸಂಶೋಧನೆಗೆ ತೊಡಗಿದರು. ತನ್ನ ಸಹಾಯಕರ ನೆರವು ಪಡೆದು ಶಾಸನಗಳನ್ನು ಅಧ್ಯಯನ ಮಾಡಿ ನಮ್ಮ ರಾಜ್ಯಕ್ಕೆ ಸೇರಿದ 9000 ಶಾಸನಗಳ ಬಗ್ಗೆ 'ಎಪಿಗ್ರಾಫಿಯಾ ಕರ್ನಾಟಿಕಾ' ಎಂಬ ಮಹತ್ತರವಾದ ಸಂಪುಟಗಳನ್ನು ರಚಿಸಿ ಅನುವಾದದೊಂದಿಗೆ ಪ್ರಕಟಿಸಿದರು. ಗಂಗರು, ನೊಳಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ರಾಯರು, ಚೋಳರು, ಪಲ್ಲವರು, ಮುಂತಾದ ಅನೇಕ ವಂಶದವರ ಆಡಳಿತದಲ್ಲಿದ್ದ ನಮ್ಮ ಕರ್ನಾಟಕ ರಾಜ್ಯದ ಸಂಪೂರ್ಣ ಇತಿಹಾಸವನ್ನು ಶಾಸನ ಕಲ್ಲುಗಳ ಆಧಾರದ ಮೇಲೆ ಪುನರ್ರಚಿಸುವುದು ಈಗ ಸಾಧ್ಯವಾಗಿದೆ. ರೈಸ್ ಅವರ ಪುಸ್ತಕ ಈಗ ಇಂಟರ್ನೆಟ್ಟಿನಲ್ಲೂ ಲಭ್ಯ."

"ವಾವ್ ! ರೋಚಕ ಮಾಹಿತಿ !"

"'ಬೆಂಗಳೂರಿನ ಶಿಲಾಶಾಸನಗಳು' ಎಂಬ ವೇದಿಕೆಯ ಸದಸ್ಯರು ಎಪಿಗ್ರಾಫಿಯಾ ಕರ್ನಾಟಿಕಾ ಪುಸ್ತಕದ ಆಧಾರದ ಮೇಲೆ ಶಾಸನಗಳನ್ನು ಪತ್ತೆ ಹಚ್ಚಲು ಹೊರಟಿರುವರು. ಅನೇಕ ಶಾಸನಗಳು ಲೂಯಿಸ್ ರೈಸ್ ಸೂಚಿಸಿರುವ ಸ್ಥಳಗಳಲ್ಲೇ ಇನ್ನೂ ಉಳಿದಿವೆ. ಮತ್ತಷ್ಟು ಶಾಸನಗಳು ಪ್ರಗತಿಯ ತುಳಿತಕ್ಕೆ ಸಿಕ್ಕಿ ಕಾಣೆಯಾಗಿವೆ. ಉಳಿದಿರುವ ಶಾಸನಗಳನ್ನು ತ್ರೀ ಡಿ ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸುವ ಕೆಲಸ ಶುರುವಾಗಿದೆ. ನಾನು ಮೊದಲೇ ಇತಿಹಾಸ ಪ್ರಿಯ. ಹಾಗಾಗಿ ದೊರಕಿರುವ ಐತಿಹಾಸಿಕ ತುಣುಕುಗಳ ಸಂರಕ್ಷಣೆಗೆ ನನ್ನ ಸಮಯವನ್ನು ಮೀಸಲಿಟ್ಟಿರುವೆ."

"ಕೂಲ್ ! ನನಗೆ ಒಂದು ಸಂದೇಹ ! ಶಾಸನದಲ್ಲಿಯ ಪಾಠ ಓದಲು ಪ್ರೊಫೆಸರ್ ಶಂಕರ್ ಅವರನ್ನು ಕರೆದುಕೊಂಡು ಹೋಗಬೇಕೆನ್ನುತ್ತಿದ್ದೆ ! ಕನ್ನಡ ಲಿಪಿಗಳನ್ನು ನಾವೇ ಓದಬಹುದಲ್ಲ ?"

"ಶಾಸನ ಕಲ್ಲುಗಳಲ್ಲಿ ಬರಿ ಕನ್ನಡ ಲಿಪಿಗಳು ಮಾತ್ರ ಕಂಡುಬರುವುದಿಲ್ಲ ನವೀನ್. ಭಾಷೆಯನ್ನು ಆಧರಿಸಿ ರಾಜ್ಯವನ್ನು ವಿಂಗಡಿಸುವ ಕಾಲ ಅದಾಗಿರಲಿಲ್ಲ. ಅನೇಕ ರಾಜವಂಶಸ್ಥರು ಆಳುತ್ತಿದ್ದ ನಮ್ಮ ರಾಜ್ಯದಲ್ಲಿ ಅನೇಕ ಭಾಷೆಗಳು ಬಳಕೆಯಲ್ಲಿದ್ದವು. ಹಾಗಾಗಿ ನಮ್ಮ ಶಿಲಾಶಾಸನಗಳಲ್ಲಿ ಕನ್ನಡ, ತಮಿಳು, ಪ್ರಾಕೃತ ಮುಂತಾದ ಅನೇಕ ಭಾಷೆಗಳ ಲಿಪಿಗಳು ಕಂಡುಬರುತ್ತವೆ. ಕಾಲದಿಂದ ಕಾಲಕ್ಕೆ ಲಿಪಿಗಳು ಬದಲಾಗುತ್ತಲೇ ಇರುತ್ತವೆ. ಕನ್ನಡವನ್ನೇ ತೆಗೆದುಕೊಳ್ಳೋಣ ! ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಲಿಪಿಯ ಶೈಲಿಯನ್ನು ಪೂರ್ವ ಹಳೆಗನ್ನಡ ಎನ್ನುತ್ತಾರೆ. ಒಂಬತ್ತನೇ ಶತಮಾನದಿಂದ ಹದಿನಾಲಕ್ಕನೆ ಶತಮಾನದವರೆಗು ಬಳಕೆಲ್ಲಿದ್ದದ್ದು ಹಳೆಗನ್ನಡ. ಹದಿನಾಲಕ್ಕರಿಂದ ಹದಿನೆಂಟನೆಯ ಶತಮಾನದವರೆಗೂ ಬಳಕೆಯಲ್ಲಿದ್ದದ್ದು ನಡುಗನ್ನಡ. ಈಗ ನಾವು ಆಡುತ್ತಿರುವುದು ಹೊಸಗನ್ನಡ. ಕನ್ನಡದಂತೆಯೇ ಇತರ ಭಾಷೆಗಳು ಮತ್ತು ಲಿಪಿಗಳು ಬದಲಾವಣೆ ಹೊಂದಿವೆ. ಹಾಗಾಗಿ ಶಾಸನದಲ್ಲಿಯ ಎಲ್ಲ ಬಗ್ಗೆಯ ಲಿಪಿಗಳನ್ನು ಓದಲು, ಅಧ್ಯಯನ ಮಾಡಿರುವ ಶಾಸನ

ಶಾಸ್ತ್ರಜ್ಞರ ನೆರವು ಅಗತ್ಯ."

"ಸೋ ಇಂಟೆರೆಸ್ಟಿಂಗ್ !" ಮಾತನಾಡುತ್ತಿದ್ದ ಹಾಗೆಯೇ ಹೆದ್ದಾರಿಯಿಂದ ಕವಲೊಡೆದ ಮಣ್ಣು ರಸ್ತೆಗೆ ತಿರುಗಿ ತೋಟದಮನೆ ತಲುಪಿತು ಕಾರು. ಕೆಲಸಗಾರರು, ದೊಡ್ಡಣ್ಣ, ಮಣಿ ಎಲ್ಲರೂ ನವೀನ್ ಮತ್ತು ಉದಯನನ್ನು ಸಂತೋಷದಿಂದ ಸ್ವಾಗತಿಸಿದರು. ಎಲ್ಲರ ಕುಶಲ ವಿಚಾರಿಸಿ ಗೆಳೆಯರಿಬ್ಬರೂ ಕೋಣೆ ಸೇರಿದರು. ಸ್ನಾನ ಮಾಡಿ ಫ್ರೆಶ್ ಆಗಿ, ತಿಂಡಿ ತಿಂದು ತೋಟವನ್ನು ಸುತ್ತು ಹಾಕಲು ಹೊರಟು ನಿಂತರು.

ತಣ್ಣನೆಯ ಗಾಳಿ ! ಎಲ್ಲೆಲ್ಲೂ ಕಂಗೊಳಿಸುತ್ತಿದ್ದ ಹಸಿರು ಸಿರಿ ! ಮುಂಜಾನೆ ಅರಳಿದ್ದ ಹೂವುಗಳ ಘಮಲು ! ಸುಂದರವಾದ ವಾತಾವರಣ ! ಸ್ನೇಹಿತರಿಬ್ಬರೂ ಪ್ರಕೃತಿಯ ಸೊಬಗನ್ನು ಕಣ್ತುಂಬಿಸಿಕೊಂಡು ಮೌನವಾಗಿ ನಡೆಯುತ್ತಿದ್ದರೆ, ತೋಟದ ಬಗ್ಗೆಯ ಲೆಕ್ಕಾಚಾರಗಳನ್ನೆಲ್ಲ ಹೇಳುತ್ತ ಹಿಂದೆ ಹಿಂದೆಯೇ ಬರುತ್ತಿದ್ದ ಮಣಿ .

ನಡೆಯುತ್ತಿದ್ದಹಾಗೆಯೇ ಎಲ್ಲರೂ ಬೇವಿನ ಮರದ ಬಳಿ ತಲುಪಿದ್ದರು. ಮರದ ಕೆಳಗೆ ಅರಿಶಿನ ಕುಂಕುಮ ಬಳಿದುಕೊಂಡು ನಿಂತಿತ್ತು ಎರಡಡಿ ಎತ್ತರವಿದ್ದ ಕಲ್ಲೊಂದು !

"ಏನೋ ಇದು ?" ಬೆರಗಾಗಿ ಥಟ್ಟನೆ ನಿಂತು ಪ್ರಶ್ನಿಸಿದನು ನವೀನ್.

"ನಮ್ಮ ತೋಟದಲ್ಲಿ ಕೆಲಸ ಮಾಡುತ್ತಾನಲ್ಲ ಮೋಹನ ? ಅವನ ಕನಸಿನಲ್ಲಿ ಕಾಣಿಸಿಕೊಂಡಳಂತೆ ಅಣ್ಣಮ್ಮ ದೇವಿ. ಇಂತಿಂತ ಕಡೆ ಬಿದ್ದಿರುವ ತನ್ನನ್ನು ನಮ್ಮ ತೋಟದಲ್ಲಿರುವ ಬೇವಿನ ಮರದ ಕೆಳಗೆ ಸ್ಥಾಪಿಸಿ ಪೂಜಿಸಿದರೆ ಎಲ್ಲರಿಗೂ ಅನುಗ್ರಹ ಮಾಡುತ್ತೇನೆ ಎಂದಳಂತೆ ! ಹಾಗಾಗಿ ಅಮ್ಮನ ಕಲ್ಲನ್ನು ಹುಡುಕಿ ತಂದು ನಮ್ಮ ತೋಟದಲ್ಲಿಯ ಬೇವಿನ ಮರದ ಕೆಳಗೆ ಇಟ್ಟು ಪೂಜೆ ಮಾಡುತ್ತಿರುವರು ನಮ್ಮ ತೋಟದಾಳುಗಳು. ಬಿಸಿಲು ಮಳೆಯಲ್ಲಿ ನಿಂತಿರುವ ಅಮ್ಮನಿಗೆ ಚಪ್ಪರದಂತೆ ಒಂದು ಸಣ್ಣ ಶೆಡ್ ಕಟ್ಟಿಸಬೇಕು ಎಂಬುದು ಇಲ್ಲಿಯವರ ಇಚ್ಛೆ. ಅಯ್ಯಾ ಅವರ ಒಪ್ಪಿಗೆ ಬೇಕಿದೆ. ವಾರಕ್ಕೊಮ್ಮೆ ಅಯ್ಯಾ ಅವರಿಗೆ ಕರೆಮಾಡುವಾಗ ವಿಷಯ ಹೇಳುತ್ತಿದ್ದೆ. ಆದರೆ ಅವರಿಗೆ ಅರ್ಥವಾಗಲಿಲ್ಲ ಅನ್ನಿಸುತ್ತದೆ. ಇನ್ಮುಂದೆ ಎಲ್ಲವನ್ನೂ ನವೀನನೇ ನೋಡಿಕೊಳ್ಳುತ್ತಾನೆ. ಅವನಾಯಿತು ನೀನಾಯಿತು ಅಂದರು. ಅಣ್ಣ ! ನೀವು ಕಣ್ಣಾರೆ ಕಂಡಿದ್ದೀರಿ ! ಶೆಡ್ ಹಾಕಲು ನಿಮಗೆ ಅಭ್ಯಂತರ ಇಲ್ಲತಾನೇ ?" ಎಂದ ಮಣಿ.

"ಊರಿಗೆ ಹೋಗಿ ತಂದೆಯವರಿಗೆ ವಿವರ ಹೇಳುತ್ತೇನೆ. ನಂತರ ತೀರ್ಮಾನ ಮಾಡೋಣ." ಸ್ವಲ್ಪ ಯೋಚಿಸಿ ಉತ್ತರ ನೀಡಿದ ನವೀನ್.

ಕಲ್ಲನ್ನು ಹತ್ತಿರದಿಂದ ಪರಿಶೀಲಿಸುತ್ತಿದ್ದ ಉದಯ ಅದನ್ನು ತನ್ನ ಮೊಬೈಲಲ್ಲಿ ಕ್ಲಿಕ್ಕಿಸಿಕೊಂಡನು. ಎಲ್ಲಕಡೆ ತಿರುಗಾಡಿ ಊಟದ ಸಮಯಕ್ಕೆ ಮನೆ ಸೇರಿದರು. ಮಣಿಯ ಮನೆಯಿಂದ ಬಿಸಿ ಊಟದ ಕ್ಯಾರಿಯರ್ ಬಂದಿತ್ತು. ಬಾಳೆಲೆ ಹರಡಿ ರುಚಿಯಾದ ಪಾರಂಪರಿಕ ತಿನಿಸುಗಳನ್ನು ಬಡಿಸಿದಳು ಮಣಿಯ ಮಗಳು ಆಶಾ.

"ಅಭಿನಂದನೆಗಳು ಆಶಾ. ಮದುವೆಗೆ ಬರಲು ಆಗಲಿಲ್ಲ. ಅಪ್ಪ ಅವರ ಆಶೀರ್ವಾದದ ಹಣ ಮಣಿಯ ಬ್ಯಾಂಕ್ ಅಕೌಂಟಿಗೆ ಟ್ರಾನ್ಸ್ಫರ್ ಮಾಡಿದ್ದೆ !" ಆಶಾ ಮೌನವಾಗಿ ಕಿರುನಗೆ ಬೀರಿ ಹೊರಟುಹೋದಳು.

"ನಿಧಾನವಾಗಿ ಊಟ ಮಾಡಿ, ಇಬ್ಬರೂ ಮಲಗಿ ರೆಸ್ಟ್ ಮಾಡಿ ಅಣ್ಣ. ನಾಲಕ್ಕು ಗಂಟೆಗೆ ಕಾಫಿ ಜೊತೆಗೆ ಬಿಸಿ ಬಿಸಿ ಪಡ್ಡು ತರುತ್ತೇನೆ !" ಎನ್ನುತ್ತ ತನ್ನ ಮನೆಯತ್ತ ನಡೆದನು ಮಣಿ.

ಮಲಗುವ ಕೋಣೆ ಸೇರಿ ಕೈಕಾಲು ಚಾಚಿ ಮಲಗಿದ ನವೀನನನ್ನು ಕುತೂಹಲ ಕಾಡಿತು.




"ವೀರಗಲ್ಲು ಅಂದರೇನು ? ಹೆಬ್ಬಾಳದ ಕಿತ್ತಯ್ಯನ ವೀರಗಲ್ಲಿನ ಬಗ್ಗೆ ತುಂಬಾ ಜನ ಮಾತಾಡುವುದನ್ನು ಕೇಳಿದ್ದೇನೆ ! ಇವತ್ತು ನಾವು ನೋಡಿದ ಕಲ್ಲು ವೀರಗಲ್ಲೇ ಇರಬಹುದೇ?" ಎಂದು ಗೆಳೆಯನನ್ನು ಪ್ರಶ್ನಿಸಿದ.

"ಯುದ್ಧದಲ್ಲಿ ವೀರಮರಣ ಹೊಂದಿದ ವ್ಯಕ್ತಿಗಳ ನೆನಪಿಗಾಗಿ ಕೆತ್ತಿಸುವ ಕಲ್ಲನ್ನು ವೀರಗಲ್ಲು ಎನ್ನುತ್ತಾರೆ . ತನ್ನ ಗ್ರಾಮದ ರಕ್ಷಣೆಗಾಗಿ ವೈರಿಗಳೊಂದಿಗೆ ಹೋರಾಡಿ ಮಡಿದ ಕಿತ್ತಯ್ಯನ ನೆನಪಿಗಾಗಿ ಕೆತ್ತಿಸಿದ ಕಲ್ಲು ಹೆಬ್ಬಾಳದ ಕಿತ್ತಯ್ಯನ ವೀರಗಲ್ಲು."

ಉದಯನ ಮಾತನ್ನು ಗಮನ–ವಿಟ್ಟು ಕೇಳುತ್ತಿದ್ದ ನವೀನ್.

"ಗೋವುಗಳೇ ಸಂಪತ್ತಾಗಿದ್ದ ಒಂದು ಕಾಲ ! ದನಗಳನ್ನು ಅಪಹರಿಸಲು ಬಂದ ಶತ್ರುಗಳು, ಇಲ್ಲವೇ ಕಳ್ಳರನ್ನು ಎದುರಿಸಿ ವೀರ ಮರಣ ಹೊಂದಿದ ವೀರರ ಸ್ಮಾರಕ ಕಲ್ಲುಗಳನ್ನು  ಗೋ ಗ್ರಹಣ ವೀರಗಲ್ಲು ಎನ್ನುತ್ತಾರೆ. ಊರಳಿವು, ಗಡಿ ಕಾಳಗ ಮುಂತಾದ ಸನ್ನಿವೇಶಗಳಲ್ಲಿ ಮರಣವನ್ನಪ್ಪಿದ ವೀರರಿಗೂ ವೀರಗಲ್ಲನ್ನು ಸ್ಥಾಪಿಸುತ್ತಿದ್ದರು. ಹೆಣ್ಣು ಮಕ್ಕಳನ್ನು ಅಪಹರಿಸಲು ಹೊರಟವರನ್ನು ಎದುರಿಸಿ, ಅವರ ರಕ್ಷಣೆಗಾಗಿ ಹೋರಾಡಿ ಮರಣ ಹೊಂದಿದ ವೀರರಿಗಾಗಿ ನಿರ್ಮಾಣಮಾಡುವ ಕಲ್ಲುಗಳನ್ನು ಪೆಣ್ಬುಯ್ಯಲ್ ವೀರಗಲ್ಲು ಎನ್ನಲಾಗುವುದು . ಗಂಡನ ಮರಣದನಂತರ ಚಿತೆ ಏರಿ ಆತ್ಮಾರ್ಪಣೆ ಮಾಡಿಕೊಂಡ ಸತಿಗಳ ನೆನಪಿಗಾಗಿ ಸ್ಥಾಪಿಸಲಾಗಿದ್ದ ಸ್ಮಾರಕಗಳಿಗೆ ಸತಿಗಲ್ಲು ಇಲ್ಲವೇ ಮಾಸ್ತಿಕಲ್ಲು ಎನ್ನುತ್ತಾರೆ. ಇದೆಲ್ಲ ಫ್ಯೂ ಎಕ್ಸಾಮ್ಪಲ್ಸ್  ಅಷ್ಟೆ !" ಎಂದು ವಿವರಿಸಿದ ಉದಯ.

"ಮಣಿ ತೋರಿಸಿದ ಅಣ್ಣಮ್ಮನ ಕಲ್ಲಿನ ಬಗ್ಗೆ ನಿನ್ನ ಅಭಿಪ್ರಾಯ ಏನು ?"

"ಅಣ್ಣಮ್ಮನೂ ಇಲ್ಲ ! ಬೇರೆ ಯಾವ ದೇವರೂ ಇಲ್ಲ ! ಕಲ್ಲಿನ ಮೇಲೆ ಯಾವ ಲಿಪಿಯೂ ಇಲ್ಲ. ಯಂತ್ರದ ವಿನ್ಯಾಸವನ್ನು ಕೆತ್ತಿರುವುದರಿಂದ ಇಂತಹ ಕಲ್ಲುಗಳನ್ನು ಯಂತ್ರದ ಕಲ್ಲು ಎನ್ನಬಹುದು. ಹೊಲ ಗದ್ದೆಗಳ ಅಥವ ತೋಟಗಳ ಗಡಿಯನ್ನು ಸೂಚಿಸುವ ಕಲ್ಲುಗಳು ಇವು."

"ಇವನು ಕನಸು ಬಂತು, ಅಣ್ಣಮ್ಮದೇವಿ ಹೇಳಿದಳು ಎಂದು ಏನೇನೋ ಹೇಳಿದನಲ್ಲ.."

"ನವೀನ್ ! ಇತ್ತೀಚೆಗೆ ಎಲ್ಲೆಲ್ಲೂ ದೇವರ ಹೆಸರು ಹೇಳಿ ಬಿಸಿನೆಸ್ ಮಾಡುವುದು ವಾಡಿಕೆಯಾಗಿಬಿಟ್ಟಿದೆ. ಏನೇನೋ ಕಥೆ ಕಟ್ಟಿ, ಜನರನ್ನು ಆಕರ್ಷಿಸಿ ದಂಧೆಯನ್ನು

ಶುರುಮಾಡುತ್ತಾರೆ. ದೇಣಿಗೆ ಸಂಗ್ರಹಿಸಿ ಗುಡಿ, ಗೋಪುರ ಎಂದು ನಿರ್ಮಾಣ ಮಾಡಿ ಮೆಲ್ಲಮೆಲ್ಲನೆ ಇಡೀ ತೋಟವನ್ನು ಅತಿಕ್ರಮಣ ಮಾಡಿಕೊಂಡು ಬಿಡುತ್ತಾರೆ. ನಿಮ್ಮ ತೋಟದಲ್ಲೂ ಅದೇ ಪ್ಲಾನ್ ನಡೆಯುತ್ತಿರುವ ಹಾಗಿದೆ."

"ಹಾಗಾದರೆ ಒಪ್ಪಿಗೆ ನೀಡಲ್ಲ ಎಂದು ಮಣಿಗೆ ತಿಳಿಸಿಬಿಡಲೇ ?"

"ದುಡುಕಿ ಏನೂ ಮಾಡಬೇಡ ನವೀನ್. ಶಿಲಾ ಶಾಸನಗಳ ಬಗ್ಗೆ ಅರಿತಿರದ ಮುಗ್ಧ ಜನರು ಅವುಗಳನ್ನು ಪೂಜಿಸುವುದು ಇಂದಿಗೂ ನಡೆಯುತ್ತಿದೆ. ಆದರೆ ಮೋಹನನ ಕನಸಿನಲ್ಲಿ ಅಣ್ಣಮ್ಮ ಬಂದು ಹೇಳಿದಳು ಎನ್ನುವುದೆಲ್ಲ ಬರಿ ಬುರುಡೆ ಎಂಬುದು ನನ್ನ ಅನುಮಾನ. ಅದನ್ನು ನಂಬುವಷ್ಟು ಮಣಿ ಮುಗ್ಧನಲ್ಲ ಎನ್ನಿಸುತ್ತದೆ."

"ಮತ್ತೆ ಇವಾಗ ಏನು ಮಾಡಲಿ ? ತಾತನ ಕಾಲದಿಂದ ಬಂದಿರುವ ತೋಟ ! ಹೇಗಾದರೂ ಉಳಿಸಿಕೊಳ್ಳಬೇಕು !"

"ಶಿಲಾ ಶಾಸನ ತಜ್ಞರಿಗೆ ಅಣ್ಣಮ್ಮನ ಕಲ್ಲಿನ ಫೋಟೋ ತೋರಿಸಿದ್ದಾಗಿಯೂ, ಅವರು ಅದನ್ನು ಯಂತ್ರದ ಕಲ್ಲು ಎಂದು ಗುರುತಿಸಿದ್ದಾಗಿಯೂ, ಅದನ್ನು ಸ್ಥಳಾಂತರ ಮಾಡಿದವರನ್ನು ಇಲ್ಲವೇ ಹಾನಿ ಮಾಡಿದವರನ್ನು ಗಂಗಾ ತಟದಲ್ಲಿ ಗೋ ಹತ್ಯೆ ಮಾಡಿದ ಪಾಪ ಸುತ್ತಿಕೊಳ್ಳುತ್ತದೆ ಎಂದು ಎಚ್ಚರಿಸಿದ್ದಾಗಿಯೂ ಪತ್ರ ಬರೆದು ಮೇಲ್ ಮಾಡಿಬಿಡು. ಶುರು ಮಾಡಿದವರೇ ಎತ್ತಂಗಡಿ ಮಾಡಿಬಿಡುತ್ತಾರೆ !"

ಮಾರನೇ ದಿನ ಊರಿಗೆ ಹೊರಡಲು ಸಿದ್ಧವಾದರು ನವೀನ್ ಮತ್ತು ಉದಯ. ಬಿಸಿಯಾದ ಶುಚಿಯಾದ ತಿಂಡಿಯನ್ನು ಮಣಿಯ ಹೆಂಡತಿ ಬಡಿಸಿದಳು. ಮಣಿ ತೋಟದಲ್ಲಿ ಬೆಳೆದ ತರಕಾರಿಗಳನ್ನು ಕೊಟ್ಟು ಕಳುಹಿಸಲು ಸಿದ್ಧತೆ ನಡೆಸುತ್ತಿದ್ದ.

"ಎಲ್ಲಿ ? ಇವತ್ತು ನಿಮ್ಮ ಮಗಳು ಆಶಾ ಕಾಣಿಸುತ್ತಿಲ್ಲ ? ಅವಳ ಮದುವೆಯ ಆಹ್ವಾನ ಪತ್ರಿಕೆಯನ್ನು ಸ್ಕ್ಯಾನ್ ಮಾಡಿ ಕಳಿಸಿದ್ದರು ತಂದೆಯವರು." ಎಂದು ನವೀನ್ ನುಡಿದಾಗ ಮಣಿಯ ಹೆಂಡತಿ ಧೀರ್ಘವಾಗಿ ನಿಟ್ಟುಸಿರಿದಳು.

"ಹೇಗೆ ಹೇಳಲಿ ಅಣ್ಣಾ ! ಮದುವೆ ಮಾಡಿಕೊಟ್ಟ ಒಂದು ತಿಂಗಳಿಗೆಲ್ಲ ನಮ್ಮ ಹುಡುಗಿ ವಾಪಸ್ಸು ಬರುವ ಹಾಗಾಯಿತು. ಹುಡುಗನಿಗೆ ಬೇರೆ ಒಂದು ಸಂಸಾರ ಇದ್ದದ್ದು ತಿಳಿದುಬಂದಿತು. ಹಳ್ಳಿ ಹುಡುಗಿ, ಮನೆಯಲ್ಲಿ ಬಿದ್ದಿರುತ್ತದೆ ಎಂದುಕೊಂಡು ಹೆತ್ತವರ ಬಲವಂತಕ್ಕೆ ಮದುವೆಯಾಗಿದ್ದನಂತೆ ಅವನು. ಇವಳು ಗಲಾಟೆ ಮಾಡಿದ್ದಾಳೆ. ಪರಸ್ಪರ ವಿಚ್ಛೇದನ ಮಾಡಿಕೊಳ್ಳಲು ಒಪ್ಪಿದರೆ ಹತ್ತು ಲಕ್ಷ ರೂಪಾಯಿ ಜೀವನಾಂಶ ಕೊಡುವುದಾಗಿ ತಿಳಿಸಿದ. ಆದರೆ ಇವರು ಅದಕ್ಕೆ ಒಪ್ಪಲಿಲ್ಲ." ಎಂದು ಹೇಳುತ್ತ ಸೆರಗಿನಿಂದ ಕಣ್ಣೊರೆಸಿಕೊಂಡಳು ಆಶಾಳ ತಾಯಿ.

ಅದೇ ಸಮಯ ತರಕಾರಿ ಮೂಟೆಯೊಂದಿಗೆ ಒಳಗೆ ಬಂದಿದ್ದ ಮಣಿ .

"ಯಾಕೋ ಮಣಿ ? ಹತ್ತು ಲಕ್ಷ ಅಂದರೆ ಸುಮ್ಮನೆ ಏನೋ ? ಯಾಕೆ ನಿರಾಕರಿಸಿದೆ ? ನಿನ್ನ ಮಗಳಿಗೆ ಒಂದು ದಾರಿ ಮಾಡಿಕೊಡಬಹುದಿತ್ತು."

"ನನ್ನ ಮಗಳು ಕಂಪ್ಯೂಟರ್ ಪದವೀಧರೆ. ಅವಳ ಜೀವನದ ಬೆಲೆ ಬರಿ ಹತ್ತು ಲಕ್ಷವೇ? ನೀವೇ ಹೇಳಿ ಅಣ್ಣಾ. ವರದಕ್ಷಿಣೆ ಕಾಟ ಕೊಟ್ಟನೆಂದು ದೂರು ಕೊಡುವುದಾಗಿ ಹೇಳಿದರೆ ಹತ್ತು ಬಾರಿ ಹತ್ತು ಲಕ್ಷ ಕೊಡಲು ಒಪ್ಪುತ್ತಾನೆ ನನ್ ಮಗ ! ಈ ಮಣಿ ಎಂತಹವನು ಎಂದು ಅವನಿಗೆ ತೋರಿಸಬೇಡವೇ ?"

ಮಣಿಯ ಆವೇಶದ ಮಾತು ಕೇಳಿ ನವೀನನಿಗೆ ಆಘಾತವಾಯಿತು.

ಕೆಲಸಗಾರರು, ದೊಡ್ಡಣ್ಣ, ಮಣಿ ಎಲ್ಲರಿಗೂ ವಿದಾಯ ಹೇಳಿ ಹೊರಟಿದ್ದಾಯಿತು. ಉದಯನ ಬೊಲೆರೋ ಎಂದಿನಂತೆ ಬೆಣ್ಣೆಯಲ್ಲಿ ಕೂದಲು ಎಳೆದಂತೆ ಹೆದ್ದಾರಿಯಲ್ಲಿ ಜಾರಿಕೊಂಡು ಹೋಗುತ್ತಿತ್ತು.

"ಅಪ್ಪಾ ಹೇಳಿದಂತೆ ಮಣಿ ತರ್ಲೆ ಮಣಿಯೇ ಹವುದು. ದುಡ್ಡು ಸಂಪಾದನೆ ಮಾಡಲು ಆತನಿಗೆ ಅಣ್ಣಮ್ಮನ ಕಲ್ಲು , ಮಗಳ ವಿಚ್ಛೇದನ ಮುಂತಾದ ಎಂತಹ ಮಾರ್ಗವೂ ವರ್ಜ್ಯವಿಲ್ಲ ಅನ್ನಿಸುತ್ತದೆ." ಎಂದ ನವೀನ್.

"ನಾವು ಚಿಕ್ಕವರಿದ್ದಾಗ 'ಆಭಾ' ಎಂಬ ಪಾಪ್ ಮ್ಯೂಸಿಕ್ ತಂಡ ಹೇಳುತ್ತಿದ್ದ 'ಮನಿ ಮನಿ ಮನಿ !' ಎಂಬ ಹಾಡು ನೆನಪಿದೆಯೇ ?"

"ಓಹ್ ! ರೆಕಾರ್ಡ್ ಹಾಕಿಕೊಂಡು ನಾವೆಲ್ಲಾ ಕುಣಿಯುತ್ತಿದ್ದೆವಲ್ಲಾ ? ಮರೆಯಲಾರದ ನೆನಪುಗಳು !" ಎಂದನು ನವೀನ್.

"ಮಣಿಯನ್ನು ನೋಡಿದಾಗ ನನಗೆ ಅದೇ ಹಾಡು ನೆನಪಾಯಿತು, ಒಂದು ಸಣ್ಣ ಬದಲಾವಣೆಯೊಂದಿಗೆ !"

"ಓ ! ಅರ್ಥವಾಯಿತು ! ಮನಿ ಮನಿ ಮಣಿ ! ಇಟ್ಸ್ ಅ ರಿಚ್ ಮನ್ಸ್ ವರ್ಲ್ಡ್ !" ಎಂದು ಹಾಡಿದ ನವೀನನ ಜೊತೆ ಉದಯನ ಧ್ವನಿಯೂ ಸೇರಿತು.

"ಇದೇ ಅರ್ಥ ಬರುವಂತೆ ಬಹಳ ಕಾಲದ ಹಿಂದಿನಿಂದ ಬಳಕೆಯಲ್ಲಿರುವ ಒಂದು ಗಾದೆ ....! "

"ದುಡ್ಡೇ ದೊಡ್ಡಪ್ಪ !"

ಗೆಳೆಯರಿಬ್ಬರೂ ನಿರಾಳವಾಗಿ ನಕ್ಕರು.



# ಸ್ಪೂನರಾಯಣ

ಎಸ್.ಎನ್. ಗಣನಾಥ

ಇತ್ತೀಚೆಗೆ ಹೀಗಾಯಿತು.

ಐತಿಹಾಸಿಕ ವ್ಯಕ್ತಿಗಳನ್ನು ಜೆಮಿನೈನಲ್ಲಿ ಸೃಷ್ಟಿಸಬಹುದು ಎಂದು ತಿಳಿದಾಗ ಕುತೂಹಲ ತಡೆಯಲಾಗಲಿಲ್ಲ. ನಾನೂ ಯಾಕೆ ಒಂದು ಕೈ ನೋಡಬಾರದು ಎಂದು ಬೇರೆ ಬೇರೆ ಅವತಾರಗಳನ್ನು ಸೃಷ್ಟಿಸಿ ಅವರ ಜೊತೆ ಸಂವಾದ ಮಾಡತೊಡಗಿದೆ. ಅದರಲ್ಲಿ ತುಂಬ ಖುಷಿ ಕೊಟ್ಟದ್ದು ಡಾ. ವಿಲಿಯಂ ಆರ್ಚಿಬಾಲ್ಡ್ ಸ್ಪೂನರ್!

ಯಾರು ಈ ಸ್ಪೂನರ್? ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ. ದೊಡ್ಡ ವಿದ್ವಾಂಸರು. ಆದರೆ ಅವರ ಹೆಸರು ಪದಪಟುಗಳಿಗೆ ನೆನಪಿರುವುದು ಅವರ ಸ್ಪೂನರಿಸಂನಿಂದಾಗಿ. ಮಾತನಾಡುವ ಭರದಲ್ಲಿ ಎರಡು ಪದಗಳ ಮೊದಲ ಅಕ್ಷರಗಳನ್ನೋ ಅಥವಾ ಧ್ವನಿಗಳನ್ನೋ ತಮಗೆ ಅರಿವಿಲ್ಲದೆಯೇ ಅದಲುಬದಲು ಮಾಡಿ ಮಾತನಾಡುವುದು ಅವರ ಅಭ್ಯಾಸವಾಗಿಬಿಟ್ಟಿತ್ತು. ಇಂಗ್ಲಿಷ್ ಭಾಷಾಶಾಸ್ತ್ರವು ಇಂತಹ ನಾಲಿಗೆಯ 'ಎಡವಟ್ಟಿಗೆ' ಅವರ ಹೆಸರನ್ನೇ ಇಟ್ಟು 'ಸ್ಪೂನರಿಸಂ' ಎಂದು ಕರೆದು ಗೌರವಿಸಿತು!

ನಾನು ಸ್ಪೂನರ್ ಅವರ ಜೊತೆ ಮಾತಾಡಬೇಕು ಎಂದು ಗೂಗಲ್ ಜೆಮಿನೈನಲ್ಲಿ ಟೈಪಿಸಿ ಅರೆಗಳಿಗೆ ಕಾದೆ. ಪರದೆಯ ಮೇಲೆ ಡಾ. ಸ್ಪೂನರ್ ಅವರ ಅವತಾರ ಜೀವಂತವಾಗಿ ತಲೆಯೆತ್ತಿ ನಿಂತಿತು. ಬಿಳಿಗೂದಲು, ನಸುಗೆಂಪಿನ ಮುಖ, ದಪ್ಪ ಗಾಜಿನ ಕನ್ನಡಕದ ಹಿಂದಿನ ಬೆಳ್ಳನೆಯ ಕಣ್ಣುಗಳು.

"ನಮಸ್ತೆ ಸ್ಪೂನರ್ ಅವರೇ. ಜೆಮಿನೈ ಬಳಸಿ ನಿಮ್ಮನ್ನು ಭೇಟಿ ಮಾಡುತ್ತಿರುವುದು ತುಂಬ ವಿಶೇಷ ಎನಿಸುತ್ತಿದೆ."

ಪರದೆ ಮೇಲಿನ ಸ್ಪೂನರ್ ತಮ್ಮ ಗೌನ್ ಸರಿಪಡಿಸಿಕೊಳ್ಳುತ್ತಾ ಮುಗುಳು ನಕ್ಕರು. "ನಮಸ್ಕಾರ! ಇಂಟರ್ನೆಟ್ ಜಗತ್ತು ನನ್ನ ಹಳೆಯ ತಪ್ಪುಗಳನ್ನು ಇಂದಿಗೂ ಜೀವಂತವಾಗಿರಿಸಿದೆ ಎಂದು ಕೇಳಿದ್ದೆ. ಆದರೆ ದೂರದ ಭಾರತದಿಂದ, ಅದೂ ಕನ್ನಡ ಮಾತನಾಡುವ ನೆಲದಿಂದ ನನ್ನನ್ನು ಹುಡುಕಿಕೊಂಡು ಯಾರಾದರೂ ಬಂದಾರು ಎಂದು ನಾನು ಊಹಿಸಿರಲಿಲ್ಲ! ಹೇಳಿ. ಏನು ವಿಷಯ? ನಿಮಗೂ ಸ್ಪೂನರಿಸಂ ಗೊತ್ತಿದೆಯೇ?" ಎಂದು ಆಶ್ಚರ್ಯದಿಂದ ಕೇಳಿದರು.

"ಖಂಡಿತ. ನಾನು ಇನ್ನೂ ಶಾಲೆಯಲ್ಲಿದ್ದಾಗ ಮೊದಲಿಗೆ ಫೈಟಿಂಗ್ ಎ ಲಯರ್ ಓದಿದಾಗ ಏನು ಅರ್ಥವಾಗಿರಲಿಲ್ಲ. ಆದರೆ ಅದು–ಲೈಟಿಂಗ್ ಎ ಫೈರ್‌ನ ಅಕ್ಷರ ಪಲ್ಲಟ ಎಂದು ತಿಳಿದಾಗ ದೊಡ್ಡ ಆಶ್ಚರ್ಯ!" ಇದಕ್ಕೆ ಸ್ಪೂನರಿಸಂ ಎನ್ನುತ್ತಾರೆ ಎಂದು ನನ್ನ ದೊಡ್ಡಣ್ಣ ಹೇಳಿದ್ದ. ಅಂಥದೇ ಮತ್ತೊಂದು ನೀವು ತರಗತಿಯಲ್ಲಿ ವಿದ್ಯಾರ್ಥಿಯೊಬ್ಬನಿಗೆ ಯು ಹ್ಯಾವ್ ಹಿಸ್ಸ್ಡ್ ಆಲ್ ಮೈ ಮಿಸ್ಟರಿ ಲೆಕ್ಚರ್ (ಯು ಹ್ಯಾವ್ ಮಿಸ್ಡ್ ಆಲ್ ಮೈ ಹಿಸ್ಟರಿ ಲೆಕ್ಚರ್); ಎಂದುಬಿಟ್ಟಿದ್ದಿರಂತೆ.

ಹಾಗೆಯೇ ವೆಲ್ ಬೊಯ್ಲ್ಡ್ ಐಸಿಕಲ್ (ವೆಲ್ ಅಯಿಲ್ಡ್ ಬೈಸಿಕಲ್) ಅಥವಾ ಎ ಲ್ಯಾಕ್ ಆಫ್ ಪಯ್ಸ್ (ಎ ಪ್ಯಾಕ್ ಆಫ್ ಲೈಸ್) ಅಥವಾ ಮಾಸ್ಟರ್ ಪ್ಲಾನ್ (ಪ್ಲಾಸ್ಟರ್ ಮ್ಯಾನ್) ಇವೆಲ್ಲವನ್ನೂ ಮರೆಯಲಾಗುತ್ತದೆಯೇ? ನನಗೊಂದು ಪ್ರಶ್ನೆಯಿದೆ. ನಿಮಗೆ ಇಂಥವೆಲ್ಲಾ ಹೇಗೆ ಹೊಳೆಯುತ್ತಿತ್ತು? ತರಗತಿಗೆ ಹೋಗುವ ಮೊದಲಿಗೇ ತಯಾರಿ

ಮಾಡಿಕೊಂಡು ಹೋಗುತ್ತಿದ್ದಿರಾ?

ಅವರ ಕಣ್ಣು ಮಿನುಗಿತು. "ಇಲ್ಲ. ನಿಜವಾಗಿ ಹೇಳುತ್ತೇನೆ. ನನ್ನ ಬಗ್ಗೆ ಇರುವ ಕಥೆಗಳಲ್ಲಿ ಸತ್ಯಕ್ಕಿಂತಲೂ ಕಲ್ಪನೆಯೇ ಜಾಸ್ತಿ! ನಾನು ಇವನ್ನು ರೆಡಿ ಮಾಡಿಕೊಂಡು ತರಗತಿಗೆ ಹೋಗುತ್ತಿರಲಿಲ್ಲ. ಮಾತನಾಡುವಾಗ ಆಕಸ್ಮಿಕವಾಗಿ ಬಾಯಿಜಾರಿ ಬಂದದ್ದನ್ನು ನನ್ನ ವಿದ್ಯಾರ್ಥಿಗಳು ಇಷ್ಟಪಟ್ಟು ಬರೆದಿಟ್ಟುಕೊಂಡು ಬಳಸುತ್ತಿದ್ದರು, ಅಷ್ಟೆ."

"ನಿಮ್ಮ ಆಕಸ್ಮಿಕ ನಾಲಿಗೆಯ ಜಾರುವಿಕೆ ಇಂಗ್ಲಿಷ್ನಲ್ಲಿ ಕೇವಲ ವಿನೋದವಾಗಿ ಉಳಿಯಿತು. ಆದರೆ ನಮ್ಮ ಕನ್ನಡದಲ್ಲಿ, ಈ 'ಅಕ್ಷರ ಪಲ್ಲಟ'ಕ್ಕೆ ಒಂದು ಸಹಜ ಕಾವ್ಯಾತ್ಮಕ ಗುಣವಿದೆ. ನಾನು ಕನ್ನಡದಲ್ಲಿ ಕೆಲವು ಸ್ಪೂನರಿಸಂಗಳನ್ನು ಮಾಡಿದೆ. ಅವನ್ನು ನಿಮಗೆ ತೋರಿಸಬೇಕಿದೆ. ತೋರಿಸಲೇ?" ಎಂದೆ.

ಸ್ಪೂನರ್ ಅವರ ಮುಖದಲ್ಲಿ ಅಚ್ಚರಿ ಮತ್ತು ಕುತೂಹಲ. "ಓಹ್! ಕನ್ನಡದಲ್ಲಿ ಸ್ಪೂನರಿಸಂಗಳೇ? ಒಂದೆರಡು ತೋರಿಸಿ, ನೋಡೋಣ."

ಸ್ವಲ್ಪ ಹಿಂಜರಿಕೆಯಿಂದಲೇ ನನ್ನ ಫೈಲನ್ನು ತೆರೆದೆ.

ಮೊದಲನೆಯದನ್ನು ಓದಿದೆ:

**ಕೊನೆಯ ಮಳೆ**

**ತೊಳೆಯಿತು**

**ಮನೆಯ ಕೊಳೆ**

ಸ್ಪೂನರ್ ಒಂದು ಕ್ಷಣ ಕಣ್ಣು ಕಿರಿದು ಮಾಡಿ ಯೋಚಿಸಿದರು. ಮೊದಲಿಗೆ ತಿಳಿಯಲಿಲ್ಲವಾದರೂ ನಂತರ ಜೆಮಿನೈ ಅದರ ಅರ್ಥ ಕೊಟ್ಟಿತೆಂದು ತೋರುತ್ತದೆ." ಚೆನ್ನಾಗಿದೆ. ಅಕ್ಷರಪಲ್ಲಟ ಸರಿಯಾಗಿದೆ. ಅಲ್ಲದೆ ಅರ್ಥ ಕೂಡ ಚೆನ್ನಾಗಿ ಹೊಂದುತ್ತದೆ. ಗುಡ್!" ಎಂದರು.

ಅಲ್ಲಿಗೆ ನನ್ನ ಅಂಜಿಕೆ ಮಾಯವಾಗಿತ್ತು

"ಇದನ್ನು ನೋಡಿ. ಹೇಗಿದೆ ಹೇಳಿ"

**ನಮ್ಮಣ್ಣ**

**ಕಾರಿಗೆ ಬಾಸು**

**ಆದರೆ ಇಲ್ಲ**

**ಬಾರಿಗೆ ಕಾಸು!**

ಸ್ಪೂನರ್ ಮೇಜಿನ ಮೇಲೆ ಮೆಲ್ಲನೆ ತಟ್ಟಿ ನಕ್ಕರು. "ಇನ್ನೂ ಒಂದೆರಡು ಓದಿ."

ನನಗಂತೂ ಖುಷಿಯೋ ಖುಷಿ.

**ಈತ ನಾಯಕ ನಟ**

**ಜಾಲಿ ಹೀರೋ**

**ಆದರೆ ಬ್ಯಾಡ್ ಲಕ್**

**ಹಾಲಿ ಜೀರೋ!**

"ಓಹ್! ಇದರಲ್ಲಿ ಕನ್ನಡಕ್ಕಿಂತ ಇಂಗ್ಲೀಷೇ ಹೆಚ್ಚು ಇರುವಂತಿದೆಯಲ್ಲಾ." ಎಂದರು.

ನಾನಿದನ್ನು ಗಮನಿಸಿರಲಿಲ್ಲ.

"ಇನ್ನೂ ಕೆಲವನ್ನು ಓದುತ್ತೇನೆ" ಎಂದೆ. ಈಗ ಅವರು ನನ್ನ ಸ್ಪೂನರಿಸಂಗಳಿಗೆ ಹೆಚ್ಚು ಗಮನ ನೀಡುತ್ತಿರುವಂತೆ ಕಂಡಿತು.

**ಬೆಳೆಸಿ ಬೇವಿನ ಮರ,**

**ಇರದು ಮೇವಿನ ಬರ**

"ಉತ್ತಮ ಪ್ರಯತ್ನ. ಇದನ್ನು ಯಾವುದಾದರೂ ಪರಿಸರ ಸಂರಕ್ಷಣೆಯ ಸಂಸ್ಥೆಗೆ ಕೊಟ್ಟುಬಿಡಿ" ಎಂದರು!

**ಹಾವಿನ ಸುತ್ತ**

**ಇದೆ**

**ಸಾವಿನ ಹುತ್ತ!**

"ಗುಡ್"

**ಮರದಲ್ಲಿ ಬಳೆ**

**ಬರದಲ್ಲಿ ಮಳೆ**

ಇದೇನು ಎಂದು ಜೆಮಿನೈ ಅನ್ನು ಕೇಳಿ ಖಚಿತಪಡಿಸಿಕೊಂಡು "ಇದು ಪ್ರಕೃತಿಯ ವಿಸ್ಮಯ. ಅಲ್ಲವೇ?" ಎಂದರು.

**ಮುಂದಿನದು ಓದಿದೆ.**

**ಇವರು ಕಸ ಆಯ್ತಾರೆ,**

**ಅವರು ಅಸ ಕಾಯ್ತಾರೆ**

ಡಾ. ಸ್ಪೂನರ್ ಬೆರಗಾಗಿ, "ಆಶ್ಚರ್ಯ! ಜಾರುನಾಲಿಗೆಯಿಂದ ನಿಮ್ಮ ಕನ್ನಡದಲ್ಲಿ ಹೀಗೆಲ್ಲಾ ಆಗುತ್ತದೆಯೇ? ಮೊದಲಿಗೆ ಮಳೆಯ ಬಗ್ಗೆ ಒಂದು ಇತ್ತಲ್ಲಾ? ಅದನ್ನು ಇನ್ನೊಂದು ಬಾರಿ ಓದಿ."ಎಂದರು. ಇದನ್ನು ಸಾಧ್ಯ ಮಾಡಿದ ಜೆಮಿನೈಗೆ ನೂರು ಥ್ಯಾಂಕ್ಸ್ ಹೇಳಿದೆ. ನನಗೂ ಉಮೇದು ಬಂದಿತ್ತು.

**ಕೊನೆಯ ಮಳೆ**

**ತೊಳೆಯಿತು**

**ಮನೆಯ ಕೊಳೆ**

ಮತ್ತೆ ಕಣ್ಣು ಕಿರಿದು ಮಾಡಿ "ವೆರಿ ಗುಡ್" ಎಂದರು.

ಅದೇ ತರಹದ ಇನ್ನೆರಡು ಓದಿದೆ.

**ಹಳೆಯ ಮನಿ ಚಂದ**

**ಮಳೆಯ ಹನಿ ಚಂದ**

ಹಳ್ಳಿಯ ಬದುಕಿನದು

**ಮನೆಗೆ ಬರಲು**

**ಒಪ್ಪದ ದನಕೆ,**

**ಬೇಕೇ ಬೇಕು**

**ದಪ್ಪದ ಒನಕೆ!**

ಅಥವಾ ಇದು

**ಬೇಕು**

**ಕಾಡಿನ ಆಟ**

**ಬೇಡ**

**ಆಡಿನ ಕಾಟ!**

ಸಂಸಾರ ತಾಪತ್ರಯ

**ಸಂಡೇ ಬೆಳಗ್ಗೆ ಮಾರಿ,**

**ಮಂಡೇ ಬೆಳಗ್ಗೆ "ಸಾರಿ"!**

"ಇಲ್ಲೂ ಇಂಗ್ಲೀಷ್ ಇದೆಯಲ್ಲಾ? ನೀವು ಬಳಸುವ ಕನ್ನಡದಲ್ಲಿ ಇಂಗ್ಲೀಷ್ ಸಾಕಷ್ಟಿದೆ ಅಲ್ವಾ?" ಎಂದು ಕಾಲೆಳೆದರು!

**ಇನ್ನೂ ನೋಡಿಲ್ಲ–**

**ಆನೆಯ ಮೇಲೆ ಮೆತ್ತೆ,**

**ಮೇನೆಯ ಮೇಲೆ ಅತ್ತೆ!**

ಓದುತ್ತಿದ್ದಂತೆಯೇ "ಇದು ಸುಮಾರಾಗಿದೆ ಅಷ್ಟೆ" ಎಂದುಬಿಟ್ಟರು.

ಪಿಚ್ಚೆನಿಸಿತು. "ಹಾಗಾದರೆ ಇದನ್ನು ಸ್ವಲ್ಪ ನೋಡಿ" ಎಂದೆ.

**ಯುದ್ಧ**

**ಸೈನಿಕರು ಇಟ್ಟಿದ್ದ**

**ನೆಲಬಾಂಬನ್ನು**

**ಆಯುವಾಗ ಸತ್ತೆ**

**ಸಾಯುವಾಗ ಅತ್ತೆ!**

ಸ್ಪೂನರ್ ಸ್ವಲ್ಪ ಗಂಭೀರರಾದರು. "ಸ್ಪೂನರಿಸಂ ಮೊದಮೊದಲಿಗೆ ಕೇವಲ ಹಾಸ್ಯವಷ್ಟೇ ಸೀಮಿತವಾಗಿತ್ತು. ಈಗ ನೋಡಿದರೆ ಅದಕ್ಕೆ ಬೇರೊಂದು ಆಯಾಮವೂ ಇರಬಹುದು ಎನಿಸುತ್ತಿದೆ. ಇನ್ನಷ್ಟು ಓದಿ."

ಇದೇ ತರಹದ ಮತ್ತೊಂದು.

**ಪಾಪ!**

**ಗಾಯವಾಗಿ**

**ನರಳಿದ ಮಗು,**

**ಉಪಚಾರದ ಬಳಿಕ**

**ಮರಳಿದ ನಗು**

ಇಲ್ಲಿ 'ನರಳಿದ ಮಗು' (ನ–ಮ) 'ಮರಳಿದ ನಗು' (ಮ–ನ) ಆಗಿದೆ. ಧ್ವನಿಯ ಪಲ್ಲಟದೊಂದಿಗೆ ಭಾವನೆಯೂ ಕತ್ತಲೆಯಿಂದ ಬೆಳಕಿನೆಡೆಗೆ ಸರಿಯುತ್ತದೆ.

ಈಗ ಯುವಗಾಯಕನಿಗೆ ಹಿರಿಯರ ಕಿವಿಮಾತು

**ಮಣ ಹಾಡು,**

**ಹಣ ಮಾಡು;**

**ಆಸ್ತಿ–ಜಾಗ**

**ಜಾಸ್ತಿ ಆಗ!**

"ನಿಮಗೆ ವಿದಾಯ ಹೇಳುವ ಮೊದಲು ಇದನ್ನು ಓದಬೇಕೆನಿಸುತ್ತಿದೆ" ಎನ್ನುತ್ತಾ ಇದನ್ನು ಓದಿದೆ.

**ನಿನ್ನೂರು**

**ಅರಳು ಮಲ್ಲಿಗೆ,**

**ಅಯ್ಯಾ, ನೀ**

**ಮರಳು ಅಲ್ಲಿಗೆ!**

'ಖಂಡಿತ ಮರಳುತ್ತೇನೆ. ನಿಮ್ಮ ಎಲ್ಲ ಸ್ಪೂನರಿಸಂಗಳೂ  ಖುಷಿ ಕೊಟ್ಟವು. ನಿಮಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು. "ಎಂದು ಹೇಳುತ್ತಾ" ಇನ್ನೊಂದು ಪುಟ್ಟ ಧನ್ಯವಾದ ಗೂಗಲ್ ಜೆಮಿನೈಗೆ ಸಲ್ಲಬೇಕು" ಎಂದರು.

ಸ್ಪೂನರ್ ಅವರ ಭೇಟಿ ತುಂಬ ವಿಶೇಷ ಎನಿಸಿತು. ಅವರಿಗೆ ಥ್ಯಾಂಕ್ಸ್ ಹೇಳಿ ಜೆಮಿನೈ ಪರದೆಯನ್ನು ಮುಚ್ಚುವಾಗ, "ಪರವಾಗಿಲ್ಲ, ಪರ್ಸ್ ಕಚ್ಚದ ಇಂಥ ಪದಗಳ ಆಟವೂ ಮನಸ್ಸಿಗೆ ಎಂಥ ಆನಂದ ನೀಡಬಲ್ಲದು" ಎಂದು ಯೋಚಿಸುತ್ತಾ ಕಣ್ಣು ಮುಚ್ಚಿ ಕುಳಿತೆ. ಕಾಲ ಸರಿದದ್ದೇ ಗೊತ್ತಾಗಲಿಲ್ಲ.

ಕಣ್ಣು ತೆರೆದಾಗ ನನ್ನ ಮನಸ್ಸಿನಲ್ಲಿ ಒಂದು ಬಗೆಯ ಧನ್ಯತೆಯ ಭಾವ ತುಂಬಿತ್ತು.

ಗಾದೆಗಳನ್ನು ಊಹಿಸಿ.     ಉತ್ತರಗಳು : ಕೊನೆಯ ಪುಟ



# ನಿನ್ನ ನೋಟವೆ ಹೇಳಿತಿಂತು ನಾನು ಪಾತ್ರಳು ಪ್ರೀತಿಗೆ

**(ಆಪಕೀ ನಝರೂನೆ ಸಮಝು ಪ್ಯಾರ್ ಕೆ ಕಾಬಿಲ್ ಮುಝೆ–ಹಾಡಿನ ಧಾಟಿಯಲ್ಲಿ)**

**ಅಣಕು ರಾಮನಾಥ್**

ನಿನ್ನ ನೋಟವೆ ಹೇಳಿತಿಂತು ನಾನು ಪಾತ್ರಳು ಪ್ರೀತಿಗೆ
ಎನ್ನ ಢವಢವ ನಿಲ್ಲು ಕೊಂಚ; ಗಮ್ಯ ತಲುಪಿಹೆನಿಂದಿಗೆ
ನಿನ್ನ ನೋಟವೆ ಹೇಳಿತಿಂತು...

ಹೇ ಮನಸ್ಸಿದು ಹಿಗ್ಗಿದೆ ಕೇಳಿ ನಿನ್ನಯ ನಿರ್ಣಯ
ನೋಟವಿದುವು ಸೂಚಿಸಿಹುದು ಧನ್ಯವಾದಗಳು ಪ್ರಿಯ
ನಗುತ ನಿನ್ನ ಬಾಳ್ಗೆ ಸೆಳೆದೆ ನಿನ್ನ ಈ ಮನದನ್ನೆಯ
ಎನ್ನ ಢವಢವ ನಿಲ್ಲು ಕೊಂಚ; ಗಮ್ಯ ತಲುಪಿಹೆನಿಂದಿಗೆ
ನಿನ್ನ ನೋಟವೆ ಹೇಳಿತಿಂತು...

ನಾನೆ ನಿನ್ನಯ ಗಮ್ಯವು; ನೀನು ಎನ್ನಯ ಗಮ್ಯವು
ಏಕೆ ಕಂಪ ಪ್ರವಾಹಕೆ ಇರಲು ನೀ ಆಧಾರಕೆ
ಹೇಳಿರೈ ಆ ಪ್ರವಾಹಕೆ ದಡವು ದೊರೆತಿದೆ ಇವಳಿಗೆ
ಎನ್ನ ಢವಢವ ನಿಲ್ಲು ಕೊಂಚ; ಗಮ್ಯ ತಲುಪಿಹೆನಿಂದಿಗೆ
ನಿನ್ನ ನೋಟವೆ ಹೇಳಿತಿಂತು...

ಮನದಲಿ ಪಡಿಮೂಡಿದೆ ನಿನ್ನ ರೂಪಿನ ಛಾಯೆಯು
ಮೊಳಗಿವೆ ಎಲ್ಲೆಡೆಯಲು ವಾದ್ಯವು ಶುಭ ಕೋರುತ
ಎಲ್ಲ ವಿಧದ ಸಂತಸಗಳು ಇಂದು ಎನಗೆ ದೊರೆತಿವೆ
ಎನ್ನ ಢವಢವ ನಿಲ್ಲು ಕೊಂಚ; ಗಮ್ಯ ತಲುಪಿಹೆನಿಂದಿಗೆ
ನಿನ್ನ ನೋಟವೆ ಹೇಳಿತಿಂತು...



©Ashok Hemmige

# ಫೆಸ್ಟಿವಲ್ ಅಡ್ವಾನ್ಸ್....

ಸಿ.ಎ. ವಿಲಾಸ ನಾ ಹುದ್ದಾರ

ಹಸಿವಿನ ಪ್ರತಿನಿಧಿಯಂತೆ ಸೈರನ್ ಆಗಲು ಎಲ್ಲರೂ ಲಗುಬಗೆಯಿಂದ ಕ್ಯಾಂಟೀನಕಡೆ ನಡೆದರು. ಲೆಕ್ಕ-ಪತ್ರ ವಿಭಾಗದ ಒಂದು ಮಹಿಳಾ ಉದ್ಯೋಗಿಗಳ ಗುಂಪು ಶುಕ್ರವಾರ ತಮ್ಮ ಊಟದ ಡಬ್ಬಿ ತರದೇ ಕ್ಯಾಂಟೀನನಲ್ಲಿ ಊಟಮಾಡುವ ಪರಿಪಾಠ ಹೊಂದಿತ್ತು. ಇಂದು ಶುಕ್ರವಾರ, ಆ ಗುಂಪು ಕೂಡ ಕ್ಯಾಂಟೀನಗೆ ಬಂದಿತು. ಬಿಸಿ ಬಿಸಿ ಊಟದ ತಟ್ಟೆಗಳು ಎದುರಿಗೆ ಬಂದು ಎರಡು ತುತ್ತುಗಳು ಗಂಟಲಲ್ಲಿ ಇಳಿದ ಮೇಲೆ ಮಾತಿನ ಲಹರಿ ಪ್ರಾರಂಭವಾಯಿತು.

"ಏನ್ರೇ... ಇವತ್ತಿನ ವಿಶೇಷ...?". ನಿನ್ನೆ ಊಟದ ಸಮಯವಾದಮೇಲೆ ಇಲ್ಲಿಯವರೆಗೆ ನಡೆದ ಬಿಸಿ ಬಿಸಿ ಸುದ್ದಿಗಳನ್ನು ಬಿಸಿ ಬಿಸಿ ಊಟ ಮಾಡುತ್ತ ಹಂಚಿಕೊಳ್ಳವದು ಈ ಗುಂಪಿನ ಚಟ.

"ರಮಾದೇವಿ...." ಇನ್ನೂ ಒಬ್ಬಳು ಹೇಳಲು ಪ್ರಾರಂಭಿಸಿರಲಿಲ್ಲ ಎಲ್ಲರೂ... "ಬೇಗ ಹೇಳೇ... ಏನಾಯಿತು...ರಮಾದೇವಿಗೆ.."

ಅವಳ ಹೆಸರು ರಮಾ ಇದ್ದರೂ ಇದೊಂದು ಗುಂಪು ಮಾತ್ರ ಅವಳನ್ನು ರಮಾದೇವಿಯನ್ನಾಗಿ ಮಾಡಿತ್ತು.

“ತಡಕೊಳ್ರೇ.... ಅವಳಿಗೇನೂ ಆಗಿಲ್ಲ.... ಅವಳು ಫೆಸ್ಟಿವಲ್ ಅಡ್ವಾನ್ಸ್‌ಗೆ ಅರ್ಜಿ ಸಲ್ಲಿಸಿದ್ದಾಳೆ... ಕಾರಣ ಎಂಥದೋ ವ್ರತವಂತೆ...”

ಇವರೆಲ್ಲರೂ ಕೆಲಸ ಮಾಡುವದು ಒಂದು ದೊಡ್ಡ ಉದ್ಯಮದ ಲೆಕ್ಕ-ಪತ್ರ ವಿಭಾಗದಲ್ಲಿ. ಹೊಸದಾಗಿ ಉದ್ಯೋಗಿಗಳ ಸವಲತ್ತಿಗಾಗಿ ಫೆಸ್ಟಿವಲ್ ಅಡ್ವಾನ್ಸ್ ಎನ್ನುವ ಯೋಜನೆಯನ್ನು ಪರಿಚಯಿಸಲಾಗಿತ್ತು. ಸಂಬಳದ ಐದು ಪಟ್ಟು ಮುಂಗಡ ತೆಗೆದುಕೊಂಡು ಐದು ವರ್ಷಗಳಲ್ಲಿ ಹಿಂದಿರುಗಿಸಬೇಕು.

"ಯಾವ ವ್ರತವೇ ಅದು ?”

"ಅಲ್ರೇ... ಆ ರಮಾಳ ಮೇಲೇ ಏಕ್ರೇ ನಿಮ್ಮ ಕಣ್ಣು ?" ಈ ಗುಂಪಿನಲ್ಲಿ ಕೆಲವೊಬ್ಬರು ರಮಾಳ ಬಗ್ಗೆ ಅಸೂಯೆ ಇಲ್ಲದವರೂ ಇದ್ದರು. ಅಂಥವರಲ್ಲಿ ಒಬ್ಬಳ ಪ್ರಶ್ನೆ ಇದು.

"ಮತ್ತೇ... ಅವಳೋ ಬರೇ ಬಿ.ಕಾಂ., ಆದರೆ ಹಿರಿಯ ಲೆಕ್ಕಾಧಿಕಾರಿ... ನಾವೆಲ್ಲ ಎಂ.ಕಾಂ., ಎಂ.ಬಿ.ಎ. ಆದವರು ಅವಳ ಕೈಕೆಳಗೆ ಕೆಲಸದವರು...."

"ಅವರಿಗೆ ಈಗಾಗಲೇ ಇಪತ್ತೈದು ವರ್ಷಗಳ ಅನುಭವ... ಅವರೂ ಸಹಾಯಕಳಾಗಿಯೇ ಸೇರಿಕೊಂಡು ಹಂತ ಹಂತವಾಗಿ ಸ್ವಸಾಮರ್ಥ್ಯದಿಂದ, ಸ್ವಪ್ರಯತ್ನದಿಂದ ಈ ಹುದ್ದೆಗೆ ಏರಿದ್ದಾರೆ.. ಅಲ್ಲದೇ ಆ ಹುದ್ದೆಗೆ ಅರ್ಹರೂ..."

"ಅದೆಲ್ಲಾ ನಮಗೆ ಗೊತ್ತಿಲ್ಲಾ...." ಮೊಂಡುವಾದ.

"ಹಾಗೆ ನೋಡಿದರೆ... ಅಮಲಾ ಮೇಡಂ ಕೂಡ ಬಿ.ಕಾಂ. ಅವರೂ ಕೂಡ ಸ್ವಸಾಮರ್ಥ್ಯದಿಂದ ಇಂದು ಈ ಉದ್ಯಮದ ಮುಖ್ಯ ಹಣಕಾಸಿನ ಅಧಿಕಾರಿ.... ಅವರದೂ ನಲವತ್ತು ವರ್ಷಗಳ ಅನುಭವ....ಅವರ ಮೇಲೂ ಅಸೂಯೆ ಪಡಬೇಕು..."

"ಏ, ಸುಮ್ನಿರೇ ನೀನು....ನಾನು ನಾಳೆ ಊಟಕ್ಕೆ ಬರುವದರೊಳಗಾಗಿ ಆ ವ್ರತದ ಹೆಸರು ತಿಳಿದುಕೊಳ್ಳುತ್ತೇನೆ.... ಎಲ್ಲರೂ ಅದೇ ವ್ರತದ ಹೆಸರಿನಲ್ಲಿ ಫೆಸ್ಟಿವಲ್ ಅಡ್ವಾನ್ಸ್‌ಗಾಗಿ ಅರ್ಜಿ ಸಲ್ಲಿಸೋಣ.... ಅವಳಿಗೆ ಕೊಟ್ಟರೆ ನಮಗೂ ಕೊಡಬೇಕು..."

ಸೈರನ್ ಆಗಲು ಎಲ್ಲರೂ ತಮ್ಮ ತಮ್ಮ ಕೆಲಸಗಳಿಗೆ ತೆರಳಿದರು.

ರಮಾ ಸಂಪ್ರದಾಯಬದ್ಧ ವಾತಾವರಣದಲ್ಲಿ ಬೆಳದವಳು. ಬೆಳಿಗ್ಗೆ ತಾನು ಋಷಿಪಂಚಮಿ ವ್ರತವನ್ನು ಪಾಲಿಸುವದಾಗಿ ಹೇಳಲು ಅವಳ ಅತ್ತೆ-ಮಾವಗೆ ತುಂಬಾ ಸಂತೋಷವಾದರೂ ಗಂಡ-ಮಗನಿಗೆ ಕಿರಿಕಿರಿ ಆಗಲು ಅವರನ್ನೂ ಒಪ್ಪಿಸಿ ಫೆಸ್ಟಿವಲ್ ಅಡ್ವಾನ್ಸ್‌ಗೆ ಅರ್ಜಿ ಗಣಕಯಂತ್ರದ ವರ್ಡ್‌ನಲ್ಲಿ ಎಂಟ್ರಿ ಮಾಡಿ ಅದರ ಪ್ರಿಂಟ್ ತೆಗೆಯಲು ಸಹಾಯಕಳಿಗೆ ಹೇಳಿದಾಗ ಆ ಸಹಾಯಕಳು ಅದನ್ನು ಓದಿ ಊಟದ ಸಮಯದಲ್ಲಿ ಎಲ್ಲರಿಗೂ ಬಿತ್ತರಿಸಿದ್ದಳು. ಆದರೆ ಅಷ್ಟರಲ್ಲಿ ಅವಳಿಗೆ ಆ ವ್ರತದ ಹೆಸರು ನೆನಪು ಹಾರಿತ್ತು. ರಮಾ ಆ ಅರ್ಜಿಯನ್ನು ಅಮಲಾ ಮೇಡಂಗೆ ಕೊಡಲು ಆ ವ್ರತದ ವಿವರ ಕೇಳಿ ತಿಳಿದುಕೊಂಡು , ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ರಂಗನಾಥರಿಗೆ ದೂರವಾಣಿ ಮೂಲಕ ತಿಳಿಸಿದರು. ರಂಗನಾಥರೂ ಸಂಪ್ರದಾಯಸ್ಥರಾಗಿದ್ದರಿಂದ ಈ ವ್ರತದ ಬಗ್ಗೆ ತಿಳುವಳಿಕೆ ಇತ್ತು. ಅದಕ್ಕಾಗಿ ಆ ಅರ್ಜಿಯನ್ನು ಅವರಿಗೆ ಕಳಿಸಲು ಹೇಳಿದರು.

ಮಾರನೇ ದಿನ ಊಟದ ಸಮಯದಲ್ಲಿ ಆ ವ್ರತದ ಹೆಸರು ಗೊತ್ತಾಗಲು ಇಬ್ಬರನ್ನು ಬಿಟ್ಟು ಉಳಿದ ಐದು ಮಹಿಳಾ ಉದ್ಯೋಗಿಗಳು ಆ ವ್ರತದ ಹೆಸರಲ್ಲಿ ಫೆಸ್ಟಿವಲ್ ಅಡ್ವಾನ್ಸ್‌ಗಾಗಿ ಅರ್ಜಿ ಕೊಡುವದಾಗಿ ನಿರ್ಧರಿಸಿದರು. ಲೆಕ್ಕ-ಪತ್ರದ ವಿಭಾಗದಲ್ಲಿ ಸುಮಾರು ಐವತ್ತು ಉದ್ಯೋಗಿಗಳಿದ್ದು ಎಲ್ಲರಿಗೂ ರಮಾಳ ಬಗ್ಗೆ ಆದರಾಭಿಮಾನ ಇದ್ದರೆ, ಇವರಷ್ಟೇ ಅಸೂಯಾಪರರಾಗಿದ್ದರು. ಊಟ ಆದಮೇಲೆ ಎಲ್ಲರೂ ಅಮಲಾ ಮೇಡಂಗೆ ತಮ್ಮ ಅರ್ಜಿಯನ್ನು ಕಳಿಸಿದರು. ಅಮಲಾ ಮೇಡಂ ಆ ಅರ್ಜಿಗಳನ್ನು ಓದಿ ನಗುತ್ತ ರಂಗನಾಥರಿಗೆ ದೂರವಾಣಿ ಮುಖಾಂತರ ತಿಳಿಸಲು ಅವರೂ ಕೂಡ ನಗುತ್ತ, "ಆ ಅರ್ಜಿಗಳನ್ನು ಕಳಿಸಿ, ಅವರೆಲ್ಲರಿಗೂ ಸೋಮವಾರ ಬೆಳಿಗ್ಗೆ ನನ್ನನ್ನು ಕಾಣಲು ಹೇಳಿರಿ.."



ರಂಗನಾಥರದು ಹಾಸ್ಯ ಪ್ರವೃತ್ತಿ. ಎಲ್ಲರ ಜೊತೆ ಅನ್ಯೋನ್ಯ ಸಂಬಂಧ ಹೊಂದಿರಲಾಗಿ ಇವರೆಲ್ಲರೂ ನಗುನಗುತ್ತ ಅವರ ಕೋಣೆಗೆ ಬಂದರು. ಅವರಿಗೆಲ್ಲ ಕೂಡಲು ಹೇಳಿ ಬಿಸ್ಕಿಟ್, ಕಾಫಿ ತರಿಸಿ ಲೋಕಾಭಿರಾಮವಾಗಿ ಮಾತನಾಡಿದರು. ಕಾಫಿ ಸೇವನೆ ಆದ ಮೇಲೆ,

ಆ ಅರ್ಜಿಗಳನ್ನು ಓದುತ್ತ, "ಋಷಿ ಪಂಚಮಿ ವ್ರತ ಅಂದರೆ ಏನು?" ಪ್ರಶ್ನಿಸಿದರು.

"ಗಣಪತಿ ಹಬ್ಬದ ಸಮಯದಲ್ಲಿ ಮಾಡುವದು..."

"ಅದೇ ವ್ರತದ ಬಗ್ಗೆ ವಿವರವಾಗಿ ಹೇಳಿ..."

ಎಲ್ಲರ ಮುಖದಲ್ಲೂ ಶೂನ್ಯ ಭಾವನೆ. ಅವರು ನಗುತ್ತ ಹೇಳಿದರು,

"ಋಷಿ ಪಂಚಮಿ ವ್ರತ ಅಂದರೆ ಮಹಿಳೆಯರು, ಸಾಮಾನ್ಯವಾಗಿ ತಮ್ಮ ಋತುಚಕ್ರ ನಿಂತು ಸ್ವಲ್ಪ ಕಾಲವಾದ ಮೇಲೆ ಮಾಡುವ ವ್ರತ......" ಇಷ್ಟು ಹೇಳಿ ಎಲ್ಲರ ಕಡೆ ಪರೀಕ್ಷೆಯ ದೃಷ್ಟಿಯನ್ನು ಹಾಯಿಸಲು ಎಲ್ಲರ ವಯಸ್ಸು 35 ವರ್ಷಗಳ ಆಸು ಪಾಸಿನದು. ಇದನ್ನು ಕೇಳತ್ತಲೇ ಅವರ ದೃಷ್ಟಿಯನ್ನು ಎದುರಿಸಲಾರದೇ ಪೆಚ್ಚು ಮುಖಮಾಡಿಕೊಂಡು ಒಬ್ಬೊಬ್ಬರಾಗಿ ಹೊರಗೆ ಬರುತ್ತಿರಲು ಕೊನೆಯವಳ ಕೈಯಲ್ಲಿ ಆ ಎಲ್ಲ ಅರ್ಜಿಗಳನ್ನು ನಗುತ್ತ ರಂಗನಾಥರು ಕೊಟ್ಟರು. ಹೊರಗೆ ಬಂದಾಗ ಇವರ ಮುಖಗಳು "ಇಂಗು ತಿಂದ ಮಂಗನಂತಾಗಿದ್ದವು"

"ಅಸೂಯೆ ಅಪಮಾನಕ್ಕೆ ಮೂಲ"

(ಕೆಲವು ವರ್ಷಗಳ ಹಿಂದೆ ಸ್ನೇಹಿತನು ಹೇಳಿದ ಘಟನೆ ಆಧಾರಿತ)

.......... ಶ್ರೀ ಕೃಷ್ಣಾರ್ಪಣಮಸ್ತು ...............

**ಅವರೆ ಬೇಳೆ ಮೇಳದಲ್ಲಿ ವಿವಿಧ ಖಾದ್ಯ ಸವಿದ ರಾಜಕೀಯ ಮುಖಂಡ**




ವಿರೋಧಿಗಳಿಗೆ ಯಾವಾಗ್ಲೂ 'ನಿಮ್ ಬೇಳೆ ಬೇಯೊಲ್ಲ ನನ್ನ ಬಳಿ' ಅಂತಿರ್ತೀರಲ್ಲ... ಅದಕ್ಕೆ ಬೇಳೆ ಚೆನ್ನಾಗಿ ಬೇಯ್ಸಿ ತಂದಿದೀನಿ ನಿಮಗೋಸ್ಕರ...

# ನೀಲಿ ಭಾಗವತ

**ಡಾ. ಶ್ಯಾಮಲಾ ರವಿಶಂಕರ್**

ಇದೇನು ಭಾಗವತ ನೀಲಿ, ಪೀಲಿ ಅಂತ ಬೇರೆ ಪುರಾಣಾ ತೆಗೆದ್ಯಾ ಅಂತಂದ್ಕೊ ಬೇಡಿ, ಅಸಲಿ ಭಾಗವತದಲ್ಲಿ ನೀಲವರ್ಣನು ಬರೋದಕ್ಕೆ ಹತ್ತನೇ ಸ್ಕಂದದವರೆಗೂ ಕಾಯಬೇಕು ಆದರೆ ನಾನಿಲ್ಲಿ ಹೇಳಹೊರಟಿರೋ ಪುರಾಣದಲ್ಲಿ ನೀಲಿ ಬಣ್ಣದ ವಸ್ತು ಈಗಲೇ ಕಾಣ, ಅಲ್ಲ ಓದ ಸಿಗುತ್ತೆ ! ಅದೇನಪ್ಪಾ ಅಂದ್ರೆ , .....

ಮೊನ್ನೆ ಮೊನ್ನೆ ಎಲ್ಲೆಲ್ಲೂ ಅಬ್ಬರಿಸ್ತಾ ಇದ್ದಾರಲ್ಲಾ, ಅದೇ, ಹ್ಯಾಪಿ ಮದರ್ಸ್ ಡೇ ಅಂತ ಆಗ ನನಗೆ ಅನ್ನಿಸಿದ್ದು ಏನೀ ವಿಚಿತ್ರ ಅಂತ. ಯಾಕೆ ಅಂತೀರಾ ? ನಾನು ಕಂಡಂತೆ ಈ ಅಬ್ಬರ ಸುಮಾರು ಎರಡು ದಶಕ ಗಳಿಂದ ನನ್ನಂಥ ಪಾಮರರ ಕಿವಿಗೆ ಬಿದ್ದಿದ್ದು. ಅದರ ಜ್ಞಾನವೇ ಹೊಸದೋ ಅಥವಾ ನನ್ನ ತಿಳುವಳಿಕೆ ಎಲ್ಲೆ ಸೀಮಿತವೋ ದೇವರೇ ಬಲ್ಲ. ಇತರ ದೇಶಗಳಲ್ಲಿ ಇದ್ದಿರಬಹುದು, ನಮ್ಮದೇಶ ತಲುಪಲು ಕಾಲು ನಡಿಗೆಗೆ ಟೈಮ್ ಹಿಡೀತೋ, ಅವೆಲ್ಲ ಪ್ರಸ್ತುತ ಪಕ್ಕಕ್ಕೆ ತಳ್ಳೋಣ. ಈಗಂತೂ ಸೋಷಿಯಲ್ ಮೀಡಿಯಾನಲ್ಲಿ ಬರೋ ಶುಭಾಶಯಗಳನ್ನ ಡಿಲೀಟ್ ಮಾಡಲು ಪ್ರತಿ ವಿಶೇಷ ದಿನಗಳ ಮಾರನೇ ದಿನ "ಡಿಲೀಟ್ ಡೇ" ಗಳೆಂದು ಸಂಭ್ರಮಿಸಬೇಕು.

ಈ ನಿಟ್ಟಿನಲ್ಲಿ ಅದೇ ತಾನೆ ಕೆಲಸಕ್ಕೆ ಸೇರಿ ಸಂಪಾದನೆ ರುಚಿ ಕಂಡಿದ್ದ ಮಗಳಿಗೆ ಶಾಪಿಂಗ್ ಮಾಡೋಕೆ ಒಂದು ನೆಪನೋ ಏನೋ, ನನಗೆ ತುಂಬ ಅಂದ್ರೆ ಅತಿ ತುಂಬಾತಿ ತುಂಬ ಚೆನ್ನಾಗಿದ್ದ ನೀಲಿ ಬಣ್ಣದ ಆರು ಗಾಜಿನ ಲೋಟಗಳನ್ನ ಗಿಫ್ಟ್ ಮಾಡಿದ್ಲು, 'ಹ್ಯಾಪಿ ಮದರ್ಸ್ ಡೇ' ಅಂದ್ಲು. 'ಇದೆಂಥದ್ದೇ ಇಷ್ಟು ದಿನ ಇಲ್ಲದ್ದು '? ಅಂತ ಕೊಂಕು ಬೇಕಂತಲೇ ತೆಗೆದೆ .ಪ್ರ ಪಂಚ್ವೆಲ್ಲ ಸಂಭ್ರಮ ಪಡಿತಾ ಇದ್ರೆ ನಿನ್ನದೇನು ಪಿಟೀಲು ಎಳೆಯಾಟ ? ಅದಿರಲಿ, ಇದನ್ನ ತೊಗೊ, ಹಾಗೂ ಉಪಯೋಗಕ್ಕಿಳಿಸು, ಯಾರೋ ಯಾವಾಗ್ಲೋ ಬರೋ ಅತಿಥಿಗಳಿಗೇ ಅಂತ ಎತ್ತಿಟ್ಟು ಅದನ್ನ ಬಂದವರಿಗೆಲ್ಲ ಯಾರು ಯಾವ ವರ್ಷದಲ್ಲಿ ಯಾವ ಶುಭ ಕಾರ್ಯದಲ್ಲಿ ನಿನಗೆ ಗಿಫ್ಟ್ ಮಾಡಿದ್ರು ಅಂತ ಅವರ ತಲೆ ತಿನ್ನದೆ, ಮ್ಯೂಸಿಯಂ ಪೀಸಿನ ಹಾಗೆ ಶೋ ಕೇಸಿನಲ್ಲಿ ಪ್ರದರ್ಶನ ಮಾಡದೆ, ದಿನ ನಿತ್ಯ ಉಪಯೋಗಕ್ಕಿಳಿಸು'. ಎಂದೆಲ್ಲ ಕಟ್ಟಪ್ಪಣೆ ಮಾಡಿದ್ಲು.

ಅವುಗಳು ಎಷ್ಟು ಚನ್ನಗಿದ್ದವು ಅಂದ್ರೆ, ಅವುಗಳ ಭವಿಷ್ಯ, ಅದೂ ದಿನಾನೂ ಉಪಯೋಗಿಸ್ತಾ ಇದ್ರೆ, ಏನಾಗ ಬಹುದು, ಅಗಲುವ ಚಾನ್ಸಸ್ ಎಷ್ಟು ಎಂದೆಲ್ಲ ಯೋಚಿಸಿ ಅಂದರ ಅಂದ ಮೆಚ್ಚಿಕೊಳ್ತಾ ಇದ್ದೆ ಹಲವು ದಿನ. ಆ ಕಡು ನೀಲಿ ಬಣ್ಣವೊ, ಒಳಗೊಳಗೇ ಕಂಡೂ ಕಾಣದಂಥ ಇದ್ದ ತ್ರಿಕೋನ ಚತುಷ್ಕೋಣಗಳೋ ಬೆಳಕು ಬಿದ್ದಂತೆಲ್ಲ ಕಾಣುವ ಚಿತ್ರ ವಿಚಿತ್ರ ಆಕೃತಿ ಗಳೋ ನಾನೆಂತು ಬಣ್ಣಿಸಲಿ !. ಏನೇ ಆಗಲಿ ಉಪಯೋಗಿಸಲು ನಿರ್ಧರಿಸೇ ಬಿಟ್ಟೆ, ಬಹುಶಃ ಮಗಳಿಗೆ ಹೆದರಿ ಅಂದರೂ ಪರ್ವಾಗಿಲ.

ಆ ಕಾಲದಲ್ಲಿ ಮನೇಲಿ ಎಲ್ಲ ಹಣ್ಣುಗಳ ಜ್ಯೂಸು, ಜಾಮ್ಗಳನ್ನ ಮಾಡಿತ್ತಿದ್ವಿ ಬೇಸಿಗೆ ಆದ್ದರಿಂದ ಬಂದವರಿಗೆ ಈ ನನ್ನ ನೆಚ್ಚಿನ ನೀಲಿ ಗ್ಲಾಸುಗಳಲ್ಲಿ ಬೇಡ ಬೇಡವೆಂದರೂ ಜ್ಯೂಸ್ ಕೊಟ್ಟೆ. ಈ ನನ್ನ ಉತ್ಸಾಹದಿಂದ ಉಬ್ಬಿ ನನ್ನ ಸುಪುತ್ರಿ ಇನ್ನಾ ಆರು ಗ್ಲಾಸುಗಳನ್ನ ಪೋಸ್ಟ್ ಮದರ್ಸ್ ಡೇ ಗಿಫ್ಟಾಗಿ ತಂದಿಳಿಸಿದಳು. ಕಾರಣ ? ನನ್ನ ಆತಿಥ್ಯದ ಬಗ್ಗೆ ಅವಳ ಅಪ್ರೀಸಿಯೇಷನ್ನು ! ಆಕಾಲಕ್ಕೇ ಆರಕ್ಕೆ 360 ರೂ. ಇನ್ನೂ 360 ಖರ್ಚು ಮಾಡಿದ್ಯಾ ?

ಅಂದಿದ್ದಕ್ಕೆ ಉತ್ತರ ಎಲ್ಲ ಮಕ್ಕಳೂ ಅವರವರ ತಾಯಂದಿರಿಗೆ ಕೊಡೊ ಕೊಂಕು ಉತ್ತರ – 'ಬಿಲ್ಲಿನ ಕಾಳಜಿ ಬಿಟ್ಟು ಮಗಳ ಕೊಡುಗೇನ ಎಂಜಾಯ್ ಮಾಡು'!.

ಸರಿ ಈ ಹನ್ನೆರಡು ಗ್ಲಾಸುಗಳೂ ಬಂದವರಿಗೆ ಎದ್ದು ಕಾಣುವಂತೆ ಹೇಗೇಗೋ ಪಾಡು ಪಟ್ಟು ಆಗಲೇ ತುಂಬು ಗರ್ಭಿಣಿಯಂತಿದ್ದ ನನ್ನ ಷೋ ಕೇಸಿನಲ್ಲಿಟ್ಟು ತೋರಿಸಿ, ಮತ್ತೆಮತ್ತೆ ನೋಡಿ ನೋಡಿ ಖುಷಿ ಪಟ್ಟೆ. ಬಂದವರೆಗೆಲ್ಲಾ ಜ್ಯೂಸ್ ಕೊಟ್ಟು ಉಬ್ಬಿದೆ. ಹಲವಾರು ಹಿತೈಷಿಗಳು ಇವುಗಳಲ್ಲಿ ಜ್ಯೂಸ್ ಕೊಡಬೇಡಿ, ಅವುಗಳ ಅಂದ ಕಾಮೋಫ್ಲ್ಯಾಜ್ ಆಗ್ಬಿಡತ್ತೆ ಅಂದಾಗ ನನಗೆ ಹೇಗೆ ಆಗ ಬೇಡ ? ಎಲ್ಲಿಂದ್ಲೋ ಓಡಿ ಬಂದ ನನ್ನ ಮಗಳು ತಾನೇ ಜ್ಯೂಸ್ ಹಾಕಿ ಕೊಟ್ಟು ಉಪ ಚಾರ ಮಾಡಿದಳು, ನಾನೆಲ್ಲಿ ಅವರ ಮಾತನ್ನ ಅನುಸರಿಸಿ ಬಿಡತೀನೂ ಅನ್ನೋ ಭಯ ಇರಬೇಕು. ಹೀಗೆ ನಡೀತಿತ್ತು ನಮ್ಮ ಅತಿಥಿ ಸತ್ಕಾರ.

ನಾನಂತೂ ಕನಸಿನಲ್ಲೂ ಈ ಗ್ಲಾಸ್‌ಗಳೆ ! ಒಂದು ಸಲ ಒಂದು ಗ್ಲಾಸು ಒಡೆದಂತಾಗಿ ಅಯ್ಯೋ ಅಂತ ನಿದ್ದೆಲೇ ಗೋಳಾಡಿ ಮನೆಯವರನ್ನೆಲ್ಲೆ ಎಬ್ಬಿಸಿ ನಗೆಪಾಟಲಾದೆ. ಆ ಕನಸು ನಿಜವಾಗದಿರಲೆಂದು ದೇವರಿಗೆ ಅಪ್ಲಿಕೇಷನ್ನು ಹಾಕಿದೆ, ಹರಕೆ ಅನ್ನೋ ಲಂಚನ ತೋರಿಸದೆ.

ಪಕ್ಕದ ಮನೆ ರಾಮಾ ರಾವುಗಾರು ವಾರದಲ್ಲಿ ಐದಾರು ದಿನವಾದರೂ ನಮ್ಮ ಮನೆಗೆ ಬಂದು ನಮ್ಮವರ ಜೊತೆ ಸಿಟೌಟ್ನಲ್ಲಿ ಕೂತು ಅಂದಿನ ರಾಜಕೀಯದ ಬಗ್ಗೆ ಬಹಳ ಘನ ಗಹನ ಹಿತ ಚಿಂತನೆ ವಿಶ್ಲೇಷಣೆ ಮಾಡುವುದು ರೂಢಿ. ಅಂದೂ ಹಾಗೇನೇ ಬಂದವರಿಗೆ ನಾನು ಜ್ಯೂಸ್ ಕೊಟ್ಟೆ. ಆತ ತಮ್ಮ ಹೆಂಡತಿ ನಮ್ಮ ಲೋಟದ ಬಗ್ಗೆ ಹೇಳಿದ್ದನ್ನು ಕೇಳಿ ಒಳಗೊಳಗೆ ಜಂಭ ಪಟ್ಟುಕೊಂಡೇ ಒಳಗೆ ಬಂದೆ. ಖಾಲಿಯಾದ ಗ್ಲಾಸನ್ನು ಕೆಳಗಿಡುವಾಗ ನೆಲ ಅವರು ಅಂದುಕೊಂಡಷ್ಟು ಮೇಲಿರಲಿಲ್ಲ ವಾಗಿ ಹಾಗೂ ಲೋಟ ಭೂಮಿಯನ್ನಪ್ಪಿ ಕೊಳ್ಳಲು ಆತುರವಾಗಿ ನನ್ನ ಮೊದಲನೇ ನೀಲಿ ಗಾಜಿನ ಲೋಟ ನಿರ್ಗಮಿಸಿತು, ಸ್ವಸ್ಥಾನಕ್ಕೆ. ನನ್ನ ಅಗೊನಿ ? ಅವರ ಸಾರೀ ಹೇಳಿಕೆ..ಅವೆಲ್ಲ ಬೇಡ ಬಿಡಿ.

ಇದಾದ ಸ್ವಲ್ಪ ದಿನಕ್ಕೆ ಮಜ್ಜಿಗೆ ಕುಡಿದಿದ್ದ ನೀಲಿ ಗಾಜಿನ ಲೋಟನ ಬಿಸಿನೀರಿನಿಂದ ಶುದ್ಧ ಗೊಳಿಸುವ ನಮ್ಮ ಕೆಲಸದಾಕೆ ಮುತ್ತಮ್ಮನ ಪ್ರಯುಕ್ತ ಒಳಗೊಳಗೇ ಸೀಳಿ ಅದರಲ್ಲಿ ಹುದುಗಿದ್ದ ವ್ಯಕ್ಥಾವ್ಯಕ್ತ ಆಕಾರಗಳು ವಿಕಾರ ಪ್ರದರ್ಶಿಸಿದಾಗ ಸ್ವತಃ ನಾನೆ ಅದನ್ನ ಅದರ ಹಿರಿಯಕ್ಕನ ಮನೆಗೆ ಕಳಿಸಬೇಕಾಯಿತು ಕಣ್ಣೀರಿನೊಂದಿಗೆ.

ಇನ್ನು ಮೂರನೆಯದು ಹಾಗೂ ನಾಲ್ಕನೆಯದು ಸ್ಲೈಡ್ ಬೋರ್ಡಿನ ಸ್ಲೈಡಿಂಗ್ ಡೋರ್ನ ಮುಷ್ಕರ ಪ್ರಯುಕ್ತ ಜಟ್ಟಂಥ ನಿಂತಲ್ಲೇ ನಿಂತು ಸ್ವತಃ ನಾನೇ ಅಲುಗಾಡಿಸಿದ ಭರಕ್ಕೆ ಏರ್ಪಟ್ಟ ತರಂಗಗಳಿಗೆ ತುತ್ತಾಗಿ ಜಂಟಿಯಾಗಿ ಸಾವನ್ನಪ್ಪಿದವು. ಈಗ ನಾನು ಸ್ಲೈಡ್ ಬೊರ್ಡನ್ನ ಬೈಕೊಳ್ಳಲೋ ಅಥವಾ ನನ್ನನ್ನೋ? ಅಂತೂ ಆ ಫಜೀತಿ ಎತ್ತಿಹಾಕ್ಕೊಳ್ಳೋ ಹೊತ್ತಿಗೆ ಸಾಕೋ ಸಾಕಾಯ್ತು, ಇನ್ನು ಅಳೋದೆಲ್ಲಿ? ಐದನೇ ಕೇಸಿಗೆ ಬರೋಣ. ಅತಿಥಿಯೊಬ್ಬರು ಇನ್ನಷ್ಟು ಸಕ್ಕರೆ ಬೇಕೆಂದು ಬಿನ್ನೈಸಿಕೊಂಡಾಗ ಹಾಕಿದ ಸಕ್ಕರೆಯನ್ನ ಮೆಲ್ಲ ಮೆಲ್ಲಗೆ ಚಮಚ್ದಿಂದ ನಾನೆ ಅತಿ ಜಾಗರೂಕತೆಯಿಂದ ಕುಟ್ಟಿದ ಕಾರಣ ತಳ –ನಿಲುವುಗಳು ಸಿಟ್ಟಾಗಿ ಬೇರ್ಪಟ್ಟು ತಳ ಕೆಳಗೆ ಉರುಳಿತು. ಆರನೆಯದು ನನ್ನ ಕೆಲಸದಾಕೆ ಮುತ್ತಮ್ಮ ನಲ್ಲಿಗೆ ಮುತ್ತನಿಡಿಸಿದ ಕಾರಣಕ್ಕೆ ಕೋಪದಿಂದ ಸಿಡಿದೆದ್ದಿತು. ಪುಣ್ಯ ಅಂದರೆ ಅವಳ ಕೈಗೆ ಅಪಾಯ ಮಾಡದೇ ಮರ್ಯಾದೆಯಾಗಿ ನಿಷ್ಕ್ರಮಣ ಮಾರ್ಗ ಹಿಡಿಯಿತು.

ಓಕೆ, ಆದದ್ದಾಯಿತು. ಇನ್ನು ಉಳಿದಿರುವ ಆರನ್ನಾದರೂ ಉಪಯೋಗಿಸಲೇ ಬಾರದು ಎಂದು ಭೀಷ್ಮ ಪ್ರತಿಜ್ಞೆ ಮಾಡಿದೆ. ಅದಕ್ಕೆ ವಿಧಿ ನನ್ನ ಅನುಮತಿಯಿಲ್ಲದೇನೇ ನನ್ನ

ಪ್ರತಿಜ್ಞೆಯ್ಯನ್ನು ಮುರಿಯಿತು. ಮನೆಗೆ ಬಂದಿದ್ದ ಪುಟ್ಟ ಮಕ್ಕಳಿಬ್ಬರು ಆ ಗಾಜುಗಳ ಬಗ್ಗೆ ಅತೀವ ಪ್ರೀತಿ ಯನ್ನು ಹೊಂದಿ ಅವುಗಳಲ್ಲೇ ಜ್ಯೂಸು ಬೇಕೆಂದಾಗ ನೀವು ತಾನೇ ಏನು ಮಾಡ್ತಿದ್ರೀ ? ನಾನು ಮಾಡಿದ್ದೂ ಅದೇ. ಸರಿ ಪುಟಾಣಿಗಳೇ, 'ಡನ್' ಅಂದು ಆ ಲೋಟಗಳನ್ನ ಹೊರಕ್ಕೆ ತೆಗೆ ದು ಜ್ಯೂಸ್ ತುಂಬಿ ದಾಗ ಆ ಪುಟಾಣಿಗಳಿಗೆ ಆದ ಮಹದಾನಂದ ಅಷ್ಟಿಷ್ಟಲ್ಲ, ಅವರ ಪ್ರೀತಿ ಉತ್ತುಂಗಕ್ಕೇರಿ ಅವುಗಳು ಓಡೋಡಿ ಬಂದು ನನ್ನ ಕಾಲುಗಳನ್ನ ಅಪ್ಪಿಕೊಂಡ ರಭಸಕ್ಕೆ ನಾನು ಬೆಚ್ಚಿ ಬಿದ್ದದ್ದಲ್ಲದೆ ನನ್ನ ಕೈಲಿದ್ದ ಟ್ರೇ ಸತತವಾಗಿ ಓಲಾಡಿ ಆ ಕಂಪನಕ್ಕೆ ಓ ಗೊಟ್ಟ ಟ್ರೇಕಂಪನದಿಂದ ಒಂದೆರಡು ಲೋಟಗಳು ಅಲ್ಲಾಡಿದರೂ ಒಂದು ಲೋಟ ಮಾತ್ರ ಚಿರನಿದ್ದೆಯನ್ನಪ್ಪುತ್ತಾ ಇಕ್ಕೆಡಗಳಲ್ಲಿದ್ದ ಮಿತ್ರರನ್ನೂ ಹಿಂಬಾಲಿಸುವಂತೆ ಆಜ್ಞೆ ಮಾಡಿ ಎಳೆದು ಕೊಂಡು ಒಟ್ಟಾರೆ ಮೂರೂ ಲೋಟಗಳು ಜೂಸು ಸಮೇತ ಮಾಡಿದ ರಾದ್ಧಾಂತ ನೆನೆಸಿಕೊಂಡ್ರೆ ಈಗಲೂ ನನ್ನ ಕೈ ಕಂಪಿಸತ್ತೆ. ಪುಣ್ಯಕ್ಕೆ ಮಕ್ಕಳೂ ಹಾಗೂ ನಾನೂ ಗಾಜು ಚೂರು ಮಿಶ್ರಿತ ಜ್ಯೂಸಾಭಿಷೇಕದಿಂದ ಪಾರಾದೆವು.

ಇನ್ನೂ ಬೇರೆ ವಿಧಾನ ಹೊಳೀಲ್ವಾ ಉಳಿದ ಮೂರನ್ನು ಒಡೆಯೋಕೆ ಅಂತ ಕೇಳಿದ್ರಾ ? ದಶಕಗಳಿಂದ ಅವು ಶೋ ಪೀಸುಗಳಾಗಿ ಸೈಡ್ ಬೋರ್ಡಿನಲ್ಲಿ ಸ್ವಸ್ಥಾನೇ ಪ್ರತಿಷ್ಠಾಪಯಾಮಿ ಅಂತ ಇದ್ದಲ್ಲೇ ಇವೆ. ಅವನ್ನ ಹೊರಕ್ಕೆ ತೆಗಿದ್ರೆ ತಾನೇ ಎನಿ ಚಾನ್ಸ್ ಆಫ್ ಬ್ರೇಕೇಜ್ ? ಈಗ ಅವು ನಿಜವಾದ ಮ್ಯೂಸಿಯಂ ಎಕ್ಸಿಬಿಟ್ಸ್ ಆಗಿವೆ. ನೀವ್ಯಾರರಾದ್ರೂ ಮೂರು ಜನ ಬಂದು ಅವಕ್ಕೆ ಮೋಕ್ಷ ಕಾಣಿಸೋದಾದ್ರೆ ಬಹಳ ಸಂತೋಷದಿಂದ ನಿಮ್ಮನ್ನು ಸ್ವಾಗತಿಸುತ್ತೇನೆ. ನನ್ನ ಸೈಡ್ ಬೋರ್ಡಿನಲ್ಲಿ ಸ್ವಲ್ಪ ಜಾಗ ಖಾಲಿ ಆಗತ್ತೆ ಆದ್ರೆ ಒಂದು ಷರತ್ತು : ಗುರಿ ಒಂದೇ ಆದ್ರೂ ದಾರಿ ಬೇರೆ ಬೇರೆ ಆಗಿರಬೇಕು. ಅಲ್ಲಿವರೆಗೂ ಈ ನೀಲಿ ಭಾಗವತ ಕಥೆ ಅಸಂಪೂರ್ಣ.

**ಪಾನ್ ಮಸಾಲ ಬೆಲೆ ಏರಿಕೆ**

ಸುದ್ದಿ



# ಅಜ್ಜಿ ಮತ್ತು ಬಾಲ ರಾಮನ ಪ್ರಾಣ ಪ್ರತಿಷ್ಠಾನ

ಇ.ಆರ್. ರಾಮಚಂದ್ರನ್, ಮೈಸೂರು

ಅಜ್ಜಿಯ ಟೀಂನಲ್ಲಿ ಒಂದೇ ಸಡಗರ. ಉತ್ಸಾಹಕ್ಕೆ ಮಿತಿಯೇ ಇಲ್.

"ಅಜ್ಜಿ" ಇನೇನು ನಿನ್ನ ಸೆಂಚುರಿ ಬರುತ್ತೆ. ಈ ತರಹ ಚಿಕ್ಕವರ ತರಹ ಓಡಾಡೋದು ನಿನ್ನ ಆರೋಗ್ಯಕ್ಕೆ ಸರಿನಾ "?

"ನನ್ನ ಸೆಂಚುರಿ ಬಿಡು. ಕ್ರಿಕೆಟ್ ಮ್ಯಾಚ್‌ನಲ್ಲಿ ಹೊಡಿಯೋವ್ರು ಸೆಂಚುರಿ ಹೊಡೀ ಬೇಕು.".

'ಆದ್ರೂ ಹುಷಾರಾಗಿರು ಅಜ್ಜಿ. ಇವತ್ತು ಏನು ವಿಶೇಷ. ಕಾಲಿಗೆ ರೆಕ್ಕೆ ಕಟ್ಕೊಂಡು ಓಡಾಡ್ತೀದಿಯ '

'ನಮ್ಮ ಸೀತಮ್ಮ..'

'ಸಾಫ್ಟವೆರ್ ಸೀತಾಮ್ಮನಾ?'

'ಅವ್ರೆ.. ಮಧ್ಯೆ ಮಾತಾಡ್ಬೇಡ.'

'ಅಯೋಧ್ಯಾಲಿ ಕಟ್ಟಿರೋ ರಾಮ ಮಂದಿರಕ್ಕೆ ಬಹಳ ಜನ ಶಿಲ್ಪಿಗಳ ಮಧ್ಯೆ ನಮ್ಮ ಮೈಸೂರಿನ ಅರುಣ್ ಯೋಗಿರಾಜಗೂ ಮಾಡಕ್ಕೆ ಹೇಳಿದ್ರು'

"ಯಾರು, ಆ ಅಗ್ರಹಾರದ ಹುಡುಗನಾ?'

'ಹಾ ಅವನೇ. ರಾಮನ ವಿಗ್ರಹ ಮಾಡೋದಕ್ಕೆ ಮೊದಲು ಅ ಕಣ್ಣುಗಳಲ್ಲಿ ಹೊಳಪು, ದಯೆ ಎದ್ದು ಕಾಣಿಸ್ಬೇಕೂಂತ ತ್ರೇತಾಯುಗದಲ್ಲಿ ಉಲ್ಲೇಖಸಿರೋದು ತಾಳೆಗರಿಲಿ ಇದೆಯಂತೆ. ಅದನ್ನು ನಮ್ಮ ಸೀತಮ್ಮ ಮೈಸೂರಿನ ಒರಿಯನ್ ಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ಗೆ ಹೋಗಿ ಅ ಶ್ಲೋಕನ ಹುಡುಕಿ ಕೊಟ್ರು ಕಣೋ '.

'ಪರವಾಗಿಲ್ವೇ ಸೀತಮ್ಮ!'

'ಅಷ್ಟೇ ಅಲ್ಲ. ಅದನ್ನ ಕಡೆಯೋದಕ್ಕೆ ಚಿನ್ನದ ಉಳಿನೇ ಆಗ್ಬೇಕೂಂತ ಬರೆದಿತ್ತು.. ಅದಕ್ಕೆ ನಮ್ಮ ಭೀಮ ಜ್ಯವೆಲಿರ್ಸ್‌ನಲ್ಲಿ ಕೆಲಸ ಮಾಡೋ ಸಹದೇವನ್ನ ಹರಿಣಿ ಕರ್ಕೊಂಡು ಬಂದ್ರು.. ಅವರು...,'

'ನಿಮ್ಮ ಹಾರ್ಡ್ವೇರ್ ಹರಿಣಿನಾ?'

'ಹೌದು. ಹೊಯ್ಸಳರ ಆಳ್ವಿಕೆಯಲ್ಲಿ ಸಹದೇವನ ಮುತ್ತಾತ ಕೋಲಾರದ ಶ್ರೀ ರಾಮನ ವಿಗ್ರಹಗಳನ್ನ ಕಡೆದಿದ್ದಾರೆ. ಅವರಿಗೆ ಚಿನ್ನದ ಉಳಿಗಳನ್ನು ಇಟ್ಟುಕೊಂಡು ವಿಗ್ರಹಗಳನ್ನು ಕಡೆಯೋ ಶಾಸ್ತ್ರ ಗೊತ್ತಿತ್ತು. ತಲೆತರಾಂತದಿಂದ ಬಂದ ವಿದ್ಯೆಯನ್ನು ಹಂಚಿಕೊಂಡೇ ಬಾಲ ರಾಮನ ವಿಗ್ರಹದ ಕಣ್ಣು ಕಡೆದಿದ್ದು. ಅದನ್ನು ಅರುಣ್ ಕಡೆಯುವಾಗ ನಮ್ಮ ಹರಿಣಿ ಅಲ್ಲಿದ್ರು. ಇದ್ಕಕೆಲ್ಲಾ ಬಹಳ ವಿದ್ವಾಂಸರ ಸಲಹೆ ತೊಗೊಂಡ್ವಿ. ಇದನ್ನೆಲ್ಲಾ ನಮ್ಮ ಅಂಬುಜಮ್ಮ ಮಾಡಿದ್ರು '.

'ಯಾರು ಆಮೆಜಾನ್ ಅಂಬುಜಾಮ್ಮನಾ '?

'ಅವರು ಹಗಲೂ ರಾತ್ರಿ ಫೋನಲ್ಲಿದ್ದು ಮಾಹಿತಿ ತೊಗೊಂಡ್ರು '.

'ಅಂಬುಜಮ್ಮ ನೊಣವಿನ ಕೆರೆಲಲ್ವಾ ಇರೋದು?'

'ಅಲ್ಲಿಂದಲೇ ಫೋನ್ ತಿರುಗಿಸಿ ಎಲ್ಲಾ ಕಡೆ ಮಾತಾಡಿದ್ರು '.

'ನಿನ್ನ ಗ್ರೂಪಿನ ಟ್ಯಾಲೆಂಟ್ ಗೆ ಸಾಟಿಯೇ ಇಲ್ಲ ಅಜ್ಜಿ.. ನೀನೂ ಏನಾದ್ರೂ ಮಾಡಿದ್ಯಾ ಅಜ್ಜಿ?'

'ನಾನು ಒಂದೆರೆಡು ತಿಂಗಳ ಹಿಂದೆ ಹುಬ್ಬಳ್ಳಿಗೆ ಹೋಗಿ ಬರ್ತಿದ್ದೆ ಜ್ಞಾಪಕ ಇದೆಯಾ?'

'ಚೆನ್ನಾಗಿ ಜ್ಞಾಪಕ ಇದೆ. ನಿನ್ನ ಗೂರ್ಲಿಗೆ ಔಷದಿಗೆ ಹೋಗ್ತಿದ್ದೆ ಅಲ್ವಾ?'

'ಅದು ನಾನು ನಿನಗೆ ಹೇಳಿದ್ದು. ನನಗೆ ಗೂರ್ಲುರ್ ಪೂರ್ಲ್ ಏನೂ ಇಲ್ಲ. ಅಲ್ಲಿ ಚಂದ್ರ ಮೌಳೀಶ್ವರ ದೇವಸ್ಥಾನದಲ್ಲಿ ಶಾಸ್ತ್ರಗಲ್ಲಿ ಪ್ರಸಿದ್ಧರಾದ ಘನಪಾಟಿಗಳು ಇದ್ದಾರೆ. ನಾನು ಅವರ ಹತ್ತಿರ ಮಾತನಾಡಿ ಅವರೇ ಬಾಲ ರಾಮನ ಪ್ರಾಣ ಪ್ರತಿಷ್ಟಾಪನೆಗೆ 84 ಸೆಕೆಂಡಿಗೆ ಯಾವ ಮಹೂರ್ತ ಸರಿ ಎಂದು ಪತ್ತೆ ಹಚ್ಚಿದರು. ಅದನ್ನ ನಾವು ರಾಮ ಮಂದಿರದ ಕಮಿಟಿಗೆ ಕಳಿಸಿದೆವು. 12.15 ರಿಂದ  12.45 ರಲ್ಲಿ 84 ಸೆಕೆಂಡ್ ನಲ್ಲಿ ಪ್ರತಿಷ್ಠಾಪನೆಯಾಯಿತು.'

'ಒಟ್ಟಿನಲ್ಲಿ ನಿನ್ನದೂ ಒಂದು ಕೊಡುಗೆ ಇತ್ತು ಅನ್ನು. ಮುಂದೆ ನಮ್ಮ ಫ್ಯಾಮಿಲಿ ಹಿಸ್ಟರಿಯಲ್ಲಿ ನಿನ್ನ ಕೊಡುಗೆ ಏನು ಅಂದ್ರೆ ಆದರಲ್ಲಿ ಇದನ್ನು ಸೇರಿಸಿಕೊಳ್ಳಬಹುದು. ಅದಿರಲಿ.. ಇವತ್ತಿನ ಸಡಗರ ಏನಜ್ಜಿ? ಯಾತಕ್ಕೆ?'

'ನಾವೆಲ್ಲಾ.. ಅಂದ್ರೇ ನಮ್ಮ ಅಜ್ಜಿ ಬಳಗಾನ ಅಯೋಧ್ಯೆಗೆ ಕರೆದಿದ್ದಾರೆ.. ಮೋದಿಯವರವು ಪ್ಲೇನ್ ಕಳಿಸ್ತಿ ದಾರೆ.. ಅವ್ರ 'ಮನ್ ಕಿ ಬಾತ್ 'ನಲ್ಲೂ ನಮ್ಮ ಬಳಗದ ಕೊಡುಗೆಯ ಬಗ್ಗೆ ಮಾತಾಡಿದ್ರಂತೆ..

ಅಲ್ಲಿ ಇರೋದಕ್ಕೆ ಬಿರ್ಲಾ ಗೆಸ್ಟ್ ಹೌಸ್ ಬುಕ್ ಮಾಡಿದಾರೆ. ಅಲ್ಲಿ ಇದ್ದು ವಾರಾಣಸಿ, ಪ್ರಯಾಗ ಕ್ಕೆ ಹೋಗೆ 5 ದಿನ  ಆದಮೇಲೆ ವಾಪಸ್ಸು ಬರ್ತೀವಿ'

'ವ್ಹಾ ವ್ಹಾ ಅಜ್ಜಿ. ಇದೆಲ್ಲಾ ಏರ್ಪಡು ಮಾಡಿರೋದು ಯಾರಜ್ಜಿ? ಇದರಲ್ಲಿ ಬಹಳ ಪೇಪರ್ ವರ್ಕ್, ಫೋನು ತಿರುಗಿಸೋ ಕೆಲಸ ಇರುತ್ತೆ?'

'ನಮ್ಮ ಆಮೇಝುನ್ ಅಂಬುಜಮ್ಮ ಮಾಡಿದ್ರು.... ಟ್ರಿಂಗ್...ಟ್ರಿಂಗ್.... ಅವಳದೇ ಕಾಲ್ ಇರಬೇಕು. ಪ್ಲೇನ್ ಬಂದಿರ್ಬೇಕು.. ಮನೆ ಕಡೆ ಜೋಪಾನ ನಾನು ಬರ್ತೀನಿ..'

'ಟ್ರಿಂಗ್.. ಟ್ರಿಂಗ್....ಟ್ರಿಂಗ್.. ಟ್ರಿಂಗ್..'

ಟ್ರಿಂಗ್.. ಟ್ರಿಂಗ್..

'ಅಜ್ಜಿ ಆವಾಗಿನಿಂದ ಅಲಾರಂ ಹೊಡೀತಿದೆ .

ಇನ್ನೂ  ಸ್ವಲ್ಪ ಹೊತ್ತಿನಲ್ಲಿ ನಿನ್ನ ಫ್ರೆಂಡ್ಸ್ ಬರ್ತಾರೆ.. ಇವತ್ತು ವೈಕುಂಠ ಏಕಾದಶಿ ಅಲ್ವಾ? ದೇವಸ್ಥಾನದಲ್ಲಿ ಬಹಳ ರಶ್ ಇರುತ್ತೆ'.

'ಆಗ್ಲೇ ಇವರೆಲ್ಲಾ ಬಂದು ಬಿಟ್ರೇನೋ.. ನಾನು ರೆಡಿಯಾಗಿಲ್ಲ... ಪ್ಲೇನ್ ಬಂದಿದೆಯಾ.?'

'ಅಜ್ಜಿ. ಈಗ್ಲೂ ನೀನು ಕನಸು ಕಾಣ್ತಿದಿಯ.. ಇನ್ನೂ ಸ್ವಲ್ಪ ಹೊತ್ತಿನಲ್ಲಿ ನಿನ್ನ ಪಟಾಲಂ ಇಲ್ಲಿಗೆ ಬರ್ತಾರೆ.. ಬೇಗೆ ಏಳಜ್ಜಿ.. ರೆಡಿಯಾಗು.. ವಾಕಿಂಗ್ ಹೋಗಿ ದೇವಸ್ಥಾನಕ್ಕೆ ಹೋಗಬೇಕುಂತ ಹೇಳಿದ್ಯಲ್ಲ ನಿನ್ನೆ ರಾತ್ರಿ..'

'....ಅಂ...?

# ಅಪಾಯ ಬಂದಾಗ ಉಪಾಯ

ಸುಕೇಶವ

ನಮ್ಮಲ್ಲಿ ಮಾತಾಡ್ತಾ ಆಡ್ತಾ ಅವರೇಕಾಯಿ ಕುಯ್ದರು ಎನ್ನೋ ಗಾದೆ ಇದೆ. ಇದು ಯಾಕೆ ಬಂತು ಎಂದರೆ ಹೊಲದಲ್ಲಿ ಬೆಳೆದಿರೋ ಅವರೇಕಾಯಿಯನ್ನು ನಮಗಷ್ಟು ಕೊಡಿ ಅಂದರೆ ಬೆಳೆದವರು ಕೊಡುತ್ತಿರಲಿಲ್ಲ. ಅದಕ್ಕೆ ಅವರೇಕಾಯಿ ಹೊಲ ನೋಡೋಣ ಬನ್ನಿ ಎಂದು ಕರೆದುಕೊಂಡು ಹೋಗಿ ಅವರೇಕಾಯಿ ಬೆಳೆದಿರುವ ರೀತಿಯನ್ನು ನೋಡಿ ಹೊಗಳಿ ಅಟ್ಟಕ್ಕೇರಿಸಿ ಅವರು ಸಂತೋಷಪಡುತ್ತಿರುವಾಗ ಒಂದಿಷ್ಟು ಅವರೇಕಾಯಿಯನ್ನು ಕುಯ್ದುಕೊಂಡು ಹೋದರು ಎನ್ನುವ ಅರ್ಥ ಇದೆ ಈ ಗಾದೆಗೆ. ಇದ್ಯಾಕೆ ಈಗ ನೆನಪಾಯಿತು ಎಂದರೆ ಸೋಮು ಹೊರಗೆ ಹೋಗಿ ಬಂದಿದ್ದಾಗ ಅವನ ಕಾಲಿಗೆ ಸಣ್ಣ ಗಾಜಿನ ಚೂರು ಹೊಕ್ಕಿಕೊಂಡಿತ್ತು. ಸೋಮಿ ಬನ್ನಿ ಡಾಕ್ಟರ ಹತ್ತಿರ ಹೋಗಿಬರೋಣ ಎಂದರೆ ಸೋಮು ಭಯದಿಂದ ಬೇಡ ಅದೇ ಹೋಗುತ್ತೆ ಅಂದ. ಇದಕ್ಕೆ ಸೋಮಿ ಉಪಾಯ ಮಾಡಲೇಬೇಕಾಯಿತು. ಡಾಕ್ಟರೇ ಸೋಮುಗೆ ಫೋನ್ ಮಾಡಿ ರೀ ಸೋಮು ನಮ್ಮನ್ಲಿ ಹೊಸಾ ಫ್ರಿಜ್ ತಗೊಂಡಿದೀವಿ ಬನ್ರೀ ನೋಡ್ಕೊಂಡು ಹೋಗಿ ಅಂತ ಕರೆದರು. ಸೋಮಿ ಜೊತೆ ಸೋಮು ಆಟೋದಲ್ಲಿ ಹೋದ. ಸ್ವಲ್ಪ ಕುಂಟಿಕೊಂಡು ಬಂದ ಸೋಮುನ ನೋಡಿ ನೀವ್ಯಾಕೆ ಕುಂಟ್ಕೊಂಡು ಬಂದ್ರಿ ಅಂತ ಕೇಳಿದರು. ಏನೋ ಒಂಚೂರು ಗಾಜು ಹೊಕ್ಕಹಾಗಿದೆ ಅದಕ್ಕೇ ಸೋಮಿ ಗಾಬರಿ ಮಾಡಿಕೊಂಡಳು ಅಂದ. ಡಾಕ್ಟರು ಸೋಮಿ ಕಡೆ ನೋಡಿ ಏನಮ್ಮಾ ನೀವು ಸಣ್ಣಪುಟ್ಟದಕ್ಕೆಲ್ಲಾ ಗಾಬರಿ ಮಾಡ್ಕೊತೀರ ಅಂದು ಸೋಮು ಕಡೆ ನೋಡಿ ಎಲ್ಲಿ ನಿಮ್ಮ ಕಾಲು ತೋರಿಸಿ ನೋಡೋಣ ಅಂದರು. ಸೋಮು ಅಂಗಾಲು ತೋರಿದ. ಅಲ್ಲಿ ಗಾಜು ಹೊಕ್ಕಿರುವ ಸುಳಿವು ಡಾಕ್ಟರಿಗೆ ಕಂಡಿತು. ಹೊಸಾ ಫ್ರಿಜ್ಜಿನ ವಿಡಿಯೋ ನೋಡ್ರೀ ಅಂತ ತಮ್ಮ ಮೊಬೈಲನ್ನು ತೋರಿಸುತ್ತಾ ಸೋಮು ಅದರಲ್ಲಿ ತಲ್ಲೀನನಾಗಿದ್ದಾಗ ಸಣ್ಣ ಉಪಕರಣ ಹಿಡಿದು ಸೋಮು ಅಂಗಾಲಲ್ಲಿದ್ದ ಗಾಜಿನ ಚೂರನ್ನು ತೆಗೆದೇಬಿಟ್ಟರು. ಸೋಮು ಹಾ! ಅಂದ. ಹಾನೂ ಇಲ್ಲ ಹೂನೂ ಇಲ್ಲ ಅಂದು ಬ್ಯಾಂಡೇಜು ಹಾಕಿ ಐನೂರು ಕಿತ್ಕೊಂಡು ಕಳಿಸಿದರು. ಸೋಮು ಪೆಚ್ಚಾಗಿ ಡಾಕ್ಟರೇ ಹೊಸಾ ಫ್ರಿಜ್ಜು ಎಲ್ಲಿ ಅಂತ ಕೇಳಿದ್ದಕ್ಕೆ ಡಾಕ್ಟರು ಆಗಲೇ ಮೊಬೈಲಲ್ಲಿ ನೋಡಿದ್ರಲ್ಲ ಅಂದು ಕಿಸಕ್ಕನೆ ನಕ್ಕರು. ಇದು ಸೋಮಿ ಮತ್ತು ಡಾಕ್ಟರು ಸೇರಿ ಆಡಿದ ನಾಟಕ ಅಂತ ಸೋಮು ಪೆಚ್ಚಾಗಿ ಆಟೋದಲ್ಲಿ ಕೂತಾಗ ಸೋಮಿ ಭುಜಕ್ಕೆ ಒರಗಿದ.






# ಗಲ್ಫ್-ವಾರ್: ನನ್ನ ಹೆಂದತಿಗೆ ಗಂಡ ಸಿಗುತ್ತಾನೆಯೇ?

ಜಿ.ಆರ್.ವಿದ್ಯಾರಣ್ಯ

ಇತ್ತೀಚೆಗೆ ಮಧ್ಯಪ್ರಾಚ್ಯದಲ್ಲಿ ಇರಾನ್-ಇಸ್ರೇಲ್-ಅಮೇರಿಕಾ ದೇಶಗಳ ನಡುವೆ ನಡೆಯುತ್ತಿರುವ ಕದನದಿಂದಾಗಿ ಗಲ್ಫ್-ವಾರ್ ಎಲ್ಲರ ಗಮನಕ್ಕೂ ಬಂದಿದೆ. ಹಿಂದೆ 1980-88ರಲ್ಲಿ ಇರಾನ್ ಮತ್ತು ಇರಾಕ್ ದೇಶಗಳ ನಡುವೆ ದೀರ್ಘ ಕಾಲೀನ ಯುದ್ಧ ನಡೆಯಿತು. ಅದೂ ಸಹ ಗಲ್ಫ್-ವಾರ್ ಎಂದು, ನಂತರ ಟ್ಯಾಂಕರ್ ವಾರ್ ಎಂದು ಪ್ರಸಿದ್ಧಿಯಾಗಿತ್ತು. ಪರ್ಷಿಯನ್ ಕೊಲ್ಲಿಯಿಂದ ಹಾರ್ಮುಝ್ ಜಲಸಂಧಿಯ ಮಾರ್ಗವಾಗಿ ಕಚ್ಚಾ ತೈಲ ಬರುವುದು ಕಷ್ಟವಾಗಿ, ಅಂತರಾಷ್ಟ್ರೀಯ ತೈಲದ ಬೆಲೆ ಗಗನಕ್ಕೆ ಏರಿತ್ತು. 26 ಡಿಗ್ರಿ ಉತ್ತರ ಅಕ್ಷಾಂಶದ ಮೇಲಿನ ಅರಬ್ಬೀ ಸಮುದ್ರ ಹಾಗೂ ಇಡೀ ಪರ್ಷಿಯನ್ ಗಲ್ಫ್ ವಲಯವನ್ನು ವಾರ್ ಝೋನ್ (ಯುದ್ಧವಲಯ) ಎಂದು ಘೋಷಿಸಲಾಗಿತ್ತು. ಯಾವ ಹಡಗೂ ಅರಬ್ಬೀ ಸಮುದ್ರದ 26 ಡಿಗ್ರಿ ಉತ್ತರದ ಅಕ್ಷಾಂಶ ದಾಟಿ ಮೇಲೆ ಹೋಗುತ್ತಿರಲಿಲ್ಲ. ವಾಣಿಜ್ಯ ಹಡಗುಗಳ ಸಾಗುವಿಕೆ ವ್ಯತ್ಯಯವಾಗಿತ್ತು. ಯುದ್ಧವಲಯದ ಒಳಗೆ ತೈಲದ ಬೆಲೆ ಕಡಿಮೆ ಇದ್ದರೂ ವಲಯದ ಹೊರಗೆ ಬೆಲೆ ಹೆಚ್ಚಿತ್ತು. ನಾರ್ವೆ ದೇಶ ತಾನು ತಟಸ್ಥ ಎಂದು ಹೇಳಿಕೊಂಡು ಇರಾನ್ ಮತ್ತು ಇರಾಕ್ ಇಬ್ಬರಿಂದಲೂ ತೈಲ ಖರೀದಿಸುತ್ತಿತ್ತು. ಅದಕ್ಕೆ ಆ ತೈಲದ ಅವಶ್ಯಕತೆ ಇಲ್ಲದಿದ್ದರೂ ಅದನ್ನು ಯುದ್ಧವಲಯದ ಒಳಗೆ ಖರೀದಿಸಿ ಹೊರಗೆ ತಂದು ಮಾರುತ್ತಿತ್ತು. ಇಂತಹ ಒಂದು ತೈಲವಾಹಕ ಹಡಗಿನಲ್ಲಿ ನನಗೆ ಅಧಿಕಾರಿಯಾಗಿ ಕೆಲಸ ಸಿಕ್ಕಿತ್ತು. ಯುದ್ಧದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದ್ದರಿಂದ ನಾನೂ ಸಹ ಹೋಗಲು ಒಪ್ಪಿಕೊಂಡಿದ್ದೆ.

80ರ ದಶಕದಲ್ಲಿ ವಿದೇಶಿ ಶಿಪ್ಪಿಂಗ್ ಕಂಪನಿಗಳೂ ತಮ್ಮ ಖರ್ಚು-ವೆಚ್ಚ ಕಡಿಮೆ ಮಾಡಲು ಯೂರೋಪಿಯನ್ ಸಿಬ್ಬಂದಿಯನ್ನು ತೆಗೆದುಹಾಕಿ ಭಾರತೀಯ ಸಿಬ್ಬಂದಿಯನ್ನು ಕೆಲಸಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದರು. ಇದು ಭಾರತೀಯ ನಾವಿಕರ ಯೂನಿಯನ್ ಒಪ್ಪಂದದ ಮೇರೆಗೆ ನಡೆಯುತ್ತಿತ್ತು. ನನಗೆ ಸಿಕ್ಕಿದ್ದು ನಾರ್ವೇಜಿಯನ್ ದೇಶದ ಟ್ಯಾಂಕರ್ ಹಡಗು, ವೆರಿ ಲಾರ್ಜ್ ಕ್ರೂಡ್ ಕ್ಯಾರಿಯರ್ (ವಿ.ಎಲ್.ಸಿ.ಸಿ). ಒಂದೇ ಸಲಕ್ಕೆ 2 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲ ಹೊರುವ ಸಾಮರ್ಥ್ಯ ಹೊಂದಿತ್ತು. ನಾನು ಸೇರಿದ ಹಡಗು 26 ಡಿಗ್ರಿಯ ಕೆಳಗೆ ನಿಂತಿತ್ತು. ಹಡಗಿನಲ್ಲಿ ಹೆಚ್ಚಿನ ಜನ ಇದ್ದಂತೆ ಕಾಣಲಿಲ್ಲ. ಭಾರತದ ಸಿಬ್ಬಂದಿ ನಾವೇ ಮೊದಲಿಗರು. ಮೂರು ದಿನ ಹಡಗು ಕದಲಲಿಲ್ಲ. ನಂತರ ಹೊಸ ನಾರ್ವೀಜಿಯನ್ ಅಧಿಕಾರಿಗಳು ಬಂದರು. ಅದರಲ್ಲಿ ಕ್ಯಾಪ್ಟನ್, ಚೀಫ್ ಆಫೀಸರ್, ಚೀಫ್ ಇಂಜಿನಿಯರ್ ಮತ್ತು ಫಸ್ಟ್ ಇಂಜಿನಿಯರ್ ಹಾಗೂ ಸ್ಪೇನ್ ದೇಶದ ಓರ್ವ ಪಂಪ್-ಮ್ಯಾನ್ ಇದ್ದರು. ಮೊದಲಿಗಿದ್ದ ಹಳಬರು, ನಾಲ್ಕೈದು ಜನ, ಮನೆಗೆ ಹೋದರು.

ಹೊಸ ಕ್ಯಾಪ್ಟನ್ ಬಂದ ಮಾರನೇ ದಿನ ಬೆಳಿಗ್ಗೆ ಐದು ಯೂರೋಪಿಯನ್ನರು ಮತ್ತು 17 ಭಾರತೀಯರು ಸೇರಿದಂತೆ, ಎಲ್ಲಾ ಸಿಬ್ಬಂದಿಯ, ತುರ್ತು ಸಭೆ ಕರೆದರು. "ನೋಡಿ, ನಮ್ಮ ಕಂಪನಿಯವರು ಈಗ ಯುದ್ಧವಲಯದ ಒಳಗೆ ಹೋಗಿ, ಕುವೈತ್ ದೇಶದಿಂದ ತೈಲ ತುಂಬಿಸಿಕೊಂಡು ಹೊರಗೆ ಬಂದು, ಬೇರೆ ಹಡಗಿಗೆ ಟ್ರಾನ್ಸರ್ ಮಾಡಲು ನಿರ್ಧರಿಸಿದ್ದಾರೆ. ಯುದ್ಧವಲಯದ ಒಳಗೆ ಹೋಗುವುದು ಅಪಾಯದ ಕೆಲಸ ಆದರೆ ನಮ್ಮ ದೇಶ ತಟಸ್ಥ ದೇಶವಾದ್ದರಿಂದ ನಮ್ಮ ಹಡಗನ್ನು ಯಾರೂ ಟಾರ್ಗೆಟ್ ಮಾಡುವುದಿಲ್ಲ. ಆದರೂ ಕಂಪನಿ

ಪ್ರತಿಯೊಂದು ವ್ಯಕ್ತಿಗೆ ವಿಶೇಷ ವಿಮೆ ಮಾಡಿಸಲು ಸಿದ್ಧವಿದೆ. ನಿಮ್ಮ ಚಾಲ್ತಿಯಲ್ಲಿರುವ ವಿಮೆಯನ್ನು ಅಮೇರಿಕನ್ ಡಾಲರ್ 50,000 ದಿಂದ ತ್ರಿಗುಣ ಗೊಳಿಸಿ, 150,000 ಕ್ಕೆ ಕಂಪನಿ ಏರಿಸುತ್ತದೆ. ಅಷ್ಟೇ ಅಲ್ಲ ಯುದ್ಧವಲಯದ ಒಳಗೆ ಇದ್ದಷ್ಟು ದಿನ ನಿಮ್ಮ ಸಂಬಳ ದುಪ್ಪಟ್ಟು ಮಾಡಲು ಸಹ ನಿರ್ಧರಿಸಲಾಗಿದೆ. ಇದಕ್ಕೆ ನಿಮ್ಮ ಒಪ್ಪಿಗೆ ಇದ್ದರೆ ಈ ಪತ್ರಕ್ಕೆ ಸಹಿ ಮಾಡಿ, ನಿಮಗೆ ಏನಾದರೂ ಸಂದೇಹವಿದ್ದರೆ ಕೇಳಿ ಅಥವಾ ಏನಾದರೂ ಹೇಳುವುದಿದ್ದರೆ ಹೇಳಿ. ಯಾರಿಗೆ ಇಷ್ಟವಿಲ್ಲವೋ ಅವರು, ಏನೂ ಸಂಕೋಚವಿಲ್ಲದೇ, ಮನೆಗೆ ಹೋಗಬಹುದು" ಎಂದು ಹೇಳಿ ಕಾಗದ ಮುಂದಿಟ್ಟರು. ಮೊದಲ ಬಾರಿಗೆ ವಿದೇಶಿ ಹಡಗು ಸಿಕ್ಕಿದೆ; ಮನೆಗೆ ಹೋದರೆ ಮುಂದೆ ಕೆಲಸಕ್ಕೆ ತೊಂದರೆ ಆಗಬಹುದು ಎಂಬ ಭೀತಿ ಎಲ್ಲರಲ್ಲೂ ಇತ್ತು. ಹಲವರಿಗೆ ಇಂಗ್ಲೀಷ್ ಭಾಷೆ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಅದಕ್ಕೆ ಕ್ಯಾಪ್ಟನ್ ನನ್ನ ಕಡೆ ತಿರುಗಿ "ನಾನು ಹೇಳಿದ್ದು ಅವರಿಗೆ ಸರಿಯಾಗಿ ಅರ್ಥ ಆಗಿಲ್ಲದೇ ಇರಬಹುದು, ಆದ್ದರಿಂದ ನಾನು ಹೇಳಿದ್ದನ್ನು ಅವರಿಗೆ ನಿಮ್ಮ ಭಾಷೆಯಲ್ಲಿ ವಿವರಿಸು" ಎಂದರು. ಎಲ್ಲರಿಗೂ ಹಿಂದಿ ಭಾಷೆ ಅರ್ಥವಾಗುತ್ತಿದ್ದರಿಂದ ನಾನು ಹಿಂದಿಯಲ್ಲಿ ವಿವರಿಸಿದೆ. ಕೆಲವರಿಗೆ ಸಂದೇಹಗಳಿದ್ದವು ಆದರೂ ಯಾರೂ ಮಾತನಾಡಲಿಲ್ಲ.

ಓರ್ವ ಹಿರಿಯ ಗುಜರಾತಿ ನಾವಿಕ ಧೈರ್ಯ ಮಾಡಿ ಕೈ ಎತ್ತಿದ. ಆತನಿಗೆ ಮಾತನಾದಲು ಅನುಮತಿ ಸಿಕ್ಕಿತು. ಗುಜರಾತಿ ಮಿಶ್ರಿತ ಹಿಂದಿಯಲ್ಲಿ "ಸರ್, ನಮ್ಮ ಸಂಬಳ ಮತ್ತು ವಿಮೆ ಹೆಚ್ಚು ಮಾಡಿದ್ದೀರಿ, ಸಂತೋಷ. ನಾನು ಸತ್ತರೆ ಕುಟುಂಬಕ್ಕೆ ಒಂದೂವರೆ ಲಕ್ಷ ಡಾಲರ್ ಹಣ ಸಿಗಬಹುದು ಆದರೆ ನನ್ನ ತಾಯಿಗೆ ಮಗ ಸಿಗುತ್ತಾನೆಯೇ?" ನಮ್ಮವರೆಲ್ಲರೂ ಇಲ್ಲವೆಂದು ತಲೆ ಅಲ್ಲಾಡಿಸಿದರು. ಇನ್ನಷ್ಟು ಧೈರ್ಯ ಬಂದ ನಾವಿಕ "ನನ್ನ ಮಕ್ಕಳಿಗೆ ತಂದೆ ಸಿಗುತ್ತಾನೆಯೇ?" ಎಂದ. ಮತ್ತೆ ಎಲ್ಲರೂ ಇಲ್ಲವೆಂದು ತಲೆ ಅಲ್ಲಾಡಿಸಿದರು. ಇನ್ನೂ ಮುಂದೆ ಹೋಗಿ "ನನ್ನ ಹೆಂಡತಿಗೆ ಗಂಡ ಸಿಗುತ್ತಾನಾ?" ಎಂದು ಕೇಳಿದ. "ಓಹೋ, ಅಷ್ಟೊಂದು ಹಣ ಇದ್ದರೆ ಗಂಡಸರ ಸಾಲೇ ನಿನ್ನ ಮನೆಯ ಮುಂದೆ ಇರುತ್ತದೆ" ಎಂದು ಯಾರೋ ಹೇಳಿದರು. ನಗೆಯ ಕಡಲಲ್ಲಿ ಆತ ತನ್ನ ಭಾಷಣ ಮುಗಿಸಿ ಕುಳಿತುಕೊಂಡ. ನಗೆಯ ಕಾರಣ ಅರಿಯದ ಕ್ಯಾಪ್ಟನ್ ಮತ್ತು ಇತರರಿಗೆ ನಾನು ಅದರ ಭಾಷಾಂತರ ಮಾಡಬೇಕಾಯಿತು. ಎಲ್ಲರೂ ನಗು ನಗುತ್ತಾ ಪತ್ರಕ್ಕೆ ಸಹಿ ಮಾಡಿದ್ದು ಕ್ಯಾಪ್ಟನ್ನಿಗೆ ಸಂತೋಷ ತಂದಿತ್ತು.

ಗಾದೆಗಳನ್ನು ಊಹಿಸಿ. ಉತ್ತರಗಳು : ಕೊನೆಯ ಪುಟ



# ಯಮನ ಕೈಲೊಂದು ಸ್ಮಾರ್ಟ್‌ಫೋನ್ ಬಂದರೆ....

ಜಿ.ವಿ. ನಿರ್ಮಲ

ಚಿತ್ರಗುಪ್ತ ಬೆಳ್ಳಂಬೆಳಗ್ಗೆ 'ಸ್ವಾಮಿಗಳೇ...' ಎಂದು ಓಡುತ್ತಲೇ ಬಂದ.

"ನನ್ನನ್ನು ಇಷ್ಟು ಮಾರ್ಯಾದೆಯಿಂದ 'ಸ್ವಾಮಿಗಳೇ' ಎಂದು ಕೂಗಲು ನಿನಗ್ಯಾರಪ್ಪಾ ಹೇಳಿದ್ದು? ಹೇಳಿ ಕೇಳಿ ನಾನು ಯಮಧರ್ಮ. ಸಿಟ್ಟು ಬಂದರೆ ಏನು ಮಾಡುವೆನೋ ನನಗೇ ತಿಳಿಯದು." ಎಂದು ಗುಡುಗಿದ ಯಮ.

"ಸ್ವಾಮಿಗಳೇ ನೀವೇ 'ಬುದ್ಧೀ' ಎಂದು ಕೂಗಬೇಡವೆಂದು ತಾಕೀತು ಮಾಡಿರುವಿರಲ್ಲ? ನಿಮ್ಮನ್ನು ಕೂಗದೆಯೇ ನನ್ನ ಕೆಲಸವಾಗುವುದಾದ್ರೂ ಹೇಗೆ?" ತಲೆ ಕೆರೆದುಕೊಂಡ ಗುಪ್ತ.

"ಎಲವೋ ಶಿಷ್ಯ, ನಾ ಹೇಳಿದಂತೆ ನೀನು ಕೇಳುವುದು ಸರಿಯೇ. ಅದಿರಲಿ ನಾ ಹೇಳಿದಂತೆ ಈಗ ನೀನು ಭೂಲೋಕದಲ್ಲಿ ಇರಬೇಕಾಗಿತ್ತಲ್ಲವೆ? ಮತ್ತ್ಯೇಕಿಲ್ಲಿರುವೆ?"

"ಸ್ವಾಮಿಗಳೇ, ಈಗೆಲ್ಲಾ ಭೂಲೋಕದ ಜನ ತಾವಿದ್ದಲ್ಲಿಂದಲೇ ಅದೇನೋ ಸ್ಮಾರ್ಟ್‌ಫೋನ್ ಅಂತ ಇದ್ಯಂತಲ್ಲಾ. ಅದನ್ನು ಬಳಸಿ.."

"ಓಹೋ, ಫೋನ್ ಬಳಸಿ ಏನು ತಾನೇ ಮಾಡಬಹುದು? ಮಾತನಾಡಬಹುದಷ್ಟೆ. ದೇಶ ದೂರವಿದ್ದರೆ ಹೆಚ್ಚು ಹಣ ತೆರಬೇಕು ಗೊತ್ತೇ? ಅಷ್ಟಲ್ಲದೆ ಅಲ್ಲಿರುವವರನ್ನು ಇಲ್ಲಿಂದಲೇ ನೋಡಬಹುದೇ?"

"ಸ್ವಾಮೀ, 'ನಾಕು ಎಕ್ಕಡ ಸಂದೇಹಮೋ, ನೀಕು ಅಕ್ಕಡನೇ' ಎನ್ನುವಂತಾಯ್ತಲ್ಲಾ ಕಥೆ? ಭೂಲೋಕಕ್ಕೆ ಹೋಗುವ ಬದಲು ಇಲ್ಲಿಂದಲೇ 'ವರ್ಕ್ ಫ್ರಂ ಹೋಮ್' ಅಂತೆದೇನೋ ಇದ್ಯಂತಲ್ಲಾ ಅದರಂತೆ ನಾವೂ ಕೆಲಸ ಮಾಡಿದ್ರೆ ಹೇಗೇ ಅಂತ ಕೇಳೋಣವೆಂದೇ ಬೆಳಗ್ಗೆಯೇ ಬಂದೆ."

"ಓ ಹಾಗಾ? ಈ 'ವರ್ಕ್ ಫ್ರಂ ಹೋಮ್' ಎಲ್ಲಾ ಕೆಲಸಗಳಿಗೂ ಹೊಂದುವುದೇ? ಉಹುಂ, ಹೊಂದಲಾರದು; ಮೊದಲು ಅದನ್ನು ಯೋಚಿಸಿ ನಿರ್ಧರಿಸು."

"ಯೋಚಿಸುವುದಕ್ಕೂ, ನಿರ್ಧರಿಸುವುದಕ್ಕೂ ನನ್ನ ಬಳಿ ಸ್ಮಾರ್ಟ್‌ಫೋನ್ ಇಲ್ಲವಲ್ಲಾ? ಅದನ್ನು ಖರೀದಿಸಲೆಂದೇ ನಿಮಗೆ ಅರ್ಜಿ ಹಾಕಿದ್ದೆ. ನೀವು "

"ಒಳ್ಳೆಯ ಕೆಲಸವನ್ನು ನಾನು ಎಂದೂ ಬೇಡವೆನ್ನುವುದಿಲ್ಲ. ಆದರೆ..."

"ಆದರೆ, ಗೀದರೆ ಎಂದು ಮೂಗೆಳೆಯುವುದೇಕೆ ಸ್ವಾಮಿಗಳೇ. ಅಪ್ಪಣೆ ಕೊಟ್ಟರೆ ಈಗಿಂದೀಗಲೇ ಭೂಲೋಕಕ್ಕೆ ಹೋಗಿ ಸ್ಮಾರ್ಟ್‌ಫೋನ್ ತಂದೇ ಬಿಡುವೆ."

"ಸ್ವಲ್ಪ ತಾಳ್ಮೆ ಇರಲಿ. ನಂಗೂ ಮಾತಾಡಲು ಬಿಡಪ್ಪಾ ಚಿತ್ರಾ. ಹಾಂ, ನೀನು ಯಾವ ಫೋನ್ ಖರೀದಿಸಿದರೂ ಸರಿ. ನನಗೂ ಒಂದು ಖರೀದಿಸಿದರೆ... ನಾನೂ ಒಂದು ಕೈ ನೋಡುತ್ತೇನೆ. ಸುಮ್ಮನೆ ಕೈಲಾಸ, ವೈಕುಂಠ ಇತ್ಯಾದಿ ಸ್ಥಳಗಳಿಗೆ ಮಹಿಷನ ಮೇಲೆ ನಿಧಾನಗತಿಯಲ್ಲಿ ಪಯಣಿಸಿ, ಎದ್ದು ಬಿದ್ದು ಸಾಕಾಗಿದೆ."

"ಸ್ವಾಮಿಗಳೇ, ನಿಮ್ಮ ಮಹಿಷ ವಾಹನದಲ್ಲಿ, ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಹೋದರೆ ಅಲ್ಲೊಂದು ಗುಂಡಿಯಲ್ಲಿ ನೀವಿಬ್ಬರೂ ಬೀಳುವುದು ಗ್ಯಾರಂಟಿ. ನೀವಿಲ್ಲದಿದ್ದರೆ ನಾನೆಲ್ಲಿ?"

"ಹಾಂ, ಅದಕ್ಕೇ ನೀನು ಎರಡು ಸ್ಮಾರ್ಟ್‌ಫೋನ್ ಗಳನ್ನು ತಂದೇ ಬಿಡು. ಇಬ್ಬರೂ 'ವರ್ಕ್ ಫ್ರಂ ಹೋಮ್' ಮಾಡುತ್ತಾ ಹಾಯಾಗಿರೋಣ. ಏನಂತಿ?"

"ಈಗಲೇ ಹೊಂಟೆ. ಹಾಗ್ಹೋಗಿ, ಹೀಗೆ ಬಂದೇ ಬಿಡುವೆ ಸ್ವಾಮಿಗಳೇ."

“ಈ ಕೆಲಸದಲ್ಲಿ ಜಯಶಾಲಿಯಾದರೆ ಇನ್ಮುಂದೆ ನನ್ನನ್ನು ‘ಬುದ್ಧಿ’ ಎಂದು ಕರೆಯಬಹುದು.”




“ಹೌದಲ್ವಾ? ಆಗ ನಾವಿಬ್ಬರೂ ಬುದ್ಧಿವಂತರಾಗುವುದು ನಿಶ್ಚಿತ.”

ಒಂದ್ಯೆದು ನಿಮಿಷಗಳಲ್ಲಿ ಬಲು ಉತ್ಸಾಹದಿಂದ ಚಿತ್ರಗುಪ್ತ ತನ್ನ ಯಜಮಾನನ ಬಳಿ ಬಂದು, ಫೋನ್ಗಳನ್ನು ಕೊಡುತ್ತಾ, “ಸ್ವಾಮಿಗಳೆ, ಇವೆರಡೂ ಫೋನ್ಗಳನ್ನು ನಾನು ಅಮೆರಿಕದಿಂದಲೇ ತಂದಿರುವೆ. ಸ್ವೀಕರಿಸಬೇಕು.” ಎಂದೊಪ್ಪಿಸಿದ.

“ಯಾಕೆ ಅಮೆರಿಕ ದೇಶ ಚಿತ್ರಗುಪ್ತ? ಅಲ್ಲಿನ ಲಲನಾ ಮಣಿಯರನ್ನು ನೋಡಲೆಂದೋ ಅಥವಾ ಅಮೆರಿಕದ ಅಧ್ಯಕ್ಷರು ನಿನಗೆ ಬರುವಂತೆ ಬುಲಾವ್ ಮಾಡಿದರೋ?”

“ಅಯ್ಯೋ ಹಾಗೇನೂ ಅಲ್ಲ ಸ್ವಾಮಿಗಳೇ. ಆ ಬಾರಿ ಚೈನಾದಿಂದ ತಂದ ಕಂಪ್ಯೂಟರ್ ತಗಾದೆ ಮಾಡಿದಾಗಿನಿಂದ ನಾನು ಅಮೆರಿಕಾಗೇ ಹೋಗುವುದು. ಅಲ್ಲಿನ ದೊಡ್ಡ ಕಂಪನಿಗಳಲ್ಲಿ ಭಾರತದವರೇ ಅಲ್ವೇ ದೊಡ್ಡ, ದೊಡ್ಡ ಹುದ್ದೆಗಳಲ್ಲಿರುವುದು? ಅದು ಮುಖ್ಯ ಕಾರಣ. ಅಲ್ಲದೆ ಅವರಲ್ಲಿ ಅತ್ಯಾಧುನಿಕವಾದ ಸಾಮಾನುಗಳು ಹೇರಳವಾಗಿ ದೊರೆಯುವುದಂತೆ. ಅದಕ್ಕೆ ಅಲ್ಲಿಗೇ ಹೋಗಿದ್ದೆ.”

“ಆಹಾ! ಸರಿಯಾದದ್ದನ್ನೇ ಮಾಡಿರುವಿ. ಎಲ್ಲಿ, ಬೇಗ ಕೊಡು.” ಎಂದ ಯಮ ಫೋನ್ ಹಿಡಿದುಕೊಂಡು ಅತ್ತ ಇತ್ತ ತಿರುಗಿಸಿ, ಮುಟ್ಟಿ, ಮುಟ್ಟಿ ನೋಡಿದ. ಏನು ಮಾಡುವುದೆಂದು ತಿಳಿಯಲಿಲ್ಲ.

“ಗುಪ್ತಾ, ಏನಿದು ? ಇದು ಒಂದು ಮೂಟೆಯಂತಿದೆ? ಹೀಗೆ ಗುಪ್ತವಾಗಿ, ಗಪ್ಚಿಪ್ ಆಗಿರುವ ಇದರ ಪ್ರಯೋಜನವೇನು? ಮೊದಲು ಏನಾದರೂ ಒದರು.”

“ಸ್ವಾಮಿ, ಅದರ ‘ಸ್ವಿಚ್’ ಮೊದಲು ಹಾಕಬೇಕು. ಅದು ಬಿಟ್ಟು ನನ್ನ ಮೇಲೆ ಎಗರಾಡಿದರೆ....” ಎಂದು ‘ಸ್ವಿಚ್’ ಅದುಮಿದ್ದಲ್ಲದೇ ಒಂದಷ್ಟು ತಡಕಾಡಿ, ಅತ್ತಿತ್ತ ತಿರುಗಿಸಿ ಪ್ರಾರಂಭಿಸಿಯೇ ಬಿಟ್ಟ. ಯಮನ ಫೋನನ್ನು ಬೆಂಗಳೂರಿನ ಸುದ್ದಿವಾಹಿನಿಯ ಜೊತೆ ಸಂಪರ್ಕಿಸಿದ. ಯಮನಿಗೆ ಭೂಲೋಕವೇ ಕೈಗೆ ಬಂದಷ್ಟು ಹಿಗ್ಗಾಯ್ತು. ಮೊದಲು ಪರದೆಯ ಮೇಲೆ ಸುದ್ದಿವಾಹಿನಿಯಲ್ಲಿ ಯಮನಿಗೆ ಕಂಡದ್ದು, ಕೇಳಿಸಿದ್ದು ಎಂತಂದ್ರೋ ‘ಗ್ಯಾರಂಟಿ’ಗಳ ಸುದ್ದಿ. ಅನಂತರ ಜೈಕಾರ ಹಾಕುತ್ತಿದ್ದ ಸಾಕಷ್ಟು ಜನರ ಮೆರವಣಿಗೆ. ಆಮೇಲೆ ಪರದೆಯ ಮೇಲೆ ಮಿಂಚಿದ್ದು ಪ್ರಶಸ್ತಿ ಪಡೆಯುತ್ತಿದ್ದ ಸಿನಿಮಾ ಮಂದಿ. ರಂಗುರಂಗಾಗಿದ್ದ ನಟಿಯರನ್ನು ಕಂಡಾಗ ಎಂದೂ ಕಣ್ರೆಪ್ಪೆಗಳನ್ನು ಮಿಟುಕಿಸದ ಯಮನ ಕಣ್ಣುಗಳು ಮತ್ತಷ್ಟು ಅಗಲವಾಗಿ, ನೆಟ್ಟಗೆ ನಿಂತವು. ಮುಂದೆ ಬಿತ್ತರವಾಗಿದ್ದು ದೊಡ್ಡ ಮನುಷ್ಯರೊಬ್ಬರು ನಿಧನರಾದ ಸುದ್ದಿ. ಅದು ಅವನ ಕ್ಷೇತ್ರದ್ದೇ ಆಗಿದ್ದರಿಂದ ತಿಳಿದಿದ್ದ ವಿಷಯವೇ! ಹೀಗೆ ಒಂದಾದಮೇಲೊಂದು ಕಾಣುತ್ತಿದ್ದ ಸರಣಿ ಸುದ್ದಿಗಳ ಆಕರ್ಷಣೆಯಿಂದ ಯಮನ ಮುಖ ಫೋನ್ ಪರದೆಯಿಂದ

ಅತ್ತಿತ್ತ ಅಲುಗಾಡಲೇ ಇಲ್ಲ.

ಇದನ್ನೆಲ್ಲಾ ಗಮನಿಸುತ್ತಿದ್ದ ಚಿತ್ರಗುಪ್ತ ಮನಸ್ಸಿನಲ್ಲಿಯೇ ನಗುತ್ತಾ, 'ಬುದ್ಧೀ' ಎಂದಾಗ ಯಮ ಬೆಚ್ಚಿಬಿದ್ದು, "ಆಂ, ಯಾಕೋ ಕೂಗಿದೆ?" ಎಂದವನೇ, 'ಶಹಭಾಷ್, ಶಹಭಾಷ್' ಎಂದವನೇ, "ಇನ್ಮೇಲೆ ನೀನು 'ಬುದ್ಧಿ' ಎಂದು ಕರೆಯಲು ಅಡ್ಡಿಯಿಲ್ಲ. ಈಗ ಫೋನ್ ಕಂಡದ್ದಾಯ್ತು. ಹಾಗೇ ಫೋನ್ನ ಮತ್ತಷ್ಟು ಉಪಯೋಗಗಳನ್ನು ಕಲಿಸು. ಇದರ ಮೂಲಕ ಮಾತಾಡಲು ಸಾಧ್ಯವೇ?" ಎನ್ನುವ ಪ್ರಶ್ನೆಯನ್ನು ಮುಂದಿಟ್ಟ.

"ಓ, ಸಾಧ್ಯ ಪ್ರಭು. ಬಹುದೂರದ ದೇಶಗಳಿಂದ ಆಪ್ತರು ಕರೆ ಮಾಡುತ್ತಿದ್ದಾರೆ. ಸಭೆಗಳು, ಸಂಗೀತ-ನೃತ್ಯ-ಸಾಹಿತ್ಯ ಕಾರ್ಯಕ್ರಮಗಳಲ್ಲಿ ಮಾತನಾಡಿ, ನೋಡಿ, ಕೇಳಿ ಆನಂದಿಸಬಹುದು. ಈಗೀಗ ವೈದ್ಯರು ಕೂಡ ರೋಗಿಯನ್ನು ಇದ್ದಲ್ಲಿಂದಲೇ ಕಂಡು, ಮಾತಾಡಿ, ರೋಗಗಳನ್ನು ಗುಣಪಡಿಸುತ್ತಿದ್ದಾರೆ. ಎ.ಐ ಸೌಲಭ್ಯಗಳಿಂದಂತೂ ವೈದ್ಯರ ಗೊಡವೆಯೇ ಇಲ್ಲದೆ ರೋಗಿಗಳು ಔಷಧಗಳನ್ನು ಪಡೆದು, ಕಾಯಿಲೆಗಳಿಂದ ಗುಣಮುಖರಾಗುತ್ತಿದ್ದಾರಂತೆ."

"ಅಯ್ಯಾ, ಗುಪ್ತ. ನಾವು ಹಂತ ಹಂತವಾಗಿ ಹೆಜ್ಜೆ ಇಡೋಣ. ನಾವೀಗ 'ವರ್ಕ್ ಫ್ರಂ ಹೋಮ್'ನ ವಿವರಗಳನ್ನು ತಿಳಿಯೋಣ. 'ಮಾತಾಡಲು ಸಾಧ್ಯವೇ' ಎನ್ನುವ ಪ್ರಶ್ನೆಗೆ ಮೊದಲು ಉತ್ತರಿಸು." ಎಂದು ಅಬ್ಬರಿಸಿದ.

"ಸ್ವಾಮಿ, ನೀವು ಆಗಸಕ್ಕೆ ಪಯಣಿಸಿದ ಮೊದಲ ಭಾರತೀಯ ರಾಕೇಶ್ ಶರ್ಮಾರವರ ಹೆಸರು ಕೇಳಿರಬೇಕಲ್ಲವೇ? ಆಗ ಭಾರತದ ಪ್ರಧಾನಿಗಳು 'ಭಾರತ ಆಗಸದಿಂದ ಹೇಗೆ ಕಾಣುತ್ತಿದೆ?' ಎಂದು ಕೇಳಿದಾಗ '"ಭಾರತ ಪ್ರಪಂಚದ ಎಲ್ಲೆಡೆಗಿಂತ ಚೆಂದ." ಎಂದು ಉತ್ತರಿಸಿದ್ದು ಆಕಾಶದಿಂದಲೇ ಅಲ್ಲವೇ? ಐತಿಹಾಸಿಕ ಸತ್ಯ ನಮ್ಮೆದುರಿಗೇ ಇರುವಾಗ ಮತ್ತೇನು ಹೇಳಲಿ?"

"ಅದು ನೆನಪಿನಲ್ಲಿದೆಯೋ. ಆದರೆ ಅದು ಸರ್ಕಾರೀ ವೈಭವ. ಜನಸಾಮಾನ್ಯರಿಗೂ ಸಾಧ್ಯವಿದ್ದಲ್ಲಿ 'ವರ್ಕ್ ಫ್ರಂ ಹೋಮ್' ಮಾಡಲು ನನ್ನ ಅಡ್ಡಿಯೇನು? ನಿನ್ನ ಶಿಷ್ಯರು ತಪ್ಪು ಮಾಡಿ, ಅವನಿಗೆ ಬದಲು ಇವನಿಗೆ ಕುಣಿಕೆ ಹಾಕಿದಾಗ, ನಿನಗೆ ಕಾಣಬೇಕು ಹಾಗೂ ನಿನ್ನ ಗದರುವಿಕೆ ಅವರಿಗೆ ಕೇಳಬೇಕಲ್ಲವೇ? ಅವರಿಗೆ ನಿನ್ನ ಕೂಗು ಕೇಳುವುದಾದರೆ ನನ್ನದೇನೂ ತಕರಾರಿಲ್ಲ." ಎಂದ ಯಮ ಫೋನ್ ನೋಡುವ ತರಾತುರಿಯಲ್ಲಿ.

ಇದಕ್ಕಾಗಿಯೇ ಕಾಯುತ್ತಿದ್ದ ಚಿತ್ರಗುಪ್ತ ಮುಸಿಮುಸಿ ನಗುತ್ತಲೆ ತನ್ನ ಪುಸ್ತಕ, ಮಸಿ ಕುಡಿಕೆಗಳನ್ನು ಬದಿಗಿಟ್ಟು, 'ವರ್ಕ್ ಫ್ರಂ ಹೋಮ್' ಕೆಲಸ ಮಾಡಲು ಅಣಿಯಾದ.

ಕಳ್ಳತನವಾಗಬಹುದೆಂದು ಕಿಟಕಿ
ಮುಚ್ಚಿ ಮಲಗಿ ಎಂದಿದ್ದರು ಇನ್ಸ್‌ಪೆಕ್ಟರು
ಆದರೂ ಕಳ್ಳತನವಾಗಿತ್ತು
ಇದು ಹೇಗೆಂದು ಕೇಳಿದರು
ಬಂದ ಉತ್ತರ
ನೀವು ಹೇಳಿದಂತೆ ಕಿಟಕಿ ಮುಚ್ಚಿಯೇ ಇತ್ತು
ರಾತ್ರಿ ಒಂದು ಹೊತ್ತಿನಲ್ಲಿ ಶಖೆ ಎಂದು
ಹೆಂಡತಿ ಮುಂಬಾಗಿಲು ತೆಗೆದು ಮಲಗಿದ್ದಳು

# ಸಿಟ್ಟಪ್ತಿ ತಿರುಗಿ ನೋಡ್ಯಾಳ !

ಸುಮಾ ರಮೇಶ್, ಹಾಸನ.

'ದ ಫೇಸ್ ಈಸ್ ದ ಇಂಡೆಕ್ಸ್ ಆಫ್ ದ ಮೈಂಡ್' ಅರ್ಥಾತ್ ಮನದ ಕ್ಷಿಪ್ರ ಭಾವನೆಗಳು ಮುಖದ ಕ್ಯಾನ್ವಾಸ್‌ನಲ್ಲಿ ಸಂಕ್ಷಿಪ್ತವಾಗಿ ಪ್ರತಿಫಲಿಸುತ್ತವೆ. ಆದರೆ ಇಲ್ಲಿ ಫೇಸ್ ನ ಯಾವ ಅಂಗದ ಕಾಂಟ್ರಿಬ್ಯೂಶನ್ ಭಾವನೆಗಳ ತುರ್ತು ತೋ(ಸೋ)ರಿಕೆಯಲ್ಲಿ ಹಿರಿದು ಎಂಬ ಬಗ್ಗೆ ಚರ್ಚೆ ನಡೆದರೆ ಟಫ್ ಕಾಂಪಿಟೇಶನ್ ಬೀಳುವುದು ಕಣ್ಣು, ಮೂಗು ಹಾಗು ಬಾಯಿಗಳ ನಡುವೆ. ಕಿವಿ ಸ್ಪರ್ಧೆಗೆ ಮುನ್ನವೇ ಪಕ್ಕಕ್ಕೆ ಸರಿದು ಬಿಡುವುದು. ಅದು ಮುಖದ ಇಕ್ಕೆಲಗಳಲ್ಲಿರುವುದರಿಂದ ಅದರ ನೇರ ದರ್ಶನವೇ ಅಲಭ್ಯ. ಹಾಗಾಗಿ ಮೈಂಡಿನ ಇಂಡೆಕ್ಸ್ ನಲ್ಲಿ ಈ ಇಂದ್ರಿಯದ ಪಾತ್ರ ನಗಣ್ಯ. ಇನ್ನು ಮೂಗು ಆಗಾಗ ಕೆನ್ನೆ, ಬಾಯಿ, ಕಣ್ಣುಗಳ ಸಹಯೋಗದಲ್ಲಿ ಮೇಲೆ ಕೆಳಗೆ ಆಡಿ ಒಂದಿಷ್ಟು ವಕ್ರ ಭಾವನೆಗಳನ್ನು ಬಿಂಬಿಸಿದರೂ ಅದರ ಇಂಡಿವಿಶುಯಲ್ ಕಾಂಟ್ರಿಬ್ಯೂಶನ್ ಕಡಿಮೆ. ಹಾಗಾಗಿ ಅದೂ ಸ್ಪರ್ಧೆಯಿಂದ ಹೊರಗುಳಿದು ಅಂತಿಮ ಸುತ್ತಿಗೆ ಆಯ್ಕೆಯಾಗುವ ಕಣ್ಣು, ಬಾಯಿಗಳು ತೀವ್ರ ಪೈಪೋಟಿಗೆ ಬೀಳುತ್ತವೆ. ಬಾಯಿ ಮುಗುಳ್ನಗು ಅರಳಿಸಿ, ತುಟಿಗಳನ್ನು ವಕ್ರವಾಗಿಸಿ ಪಾಸಿಟಿವ್, ನೆಗೆಟಿವ್ ಭಾವಗಳನ್ನು ಬಿಂಬಿಸಬಹುದಾದರೂ ಅದು ಮಾತಿನ ಮೂಲಕವೂ ಅಭಿವ್ಯಕ್ತಿಸುವುದರಿಂದ 'ಮುಖವೇ ಮನಸ್ಸಿನ ಕನ್ನಡಿ' ಎಂಬ ಗಾದೆಯ ಮೂಲ ಆಶಯಕ್ಕೆ ಧಕ್ಕೆಯಾಗುವುದು. ಹಾಗಾಗಿ ಫೈನಲಿ ಕಣ್ಣನ್ನು ವಿನ್ನರ್ ಎಂದು ಘೋಷಿಸಬಹುದು.

ಹೆಣ್ಣಿನ ಕಣ್ಣುಗಳು ಕವಿಗಳನ್ನು ಬಹಳವಾಗಿ ಕಾಡಿ ಕಮಲ, ಜಿಂಕೆ, ಮೀನು, ಬಟ್ಟಲು, ಮುಂತಾದ ಎಷ್ಟೋ ಉಪಮೆಗಳನ್ನು ತಮ್ಮದಾಗಿಸಿಕೊಂಡಿವೆ. ಅವಳ ಕಣ್ಣೋಟಗಳು ಬಾಣದಂತೆ, ಅಗ್ನಿಯಂತೆ, ಬಲೆ, ಮೋಡ, ಚಂದ್ರ, ಸೂರ್ಯ, ಕತ್ತಿಯ ಅಂಚುಗಳಂತೆ ಹೊರಹೊಮ್ಮಿ ಪುರುಷ ವರ್ಗವನ್ನು ಅಲುಗಾಡಿಸಿವೆ. 'ನಿನ್ನ ಕಣ್ಣ ನೋಟದಲ್ಲಿ ನೂರು ಆಸೆ ಕಂಡೆನು...' ಎನ್ನುತ್ತಾ ನಾಯಕಿಯ ಕಣ್ಣೋಟದಿಂದಲೇ ಅವಳ ಮನದಾಸೆಯನ್ನು ಅರಿಯುವ ನಾಯಕ ಒಂದೆಡೆಯಾದರೆ, ಕಣ್ಣನ್ನೇ ಕನ್ನಡಿ ಮಾಡಿಕೊಂಡು ಕ್ರಾಪ್ ತೀಡಿಕೊಳ್ಳುತ್ತಾ 'ನಿನ್ನ ಕಣ್ಣ ಕನ್ನಡಿಯಲ್ಲಿ ಕಂಡೆ ನನ್ನ ರೂಪ...' ಎನ್ನುವವ ಮತ್ತೊಬ್ಬ. ಹೀಗೆ ಕಣ್ಣು ಒಮ್ಮೊಮ್ಮೆ ಎದುರಿನವರ ಭಾವನೆಯನ್ನೂ ಪ್ರತಿಫಲಿಸಿ ಯೂನಿವರ್ಸೆಲ್ ಇಂಡೆಕ್ಸ್ ಆಫ್ ಮೈಂಡ್ ಆಗುವುದು.

ಪ್ರಚಲಿತ ಬದುಕಿಗೆ ಹೆಚ್ಚು ಸ್ಪಂದಿಸುವ ಕವಿಗಳಿಗೆ ಹೆಣ್ಣಿನ ಕಣ್ಣುಗಳು ಸಿಸಿಟಿವಿಯಂತೆ, ಟ್ರಾಫಿಕ್ ಲೈಟ್ಸ್, ಸರ್ಚ್ ಲೈಟ್, ರಿಮೋಟ್ ಕಂಟ್ರೋಲ್ ಹಾಗು ಬಿರುಗಾಳಿಯ ಮುನ್ಸೂಚನೆ ನೀಡುವ ರೇಡಾರ್ ನಂತೆಲ್ಲಾ ಕಂಡರೆ ಅಚ್ಚರಿಯಿಲ್ಲ. ಅವರವರ ಭಾವಕ್ಕೆ ಅವರವರ ಭಕುತಿಗೆ...! ಹೆಣ್ಣಿನ ಕಣ್ಣೋಟಕ್ಕೆ ಜಗತ್ತನ್ನೇ ಬದಲಿಸುವ ಶಕ್ತಿ ಇದೆಯೋ ಇಲ್ಲವೋ ಆದರೆ ಪುರುಷನ ದಿನಚರಿಯನ್ನು ತಲೆಕೆಳಗು ಮಾಡುವ ಪವರ್ ಖಂಡಿತಾ ಇದೆ. ಮುಂಜಾನೆ ಬೇಗನೆದ್ದು ಶಿವನಿಗೆ ಕರಮುಗಿದು 'ಎನ್ನ ಕಾಯೋ ತಂದೆ...' ಎಂದೆನ್ನುತ್ತಲೇ ಆತ ಆಕೆಯತ್ತ ತಿರುಗಿದಾಗ ಅಂದಿನ ಕೆಲಸ 'ಕಾಯೋ' ಹಣ್ಣೋ... ಎಂದು ತಿಳಿದುಬಿಡುವುದು. ಆಕೆಯ ಮೂಡ್ ಅನುಸಾರ ಮನೆಯ ಹವಾಮಾನ ಬದಲಾಗುವುದು, ಗೃಹ ಚರಿತೆ ದಾಖಲಾಗುವುದು. ಭೂತ, ವರ್ತಮಾನದ ತಪ್ಪುಗಳು, ಭವಿಷ್ಯದ ಸಂಭವನೀಯ ಎಡವಟ್ಟುಗಳೆಲ್ಲಾ ಅವಳ ಮನದ ಲೆಕ್ಕಪತ್ರದಲ್ಲಿ ಆಗಾಗ 'ಆಡಿಟ್' ಆಗುತ್ತಾ ದಿನಚರಿಯ

ದಿಕ್ಕನ್ನೇ 'ಎಡಿಟ್' ಮಾಡುತ್ತವೆ. ಬ್ಲ್ಯಾಕ್ ಹೋಲ್ ನ ಆಕರ್ಷಣಾ ಶಕ್ತಿಯ ಬಗ್ಗೆ ಸಂಶೋಧನೆ ಮಾಡುವ ವಿಜ್ಞಾನಿಗಳಿಗೂ ಹೆಣ್ಣಿನ ಕಣ್ಣಿನ ಬ್ಲ್ಯಾಕ್ ಬಾಲ್ ಕದಲಿಕೆಯನ್ನು ಅರಿಯುವುದು ಅಸಂಭವ. ಅವಳ ಕಿರು ನೋಟ, ಕುಡಿನೋಟ, ಕಿಡಿನೋಟ, ಬಿರುನೋಟಕ್ಕೆ ತತ್ತರಿಸದವರಿಲ್ಲ. ನಲ್ಲೆಯ ದೃಷ್ಟಿ ಯುದ್ಧ, ಮಲ್ಲರ ಮುಷ್ಟಿ ಯುದ್ಧಕ್ಕಿಂತಲೂ ತೀಕ್ಷ್ಣ ಎಂಬ ಅಭಿಪ್ರಾಯ ಸಾರ್ವತ್ರಿಕ ಮನ್ನಣೆ ಪಡೆದಿದೆ. 'ಜೋಕೆ ನಾನು ಬಳ್ಳಿಯ ಮಿಂಚು... ಕಣ್ಣು ಕತ್ತಿಯ ಅಂಚು...' ಎಂದು ಎಲ್. ಆರ್. ಈಶ್ವರಿ ಎಂದೋ ಎಚ್ಚರಿಸಿರುವರು. 'ಕಲ್ಲೇಟಿಗಿಂತ ನಿನ್ನ ಕಣ್ಣೇಟು ಜೋರಾಗಿ ನಡುಗಿದೆ ಗಡಗಡ ಗಂಗಮ್ಮ....' ಎಂದು ಮೇರು ನಟರೇ ಹೆಣ್ಣಿನ ಪರ ತೇರೆಳೆದಿರುವರು.

ನಮ್ಮ ಜನಪದ ಗೀತೆಗಳಲ್ಲೂ ಕಣ್ಣೋಟದ ಬಗ್ಗೆ ಹಲವು ಸಾಲುಗಳಿವೆ. ಸುಸೂತ್ರವಾಗಿ ಪ್ರಸವ, ಬಾಣಂತನ ಮುಗಿಸಿ ತವರಿನಿಂದ ಹೊಸ ಸೀರೆಯುಟ್ಟು ಹೊರಟ ಮಗಳು

ತೊಟ್ಟಿಲ ಹೊತ್ಕೊಂಡು

ತೌರಬಣ್ಣ ಉಟ್ಕೊಂಡು

ಅಪ್ಪ ಕೊಟ್ಟೆಮ್ಮೆ ಹೊಡಕೊಂಡು

ತವರೂರ ತಿಟ್ಹತ್ತಿ ತಿರುಗಿ ನೋಡ್ಯಾಳ

ತೊಟ್ಟಿಲನ್ನು ಹೊತ್ತುಕೊಂಡು,ಎಮ್ಮೆ ಹೊಡೆದುಕೊಂಡು ತಿಟ್ಟನ್ನು ಹತ್ತಿ ಎಂದರೆ ಗಂಡನ ಮನೆಯ ದಿಬ್ಬದ ತುದಿಯನ್ನು ಹತ್ತಿ ನಿಂತು ತವರೂರ ಕಡೆಗೆ ತಿರುಗಿ ನೋಡುವಳು ಎಂದು ಜನಪದರು ಬಹಳ ಮಾರ್ಮಿಕವಾಗಿ ಹೇಳಿರುವರು. ಕಾಲದ ತಿರುಗಣೆಯಲಿ ತವರೂರಿನಿಂದ ಎಮ್ಮೆಯ ಬದಲು ಕಾರನ್ನೋ, ಬೈಕನ್ನೋ ಹೊಡೆದುಕೊಂಡು ಬರುವ ಸಮಯ ದಕ್ಕಬೇಕಾದ್ದೆಲ್ಲಾ ಸರಿಯಾಗಿ ದಕ್ಕದಿದ್ದಾಗ ಟೋಲ್ ಗೇಟ್ ಬಳಿ 'ಸಿಟ್ಹತ್ತಿ' ತಿರುಗಿ ನೋಡುವಳು ಎಂದು ಆಧುನಿಕ ಕವಿ ತಿದ್ದುಪಡಿ ಮಾಡಿರುವನು.

ನವರಸಗಳಾದ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಎಲ್ಲವನ್ನೂ ಹ್ಯಾಂಡಲ್ ಮಾಡಲು ಕಣ್ಣಿಗೆ ಮಾತ್ರ ಸಾಧ್ಯ. ಹೆಣ್ಣಿನ ಕಣ್ಣುಗಳು ಸಂದರ್ಭಾನುಸಾರ ಈ ಎಲ್ಲಾ ನೋಟಗಳನ್ನೂ ಸ್ಫುರಿಸುತ್ತವೆ. 'ಆಂಖೋ ಮೇ ತೇರಿ...ಅಜಬ್ ಸಿ, ಅಜಬ್ ಸಿ, ಅದಾಯೇಂ ಹೈ ' ಎಂಬ ಗೀತೆಯಲ್ಲಿ ದೀಪಿಕಾಳ ಕಣ್ಣೋಟ ನಾಯಕನ ಮನವನ್ನು ದುಪ್ಪಟ್ಟು ಸೆಳೆದು ಅವನ ರಿಸ್ಟ್ ಬ್ಯಾಂಡ್ ಗೆ ಆಕೆಯ ದುಪ್ಪಟ್ಟ ಗಂಟು ಹಾಕಿಕೊಂಡು ಕೊನೆಗೆ ಅದೇ ಬ್ರಹ್ಮ ಗಂಟಾಗುವುದು.

ಕಾಲಕ್ಕೆ ತಕ್ಕಂತೆ ನೋಟುಗಳು ಬದಲಾದಂತೆ ಹೆಣ್ಣಿನ ನೋಟಗಳೂ ಬದಲಾಗುತ್ತಿವೆ. ನಮ್ಮ ಕವಿಗಳು ಈಗಾಗಲೇ ಬಣ್ಣಿಸಿರುವ ಕುಡಿನೋಟ, ಕಳ್ಳನೋಟ, ನೇರ ನೋಟ, ದಿಟ್ಟ ನೋಟ, ಬಿರುಗಣ್ಣಿನ ನೋಟಗಳಿಗೆ ಹಲವು ಹೊಸ ಸೇರ್ಪಡೆಗಳಿವೆ. ಶಾಪಿಂಗ್ ಹೋದಾಗ ಗಂಡನ ಕ್ರೆಡಿಟ್ ಕಾರ್ಡಿಗಾಗಿ ಬೀರುವ 'ಬಜೆಟ್ ಬ್ಲಾಸ್ಟರ್ ನೋಟ' ಕತ್ತಿಯ ಅಂಚಿಗಿಂತಲೂ ಶಾರ್ಪಾಗಿ ಬ್ಯಾಂಕ್ ಬ್ಯಾಲೆನ್ಸ್ ಗೆ ತಾಗಿ ಅವನ ಬ್ಯಾಲೆನ್ಸ್ ತಪ್ಪುತ್ತದೆ. ಇದರೊಂದಿಗೆ ಫೋನ್ ರಿಂಗ್ ಆದೊಡನೇ ಸ್ಕ್ರೀನ್ ಮೇಲೆ ಕಣ್ಣಾಡಿಸಿ ಥಟ್ಟನೆ ಕಟ್ ಮಾಡಿದಾಗ ಆಕೆ ಬೀರುವ ಸಿಬಿಐ ನೋಟ, ಮನೆಗೆ ತಡವಾಗಿ ಬಂದಾಗ ಬೀರುವ 'ಇಂಟರ್ ಪೋಲ್ ನೋಟ' ಗಳಿಗೆ ಗಂಡು ತತ್ತರಿಸಿದರೆ, ಅದರಿಂದ ಬಚಾವಾಗಲು ಹೇಳುವ ಸಬೂಬುಗಳಿಗೆ ಆಕೆ ಬೀರುವ 'ಲೈ (lie) ಡಿಟೆಕ್ಟರ್ ನೋಟ' ಅವನ ಐಸ್ ಡೌನ್ ಮಾಡಿಬಿಡುವುದು. ಭಯೋತ್ಪಾದಕರನ್ನೂ

ಭಯಭೀತರನ್ನಾಗಿ ಮಾಡುವ ಸಾಧ್ಯತೆಗಳನ್ನು ಇಲ್ಲಷ್ಟೇ ಕಾಣಬಹುದು. ಹೊರಗೆ ಹೋದಾಗ ನೆಮ್ಮದಿಯಾಗಿ ಮೇಯಲೂ ಬಿಡದ 'ಡಯೆಟ್ ಡಿಟೆಕ್ಟರ್ ನೋಟ', ಎಲ್ಲರೆದುರು ಮಾಡುವ ಸಣ್ಣಪುಟ್ಟ ಎಡವಟ್ಟುಗಳಿಗೆ 'ಮನೆಗ್ಬಾ ನೋಡ್ಕೋತೀನಿ ಎಂಬ' ಸೈಲೆಂಟ್ ವಾರ್ನಿಂಗ್ ನೋಟ' ಇಂತಹ ಹತ್ತು ಹಲವು ನೋಟಗಳು ವಿವಾಹಿತರ ಬದುಕಿನಲ್ಲಿ ನಿರಂತರ ದಾಳಿ ಮಾಡುತ್ತಲೇ ಇರುತ್ತವೆ.




ಇದಕ್ಕೆ ವ್ಯತಿರಿಕ್ತವಾಗಿ ಕೆಲವೊಮ್ಮೆ ಭಾರೀ ಬೈಗುಳದ ನಿರೀಕ್ಷೆಯಲ್ಲಿ ಮನೆಗೆ ಬಂದವನಿಗೆ ಸಾಗರದಷ್ಟು ಪ್ರಶಾಂತವಾದ ಕಣ್ಣೋಟ ಎದುರಾದರೆ ಒಮ್ಮೊಮ್ಮೆ, ಯಾವುದೇ ತಪ್ಪಿನ ಸುಳಿವಿಲ್ಲದಿದ್ದರೂ ತೀಕ್ಷ್ಣವಾಗುವ ಆ ನೋಟ ಭಾರೀ ಗೊಂದಲ ಸೃಷ್ಟಿಸುವುದು. ಇದು ಹೆಲ್ಮೆಟ್ ಇಲ್ಲದೆ ಹೋದಾಗ ಎದುರಾಗುವ ಟ್ರಾಫಿಕ್ ಪೊಲೀಸ್ ನಂತೆ. ಯಾವಾಗ ಮೌನ, ಯಾವಾಗ ದಂಡ ಎಂದು ಹೇಳಲಾಗದು. ಅಂತಹ ಪಜಲ್ ನೋಟಕ್ಕೆ ಗಲಿಬಿಲಿಗೊಂಡು ಮಂಡೆಯೊಳಗೇ ಗೂಗಲ್ ಸರ್ಚ್ ಕೊಟ್ಟರೂ ಅದು 'ನೋ ರಿಸಲ್ಟ್ಸ್ ಫೌಂಡ್' ಎಂದುತ್ತರಿಸುವುದು. ಹೆಣ್ಣಿನ ಕಣ್ಣೋಟದ ಈ ವೈವಿಧ್ಯವನ್ನು ಅರ್ಥ ಮಾಡಿಕೊಳ್ಳುತ್ತಲೇ ವಿವಾಹಿತ ಪುರುಷ ಪರಿಪಕ್ವಗೊಳ್ಳುವನು.

ಇತ್ತೀಚೆಗೆ ಆದರ್ಶ ಪತ್ನಿಯ ಸಿದ್ಧ ಮಾದರಿಯ ಷಡ್ಗುಣಗಳು ಷಟ್ ಡೌನ್ ಆಗಿವೆ. ಹಾಗಾಗಿ ಗಂಡನ ಅಕ್ಷಮ್ಯಗಳಿಗೆ ಆಕೆ ಎಂದಿಗೂ 'ಕ್ಷಮಯಾ ಧರಿತ್ರಿ 'ಯಾಗಲಾರಳು. 'ಲವ್ ಅಟ್ ಫಸ್ಟ್ ಸೈಟ್ ಡಿವೋರ್ಸ್ ಅಟ್ ಫಸ್ಟ್ ಫೈಟ್' ಕೇಸ್ ಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಗೃಹಾಂತರ್ ವ್ಯಾಜ್ಯಗಳು ಕಡಿಮೆ ಅವಧಿಯಲ್ಲಿ ಬೃಹತ್ ಅಂತರವನ್ನು ಸೃಷ್ಟಿಸುತ್ತಿವೆ. ಆದರ್ಶ ಪತಿಯ ಆರು ಅಪ್ ಡೇಟೆಡ್ ಸೂತ್ರಗಳಿಗೆ 'ತಾಳ್ಮೇಶು ತಪಸ್ವಿ', 'ಸಹನೇಶು ಸಹಿಷ್ಣು' ವಿನಂತಹ ಗುಣಗಳು ಸೇರ್ಪಡೆಯಾದರೆ ಒಳಿತು. ಪತ್ನಿಯ ಭುಗಿಲೇಳುವ ಕೋಪವ ಶಮನಗೊಳಿಸಲಾಗದಿದ್ದರೂ, ಆಕೆ ಸಿಟ್ಟುತ್ತಿ ತಿರುಗಿ ನೋಡಿದಾಗ ರಕ್ಷಣಾತ್ಮಕವಾಗಿ ಒಂದು ಆಂಟಿಸಿಪೇಟರಿ ಹಿಡಿದು ನಿಂತರೆ ಅವ ಮೊದಲ ಹಂತದ ಪರೀಕ್ಷೆಯಲ್ಲಿ ಗೆದ್ದಂತೆ, ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡಂತೆ !

ಕಾಪಿಯನು ಹೊಡೆವಾಗ ಪೀಪಿ ಊದುವರೇನು
ಸೋಪಿನೊಳು ನೊರೆಯು ಬರುವಂತೆ ಮೆತ್ತಗೆ
ಕಾಪಿ ಹೊಡೆಯುವುದೊಳಿತು ಸ್ವಲ್ಪಜ್ಞ.

**– ಡುಂಡಿರಾಜ್**

# ರಾಮಾಯಣದ ಕಾಲದಲ್ಲೂ ಎ ಐ ಇತ್ತು!

ಉಲ್ಲಾಸ್ ರಾಯಸಂ

ರಾಮಾಯಣದ ಕಾಲದಲ್ಲೂ ಎ ಐ ಇತ್ತು!

ಒಂದು ದಿನ ಬೆಳಿಗ್ಗೆ ನನ್ನ ಸೋದರಳಿಯ ಮೊಬೈಲ್ ಹಿಡಿದು ಕೇಳಿದ:

"ಮಾವ, ನಿಮಗೆ ಎ ಐ ಗೊತ್ತಾ?"

ನಾನು ಹೇಳಿದೆ:

"ನನಗೆ ಗೊತ್ತಿಲ್ಲವೆ?

"ನನ್ನ ಕಾಲದಲ್ಲಿ ಮಾತ್ರವಲ್ಲ. ರಾಮಾಯಣದ ಕಾಲದಲ್ಲೂ ಇತ್ತು!"

ಸೋದರಳಿಯ ತನ್ನ ಕೈಯಲ್ಲಿದ್ದ ಮೊಬೈಲ್ ಕೆಳಗೆ ಬೀಳುವುದೊಂದು ಬಾಕಿ.

"ಮಾವ,, ನೀವೇನು ಹೇಳ್ತಿದ್ದೀರಾ?"

"ನಾನು ಹೇಳುತ್ತಿಲ್ಲ. ರಾಮಾಯಣ ಓದಿದ ಮೇಲೆ ನನಗೆ ಹಾಗೆ ಅನಿಸುತ್ತಿದೆ."

"ಹೇಗೆ?"

"ಅಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇರಲಿಲ್ಲ. ಆದರೆ ಇಂಟೆಲಿಜೆನ್ಸ್ ಮಾತ್ರ ಹೇರಳವಾಗಿತ್ತು. ಈಗ ಆರ್ಟಿಫಿಷಿಯಲ್ ಇದೆ; ನ್ಯಾಚುರಲ್ ಎಲ್ಲಿದೆ ಎಂಬುದೇ ಹುಡುಕಬೇಕಾಗಿದೆ!"

ಅವನು ಸ್ವಲ್ಪ ಹೊತ್ತು ಸುಮ್ಮನಿದ್ದ.

ನಂತರ ಕೇಳಿದ:

"ಮಾವ,, ರಾಮಾಯಣದಲ್ಲಿ ಎ ಐ ಎಲ್ಲಿತ್ತು?"

"ಮೊದಲು ಹನುಮಂತನಿಂದ ಪ್ರಾರಂಭಿಸೋಣ."

ಇಂದಿನ ಎ ಐಗೆ "ಒಂದು ಕೆಲಸ ಕೊಟ್ಟರೆ, ಅದನ್ನು ಸಾಧ್ಯವಾದಷ್ಟು ವೇಗವಾಗಿ ಮಾಡಿ ಮುಗಿಸು" ಎಂದು ಹೇಳುತ್ತೇವೆ. ಹನುಮಂತನಿಗೆ ಶ್ರೀರಾಮನು ಸೀತೆಯನ್ನು ಹುಡುಕುವ ಕೆಲಸ ಕೊಟ್ಟರು. ಹನುಮಂತನು ಸಮುದ್ರ ದಾಟಿ ಲಂಕೆಗೆ ಹೋದನು, ಸೀತೆಯನ್ನು ಕಂಡು, ರಾಮನ ಸಂದೇಶ ಕೊಟ್ಟ.

ಇದು ಸಾಮಾನ್ಯ ಮನುಷ್ಯನ ಕೆಲಸವೇ?

ಇದು ಎ ಐ- ಪೋವೆರ್ಡ್ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್!

ಇಂದಿನ ಎ ಐಗೆ "ನನಗೆ ಮಾಹಿತಿ ಹುಡುಕಿ ಕೊಡು" ಎಂದರೆ ಅದು ಇಂಟರ್ನೆಟ್ನ ಮೂಲೆಮೂಲೆ ಹುಡುಕುತ್ತದೆ. ಹನುಮಂತನು ಕೂಡ ಲಂಕೆಯ ಮೂಲೆಮೂಲೆ ಹುಡುಕಿದನು. ವ್ಯತ್ಯಾಸವೆಂದರೆ, ಇಂದಿನ ಎ ಐಗೆ Wi-Fi ಬೇಕು; ಹನುಮಂತನಿಗೆ ಬೇಕಾಗಿದ್ದು ವಿಶ್ವಾಸವೊಂದೇ!"

ಇನ್ನು ಜಟಾಯು ಪಕ್ಷಿ ರಾಮ-ಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ಜಟಾಯು ಅವರಿಗೆ ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋದ ದಿಕ್ಕನ್ನು ತಿಳಿಸಿತು. ಅಂದರೆ ಜಟಾಯು ಆಗಿನ ಕಾಲದ "ಗೂಗಲ್ ಮ್ಯಾಪ್ಸ್"!

"ಸೀತೆಯನ್ನು ಕೊನೆಯ ಬಾರಿ ಎಲ್ಲಿ ನೋಡಿದಿರಿ?"

"ಲಂಕೆಯ ಕಡೆಗೆ ಕರೆದೊಯ್ಯುತ್ತಿದ್ದ."

“ಲೊಕೇಶನ್ ಶೇರ್ ಮಾಡಿ.”

“ಆ ಕಾಲದಲ್ಲಿ ವಾಟ್ಸಪ್ ಇರಲಿಲ್ಲ!”

ಆದರೂ ದಿಕ್ಕು ಕೊಟ್ಟಿತು.

ಇನ್ನು ಸಂಜೀವಿನಿ ಪರ್ವತದ ಘಟನೆ ಎ ಐಗೆ ಇನ್ನೂ ಹತ್ತಿರವಾಗಿದೆ.

ಹನುಮಂತನು ಸಂಜೀವಿನಿ ಔಷಧಿ ತರಲು ಹೊರಟ. ಆದರೆ ಯಾವ ಸಸ್ಯ ಸಂಜೀವಿನಿ ಎಂದು ಖಚಿತವಾಗಲಿಲ್ಲ. ಆಗ ಏನು ಮಾಡಿದ?

ಸಂಪೂರ್ಣ ಪರ್ವತವನ್ನೇ ಹೊತ್ತು ತಂದ!

ಇಂದಿನ ಎ ಐ ಕೂಡ ಕೆಲವೊಮ್ಮೆ ಇದೇ ರೀತಿ ಮಾಡುತ್ತದೆ.

“ಒಂದು ಸಾಲಿನಲ್ಲಿ ಉತ್ತರ ಕೊಡು” ಎಂದರೆ ಐದು ಪುಟಗಳ ಉತ್ತರ ಕೊಡುತ್ತದೆ!

“ಸರಳವಾಗಿ ಹೇಳು” ಎಂದರೆ ಸಂಶೋಧನಾ ಪ್ರಬಂಧ ಬರೆಯುತ್ತದೆ!

“ಎರಡು ಹೆಸರು ಕೊಡು” ಎಂದರೆ ಹತ್ತು ಹೆಸರುಗಳನ್ನು ಕೊಟ್ಟು, ಕೊನೆಯಲ್ಲಿ “ನಿಮ್ಮ ಅಗತ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡಬಹುದು” ಎನ್ನುತ್ತದೆ.

ಹನುಮಂತ ಕೂಡ ಬಹುಶಃ,

“ಯಾವ ಸಸ್ಯ ಎಂದು ಗೊತ್ತಿಲ್ಲವೇ? ಸರಿ, ಪೂರ್ತಿ ಪರ್ವತವನ್ನೇ ತೆಗೆದುಕೊಂಡು ಹೋಗೋಣ!”

ಎಂದು ಕೊಂಡಿರಬಹುದು.

ಇನ್ನು ನಾರದ ಮುನಿ?

ಅವರನ್ನು ನೋಡಿದರೆ ಇಂದಿನ “ಸೋಶಿಯಲ್ ಮೀಡಿಯಾ” ನೆನಪಾಗುತ್ತದೆ.

ಒಂದು ಸ್ಥಳದ ವಿಷಯವನ್ನು ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುವುದು, ಹೊಸ ಸುದ್ದಿ ತಿಳಿಸುವುದು, ಪ್ರಶ್ನೆ ಕೇಳುವುದು, ಚರ್ಚೆ ಹುಟ್ಟುಹಾಕುವುದು–ಇವೆಲ್ಲ ಅವರ ವಿಶೇಷತೆ.

ಆದರೆ ಒಂದು ವ್ಯತ್ಯಾಸ.

ಇಂದಿನ ಸೋಶಿಯಲ್ ಮೀಡಿಯಾ ಯಲ್ಲಿ ಸುದ್ದಿ ಬಂದ ನಂತರ ಜನರು “ಫಾರ್ವರ್ಡೆಡ್ ಅಸ ರೆಸಲಿವೆಡ್” ಎನ್ನುತ್ತಾರೆ.

ನಾರದರು ಬಹುಶಃ,

“ನಾನು ಕೇಳಿದ್ದನ್ನು ನಿಮಗೆ ಹೇಳಿದೆ!”

ಎಂದು ಹೇಳುತ್ತಿದ್ದರು.

ಆ ಕಾಲದಲ್ಲೇ ಕಮ್ಯುನಿಕೇಷನ್ ನೆಟ್ವರ್ಕ್ ಇತ್ತು!

ಇನ್ನು ರಾಮಸೇತು ನಿರ್ಮಾಣವನ್ನೇ ತೆಗೆದುಕೊಳ್ಳಿ.

ಸಮುದ್ರದ ಮೇಲೆ ಸೇತುವೆ ನಿರ್ಮಿಸುವುದು ಎಂದರೆ ಸಾಮಾನ್ಯ ಇಂಜಿನಿಯರಿಂಗ್ ಪ್ರಾಜೆಕ್ಟ್ ಅಲ್ಲ. ಆದರೆ ಕಲ್ಲುಗಳನ್ನು ಹಾಕಿ ಸೇತುವೆ ನಿರ್ಮಿಸಲಾಯಿತು.

ಇಂದಿನ ಎ ಐ ಇದ್ದಿದ್ದರೆ ಏನು ಮಾಡುತ್ತಿತ್ತು?

ಮೊದಲು ಪವರ್ಪಾಯಿಂಟ್ ಪ್ರೆಸೆಂಟೇಷನ್ ತಯಾರಿಸುತ್ತಿತ್ತು.

“ರಾಮಸೇತು ನಿರ್ಮಾಣ ಯೋಜನೆ–ಹಂತ 1.”

ನಂತರ ಎಕ್ಸೆಲ್ ಶೀಟ್.

“ಕಲ್ಲುಗಳ ಸಂಖ್ಯೆ – 1000000.”

ನಂತರ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಸಾಫ್ಟ್ವೇರ್.

“ಡೆಡ್ಲೈನ್–ತಕ್ಷಣ.”

ಆಮೇಲೆ ಸಭೆ.

ವಾನರ ಸೇನೆ:

“ಮೊದಲು ಸೇತುವೆ ಕಟ್ಟೋಣ ಸಾರ್. ಮೀಟಿಂಗ್ ನಂತರ ಮಾಡೋಣ!”

ಇಂದಿನ ಎ ಐ ಕೇಳಿದ ಪ್ರಶ್ನೆಗೆ ಉತ್ತರ ಕೊಡಬಹುದು.

ಆದರೆ ರಾಮಾಯಣ ನಮಗೆ ಇನ್ನೊಂದು ಪ್ರಶ್ನೆ ಕೇಳುತ್ತದೆ:

“ನಿನಗೆ ಬುದ್ಧಿ ಇದೆ. ಆದರೆ ಅದನ್ನು ನೀನು ಹೇಗೆ ಬಳಸುತ್ತೀಯ?”

ಇದೇ ಬಹುಶಃ ನಿಜವಾದ ಇಂಟೆಲಿಜೆನ್ಸ್.

ಆದರೆ ಒಂದು ವಿಷಯ ಖಚಿತ:

ಆ ಕಾಲದಲ್ಲಿ ಇಂಟೆಲಿಜೆನ್ಸ್ ಇತ್ತು.

ಅದಕ್ಕೆ ಬ್ಯಾಟರಿ ಬೇಕಿರಲಿಲ್ಲ.

ಚಾರ್ಜಿಂಗ್ ಬೇಕಿರಲಿಲ್ಲ.

Wi-Fi ಬೇಕಿರಲಿಲ್ಲ.

ಸುಬ್ಸ್ಕ್ರಿಪ್ಷನ್ ಬೇಕಿರಲಿಲ್ಲ.

ಮತ್ತು ಮುಖ್ಯವಾಗಿ....

“ಟರ್ಮ್ಸ್ ಅಂಡ್ ಕಂಡಿಷನ್ಸ್ ಅಪ್ಲೈ” ಕೂಡ ಇರಲಿಲ್ಲ!

ಹೀಗಾಗಿ ಇಂದಿನ ಎ ಐಯನ್ನು ನೋಡಿ ನಾವು ಅತಿಯಾಗಿ ಹೆಮ್ಮೆಪಡಬೇಕಿಲ್ಲ.

ಬಹುಶಃ ಸಾವಿರಾರು ವರ್ಷಗಳ ಹಿಂದೆ ಯಾರಾದರೂ ಹೇಳಿರಬಹುದು:

“ನಮ್ಮ ಕಾಲದಲ್ಲಿ ಎ ಐ ಇರಲಿಲ್ಲ ಅಂತ ನೀವು ಭಾವಿಸುತ್ತೀರಾ?

ನಾವು ಅದನ್ನು ಬಳಸುತ್ತಿದ್ದೆವು....

ನೀವು ಈಗ ಅದಕ್ಕೆ app ಮಾಡಿದ್ದೀರಿ ಅಷ್ಟೇ!”

ಎ ಐ ನಮಗೆ ಜ್ಞಾನ ಕೊಡಬಹುದು.

ಆದರೆ ಜ್ಞಾನವನ್ನು ಹೇಗೆ ಬಳಸಬೇಕು ಎಂಬ ವಿವೇಕವನ್ನು ಔಟ್ಸೌರ್ಸ್ ಮಾಡಲು ಸಾಧ್ಯವಿಲ್ಲ.

ಅದಕ್ಕೆ ಸುಬ್ಸ್ಕ್ರಿಪ್ಷನ್ ಪ್ಲಾನ್ ಇನ್ನೂ ಬಂದಿಲ್ಲ!

ನನ್ನ ಮಾತು ಕೇಳಿ ಮಾವ ನಿಮ್ಮ ಲೈಬ್ರರಿಯಿಂದ ರಾಮಾಯಣ ಬುಕ್ ಕೊಡ್ತೀರಾ . ಮೊಬೈಲ್ ಬಳಕೆ ಕಡಿಮೆ ಮಾಡಿ, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳುತ್ತೇನೆ.

ಪುಸ್ತಕ ಓದುವ ಹವ್ಯಾಸವನ್ನು ಹೆಚ್ಚಿಸಿಕೊಳ್ಳಲು ನೀನು ತಗೊಂಡಿರುವ ನಿರ್ಧಾರ ನಿಜಕ್ಕೂ ಅದ್ಭುತವಾದದ್ದು!

"ಶ್ರೀ ರಾಮನ ಅನುಗ್ರಹವು ನಿಮ್ಮ ಮೇಲೆ ಸದಾ ಇರಲಿ."

“ಸರ್ವೇ ಜನಾಃ ಸುಖಿನೋ ಭವಂತು"

# ವ್ಯಾನು ಬಂತು

**(ಧಾಟಿ: ವರಕವಿ ಬೇಂದ್ರೆಯವರ ಮೂಡಲ ಮನೆಯ ಮುತ್ತಿನ ನೀರಿನ)**

**ಎಚ್. ಡುಂಡಿರಾಜ್**

ಎಲ್ಲರ ಮನೆಯ ತ್ಯಾಜ್ಯದ ಸಂಗ್ರಹ
ಒಯ್ಯುವವನು ಬಂದ । ಓಡಿರಿ । ಒಯ್ಯುವವನು ಬಂದ ॥
ಮೂಗಿನ ರೋಮ ಉದುರುವಂಥ
ಹಸಿ ಕಸದ ಗಂಧ । ಹೊಮ್ಮಿತು
ಹಸಿ ಕಸದ ಗಂಧ ॥

ಬುಟ್ಟಿಯ ಹಿಡಿದು ಗೇಟನು ತರೆದು
ಬಂದರು ಕಮಲಮ್ಮ । ಕಣ್ಣಲಿ
ನಿದ್ದೆಯ ಅಮಲಮ್ಮ ॥
ನೈಟಿಯ ಮೇಲೆ ವೇಲನು ಹೊದ್ದು
ಬಂದರು ವಿಮಲಮ್ಮ । ಕಸವನು
ತಂದರು ವಿಮಲಮ್ಮ ॥

ವ್ಯಾನಿಗೆ ಕಸವನು ಹಾಕಿದ ನಂತರ
ಮಾತೆಯರ ಮಾತು । ಸಾಗಿತು
ಮಾತೆಯರ ಮಾತು ॥
ಸ್ಟೋವಿನ ಮೇಲೆ ಇರಿಸಿದ ಹಾಲು
ಉಕ್ಕಿ ಹರಿದಿತ್ತು । ತಾನೇ ।
ಉಕ್ಕಿ ಹರಿದಿತ್ತು ॥



## ಪುಸ್ತಕ ಪರಿಚಯ

ಡುಂಡಿ ಯಾತ್ರೆ (ಆತ್ಮ ಕಾದಂಬರಿ)

ಲೇಖಕರು : ಎಚ್. ಡುಂಡಿರಾಜ್

ಸಂಪರ್ಕ : 98807 26074

ಪ್ರಕಾಶಕರು : ಅಂಕಿತ ಪುಸ್ತಕ ಗಾಂಧಿ ಬಜಾರು, ಬೆಂಗಳೂರು

ಪುಟಗಳು 350 – ಬೆಲೆ ರೂ. 495/–

ಪ್ರತಿಗಳಿಗೆ ಸಂಪರ್ಕ – ಲೇಖಕರು

ಪ್ರಕಾಶಕರು – 080–26617100/080–26617755




ಅಪರಂಜಿ ಬಳಗದ ಹಿರಿಯ ಲೇಖಕರಾದ ಶ್ರೀ ಎಚ್. ಡುಂಡಿರಾಜ್ ಅವರ ಆತ್ಮಕಥೆಯ ಪುಸ್ತಕ ಡುಂಡಿ ಯಾತ್ರೆ. ಇದರಲ್ಲಿ ಅವರ ಜೀವನಯಾನದ ಹಲವು ಮಜಲುಗಳನ್ನು ಬಹು ಆಪ್ತವಾಗಿ ಬರೆದಿದ್ದಾರೆ. ಕೇವಲ ರಸ ನಿಮಿಷಗಳನ್ನಷ್ಟೇ ಅಲ್ಲದೇ ಅವರು ಎದುರಿಸಬೇಕಾದಂಥ ಕೆಲವು ಅನಿರೀಕ್ಷಿತ ಪ್ರಸಂಗಗಳನ್ನೂ ಸಹ ಅಷ್ಟೇ ಸ್ವಾರಸ್ಯವಾಗಿ ಬರೆದಿದ್ದಾರೆ. ಅವರ ಹನಿಗವನಗಳ ಸಂಕಲ–ನವನ್ನು ಓದುವಷ್ಟೇ ಮುದದಿಂದ ಡುಂಡಿ ಯಾತ್ರೆಯನ್ನೂ ಓದಬಹುದು. ಅವರ ಚಿಕ್ಕಂದಿನ ನೆನಪುಗಳು, ಬಂದು ಹೋದ ಜೀವಗಳು, ಅವರ ವೃತ್ತಿ ಬದುಕಿನ ಚಿತ್ರಗಳು, ಬ್ಯಾಂಕಿನ ಅನುಭವಗಳು, ಹಾಸ್ಯ ಕಾರ್ಯಕ್ರಮಗಳ ವಿವರಗಳು, ಕುಟುಂಬದ ಚಿತ್ರಣ ಎಲ್ಲವೂ ಚನ್ನಾಗಿ ಓದಿಸಿಕೊಂಡು ಹೋಗುತ್ತವೆ. ಅಪರಂಜಿಯೊಂದಿಗಿನ ಅವರ ನಂಟನ್ನೂ ಸಹ ಅವರ ಬಲು ಸುಂದರವಾಗಿ ನೆನಪು ಮಾಡಿಕೊಂಡಿದ್ದಾರೆ.

ಒಟ್ಟಿನಲ್ಲಿ ಡುಂಡಿಯಾತ್ರೆ ಬರೀ ಅವರೊಬ್ಬರದೇ ಆಗಿರದೇ ಓದುವವರದೂ ಆಗುತ್ತದೆ ಎನ್ನುವುದು ಸಂತೋಷದ ವಿಷಯ.

ಅಪರಂಜಿ ಬಳಗ ಡುಂಡಿರಾಜ್ ಅವರಿಗೆ ಅಭಿನಂದನೆ ಸಲ್ಲಿಸುತ್ತದೆ.

# ಧನುಸ್ಸು ರಾಶಿಯವರೇ....!

**ವೈ ಎನ್ ಗುಂಡೂರಾವ್**

ಸಾಮಾನ್ಯವಾಗಿ ನಾನು ಯಾರ ಬಳಿಯು ಶಾಸ್ತ್ರ ಕೇಳುವುದಾಗಲೀ, ಅಂಗೈ ತೋರಿಸುವುದಾಗಿಲೀ ಮಾಡ ಹೋಗುವುದಿಲ್ಲ.

ಗಾದೆಯೇ ಇದೆಯಲ್ಲಾ "ಅಂಗೈ ತೋರಿಸಿ ಅವಲಕ್ಷಣ ಅನ್ನಿಸ್ಕೊಂಡ್ರು" ಅಂತಾ. ಆದ್ದರಿಂದ ನಾನು ಬಹಳ ದೂರ.

ಆದರೂ ಹೀಗೊಮ್ಮೆ ಯುಟ್ಯೂಬ್‌ನಲ್ಲಿ ಯಾರದ್ದೋ ಸಾಹಿತ್ಯ ವಿಮರ್ಶೆ ಪ್ರಸಾರವಾಗುತ್ತಿದ್ದು ಅದರ ಹುಡುಕಾಟ ನಡೆಸುತ್ತಿದ್ದಾಗ ಕಣ್ಣಿಗೆ ಬಿದ್ದ 'ಧನುಸ್ಸು ರಾಶಿಯವರೇ....' ನನಗರಿವಿಲ್ಲದೆಯೇ ಅದರ ಮೇಲೆ ಬೆರಳೊತ್ತಿದೆ.

ಆ ಚಾನೆಲ್‌ನಲ್ಲಿ ಬಿತ್ತರಗೊಳ್ಳುತ್ತಿದ್ದುದನ್ನು ಕೇಳಿ ಆಶ್ಚರ್ಯವಾಯಿತು. "ನಾವು ಸಾಮಾನ್ಯವಾಗಿ ಯಾವ ರಾಶಿಯವರ ಭವಿಷ್ಯವನ್ನೂ ಹೇಳುವುದಿಲ್ಲ. ಇದು ದೈವ ಪ್ರೇರಣೆ. ಈ ರಾಶಿಯವರಿಗೆ ಅದೃಷ್ಟದ ಬಾಗಿಲು ತೆರೆದುಕೊಂಡಿದೆ .. ಮುಂದಿನವಾರ ಅಪರಿಚಿತ ವ್ಯಕ್ತಿಯೊಬ್ಬರ ಆಗಮನವಾಗುತ್ತದೆ.

ಆತನ ಮುಖ ದರ್ಶನದಿಂದಲೇ ನಿಮ್ಮ ಭಾಗ್ಯೋದಯವಾದಂತೆ. ಆತ ನಿಮಗೆ ಭಾಗ್ಯದ ನಿಧಿಯ ದಾರಿ ತೋರಿಸುವುದರ ಜೊತೆಗೆ ಸದಾಕಾಲ ನಿಮ್ಮ ಬೆನ್ನಹಿಂದೆಯೇ ರಕ್ಷಕರಾಗಿರುತ್ತಾರೆ. ಹೀಗೆ ಬಂದವರನ್ನು ಅಪರಿಚಿತನೆಂದು ದೂರವಿಡಲು ಹೋಗಬೇಡಿ" ಎಂದು ಪುಂಖಾನುಪುಂಖವಾಗಿ ಏನೇನೋ ಹೇಳತೊಡಗಿದರು. ನನಗೆ ಗೊತ್ತು ಇವೆಲ್ಲಾ ಬೂಟಾಟಿಕೆಯ ಮಾತುಗಳೆಂದು. ಸ್ವಲ್ಪ ಹೊತ್ತು ಕೇಳಿದೆ. ಬರೇ ಇಂತಹ ಮಾತುಗಳಿಂದಲೇ ತುಂಬಿದ್ದು , ಮುಂದಿನ ನಿಮ್ಮ ಭವಿಷ್ಯ ಕೇಳಲು ಈಗಲೇ ಸಬ್ ಸ್ಕ್ರೈಬ್ ಮಾಡಿ ಎಂದಾಗ ನನ್ನ ಊಹೆ ನಿಜವೆನಿಸಿ ಬೇರೆ ಚಾನೆಲ್ ಒತ್ತಿದೆ.

ಊಟಕ್ಕೆ ಕುಳಿತಾಗ ಯುಟ್ಯೂಬ್ ನಲ್ಲಿ ಕೇಳಿದ ಭವಿಷ್ಯದ ಬಗ್ಗೆ ನನ್ನವಳೊಡನೆ ಹೇಳಿದಾಗ 'ಅಯ್ಯೋ ಅವರೆಲ್ಲಾ ದೇವಿ ಉಪಾಸಕರು ರೀ, ಅವರ ಮಾತುಗಳು ಸತ್ಯ. ಸುಮ್ಮನೆ ಬರೋದನ್ನ ಯಾಕೆ ಕಳ್ಕೋತೀರ, ಯಾರಾದರೂ ಅಪರಿಚಿತರು ಬಂದರೆ ನಯವಾಗಿ ಮಾತನಾಡಿಸಿ ಎಂದೂ ರಾಗ ತೆಗೆದಳು. ನಾನು ಇಂಥವಕ್ಕೆಲ್ಲ ಸೊಪ್ಪು ಹಾಕುವವನಲ್ಲ. ನಾಲ್ಕಾರು ದಿನ ಕಳೆದ ನಂತರ ಮರೆತೂ ಬಿಟ್ಟೆ.

ಸೋಮವಾರವಾಯಿತು, ಮಂಗಳವಾರ ವಾಯಿತು... ಬುಧವಾರ ಯಾರೋ ಒಬ್ಬ ಬಂದು ಕರೆ ಗಂಟೆ ಒತ್ತಿದ. ಅವನ ಹಣೆಯ ಮೇಲೆ ಧರಿಸಿದ್ದ ತ್ರಿಪುಂಡ್ರವನ್ನು ನೋಡೇ ನನ್ನವಳಿಗೆ ಹಿಂದಿನ ವಾರ ನಾನು ಹೇಳಿದ್ದು ಜ್ಞಾಪಕಕ್ಕೆ ಬಂದು, 'ರೀ ಯಾರೋ ಬಂದಿದ್ದಾರೆ ನಿಮ್ಮನ್ನು ಹುಡುಕಿಕೊಂಡು'

ಎಂದು ನನ್ನ ಕರೆಯುತ್ತಾ, ಆತನನ್ನು ಬನ್ನಿ ಬನ್ನಿ ಎಂದು ಒಳಗೆ ಕರೆದು ಸೋಫಾ ತೋರಿಸಿದಳು. ರೂಮಿನಿಂದ ಹೊರಬಂದು ನೋಡಿದರೆ ನಮಗೆ ಭಾಗ್ಯದ ನಿಧಿ ತೋರಿಸುವವನಿಗಿಂತ ನಮ್ಮಲ್ಲಿದ್ದ ಭಾಗ್ಯ ನಿಧಿಗೂ ಸಂಚಕಾರ ತರುವವನಂತೆ ನನಗೆ ಕಂಡ. ಇದನ್ನೆಲ್ಲಾ ನನ್ನವಳಿಗೆ ಹೇಳುವುದಾದರೂ ಹೇಗೆ? ಆದರೆ ನನ್ನವಳಿಗೆ

ಅವನೊಬ್ಬ ಭಾಗ್ಯದ ನಿಧಿಯನ್ನೇ ಹೊತ್ತು ತಂದಿರುವ ಅವಧೂತನಂತೆ ಕಂಡಿದ್ದು ,

ಶುರುವಾಯಿತು ನೋಡಿ ನನ್ನವಳ ಉಪಚಾರ.

ಕಾಫಿ ಕುಡಿಯುತ್ತೀರಾ, ಟೀ ಕೊಡ್ಲಾ ? ತಿಂಡಿಯಾಯಿತಾ ? ಎಂದು. ಬೇಡಿ ತಾಯಿ ಎಲ್ಲವೂ ಆಗಿದೆ. ನಾನು ನಿಮ್ಮ ಮನೆಯವರನ್ನು ಸುಮ್ಮನೆ ನೋಡಿ ಹೋಗೋಣವೆಂದು ಬಂದೆ ಎಂದು ಯಾವುದೋ ಬಾದರಾಯಣ ಸಂಬಂಧ ಬಿಚ್ಚ ತೊಡಗಿದ. ನನಗಂತೂ ತಲೆಬುಡ ಅರ್ಥವಾಗಲಿಲ್ಲ.

ನನ್ನವಳಿಗೂ ಅರ್ಥವಾಗದಿದ್ದರೂ ಹೌದು ಹೌದು ಅವರೆಲ್ಲರೂ ನಮ್ಮ ಸಂಬಂಧಿಗಳೇ ಎಂದು ಇವಳೂ ಬೊಂಕುತ್ತಿದ್ದುದನ್ನು ಕಂಡು ನನಗೇ ಆಶ್ಚರ್ಯವಾಯಿತು. ಭಾಗ್ಯದ ನಿಧಿಯ ಆಸೆ ಇವಳನ್ನು ಹೀಗಾಡಿಸುತ್ತಿರಬಹುದೇ ಎನಿಸಿತು.

ಅಪರಿಚಿತನೊಡನೆ ಎಷ್ಟು ಹೊತ್ತು ಮಾತನಾಡಲಾದೀತು? ಕಡೆಗೆ ಆತನೇ ಬರ್ತಿನಿ ತಾಯಿ, ಬರ್ತೀನಿ ಸಾರ್ ಎಂದು ಹೇಳಿ ಹೊರಟಾಗ ನಾನು ಗೇಟಿನ ತನಕ ಬಿಟ್ಟು ಬರಲು ಆತನ ಹಿಂದೆ ಹೋದೆ. "ಸ್ವಾಮಿ , ನೀವೇನು ತಿಳ್ಕೊಳ್ಳದಿದ್ರೆ ನಾನು ಮುಂದಿನವಾರ ಬರ್ತೀನಿ. ಒಂದೈದು ಸಾವಿರ ಅಡ್ಜೆಸ್ಟ್ ಮಾಡಿಡಿ. ನನಗೆ ಇನ್ಶೂರೆನ್ಸ್ ಹಣ ಬರಬೇಕಿದೆ. ಬಂದನಂತರ ತೀರಿಸಿ ಬಿಡುತ್ತೇನೆ" ಎಂದ. ನೋಡೋಣ ಎಂದು ಅವನನ್ನು ಸಾಗಹಾಕಿ ಒಳಗೆ ಬಂದು ನನ್ನವಳೊಡನೆ ಹೇಳಿದಾಗ ಹೌದಾ! ಈಗ್ಲೇ ಕೊಟ್ಟು ಬಿಡಬೇಕಿತ್ತು. ಅವರ ಕೈಗುಣ ಹೇಗಿದೆಯೋ ಏನೋ ! ಅವರ ಕೈಗೆ ನಿಮ್ಮ ಐದು ಸಾವಿರ ಬಿದ್ದ ತಕ್ಷಣ ನಿಮಗೆ ಐದು ಲಕ್ಷ ಬರುತ್ತಿತ್ತೋ ಏನೋ! ಎಂದಳು. ನನ್ನವಳ ಮೌಢ್ಯಕ್ಕೆ ಏನು ಹೇಳುವುದೆಂದು ತಿಳಿಯದೆ ಸುಮ್ಮನಾದೆ. ಸದ್ಯ ಈಗಲೇ ಕೊಟ್ಟು ಬಿಡ್ರಿ ಎನ್ನಲಿಲ್ಲ ಅದೇ ನನ್ನ ಪುಣ್ಯ.

ಕೆಲವು ದಿನಗಳನಂತರ ಕುತೂಹಲ ತಡೆಯಲಾರದೆ ಪುನ: ಮತ್ತೊಬ್ಬರು ಧನುಸ್ಸು ರಾಶಿಯ ಬಗ್ಗೆ ಹೇಳುತ್ತಿದ್ದುದನ್ನು ಗಮನಿಸಿದೆ

"ಇದು ಮಹಾಮಾತೆ ಹೇಳುವ ಭವಿಷ್ಯವಾಣಿ. ಇದನ್ನು ಖಂಡಿತಾ ತಿರಸ್ಕರಿಸದಿರಿ. ಮಹಾಮಾತೆಯ ದಯೆಯಿಂದ ನಿಮಗೊಬ್ಬ ಮಹಿಳೆಯಿಂದ ನಿಮ್ಮ ಭವಿಷ್ಯ ಉಜ್ವಲಗೊಳ್ಳಲಿದೆ. ಆಕೆ ಸಾಮಾನ್ಯ ಮಹಿಳೆಯಲ್ಲ. ಆ ಮಹಿಳೆ ಯಾರೆಂಬುದು ಆಕೆ ನಿಮ್ಮ ಮುಂದೆ ಬಂದು ನಿಂತ ಕೂಡಲೇ ನಿಮ್ಮ ಆರನೆಯ ಇಂದ್ರಿಯ ಗ್ರಹಿಸಿಬಿಡುತ್ತದೆ....." ಎಂದು ಏನೇನೊ ಬೊಂಕತೊಡಗಿದರು. ಸಾಕಪ್ಪಾ ಸಾಕು ಎಂದು ಬೇರೆ ಚಾನೆಲ್ಗೆ ಹೋದೆ.

ಸಂಜೆ ವಾಕಿಂಗ್ ಹೋದಾಗ, ದೇವಸ್ಥಾನಕ್ಕೆ ಹೋದಾಗ ಯಾರಾದರೂ ಮಹಿಳೆ ನನ್ನ ಮುಖ ನೋಡಿದರೆ ಸಾಕು ನನಗೆ ಏನೋ ಒಂದು ರೀತಿ ಕಳವಳ ಪ್ರಾರಂಭವಾದರೂ ಒಂದು ವೇಳೆ ನನ್ನ ಭವಿಷ್ಯವನ್ನು ಉಜ್ವಲಗೊಳಿಸುವ ಮಹಿಳೆ ಈಕೆಯೇ ಆಗಿರಬಹುದಾ ಎಂಬ ಸಣ್ಣ ಆಸೆ ಮನಸ್ಸಿನ ಮೂಲೆಯಲ್ಲಿ ಮೂಡುತ್ತಿತ್ತು, ಎಷ್ಟೇ ಮೌಢ್ಯ ಎಂದುಕೊಂಡರೂ!

ಸಾಮಾನ್ಯವಾಗಿ ನಾನು ವಾಕಿಂಗ್ ಹೋಗುತ್ತಿದ್ದುದು ಜನ ಸಂದಣಿ ಇಲ್ಲದ ಅಡ್ಡ ರಸ್ತೆಗಳಲ್ಲಿ. ಪಾರ್ಕುಗಳೂ ಇತ್ತೀಚೆಗೆ ತುಂಬಿ ತುಳುಕುತ್ತಿರುತ್ತವೆ. ಅಲ್ಲದೆ ಕೆಲ ಪರಿಚಯಸ್ಥರು ಸಿಕ್ಕರೆ ಪ್ರಶ್ನಾಪ್ರಶ್ನೆ ಮಾಡಿ ನಮ್ಮ ನೆಮ್ಮದಿ ಹಾಳು ಮಾಡುತ್ತಾರೆ. ಇದರಿಂದ ಒಂಟಿಯಾಗಿ ಅಡ್ಡ ರಸ್ತೆಗಳಲ್ಲಿ ನನ್ನ ಅಡ್ಡಾಟ.

ಅಂದು ಸಂಜೆ ವಾಕಿಂಗ್ ಹೊರಟೆ. ನಿರ್ಜನ ರಸ್ತೆ. ಸಂಜೆಗತ್ತಲು ಇಣುಕುತ್ತಿತ್ತು. ಬೀದಿ ದೀಪ ಮಿಣುಗುಡುತ್ತಿತ್ತು. ಅಷ್ಟರಲ್ಲಿ ಪಕ್ಕದ ಕ್ರಾಸಿನಿಂದ ಧುತ್ತೆಂದು ಮಹಿಳೆಯೊಬ್ಬರು ಎದುರಾದರು. ಆಕೆಯ ಮುಖ ನೋಡಿದೆ. ಸೌಮ್ಯವಾದ ಮುಖದ ಆಕೆಯನ್ನು ಎಲ್ಲೋ

ನೋಡಿದಂತೆನಿಸಿತು.

ಅರೆಗಳಿಗೆ ನಿಂತೆ. ಆಕೆಯೂ ನಿಂತು ಮುಖ ಮುಖ ನೋಡತೊಡಗಿದರು. ಒಂದು ವೇಳೆ ಈ ಮಹಿಳೆಯೇ ನನ್ನ ಭವಿಷ್ಯವನ್ನು ಉಜ್ವಲಗೊಳಿಸುವ ಮಹಿಳೆಯಾಗಿರಬಹುದಾ ಎಂಬ ಯೋಚನೆ ಫ್ಲ್ಯಾಷ್ ಲೈಟ್ ರೀತಿ ಬಂದು ಹಾದುಹೋಯಿತು. ರೀ, ನೀವು... ಅವರಲ್ಲವಾ? ಎಂದಳು. ನನಗೆ ಏನು ಹೇಳಲು ತೋಚದೆ ಹ್ಞಾಂ.... ಹ್ಞೂಂ.... ಎಂದೆ, ಬರುವುದನ್ನೇಕೆ ಕಳ್ಕೋಬೇಕು ಎಂಬ ಭಾವನೆಯಿಂದ.

ಕಣ್ಣುಮುಚ್ಚಿ ಏನೇನೊ ಗುನುಗುನಿಸತೊಡಗಿದಳು. ಅರೆ, ನನ್ನ ಭಾಗ್ಯದ ಬಾಗಿಲು ತೆರೆಯುವ ಸಮಯ ಬಂದೇಬಿಟ್ಟಿತೇ ? ಈಕೆಯೇ ಆಗಿರಬಾರದೇಕೆ ಎನಿಸಿ ವಶೀಕರಣಕ್ಕೊಳಗಾದವನಂತೆ ನಿಂತೆ.

ಅಕ್ಕಪಕ್ಕದ ಕ್ರಾಸಿನಿಂದ ನಾಲ್ಕೈದು ಜನ

“ ಅಲ್ಲಿ, ಅಲ್ಲಿ.... ಓಡು, ಓಡು..... ಹಿಡ್ಕೊ....”

ಎಂಬ ಮಾತುಗಳು ಕೇಳಿಬಂದು ತಿರುಗಿ ನೋಡಿದೆ. ಅಷ್ಟರಲ್ಲಾಗಲೇ ನಾಲ್ವರು ನನ್ನ ಬಳಿ ತಲುಪಿದ್ದರು. ಅವರಲ್ಲೊಬ್ಬ ಆಕೆಯ ತೋಳು ಹಿಡಿದುಕೊಂಡು ಬಾಮ್ಮ ಸುಮ್ಮನೆ ಎಲ್ಲರಿಗೂ ತೊಂದರೆ ಕೊಡಬೇಡ.... ನಿನ್ನ ಗಂಡ ಬಂದಿದ್ದಾನೆ ಎಂದು ಅವಳು ನಂಬುವಂತೆ ಮಾತನಾಡುತ್ತಿದ್ದರೆ, ಪಕ್ಕದಲ್ಲಿದ್ದವ ಸಾರ್, ಈಕೆ ನಿಮಗೇನು ತೊಂದರೆ ಮಾಡಲಿಲ್ಲ ತಾನೆ!

ಕ್ಷಮಿಸಿ ಸಾರ್, ನೀವು ಸದ್ಗೃಹಸ್ಥರಂತೆ ಕಾಣುತ್ತಿದ್ದೀರಿ ಪಾಪ! ಈಕೆಯೇ ಗಂಡ ಏನೋ ಕಾರಣದಿಂದ ಮನೆಬಿಟ್ಟು ಹೋದವರನ್ನು ಇದುವರೆಗೂ ನಮಗೆ ಹುಡುಕಲಾಗಲೇಯಿಲ್ಲ. ಅಂದಿನಿಂದ ಈಕೆ ಹೀಗಾಗಿ ಬಿಟ್ಟಿದ್ದಾಳೆ ಎಂದೆನ್ನುತ್ತಾ ಆಕೆಯನ್ನು ಕರೆದೊಯ್ದರು. ಅಯ್ಯೋ ನನ್ನ ಉಜ್ವಲ ಭವಿಷ್ಯವನ್ನು ತೋರಲು ಬಂದು ಈಕೆಗೇ ಈ ಗತಿ ಬಂತಾ ಎಂದೆನ್ನುತ್ತಾ ಮನೆ ದಾರಿ ಹಿಡಿದೆ.

ಮನೆ ತಲುಪಿ ನಡೆದುದೆಲ್ಲವನ್ನೂ ನನ್ನವಳಿಗೆ ಹೇಳಿದಾಗ ಪಾಪ ನಿಮ್ಮ ಭಾಗ್ಯದ ಲಕ್ಷ್ಮಿಗೆ ಹೀಗಾಗಬಾರದಿತ್ತು, ನನ್ನ ಮೌಢ್ಯವನ್ನು ಹೀಗಳೆಯುತ್ತಾ ನೀವು ಮೂಢರಾದಿರಲ್ಲಾ ಎಂದು ಛೇಡಿಸಿದಳು.

ಗಾದೆಗಳನ್ನು ಊಹಿಸಿ. ಉತ್ತರಗಳು : ಕೊನೆಯ ಪುಟ





# ಆಧಾರವೇ ರಗಳೆ!

**ಲತಾ ಹೆಗಡೆ**

ಮಾಮೂಲಿನಂತೆ ಎದ್ದು ಪ್ರಾತರ್ವಿಧಿಮುಗಿಸಿ ಲೀಟರಿನಷ್ಟು ಬೆಚ್ಚನೆಯ ನೀರನ್ನು ಒಮ್ಮೆಲೇ ಗಟಗಟನೆ ಗುಳುಂಕರಿಸಿದ್ದಕ್ಕೆ ಹೊಟ್ಟೆ ಉಬ್ಬರಿಸಿದಂತಾಗಿ ಹರಿದಾಡದೇ ಕೂರುವಂತಾಯಿತು ನಮ್ಮ ಉತ್ಸವಮೂರ್ತಿ ಪದ್ಮಾವತಿಗೆ. ಕೊನೆಗೂ ಮೂರ್ನಾಲ್ಕು ಸಲಡರ್ರ್ಂದು ತೇಗಿದ ನಂತರವಷ್ಟೇ ಉಬ್ಬರದ ಅಬ್ಬರ ಇಳಿದದ್ದು. ಕೆಲವು ತಿಂಗಳಿಂದ ಲೀಟರುಗಟ್ಟಲೆ ನೀರು ಕುಡಿಯುವುದನ್ನು ವ್ರತದಂತೆ ಕೈಗೊಂಡು ದಿನಚರಿಯಾಗಿ ಸಿದ್ದ ಪದ್ಮಾವತಿಯ ಈ ನಡೆಗೆ ಸಕಾರಣವೂ ಇತ್ತು, ನೀರು ಕುಡಿದಷ್ಟೂ ಪ್ರಯೋಜನ ಹೆಚ್ಚು; ನೀರಿನಿಂದಲೇ ಹೊಟ್ಟೆ ತುಂಬಿದ್ದಕ್ಕೆ ಸ್ವಾಭಾವಿಕವಾಗಿಯೇ ಹಸಿವು ಕಡಿಮೆಯಾಗಿ ಆಹಾರ ಸೇವನೆಯ ಪ್ರಮಾಣವೂ ಇಳಿದು ಅತೀಶೀಘ್ರದಲ್ಲಿ ಸಪೂರ ಆಗಬಹುದು; ಮೈಯ್ಯಲ್ಲಿ ಶೇಖರವಾದ ಕೊಬ್ಬು ಮೂತ್ರದ ರೂಪದಲ್ಲಿ ಹೊರ ಹೋಗುವುದರಿಂದ ಆರೋಗ್ಯಕ್ಕೂ ಒಳ್ಳೆಯದು ಮುಂತಾದ ಕಿವಿ ತೂತಾಗುವಷ್ಟು ಪ್ರಮಾಣದ ಬಿಟ್ಟೀ ಕಿವಿ ಮಾತಿಗೆ ಮಾರು ಹೋಗಿದ್ದಳು. ಸೇರದಿದ್ದರೂ ಬಿಸಿನೀರಿನ ಸೇವನೆಯನ್ನು ದಿನಚರಿಯ ಮುಖ್ಯ ಭಾಗವಾಗಿ ರೂಢಿಸಿಕೊಂಡಿದ್ದಳು. ಅಷ್ಟೊಂದು ಪ್ರಮಾಣದ ನೀರು ಅದರಲ್ಲೂ ಬಿಸಿನೀರಿನ ಸೇವನೆ ರುಚಿಸದಿದ್ದರೂ ಹೇಗ್ಹೇಗೋ ಅವಸರದಲ್ಲಿ ಕುಡಿದು ಮುಗಿಸಿನಂತರ ಕಷ್ಟಪಡುತ್ತಿದ್ದಳು. ಬಚ್ಚಲಿಗೆ ಹೋಗುವುದು ಹೆಚ್ಚಿತ್ತೇ ವಿನಃ ಸುತ್ತಳತೆಯಲ್ಲಿ ಅರ್ಧ ಇಂಚೂ ಇಳಿದಿರಲಿಲ್ಲ. ಇದೀಗ ಸಶಬ್ಧವಾಗಿ ತೇಗುತ್ತಲೇ ತೇಕುತ್ತಾ ಮಂದಗ ಮನೆಯಾಗಿ ಅಂಗಳಕ್ಕೆ ಬಂದಳು, ಉದರ ಸೇರಿದ್ದು ಅಡಿಗಡಿ ಗೂಗುಳ್ ಗುಳಕ್ಕೆನ್ನುತ್ತ ತನ್ನ ಇರುವಿಕೆ ಸಾರಿತ್ತು. ಉಪದ್ರವ ಇದ್ದದ್ದೇ ಎಂದು ನಜರ್ ಅಂದಾಜಿಸಿ ಪೊರಕೆ ಹಿಡಿದು ಗುಡಿಸಲೆಂದು ಸ್ವಲ್ಪೇ ಸ್ವಲ್ಪ ಬಾಗಿದಳು ಅಷ್ಟೇ, ಗಂಟಲ ತನಕವೂ ಭರ್ತಿಯಾದದ್ದು ಬಾಯಿಗೆ ಬಂದಿತ್ತು! ಥಟ್ಟನೆ ನೆಟ್ಟಗಾದ ರಭಸಕ್ಕೆ ಚರ್ಬಿಯ ಭದ್ರಕೋಟೆಯಲ್ಲಿ ಹಾಯಾಗಿದ್ದ ಸೊಂಟದ ನರವೊಂದು ತಿರುಚಿದಂತಾಗಿ ನೋವು ಛಳ್ಳೆಂದಿತ್ತು. ಬರೀ ನಲವತ್ತೈದು ಇಂಚಿನ ಸೊಂಟವನ್ನು ನೀವುತ್ತಲೇ ಸಾವರಿಸಿಕೊಂಡು ಕಂಭದಂತೆ ನೆಟ್ಟಗೆ ನಿಂತೇ ಪೊರಕೆಯ ತುದಿಯನ್ನು ನೆಲಕ್ಕೆ ನಾಮಕಾವಸ್ತೆ ಸವರ ತೊಡಗಿದಳು.

"ಗುಡ್ ಮಾರ್ನಿಂಗ್ ಕಣ್ರೀ  ರಾತ್ರಿ ನೀರು ಬಂದಿತ್ತು ತುಂಬಿದ್ರಿ ತಾನೇ?"

ಬಾಗಿಲಿಗೆ ನೀರು ಹಾಕುತ್ತಿರುವ ಪಕ್ಕದ ಮನೆಯ ಲಕ್ಷ್ಮಮ್ಮ ಪದ್ದಿಯನ್ನು ಕಂಡದ್ದೇ ಮಾತಿಗೆಳೆದಿದ್ದಳು. ಅವಳೋ ಯಾರಾದರೂ ಕಂಡರೆ ಫೆವಿಕಾಲೇ! ಬಿಡೋಮಾತೇ ಇಲ್ಲ. ಕಂಡವರೊಂದಿಗೆ ಕನಿಷ್ಟ ಅರ್ಧಗಂಟೆಯ ವಾರ್ತಾಲಾಪ ಇದ್ದದ್ದೇ. ಇನ್ನವಳು ಬಿಡಲಾರಳು ಎನ್ನಿಸಿ ಕಾಟಾಚಾರಕ್ಕೆ ಗುಡ್ ಮಾರ್ನಿಂಗ್ ಉದುರಿಸಿ ಶಿಷ್ಟಾಚಾರ ಮೆರೆದಳು. ಕಂಪೌಂಡಿನಾಚೆ ಕುತ್ತಿಗೆ ನಿಮಿರಿಸಿ ನಿಂತ ಲಕ್ಷ್ಮಮ್ಮಳ ಕೈಲ್ಲಿಸವೆಸವೆದು ಮೋಟಾದ ಕಡ್ಡಿ ಪೊರಕೆ, ಇನ್ನು ಸೇವೆ ಒದಗಿಸಲಾರೆ ಎಂಬಂತೆ ಕಪ್ಪು ಹಿಡಿದುಲಡ್ಡಾಗಿತ್ತು. ಆಕೆ ಧರಿಸಿದ್ದ ನೈಟಿಯದ್ದಂತೂ ನೆಲ ಒರೆಸಲೂ ಯೋಗ್ಯವಲ್ಲದ ದುಃಸ್ಥಿತಿ. ತಕ್ಕಮಟ್ಟಿಗೆ ಸ್ಥಿತಿವಂತರಿದ್ದರೂ ಖರ್ಚು ಮಾಡಲು ಬರಗೆಟ್ಟಂತಾಡುವ ಆಕೆಯಲ್ಲಿ ತಾಜಾ ಸುದ್ದಿಗೆ ಮಾತ್ರ ಎಂದೆಂದಿಗೂ ಬರವಿರದೇ ಎಲ್ಲರಲ್ಲೂ ಮುಕ್ತವಾಗಿ ಹಂಚುವ ಧಾರಾಳತನವನ್ನೂ ತೋರುತ್ತಿದ್ದಳು.

"ಗುಡ್ ಮಾರ್ನಿಂಗ್ ಕಣ್ರೀ ಲಕ್ಷ್ಮಮ್ಮಾ... ಮಾರ್ಕೆಟ್ಟಿಗೇನಾದ್ರೂ ಹೋಗಿದ್ರಾ? ಈರುಳ್ಳಿ

ಬೆಲೆ ಇಳಿದಿದ್ಯಾ? ಮೊನ್ನೆ ಕೇಳ್ದಾಗ ನೂರಿಪ್ಪತ್ತುರೂಪಾಯಿ ಇತ್ತು ರೀ..." ಮಂಡಿನೋವಿಗೆ ಮುಲುಗುತ್ತಲೇ ಬೇಕಾಬಿಟ್ಟಿ ಚಾಮರ ಸೇವೆಯಂಗೈಯುತ್ತಿದ್ದ ಪದ್ಮಾವತಿಗೆ ನೆಪಸಿಕ್ಕಂತಾಗಿ ಪೊರಕೆಯನ್ನು ನೆಲಕ್ಕೆಸೆದು ಮಾತಿಗೆ ನಿಂತೇ ಬಿಟ್ಟಳು. ಆಜ್ ಕೀತಾಜಾಖಬರ್ ಏನಿರಬಹುದೆಂಬ ಕುತೂಹಲ.

"ಪದ್ಮಮ್ಮಾ ನಿನ್ನೆ ಮಾರ್ಕೆಟ್ಟಿಗೆ ಹೋಗಿದ್ದೆ ಕಣ್ರೀ, ಅದ್ರಲ್ಲೇನು ವಿಶೇಷ ಅಂತ ನೀವು ಕೇಳೋಕ್ಮುಂಚೇನೇ ಹೇಳ್ಬಿಡ್ತೀನಿ, ಟಿಕೇಟಿಗೆ ದುಡ್ಡು ಸುರೀದೇ ಫ್ರೀಯಾಗಿ ಹೋಗ್ಬಂದದ್ದೇ ವಿಶೇಷ ಕಣ್ರೀ! ಬರೀ ಆಧಾರ್ ಕಾರ್ಡುತೋರ್ಸಿದ್ದಕ್ಕೆ ನಲವತ್ತುರೂಪಾಯಿ ಉಳೀತು... ಅದ್ರಲ್ಲೇ ಮೊಮ್ಮಕ್ಕಳಿಗೆ ಚಿಪ್ಸು, ಲೇಸು ತಂದೆ ಕಣ್ರೀ. ಇವತ್ತು ಮತ್ತೆ ಹೋಗ್ತಿದ್ದೀನಿ..." ಇನ್ನಿವಳು ದಿನದ ಮುಕ್ಕಾಲು ಭಾಗ ಬಸ್ಸಲ್ಲೇ ಇರೋದು ಗ್ಯಾರಂಟಿ, ಊಟದ ಡಬ್ಬೀನೂ ತೊಗೊಂಡು ಬಸ್ಸಲ್ಲೇ ಉಣ್ತಾಳೇನೋ... ಮೊದಲೇ ಕಾಲಿಗೆ ಚಕ್ರಕಟ್ಟಿಕೊಂಡಂತೆ ಗಿರಿಗಿರಿ ತಿರುಗಾಡುವುದನ್ನು ರೂಢಿಸಿಕೊಂಡವಳು ಎಂದು ಕೊಂಡಳು ಪದ್ದಿ.

"ಅರೇ ವಾಹ್...! ಹೌದೇನ್ರೀ!? ನೀವೇ ವಾಸಿ ಲಕ್ಷ್ಮಮ್ಮಾ, ಮಹಿಳೆಯರಿಗೆ ಬಸ್ಸಿನ ಪ್ರಯಾಣ ಫ್ರೀ ಅಂತ ಜಾರಿ ಮಾಡಿದ್ದೇ ತಡ ಆಗ಼್ೇ ಮೊದಲ್ನೇ ದಿನವೇ ಹೋಗ್ಬಂದ್ಬಿಟ್ರಲ್ಲಾ, ಬಲು ಫಾಸ್ಟ್ಕಣ್ರೀ ನೀವು...." ಒಣಕೋಲು ಬೇರೆ ಅಲ್ಲ, ಲಕ್ಷ್ಮಮ್ಮ ಬೇರೆ ಅಲ್ಲ ಎಂಬಂತಿರುವವಳನ್ನೇ ಅಸೂಯೆಯ ನೋಟದಿಂದ ಇರಿದಿದ್ದಳು. ಅಷ್ಟಕ್ಕೂ ಆಕೆಗೆ ಬಸ್ಸಿನ ಅಗತ್ಯವೂ ಇಲ್ಲ, ಗಾಳಿ ಜೋರಾಗಿ ಬೀಸಿದ್ರೆ ಸಾಕು ಹಾರ್ಕೊಂಡೇ ಹೋಗೋ ಹಾಗಿದಾಳೆಂಬ ಥಾಟಿಗೆ ನಗು ಒತ್ತರಿಸಿತ್ತು.

"ಅಲ್ರೀ ಪದ್ಮಮ್ಮಾ, ಮತ್ಯಾವಾಗ ಈ ಸೌಲಭ್ಯ ತೆಗೀತಾರೋ ಏನೋ... ಸರ್ಕಾರ ದಿವಾಳಿ ಯಾಗೋಕ್ಕೂ ಮುಂಚೇನೇ ಆದಷ್ಟೂ ಉಪಯೋಗ ಪಡ್ಕೋಬೇಕ್ರೀ. ನೀವೂ ಹೋಗ್ಬನ್ನಿ"

"ತುಂಬಾ ರಶ್ಶು ಇರುತ್ತೆ ಬಿಡ್ರೀ... ನಂಗಂತೂ ರಶ್ಶಲ್ಲಿ ಹೋಗೋದೂಂದ್ರೆ ಆಗಲ್ಲ ಕಣ್ರೀ, ಅಭ್ಯಾಸವೂ ಇಲ್ಲಬಿಡಿ..." ಪದ್ಮಾವತಿಗೂ ಬಿಟ್ಟೀ ಭಾಗ್ಯ ಬಿಡೋಕೆ ಮನಸ್ಸಿಲ್ಲ. ಅವಳ ಸ್ವಮರುಕದ ಮಾತಿಗೆ "ಮಧ್ಯಾಹ್ನದ ಹೊತ್ತಲ್ಲಿ ಹೋದ್ರೆ ರಶ್ಶುಗಿಶ್ಶು ಇರಲ್ಲ ಕಣ್ರೀ, ಏನಂದ್ರೆ ಸ್ಕೂಲು, ಕಾಲೇಜು ಬಿಡೋ ಹೊತ್ತಿಗೆ ಹೋಗ್ಬಾರ್ದಷ್ಟೇ. ನಾಳೆ ಮಧ್ಯಾಹ್ನ ಹೋಗ್ಬನ್ನಿ, ಬೇಕಿದ್ರೆ ಜೊತೆಗೆ ನಾನೂ ಬರ್ತೀನಿ..." ಲಕ್ಷ್ಮಮ್ಮನ ಆಫರ್ರಿಗೆ ನಮ್ಮ ಪದ್ದಿಕ್ಲೀನ್ ಬೋಲ್ಡು!

ಅಂತೂ ಅಂದುಕೊಂಡಂತೆ ಬಸ್ಸು ಹತ್ತಿ ಕೂತದ್ದಾಗಿತ್ತು. ಲಕ್ಷ್ಮಮ್ಮನ ಆಧಾರ್ ಕಾರ್ಡನ್ನು ಸ್ಕ್ರೂಟಿನಿ ಮಾಡಿ ಹಿಂದಿರುಗಿಸಿದ ಕಂಡಕ್ಟರ್ ಮಹಾಶಯ ಇದೀಗ ಪದ್ದಿಯ ಆಧಾರ್ ಕಾರ್ಡನ್ನು ನೋಡಿ ಆಕೆಯ ಮುಖವನ್ನೊಮ್ಮೆ ಗಮನಿಸಿ ಹುಬ್ಬು ಗಂಟಿಕ್ಕಿದ. ಪದ್ಮಾವತಿಯ ಕಾರ್ಡನ್ನು ಮತ್ತೊಮ್ಮೆ ಸ್ಕ್ರೂಟಿಸಿ ಒಮ್ಮೆ ಕಾರ್ಡು, ಮತ್ತೊಮ್ಮೆ ಆಕೆಯ ಮುಖವನ್ನೇ ಮಿಕಿಮಿಕಿಸುತ್ತಾ "ಏನ್ರೀ, ನೋಡೋಕೆ ಎಜುಕೇಟೆಡ್ ಥರಾಕಾಣ್ತೀರಿ... ಬೇರೆಯಾರದ್ದೋ ಆಧಾರ್ ಕಾರ್ಡು ತಂದು ತೋರಿಸ್ತಿದ್ದೀರಲ್ಲಾ... ನಂಗೇನೂ ಗೊತ್ತಾಗಲ್ಲ ಅಂದ್ಕೊಂಡ್ರಾ? ದುಡ್ಡು ತೆಗೀತೀರೋ, ಕೆಳಗೆಇಳೀತೀರೋ... ಎಲ್ರಿಗೂ ಹೇಳೀಹೇಳಿ ಸಾಕಾಯ್ತು... ಸುಮ್ನೆ ಟೈಮುವೇಸ್ಟು... ಏನಮ್ಮಾ? ಬಸ್ಸಿಂದ ಇಳಿಸ್ಲಾ?" ಗಂಟಿಕ್ಕಿದ್ದ ಹುಬ್ಬನ್ನು ಮತ್ತಷ್ಟು ಬಿಗಿದು ಬುಲ್ ಡಾಗಿನ ವಂಶಜನಾಗಿ ಗುರ್ರೆಂದ.

"ಅಯ್ಯೋ... ಅದ್ಯಾಕೆ ಹಂಗಂತೀರಾ? ನಂದೇ ಕಣ್ರೀ ಅದು! ನಾಯಾಕೆ ಯಾರ್ಯಾರ್ದೋ ತರ್ಲೀ...ನಾವೇನು ಅಷ್ಟು ಬರಗೆಟ್ಟಿಲ್ಲ ತಿಳ್ಕೊಳ್ಳಿ... ಅಷ್ಟಕ್ಕೂ ನಮ್ಮನೇವ್ರು

ಬ್ಯಾಂಕ್ನಲ್ಲಿ ಮ್ಯಾನೇಜರ್ರು ಗೊತ್ತಾ..." ಆವಾಜ್ ಹಾಕಿದಳೇ ಹೊರತು ದುಡ್ಡು ಬಿಚ್ಚಲಿಲ್ಲ.

"ಮತ್ಯಾಕೆ ಬಸ್ಸಲ್ಲಿ ಬಂದದ್ದು? ಸಿಕ್ಕೊಂಡ್ಮೇಲೆ ಎಲ್ರೂ ಹೀಗೇ ಹೇಳೋದು. ನೋಡಮ್ಮಾ, ಕಾರ್ಡಿನಲ್ಲಿರೋ ಫೋಟೋ ಪ್ರಿಂಟು ಸರೀಗಿಲ್ಲ ಅನ್ನೋದನ್ನ ಒಪ್ಕೋಬಹುದು ಆದ್ರೆ ಅದ್ರಲ್ಲಿರೋದು ಹಂಚೀ ಕಡ್ಡಿಯಂಥ ಕೋಲ್ಮುಖ! ಪ್ರಿಂಟು ಮಾಡೋರು ಮುಖದ ಸೈಜನ್ನೂ ಬದಲಾಯಿಸ್ತಾರ್ಯೇ? ಏನಮ್ಮಾ, ಕಿವೀ ಮೇಲೆ ಹೂ ಇಡ್ತಿದ್ದೀರೇನೂ? ಈಗೇನೂ... ದುಡ್ಡು ತೆಗೀತೀರೋ ಅಥ್ವಾ ಇಳೀತೀರೋ..." ಕಪ್ಪು ಹಿಡಿದ, ಚಿತ್ರ ವಿಚಿತ್ರ ಆದರೆ ಮನುಷ್ಯ ಪ್ರಾಣಿಯದ್ದೇ ಹೌದು ಎನ್ನಲಾಗುವಂತಹ ಮುಖಗಳನ್ನು ಪರಿಶೀಲಿಸಿ ನೋಡೀ ನೋಡಿ ಸಾಕಾಗಿತ್ತು. ದೃಷ್ಟಿದೋಷ ಉಂಟಾದ ಭ್ರಾಂತಿಯೊಟ್ಟಿಗೆ ತಲೆಕೆಟ್ಟು ಖರಾಬಾದವನದ್ದು ಅಸಹನೆಯ ಪ್ರತಿಕ್ರಿಯೆ.

"ಓಹ್...ಅದಾ! ಆ ಫೋಟೋ ತುಂಬಾ ಹಳೇದು, ಆಗಷ್ಟೇ ಟೈಫಾಯಿಡ್ನಿಂದ ಚೇತರ್ಸಿಕೊಳ್ತಿದ್ದೆ... ಆವಾಗ ತೆಗೆದದ್ದು..."

ಮುಖ ಹುಳ್ಳಗೆ ಮಾಡಿಕೊಂಡು ಹಲ್ಲು ಗಿಂಜಿದಳು. ಅಲ್ಲಿಯವರೆಗೂ ಮಜಾ ನೋಡುತ್ತಿದ್ದ ಲಕ್ಷ್ಮಮ್ಮಳೂ ಸಹಾಯಕ್ಕೆ ಬಂದು ಆ ಆಧಾರು ಕಾರ್ಡು ಪದ್ಮಾವತಿಯದೇ ಅಂತ ಗಟ್ಟಿಸಿ ಹೇಳುತ್ತಲೂ ಗೊಣಗುತ್ತಲೇ ಮುನ್ನಡೆದಿದ್ದ.

"ಅಲ್ರೀ ಪದ್ದಮ್ಮಾ, ಆತ ಹೇಳೋದೂ ನಿಜವೇ, ಎಲ್ಲಿ ತೋರಿಸ್ರಿ ನಿಮ್ಮಆಧಾರು ಕಾರ್ಡು... ಅಯ್ಯಪ್ಪಾ! ಆ ಗುಳಿ ಬಿದ್ದಕಣ್ಣು, ಬತ್ತಿದ ಕೆನ್ನೆ... ಮೂಗೇ ಪ್ರಧಾನವಾಗಿ ಕಾಣ್ತಿರೋ ಈ ಚಿತ್ರ ನಿಮ್ಮದು ಅಂತ ಯಾವ ಯಾಂಗಲ್ಲಿಂದ್ಲೂ ಅನ್ನಿಸ್ತಿಲ್ಲಪ್ಪಾ! ನೀವು ಮೊದ್ಲಿಂದ್ಲೂ ಹೀಗೇ ಮೈಕೈ ತುಂಬ್ಕೊಂಡು ಗುಂಡ್ ಗುಂಡಗೆ ಇದ್ರೇನೋ ಅಂದ್ಕೊಂಡಿದ್ದೆ ಕಣ್ರೀ..."

ಇವಳನ್ನ ಒಂಥರಾ ನೋಡಿ ಅದೊಂಥರಾ ನಕ್ಕ ಲಕ್ಷ್ಮಮ್ಮಾ ಮುಯ್ಯಿ ತೀರಿಸಿಕೊಂಡಳು.

"ರೀ ಲಕ್ಷ್ಮಮ್ಮಾ! ಅಂದ್ಹಾಗೆ ನೆನಪಾಯ್ತು ನೋಡಿ, ಮಾರ್ಕೆಟ್ಟಿಂದ ವಾಪಸ್ಸು ಬರೋವಾಗ ನಾನಂತೂ ಆಟೋ ಮಾಡ್ಬಿಡ್ತೀನಿ ಕಣ್ರೀ... ಬಸ್ಸಿಗೆ ಕಾಯಕ್ಕಾಗಲ್ಲ, ತುಂಬಾ ಸಾಮಾನೂ ಇರುತ್ತೆ.  ಬಿಟ್ಟೀ ಭಾಗ್ಯದ ಸಂಭ್ರಮದಲ್ಲಿ ಹೇಳೋಕ್ಕೆ ಮರ್ತಿದ್ದೆ... ಯಜಮಾನ್ರ ಊರಿಂದ ನೆಂಟ್ರು ಬರ್ತಿದ್ದಾರೆ ಕಣ್ರೀ... ಅವ್ರು ಬರೋಷ್ಟರಲ್ಲಿ ಮನೆಸೇರ್ಕೊ ಬೇಕು"

ಥಟ್ಟನೆ ಹೊಳೆದ ಸಬೂಬಿನೊಡನೆ ಭಾರವಾದ ಉಸಿರೊಂದನ್ನು ಹೊರದಬ್ಬಿದ ಪದ್ದಿ ನಿರಾಳಳಾದಳು. ಇನ್ನು ಬಿಟ್ಟೀ ಬಸ್ಸಿನ ಪಯಣವೂ ಸಾಕು; ಅಂದ ಕಾಲತ್ತಿಲ್ ಚಿತ್ರವಿರುವ ಆಧಾರ್ ಕಾರ್ಡು ಚಾಚಿ ಅಂಗೈ ತೋರಿಸಿ ಅವಲಕ್ಷಣ ಮಾಡಿಸಿಕೊಳ್ಳುವುದೂ ಸಾಕು; ಎಲ್ಲರ ಮುಂದೆ ಸುಖಾಸುಮ್ಮನೆ ಮಂಗಳಾರತಿ ಎತ್ತಿಸಿಕೊಳ್ಳೋದೂ ಸಾಕು ಎಂದು ಮನದಲ್ಲಿ ಅದಾಗಲೇ ದೃಢವಾಗಿ ನಿಶ್ಚಯಿಸಿದ್ದೂ ಆಗಿತ್ತು.

ಸರ್. ಐಸ್ಯಾಕ್ ನ್ಯೂಟನ್ ತನ್ನ ಮನೆಯ ಲ್ಯಾಬೋರೇಟರಿಯಲ್ಲಿ ಕೋಣೆಯ ಬಾಗಿಲು ಹಾಕಿಕೊಂಡು ಕೆಲಸ ಮಾಡುವಾಗ ಅವರ ಮನೆಯಲ್ಲಿ ಸಾಕಿದ ಮೂರು ಬೆಕ್ಕುಗಳು ಪದೇ ಪದೇ ಬಾಗಿಲು ಕೆರೆಯುತ್ತಿದ್ದವು. ಬಾಗಿಲು ತೆರೆದರೆ ಒಳಕ್ಕೆ ಬಂದು ಕೊಂಚ ಹೊತ್ತಿಗೆ ಮತ್ತೆ ಹೊರಗೆ ಹೋಗುತ್ತಿದ್ದವು. ನ್ಯೂಟನ್ ಮತ್ತೆ ಬಾಗಿಲು ಹಾಕಿದರೆ ಪದೇ ಪದೇ ಬಾಗಿಲು ಕೆರೆಯುತ್ತಿದ್ದವು. ಬೆಕ್ಕುಗಳು ತಮಗೆ ಬೇಕಾದಾಗ ಬಂದು ಹೋಗಿ ಮಾಡುತ್ತಿರಲಿ ಎಂದು ನ್ಯೂಟನ್ ಬಾಗಿಲಿಗೆ ಮೂರು ಬೇರೆ ಬೇರೆ ಅಳತೆಯ ತೂತುಗಳನ್ನು ಮಾಡಿಸಿಬಿಟ್ಟರು. ನಂತರ  ನಿರಾಳವಾಯಿತು. ಆದರೆ ಒಂದು ದಿನ ಇದನ್ನು ಗಮನಿಸಿದ ನ್ಯೂಟನ್ ಸ್ನೇಹಿತರು ಮೂರು ರಂಧ್ರಗಳನ್ನು ಏಕೆ ಮಾಡಿಸಿದರೆ ದೊಡ್ಡದಾದ ಒಂದೇ ರಂಧ್ರ ಮಾಡಿದ್ದರೆ ಮೂರೂ ಬೆಕ್ಕುಗಳು ಅದರಿಂದಲೇ ಹೋಗಿ ಬಂದು ಮಾಡುತ್ತಿದ್ದವಲ್ಲ ಅಂದಾಗ ನ್ಯೂಟನ್ನಿಗೂ ಪೆಚ್ಚಾಯಿತು.

# ಭೀಮಸೇನರ ಆವಾಹನೆ.....!

ಎ.ವಿಜಯೇಂದ್ರ ರಾವ್

ಪರಂಧಾಮಯ್ಯನವರು ಇತ್ತೀಚೆಗೆ ಒಂದು ಪ್ರತಿಷ್ಠಿತ ಟ್ರಾವೆಲ್ ಏಜೆನ್ಸಿ ಯವರ ಜೊತೆಗೆ ಸಿಂಗಪುರ್, ಮಲೇಷಿಯಾ, ಥೈಲ್ಯಾಂಡ್ ಪ್ರವಾಸಕ್ಕೆ ಹೋಗಿದ್ದರು. ಆ ತಂಡದವರು, ಪ್ರವಾಸಿಗಳನ್ನು ಒಳ್ಳೆಯ ತ್ರೀ ಸ್ಟಾರ್, ಫೋರ್ ಸ್ಟಾರ್ ಹೋಟೆಲ್ ಗಳಲ್ಲಿ ವಸತಿ ಸೌಕರ್ಯಗಳನ್ನು ಏರ್ಪಡಿಸಿದ್ದರು. ಆ ಎಲ್ಲಾ ಹೋಟೆಲ್ ಗಳಲ್ಲಿ ಬೆಳಗಿನ ಉಪಹಾರವು ಕಾಂಪ್ಲಿಮೆಂಟರಿ ಎಂದು ಉಚಿತವಾಗಿ ದೊರೆಯುತ್ತಿತ್ತು. ಮಧ್ಯಾಹ್ನದ ಮತ್ತು ರಾತ್ರಿಯ ಊಟ ಮಾತ್ರ ಅವರವರ ಖರ್ಚಿನಲ್ಲೇ ಅಂತ ಅವರ ಪ್ಯಾಕೇಜಿನ ಅಂಶವಾಗಿತ್ತು.

ಪರಂಧಾಮಯ್ಯನವರು ಸಿಂಗಪೂರಿನಲ್ಲಿ ವಿಮಾನದಿಂದ ಇಳಿದಾಗ, ಆ ಏರ್ ಪೋರ್ಟಿನ ಭವ್ಯತೆಗೆ ಬೆರಗಾಗಿ ಕಣ್ಣಗಲಿಸಿ ನೋಡುತ್ತಿದ್ದರು. ನಂತರ ಅವರಿಗೆ ವಾಸ್ತವ್ಯಕ್ಕೆಂದು ಒಂದು ತ್ರೀ ಸ್ಟಾರ್ ಹೋಟೆಲ್‌ನಲ್ಲಿ ಇಳಿಸಿದರು. ಸ್ನಾನ, ಇತ್ಯಾದಿ ಕಾರ್ಯಗಳ ನಂತರ ಹೊಟ್ಟೆ ಚುರುಕಾಯ್ತೆಂದು ಆ ಹೋಟೆಲ್‌ನ ರೆಸ್ಟೋರೆಂಟ್ ವಿಭಾಗಕ್ಕೆ ಹೋಗಿ, ಅವರ ರೂಮ್ ನಂಬರ್ ಹೇಳಿದ ನಂತರ ಒಂದು ಸೆಲ್ಯೂಟ್ ಹೊಡೆದು, ನಸುನಗುತ್ತಾ ಒಳಗೆ ಬಿಟ್ಟರು.

ಒಳಗೆ ಹೋದ ಪರಂಧಾಮಯ್ಯನವರು ಅಲ್ಲಿ ಸಾಲಾಗಿ ಜೋಡಿಸಿಟ್ಟಿದ್ದ ಐವತ್ತಕ್ಕೂ ಹೆಚ್ಚಿನ ಹಣ್ಣುಗಳ ಪ್ರಭೇದಗಳು, ಐದಾರು ಬಗೆಯ ಜ್ಯೂಸ್ ಫೌಂಟೆನ್‌ಗಳು, ಹಲವಾರು ಬಗೆಯ ಕೇಕ್ ಗಳು, ಬಿಸ್ಕತ್ತುಗಳು, ಚಾಕೊಲೇಟ್‌ಗಳು, ಸಿಹಿ ತಿನಿಸುಗಳು, ಬ್ರೆಡ್, ಬನ್ನುಗಳು, ಇನ್ನೂ ಇದುವರೆಗೂ ತಾವು ಕಂಡಿರದ, ಕೇಳಿರದ ಹಲವಾರು ಬಗೆಯ ವಿಧ ವಿಧದ ತಿನ್ನುವ ಪದಾರ್ಥಗಳನ್ನು ಕಂಡು, ಪರಂಧಾಮಯ್ಯನವರ ಮೈ ಮೇಲೆ ಭೀಮಸೇನರ ಆವಾಹನೆ ಆದಂತಾಯಿತು. ಯಾವುದನ್ನು ತಿನ್ನಬೇಕು, ಬಿಡಬೇಕು ಎಂದು ಗೊತ್ತಾಗದೆ, ಒಂದು ಬದಿಯಿಂದ ತಟ್ಟೆಯಲ್ಲಿ ಎಲ್ಲವನ್ನೂ ಸ್ವಲ್ಪ ಸ್ವಲ್ಪ ಹಾಕಿಕೊಂಡು ಬಂದು ಅದನ್ನು ಖಾಲಿ ಮಾಡಿ, ನಂತರ ಬ್ರೆಡ್ ಟೋಸ್ಟರ್ ಹತ್ತಿರ ಹೋಗಿ ನಿಂತು, ಅವರ ಸರದಿ ಬಂದಾಗ, ಎಲ್ಲರೂ ಒಂದೊಂದೇ ಹಾಕಿ, ಅದರ ಮುಂದೆ ಜಪ ಮಾಡುತ್ತಾ ನಿಂತಾಗ, ಅದು ಮೆಲ್ಲನೆ ಸುತ್ತಿಬಂದು ದೊಪ್ಪನೆ ಬೀಳುವುದನ್ನು ನೋಡಿದ್ದರು. ಇದು ಯಾಕೋ ಬಾರಿ ನಿದಾನ ವೆಂದು, ಒಂದೇ ಸರ್ತಿಗೆ ಎರಡು ಬ್ರೆಡ್ ಪೀಸ್ ಹಾಕಿ ನೋಡೋಣವೆಂದು ಹಾಕಿ, ಅದರ ಮುಂದೆ ಕಾದರು. ಯಾಕೋ ಎಷ್ಟು ಹೊತ್ತಾದರೂ ಅದು ಆಚೆಗೆ ಬರುತ್ತಾನೆ ಇಲ್ಲ, ಹಿಂದೆ ಇರುವವರು, ಅವರವರ ಭಾಷೆಯಲ್ಲಿ ಗುಸು ಗುಸು ಆರಂಬಿಸಿದರು, ಮೆಲ್ಲಗೆ ಸೀದು ಹೋದ ವಾಸನೆ ಬೇರೆ ಬರಲಾರಂಬಿಸಿತು. ಸ್ವಲ್ಪ ಹೊತ್ತಿನಲ್ಲಿ ಬಗ್ ಅಂತ ಬೆಂಕಿಯ ಜ್ವಾಲೆ ಒಳಗಿನಿಂದ ಕಾಣಿಸಿದಾಗ, ರಾಯರಿಗೆ ಗಾಬರಿಯಾಗಿ ಅತ್ತಿತ್ತ ನೋಡುತ್ತಿದ್ದಾಗ, ಇದನ್ನು ಗಮನಿಸುತ್ತಿದ್ದ ಹೋಟೆಲ್ ಸಿಬ್ಬಂದಿಯು ಏನೋ ಗೊಣಗಿ, ಅದನ್ನು ಆಫ್ ಮಾಡಿ, ಅದರ ಮುಂದೆ ' ಕ್ಲೋಸ್ಡ್ ' ಅಂತ ಬೋರ್ಡ್ ತಗಲಿಸಿದಾಗ, ಇದಕ್ಕೆ ಕಾಯುತ್ತಿದ್ದವರು ಕೆಕ್ಕಣ್ಣಿನಿಂದ ರಾಯರಿಗೆ ಹಿಡಿ ಶಾಪ ಹಾಕಿದಂತೆ ಕಂಡು ಬಂತು.

ಇದ್ಯಾಕೊ ಸರಿ ಬರಲಿಲ್ಲ ಎಂದು, ದೂರದಲ್ಲಿ ಇಡ್ಲಿ, ಉಪ್ಪಿಟ್ಟು ಇದೆ ಅಂತ ಯಾರೋ ತಮಿಳಿನಲ್ಲಿ ಮಾತಾಡಿದ್ದು, ಇವರಿಗೆ ಅರ್ಥವಾಗಿ, ಅಲ್ಲಿ ಹೋಗಿ, ಅಬ್ಬಾ, ನಮಗೆ ಪರಿಚಯವಿರುವ ತಿಂಡಿ ಸಿಕ್ಕಿತ್ತಲ್ಲಾ ಎಂದು, ಅವೆರಡನ್ನು ಹಾಕಿಕೊಂಡು ಬಂದು ಕೂತು ಬಾಯಿಗೆ ಇಟ್ಟಾಗಲೇ ಗೊತ್ತಾಗಿದ್ದು, ಇದು ನಮ್ಮ ಬೆಂಗಳೂರಲ್ಲಾ, ನಿನಗೆ ದ್ವಾರಕಾ

ಹೋಟೆಲ್, ವಿದ್ಯಾರ್ಥಿ ಭವನ್ನಿನ ರುಚಿ ಎಲ್ಲಾ ಇಲ್ಲಿ ಸಿಗಲ್ಲ, ಸಿಕ್ಕಿದ್ದನ್ನು ತಿಂದು ಹೋಗೋ ಎಂದು ಅವರ ಅಂತರಾತ್ಮ ಹೇಳಿತು. ತಿಂಡಿಯ ನಂತರ ಮನಸ್ಸು ಕಾಫಿಯನ್ನು ಬಯಸಿದಾಗ, ಅದಕ್ಕೆ ಮೋಸ ಮಾಡಬಾರದೆಂದು ಕಾಫಿಯ ಸೆಕ್ಷನ್ ಗೆ ಹೋದರೆ ಅಲ್ಲೂ ಜನರ ಸಾಲು ಉದ್ದ ವಾಗಿತ್ತು. ಅವರ ಸರದಿ ಬಂದು ಅದರ ಮುಂದೆ ನಿಂತರೆ ಅದರಲ್ಲಿ ಆರು




ತರಹದ ಬಟನ್ ಇತ್ತು. ಅವರಿವರು ಮಾಡಿದ್ದನ್ನು ಕಾಪಿ ಹೊಡೆದು, ಮೊದಲು ಆ ಎಸ್ಪ್ರೆಸೊ ಬಟನ್ ಒತ್ತಿದಾಗ, ಎರಡು ತೊಟ್ಟು ಕಣ್ಣೀರು ಬಂದ ಹಾಗೆ, ಎರಡು ತೊಟ್ಟು ಕಪ್ಪನೆಯ ದ್ರವ ಬಿತ್ತು. ನಂತರ ಬುಸ್ ಬುಸ್ ಅಂತ ಶಬ್ದ ಮಾಡುತ್ತಾ ಸ್ಟೀಮ್ ಬಂತು, ನಂತರ ಸ್ವಲ್ಪ ಹೊತ್ತು ಹಾಲು ಸುರಿದು ನಿಂತಿತು. ಇದನ್ನು ತೊಗೊಂಡು ಹೋಗಿ ಬಾಯಿಗೆ ಇಟ್ಟಾಗಲೇ ಗೊತ್ತಾಗಿದ್ದು, ಇದಕ್ಕೆ ಸಕ್ಕರೆ ಹಾಕಿಲ್ಲ, ಹೋಗಿ ಎರಡು ಸಣ್ಣ ಪ್ಯಾಕೆಟ್ ಸಕ್ಕರೆ ತಂದು ಸುರಿದು, ಸ್ಪೂನಿನಲ್ಲಿ ಕಲಸಿ, ಬಾಯಿಗೆ ಇಡುವಷ್ಟರಲ್ಲಿ, ಅದು ಆರಿ ತಣ್ಣಗಾಗಿ ಹೋಗಿತ್ತು..! ಆ ಸಮಯದಲ್ಲಿ ನಮ್ಮ ಬೆಂಗಳೂರಿನ ಫಿಲ್ಟರ್ ಕಾಫಿ ಮಹತ್ವದ ಅರಿವು  ನನಗೆ ಹೆಚ್ಚೆಚ್ಚು ಆಯಿತು.

ಅಬ್ಬಾ, ಅಂತೂ ಏನೋ ಕಂಡಿದ್ದನ್ನೆಲ್ಲಾ ತಿಂದು ಹೊಟ್ಟೆ ಭಾರವಾಗಿದೆ, ಇದರಿಂದ ಮಧ್ಯಾಹ್ನದ ಊಟವನ್ನು ಸಹ ಇಲ್ಲದೆ ಸಹಿಸಿಕೊಳ್ಳಬಹುದು ಎಂದು ಲೆಕ್ಕಾಚಾರ ಮಾಡಿ, ತಮ್ಮ ಹೆಂಡತಿಯ ಹತ್ತಿರ –ನೋಡೆ, ಬೆಳಗ್ಗಿನ ತಿಂಡಿಯ ಓವರ್ ಲೋಡಿನಿಂದ, ಮಧ್ಯಾಹ್ನದ ಊಟವನ್ನು ಮಾಡದಿದ್ದರೆ, ಇಷ್ಟು ಸಿಂಗಪೂರ್ ಡಾಲರ್ ಉಳಿಯುತ್ತೆ ಅಂತ ಲೆಕ್ಕ ಕೊಟ್ಟಾಗ, ಗಂಡನ ಜಿಪುಣತನಕ್ಕೆ ಕೋಪಗೊಂಡು ಹಣೆ ಹಣೆ ಚಚ್ಚಿಕೊಂಡು, ಇವರಿಗೆ ಯಾವಾಗ ಬುದ್ದಿ ಬರತ್ತೋ ಶಿವನೇ ಅಂತ ದೇವರಿಗೆ ಕೈ ಮುಗಿದರು ಪರಂಧಾಮಯ್ಯನವರ ಪತ್ನಿ ಪಾರ್ವತಮ್ಮ..!

**ಗಾದೆಗಳನ್ನು ಊಹಿಸಿ– ಉತ್ತರಗಳು.**

| | |
|---|---|
| **ಪುಟ 19: ಅಳಿಯ, ಮನೆ ತೊಳಿಯ** | **ಬೀಸೋ ದೊಣ್ಣೆ ತಪ್ಪಿದರೆ ಸಹಸ್ರಾಯಸ್ಸು,** |
| **ಪುಟ 27: ದೂರದ ಬೆಟ್ಟ ನುಣ್ಣಗೆ** | **ಎತ್ತು ಏರೀಗೆಳೆದ್ರೆ ಕೋಣ ನೀರಿಗೆ** |
| **ಪುಟ 97 : ಹಾಸಿಗೆ ಇದ್ದಷ್ಟು ಕಾಲು ಚಾಚು.** | **ಹಾವೂ ಸಾಯದು ಕೋಲೂ ಮುರಿಯದು** |
| **ಪುಟ 109 : ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು.** | **ಕಳ್ಳನ್ನ ನಂಬಿದರೂ ಕುಳ್ಳನ್ನ ನಂಬಬಾರದು.** |
| **ಪುಟ 123: ಶಿವಪೂಜೇಲಿ ಕರಡಿ ಬಿಟ್ಟಹಾಗೆ.** | **ಉಪ್ಪು ತಿಂದೋನು ನೀರು ಕುಡೀಲೇ ಬೇಕು.** |